ಸಂಚಿಕೆಗಳು 79/80/81/82

ಏಪ್ರಿಲ್-2009/ ಮಾರ್ಚ್-2010

ಸುವರ್ಣ ಸಂಭ್ರಮ

ಸಂಯುಕ್ತ ವಿಶೇಷ ಸಂಚಿಕೆ

ಅನಿಕೇತನ

ಕರ್ನಾಟಕ ಸಾಹಿತ್ಯ ಅಕಾಡೆಮಿ ತ್ರೈಮಾಸಿಕ



ಇಸ್ಮತ್ ಚುಗ್ತಾಯ್ | ರವೀಂದ್ರನಾಥ ಟಾಗೋರ್ | ಎಂ.ಟಿ.ವಾಸುದೇವನ್ ನಾಯರ್

ತಸ್ಲಿಮಾ ನಸ್ರೀನ್ | ಕ್ರಿಸ್ಟಿನಾ ಮೇಡನ್ | ಸೀತಾಕಾಂತ ಮಹಾಪಾತ್ರ | ಆಫ್ರಿಕನ್ ಕವಿಗಳು

ಮೃತ್ಯುಂಜಯ ರುಮಾಲೆ | ಕೆ.ಬಿ.ಸರಸ್ವತಿ | ನಟರಾಜ್ ಬೂದಾಳ್



ಅನಿಕೇತನ

ಕರ್ನಾಟಕ ಸಾಹಿತ್ಯ ಅಕಾಡೆಮಿಯ
ತ್ರೈಮಾಸಿಕ
ಏಪ್ರಿಲ್ ೨೦೦೯ - ಮಾರ್ಚ್ ೨೦೧೦

ಪ್ರಧಾನ ಸಂಪಾದಕರು

ಪ್ರೊ.ಮಾಲತಿ ಪಟ್ಟಣಶೆಟ್ಟಿ

ಸಂಪಾದಕರು

ಲಕ್ಷ್ಮೀಪತಿ ಕೋಲಾರ

ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-೫೬೦ ೦೦೨
ದೂರವಾಣಿ - ೨೨೨೧೧೭೩೦/೨೨೧೦೬೪೬೦

ANIKETHANA

A literary Journal (Quarterly)

Edited by
Lakshmipathykolara

Published by :
**Smt. C.H.Bhagya, Registrar, Karnataka Sahithya Academy,
Kannada Bhavana, J.C.Road, Bengaluru-560002**

Pages : **xiv + 174 = 188**

Price : **₹ 30/-**


ಸಂಪುಟ : ೨೦
ಸಂಚಿಕೆಗಳು : ೭೯/೮೦/೮೧/೮೨
ಪ್ರತಿಗಳು : ೧೫೦೦

ಪ್ರಧಾನ ಸಂಪಾದಕರು
ಪ್ರೊ.ಮಾಲತಿ ಪಟ್ಟಣಶೆಟ್ಟಿ, ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
ಪ್ರಕಾಶಕರು
ಶ್ರೀಮತಿ ಸಿ.ಎಚ್.ಭಾಗ್ಯ, ರಿಜಿಸ್ಟ್ರಾರ್, ಕರ್ನಾಟಕ ಸಾಹಿತ್ಯ ಅಕಾಡೆಮಿ,
ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-೦೨

ಬಿಡಿ ಪ್ರತಿ : ರೂ.೩೦/-
ವಾರ್ಷಿಕ ಚಂದಾ : ರೂ. ೧೦೦/-
ಆಜೀವ ಚಂದಾ : ರೂ. ೩೦೦/-

ರಕ್ಷಾಪುಟ
ಒಳಪುಟ ವಿನ್ಯಾಸ : ಮಂಜುನಾಥ.ಎಸ್. ಬೆಂಗಳೂರು

ಮುದ್ರಣ : ಇಳಾ ಮುದ್ರಣ
ಬೆಂಗಳೂರು-೨೬




ಅಧ್ಯಕ್ಷರ ಮಾತು

ಭಾರತ ಮತ್ತು ಭಾರತೀಯೇತರ ಇತರ ಭಾಷೆಗಳಲ್ಲಿನ ಸಾಹಿತ್ಯವನ್ನು, ಅವುಗಳ ಸಾಂಸ್ಕೃತಿಕ ಧಾತು-ಧೋರಣೆಗಳನ್ನು ಸಹೃದಯ ಕನ್ನಡಿಗರಿಗೆ ಪರಿಚಯಿಸಬೇಕೆಂಬ ಉದ್ದೇಶದೊಂದಿಗೆ ಶ್ರೀ ಕೆ.ಎಸ್.ನಿಸಾರ್ ಅಹಮದ್ ಅವರು ಅಕಾಡೆಮಿಯ ಅಧ್ಯಕ್ಷ ರಾಗಿದ್ದಾಗ 'ಚಂದನ' ಎಂಬ ಗಂಭೀರ ಅನುವಾದ ಸಾಹಿತ್ಯ ಪತ್ರಿಕೆಯನ್ನು 1984ರಲ್ಲಿ ಪ್ರಾರಂಭಿಸಲಾಯಿತು. 1988ರಲ್ಲಿ ದಿವಂಗತ ಡಾ.ಜಿ.ಎಸ್.ಶಿವರುದ್ರಪ್ಪನವರು ಅಧ್ಯಕ್ಷರಾಗಿದ್ದಾಗ 'ಅನಿಕೇತನ' ಎಂಬ ಶೀರ್ಷಿಕೆಗೆ ರಿಜಿಸ್ಟ್ರೇಷನ್ ಅನುಮೋದನೆ ಸಿಕ್ಕಿದ್ದರಿಂದ 'ಚಂದನ' ಅಲ್ಲಿಂದಾಚೆಗೆ 'ಅನಿಕೇತನ'ವಾಗಿ ಮುಂದುವರೆಯಿತು.

ಪ್ರತಿ ಮೂರು ವರ್ಷಕ್ಕೊಮ್ಮೆ ಸಾಹಿತ್ಯ ಅಕಾಡೆಮಿಯ ಆಡಳಿತಾತ್ಮಕ ವ್ಯವಸ್ಥೆ ಬದಲಾವಣೆಯನ್ನು ಹೊಂದುವ ಅನಿವಾರ್ಯ ಪ್ರಕ್ರಿಯೆಯಲ್ಲಿ ಎಷ್ಟೋ ಬಾರಿ ಈ ತ್ರೈಮಾಸಿಕ ಪತ್ರಿಕೆ ನಿಗದಿತ ಅವಧಿಯಲ್ಲಿ ಪ್ರಕಟಣೆ ಕಾಣದೆ, ತಡವಾಗಿ ಬೆಳಕು ಕಾಣುವು ದಲ್ಲದೆ, ದೀರ್ಘಕಾಲೀನ ಅಂತರವನ್ನು ತುಂಬುವ ಸಲುವಾಗಿ ಸಂಯುಕ್ತ ಸಂಚಿಕೆಗಳು ರೂಪುಗೊಳ್ಳುವುದು ಕೂಡ ಅಷ್ಟೇ ಅನಿವಾರ್ಯ ಹೊಂದಾಣಿಕೆಯಾಗಿ ಪರಿಣಮಿಸಿದೆ. ಈಗಲೂ ಅದೇ ಮಾದರಿಯನ್ನು ಅನುಸರಿಸಿ ಕಳೆದ 2009ರಿಂದ 2014ರ ವರೆಗೂ ವರ್ಷಕ್ಕೊಂದು 'ಸಂಯುಕ್ತ ಸಂಚಿಕೆ'ಯನ್ನು ಹೊರ ತರುವುದರ ಮೂಲಕ ನಾವು ಕಾಲದ ಅಂತರದ ಕೊರತೆಯನ್ನು ನೀಗಿಸಬೇಕಿದೆ. ಆ ನಿಟ್ಟಿನಲ್ಲಿನ ಪ್ರಥಮ ಸಂಯುಕ್ತ ಸಂಚಿಕೆ ಈಗ ನಿಮ್ಮ ಕೈಯಲ್ಲಿದೆ. ಅನಂತರ ಎಂದಿನಂತೆಯೇ ಮೂರು ತಿಂಗಳಿಗೊಮ್ಮೆಯಂತೆ 'ಅನಿಕೇತನ' ನಿಮ್ಮ ಕೈ ಸೇರಲಿದೆ.

ಕನ್ನಡ ಸಾಹಿತ್ಯದ ಚಂದನ ಪರಿಮಳದ 'ಅನಿಕೇತನ' ತ್ರೈಮಾಸಿಕಕ್ಕೆ ಈಗ ಮುವ್ವತ್ತು ವಸಂತಗಳ ಹರೆಯ. ಇದು ಮೂರು ದಶಕಗಳ ಪತ್ರಿಕೆಯೊಂದರ ಆತ್ಮಾವಲೋಕನಕ್ಕೆ ತಕ್ಕುದಾದ ಸಮಯ. ಈ ಮೂರು ದಶಕಗಳಲ್ಲಿ 'ಅನಿಕೇತನ'ವು ಎಡವಿದ ಜಾಗವನ್ನು ಗುರುತಿಸಿ ಮತ್ತೆ ಅದೇ ಜಾಗದಲ್ಲಿ ಎಡವದಂತೆ ಯಾವ ವ್ಯವಸ್ಥೆಯನ್ನು ರೂಪಿಸಬೇಕೆಂಬುದರ ಬಗ್ಗೆಯೂ ನಾನು ನನ್ನ ಅವಧಿಯಲ್ಲಿ ಎಚ್ಚರ ವಹಿಸುತ್ತೇನೆ. ಈ ಹಿಂದೆಯೇ 'ಅನಿಕೇತನ' ಪತ್ರಿಕೆಯನ್ನು ಹೊಸ ಸ್ವರೂಪದಲ್ಲಿ ಸಂಪಾದಿಸಿಕೊಟ್ಟ ಅನುಭವವಿರುವವರೇ ಈಗ ಪುನಃ ಪತ್ರಿಕೆಯ ಸಂಪಾದಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. 'ಕರ್ನಾಟಕ ಸಾಹಿತ್ಯ ಅಕಾಡೆಮಿ' ಹೇಗೆ ಕನ್ನಡ ಸಾರಸತ್ವ ಲೋಕದ ಮಹತ್ವದ ಆಶಯಗಳ ಪ್ರತಿನಿಧಿಯಾಗಿದೆಯೋ ಹಾಗೆಯೇ ಅದರ ಮುಖವಾಣಿಯಾದ 'ಅನಿಕೇತನ'ವು ಕೂಡ ಕನ್ನಡ ಮುಖ್ಯದನಿಯಾಗಿ ರೂಪುಗೊಳ್ಳಬೇಕೆಂಬುದು ನನ್ನ ಆಸೆ. ಇಲ್ಲಿಂದಾಚೆಗೆ 'ಅನಿಕೇತನ'ವು ತನ್ನ ಸ್ವರೂಪ ಮತ್ತು ವಿನ್ಯಾಸದಲ್ಲಷ್ಟೇ ಅಲ್ಲದೆ ಅದರ ವಸ್ತು ವಿನ್ಯಾಸದಲ್ಲಿಯೂ ಜೀವಂತ ವೇದಿಕೆಯಾಗಿ ಮಾರ್ಪಡುವುದಲ್ಲದೆ ಕನ್ನಡ ಸಾಹಿತ್ಯ-ಸಂಸ್ಕೃತಿಗಳ ಶಕ್ತ ಸಂವಾದಗಳಿಗೆ ಸಮರ್ಥ ನೆಲೆಯೂ ಆಗಲಿದೆ. ಪತ್ರಿಕೆಯ ಈ ಆಶಯ ಈಡೇರಬೇಕಾದಲ್ಲಿ ಓದುಗರು ಹಾಗೂ ಕನ್ನಡ ಲೇಖಕರ ನಿರಂತರ ಪಾಲ್ಗೊಳ್ಳುವಿಕೆಯೂ ಅತ್ಯಗತ್ಯವೆಂಬುದರ ಅರಿವೂ ನನಗೆ ಇದೆ. ನಿಮ್ಮೆಲ್ಲರ ಸಹಕಾರವೇ 'ಅನಿಕೇತನ'ವನ್ನು ಅದರ ನಿಜದರ್ಥದಲ್ಲಿ ಎಲ್ಲ ಎಲ್ಲೆಗಳನ್ನೂ ಮೀರಿ ಮುನ್ನುಡಿಯಂತೆ ಮಾಡಲು ಸಾಧ್ಯ. ದಯವಿಟ್ಟು ಸಹಕರಿಸಿ. ಅನಿಕೇತನವನ್ನು ನಿಮ್ಮ ಸಂವೇದನೆಯ ಭಾಗವಾಗಿಸಿಕೊಳ್ಳಿ, ಅನಿಕೇತನರಾಗಿ.

-ಪ್ರೊ.ಮಾಲತಿ ಪಟ್ಟಣಶೆಟ್ಟಿ
ಪ್ರಧಾನ ಸಂಪಾದಕರು ಮತ್ತು ಅಧ್ಯಕ್ಷರು
ಕರ್ನಾಟಕ ಸಾಹಿತ್ಯ ಅಕಾಡೆಮಿ.



ಕ್ಷಮೆ ನಮಗಿರಲಿ; ನಮಸ್ಕಾರ, ಇದೋ ನಿಮಗೆ

ಪ್ರಿಯ ಓದುಗರೆ,

ಕೆಲವು ವರ್ಷಗಳ ಕಾಲವೇ 'ಅನಿಕೇತನ' ತ್ರೈಮಾಸಿಕ ಪತ್ರಿಕೆಯ ಪ್ರಕಟಣೆ ತಾಂತ್ರಿಕ ಬಿಕ್ಕಟ್ಟುಗಳಿಂದ ನಿಲುಗಡೆಯಾಗಿತ್ತಾಗಿ ನಾವು ಕ್ಷಮೆ ಯಾಚಿಸಲು ಕೂಡ ಸಂಕೋಚಪಡುವಂತಾಗಿದೆ. ಚಂದಾದಾರರಿಗೆ, ಅದರಲ್ಲೂ ವಿಶೇಷವಾಗಿ ಆಜೀವ ಚಂದಾದಾರರಿಗೆ ಆಗಿರಬಹುದಾದ ಅನಾನುಕೂಲ, ನಿರಾಸೆ, ಬೇಸರಗಳ ಊಹೆ ನಮಗೂ ಇದೆ.

ಕರ್ನಾಟಕ ಸಾಹಿತ್ಯ ಅಕಾಡೆಮಿ ಒಂದು ಸ್ವಾಯತ್ತ ಸಂಸ್ಥೆಯಾದರೂ ಅದರ ಆಯಾಯ ಅವಧಿಗಳ ಅಧ್ಯಕ್ಷರು ಮತ್ತು ಸದಸ್ಯರುಗಳ ನಾಮಕರಣವನ್ನು ಸರ್ಕಾರವೇ ಮಾಡಬೇಕಿದೆಯೆಂಬುದು ತಮಗೂ ತಿಳಿದ ವಿಚಾರವೇ ಆಗಿದೆ. ಹೀಗೆ ನಾಮಕರಣದ ಪ್ರಕ್ರಿಯೆಯು ವರ್ಷಗಳ ಕಾಲ ವಿಳಂಬವಾದಾಗ 'ಅನಿಕೇತನ' ಪತ್ರಿಕೆಯ ಸಂಪಾದಕತ್ವದ ಜವಾಬ್ದಾರಿಯನ್ನು ನಿರಂತರವಾಗಿ ನಿರ್ವಹಿಸುತ್ತ ಬರುತ್ತಿದ್ದ ಸದಸ್ಯರುಗಳೇ ಇಲ್ಲದಂತಾಗಿ ಪತ್ರಿಕೆಯ ಪ್ರಕಟಣೆಯೂ ನಿಲ್ಲುವಂತಾಗಿತ್ತು. ಪ್ರತಿ ಮೂರು ವರ್ಷಕ್ಕೊಮ್ಮೆ ಇಂತಹ ಸಂದಿಗ್ಧ ಸಂದರ್ಭ ಅಕಾಡೆಮಿಯ ಪಾಲಿಗೆ ಸಹಜವಾಗಿಯೆಂಬಂತೆ ಎದುರಾಗುತ್ತಿತ್ತು. ಈ ಕಾರಣದಿಂದಾಗಿ ಪತ್ರಿಕೆಯ ನಿಯಮಿತತೆಯನ್ನು ಕಾಪಾಡಿಕೊಳ್ಳುವುದು ಹೇಗೆಂಬುದು ಒಂದು ರೀತಿಯಲ್ಲಿ ಸವಾಲೇ ಆಗಿ ಪರಿಣಮಿಸಿತ್ತು.

ಇಂತಹ ಸಂದರ್ಭದಲ್ಲಿ ಅಕಾಡೆಮಿಯ ಎದುರಿಗೆ ಕೇವಲ ಎರಡು ಆಯ್ಕೆಗಳು ಮಾತ್ರ ಇದ್ದವು. ಒಂದು: ಮತ್ತೊಂದು ಹೊಸ ಸಮಿತಿ ಸರ್ಕಾರದಿಂದ ನಾಮಕರಣಗೊಂಡಾದ ಮೇಲೆಯೇ 'ಅನಿಕೇತನ'ಕ್ಕೆ ಪುನಃಶ್ಚೇತನ ನೀಡಬಹುದಾದದ್ದು. ಎರಡು: ಸಮಿತಿಯ ಗೈರು ಹಾಜರಿಯಲ್ಲಿಯೇ 'ಅನಿಕೇತನ' ಪತ್ರಿಕೆಗೆ ಒಬ್ಬ ಅನುಭವೀ ಸಂಪಾದಕರನ್ನು ಸಂಬಂಧಿಸಿದ ಹಿರಿಯ ಅಧಿಕಾರಿ ವರ್ಗದಿಂದ

ಅನುಮತಿ ಪಡೆದು ನೇಮಿಸಿ ಪ್ರಕಟಣೆಯನ್ನು ಮತ್ತೆ ಪ್ರಾರಂಭಿಸುವುದು. ಸಮಿತಿಯಿನ್ನೂ ಅಸ್ತಿತ್ವಕ್ಕೆ ಬರುವ ಮುನ್ನವೇ ಎರಡನೇ ಆಯ್ಕೆಯ ಪ್ರಕಾರವೇ ಸಂಪಾದಕರನ್ನು ನೇಮಿಸಿ ಕೊನೆಗೂ 'ಅನಿಕೇತನ' ಪತ್ರಿಕೆಯ ದೀರ್ಘ ನಿಲುಗಡೆಯ ನಂತರ ಮರುರೂಪಿಸುವ ಪ್ರಕ್ರಿಯೆಗೆ ಚಾಲೂ ಸಿಕ್ಕಿತು. ಅಷ್ಟರಲ್ಲಿ ಕಾಕತಾಳೀಯವೆಂಬಂತೆ ಸಮಿತಿಯ ನೇಮಕಾತಿಯೂ ಜರುಗಿತು. 'ಅನಿಕೇತನ' ಈಗ ನಿಮ್ಮ ಕೈಯ್ಯಲ್ಲಿರುವುದರ ಹಿಂದಿನ ಬೆಳವಣಿಗೆಯ ಚಿತ್ರವಿದು. ಪುನಃ ಮೂರು ವರ್ಷಗಳವರೆಗೂ ಪತ್ರಿಕೆ ಯಾವುದೇ ಅಡೆತಡೆಗಳಿಲ್ಲದಂತೆ ನಿರಂತರಾಗಿ ಹೊರಬರಲಿದೆ. ಆದರೆ ಅನಂತರವೂ ಪತ್ರಿಕೆಯು ನಿಯಮಿತವಾಗಿ ಪ್ರಕಟಗೊಳ್ಳುತ್ತಲೇ ಇರುವಂತೆ ಮಾಡಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವ ಇರಾದೆಯೂ ಅಕಾಡೆಮಿಗೆ ಇದೆ. ಈ ಸಧ್ಯ ಮುಂದಿನ ಒಂದು ವರ್ಷದವರೆಗೂ ಈ ಸಂಚಿಕೆಯನ್ನು ರೂಪಿಸಿದ ಸಂಪಾದಕರೇ ಮುಂದುವರೆಯಲಿದ್ದು, ಅನಂತರ ಹೊಸ ಸಮಿತಿಯ ನಿರ್ಣಯದಂತೆ ಪತ್ರಿಕೆಯ ಪ್ರಕಟಣೆ ಮುಂದುವರೆಯಲಿದೆ.

'ಅನಿಕೇತನ' ಪತ್ರಿಕೆ ನಿಲುಗಡೆಯಾದ ದಿನದಿಂದ ಹಿಡಿದು ವರ್ತಮಾನದ ಇಂದಿನವರೆಗೂ ವರ್ಷಕ್ಕೆ ಸರಿ ಸುಮಾರು ಇನ್ನೂರು ಪುಟಗಳ ಸಂಯುಕ್ತ ಸಂಚಿಕೆಯೊಂದರಂತೆ ಐದು ವಿಶೇಷ ಸಂಯುಕ್ತ ಸಂಚಿಕೆಗಳು ನಿಮ್ಮ ಕೈ ಸೇರಲಿವೆ. ಅದರ ನಂತರ ಕಾಲಗಣನೆಗೆ ಅನುಕ್ರಮವಾಗಿಯೆಂಬಂತೆ ತ್ರೈಮಾಸಿಕ ಪ್ರಕಟಣೆಯ ವ್ಯವಸ್ಥೆ ಮುಂದುವರೆದು ದೀರ್ಘಾವಧಿ ನಿಲುಗಡೆಯ ಕೊರತೆಯನ್ನು ಹೀಗೆ ತುಂಬಲಾಗುತ್ತಿದೆ. ಇದು ನಮ್ಮ ಪಾಲಿಗೆ ಸರಿಕಂಡ ಅನಿವಾರ್ಯ ಹೊಂದಾಣಿಕೆಯಾಗಿದೆ. ಸಹೃದಯರೂ, ಪರಿಸ್ಥಿತಿಯ ಅರಿವಿರಬಲ್ಲವರೂ ಆದ ತಾವು ಕೂಡ ನಮ್ಮ ಈ ನಿಲುವನ್ನು ಸಮ್ಮತಿಸುತ್ತೀರೆಂಬ ನಂಬಿಕೆ ನಮ್ಮದು.

ಎಂದಿನಂತೆಯೇ 'ಅನಿಕೇತನ' ಪತ್ರಿಕೆ ಅನುವಾದ ಸಾಹಿತ್ಯಕ್ಕೆ ಆದ್ಯತೆ ನೀಡಲಿದ್ದು, ಅದರೊಂದಿಗೇ ಗಂಭೀರ ಸಾಹಿತ್ಯ ಪತ್ರಿಕೆಗಳು ಸಾಕಷ್ಟಿಲ್ಲದ ಕಾರಣದಿಂದ ಸ್ವತಂತ್ರ ಹಾಗೂ ಸೃಜನಶೀಲ ಬರವಣಿಗೆಗೂ ಒಂದು ಭಾಗವನ್ನು ಪ್ರತ್ಯೇಕವಾಗಿ ಮೀಸಲಿಡುತ್ತಿದೆ. ಕೆಲವು ವರ್ಷಗಳ ಅಂತರದ ನಂತರ ಪತ್ರಿಕೆಯನ್ನು ಮರು ರೂಪಿಸುವಾಗ ಕೊಂಚ ಗಡಿಬಿಡಿ ಇರುವುದು ಸಹಜವೇ. ಆದರೂ ನಾವು ಅನೇಕ ಲೇಖಕರಿಗೆ ಅನುವಾದ ಹಾಗೂ ಸ್ವತಂತ್ರ ಬರವಣಿಗೆಗಳನ್ನು ನೀಡುವಂತೆ ಆಹ್ವಾನಿಸಿ, ಪ್ರತಿಸ್ಪಂದನವೆಂಬಂತೆ ಬಂದ ಕೆಲವು ಆಯ್ದ ಬರವಣಿಗೆಳನ್ನಿಟ್ಟುಕೊಂಡೇ ಮೊದಲ ಈ ವಿಶೇಷ ಸಂಯುಕ್ತ ಸಂಚಿಕೆಯನ್ನು ನಿಮ್ಮ ಮುಂದಿಟ್ಟಿದ್ದೇವೆ. ಹೀಗಾಗಿ ಕೆಲವು ವರ್ಷಗಳ ದೀರ್ಘ ಅಂತರದ ನಂತರ ತ್ರೈಮಾಸಿಕ ರೂಪುಗೊಳ್ಳುತ್ತಿರುವುದರಿಂದ ಸಹಜವಾಗಿಯೇ ಕೊಂಚ ತಡವಾಗಿದೆ. ತನ್ನ ಎಂದಿನ ನಿರಂತರತೆಯ ಹಾದಿ ತುಳಿಯುವಲ್ಲಿ ಹೀಗೆ ವಿಳಂಬವಾಗುವುದು ಕೂಡ ಅಷ್ಟೇ ಸಹಜ. ಅದರೊಂದಿಗೆ ಉತ್ತಮ ಗುಣಮಟ್ಟವನ್ನು ಕಾಪಾಡಿಕೊಳ್ಳುವ ಆಲೋಚನೆಯೂ ಜೊತೆಗೂಡುವುದರಿಂದ 'ವಿಳಂಬ' ಎನ್ನವುದು ಒಂದು ಹಂತದವರೆಗೂ ಅನಿವಾರ್ಯ. ಈ ಸಂಚಿಕೆಯ ಹೂರಣ ನಿಮಗೆ ಪ್ರಿಯವಾಗಬಲ್ಲದೆಂಬ ನಂಬಿಕೆ ನಮ್ಮದು. ಎಲ್ಲ ರೀತಿಯ ನಿಮ್ಮ ಪ್ರತಿಕ್ರಿಯೆ, ಸಲಹೆ ಸೂಚನೆಗಳ ನಿರೀಕ್ಷೆಯಲ್ಲಿ ನಾವಿದ್ದೇವೆ.


ಈ ಸಂಯುಕ್ತ ಸಂಚಿಕೆಯ ಎಲ್ಲಾ ಅನುವಾದಕರಿಗೂ ಲೇಖಕಿ, ಲೇಖಕ ಮಿತ್ರರಿಗೂ ಧನ್ಯವಾದಗಳು.

ಕವಿ, ಲೇಖಕ ಹಾಗೂ ಅನುವಾದಕರು ತಮ್ಮ ಸಹಕಾರವನ್ನು ಎಂದಿನಂತೆಯೇ ಮುಂದುವರೆಸಬೇಕೆಂದು ವಿನಂತಿಸಿಕೊಳ್ಳುತ್ತಿದ್ದೇನೆ. ಮುಂದಿನ ಸಂಚಿಕೆಗಳು ಮತ್ತಷ್ಟು ಅರ್ಥಪೂರ್ಣವಾಗಿ ರೂಪುಗೊಳ್ಳಲು, ನಮ್ಮ ನಿಮ್ಮೆಲ್ಲರ ಆಸಕ್ತಿಗೆ ಅನುಗುಣವಾಗಿ ವಿನ್ಯಾಸಗೊಳಿಸಲು ನಾವು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇವೆ. ಕ್ಷಮೆ ನಮಗಿರಲಿ; ನಮಸ್ಕಾರ ಇದೋ, ನಿಮಗೆ.

–ಸಂಪಾದಕ









ಪುಟ ತೆರೆದಂತೆ...

ಭಾಗ –೧



'ನಾನು ನಿಮ್ಮ ಬಹುಪಾಲು ಎಲ್ಲಾ ಕತೆಗಳನ್ನೂ ಓದಿದ್ದೇನೆ. ಅವೇನೂ ಅಶ್ಲೀಲವಲ್ಲ. ಆದರೆ ಆ ಮಾಂಟೋನ ಕತೆಗಳಲ್ಲಿ ಹೊಲಸು ತುಂಬಿರುತ್ತದೆ' ಎಂದರು. 'ಈ ಜಗತ್ತು ಸಹ ಹೊಲಸಿನಿಂದಲೇ ತುಂಬಿದೆ. ಅದನ್ನು ಕೆದಕಿ ಮೇಲೆಸೆದರೇನೇ ಎಲ್ಲರ ಕಣ್ಣಿಗೆ ಬಿದ್ದು ಅದನ್ನು ಶುಚಿಗೊಳಿಸುವ ಅವಶ್ಯಕತೆ ಕಂಡುಬರುವುದು'. ನ್ಯಾಯಾಧೀಶರು ಜೋರಾಗಿ ನಕ್ಕು ಸುಮ್ಮನಾದರು. (ಲೇಖನ)

ಆ ಕವುದಿ ಮೇಲಕ್ಕೆದ್ದಾಗ ನಾನೇನು ಕಂಡೆ ಎಂಬುದನ್ನು ಎಂದಿಗೂ ಯಾರಿಗೂ ಹೇಳುವುದಿಲ್ಲ. ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟರೂ ಸಹ! (ಕಥೆ)



ಒಮ್ಮೆ ಪತ್ರವನ್ನು ಒಡೆದು ನೋಡೋಣವೆಂದುಕೊಂಡ. ಆದರೆ ನಂತರ ಅವನು ಅದನ್ನು ಒಂದು ಪೆಟ್ಟಿಗೆಯಲ್ಲಿಟ್ಟು ಬೀಗ ಹಾಕಿ ಮನಸ್ಸಲ್ಲೇ ಅಂದುಕೊಂಡ 'ನಾನು ಈ ಪತ್ರವನ್ನು ಯಾವತ್ತೂ ಒಡೆದು ನೋಡಲ್ಲ'. (ಕಥೆ)

೫. ಎಕೋಫೆಮಿನಿಸಂ

ವಿವಿಧ ಮೂಲಗಳಿಂದ
ಅನು: ಆರ್.ವಿಜಯರಾಘವನ್ / ಕೆ.ಪಿ.ಶಿವಾರೆಡ್ಡಿ
ಪುಟ-೩೪

ನಾವು ಹಿಂದೆಂದೂ ಇಷ್ಟು ಸ್ಪಷ್ಟವಾಗಿ ಪರಮಾಣು ಶಸ್ತ್ರಗಳ ಹೆಚ್ಚಳಕ್ಕೂ, ಯುದ್ಧದ ಹಿಂಸೆ–ಮಾನಭಂಗದ ಹಿಂಸೆಗೂ ನಡುವೆ ಇರುವ ಸಂಬಂಧವನ್ನು ಕಂಡಿದ್ದಿಲ್ಲ. ಪುರುಷರ ಲೈಂಗಿಕತೆಯು ವಿಜೃಂಭಿಸಿ ಆನಂದಿಸುವಂತೆ ತೋರಿದ ಯುದ್ಧದ ಘನಘೋರ ಆಟವು ಲೈಂಗಿಕ ಆಕ್ರಮಣ, ನಿಯಂತ್ರಣವೆಂಬ ಅವೇ ಸ್ತರದಲ್ಲಿ ಸಾಗುತ್ತವೆ. ಅದು ಹೆಣ್ಣೋ, ಭೂಮಿಯೋ ಅಂತಹ ವ್ಯತ್ಯಾಸವೇನೂ ಆಗಲಾರದು. (ಲೇಖನ)

೬. ಮಧ್ಯಾಹ್ನದ ಊಟ


ಹಿಂದಿ ಮೂಲ : ಅಮರಕಾಂತ
ಅನು: ತಾ.ಶ್ರೀ ಗುರುರಾಜ್
ಪುಟ-೪೫

ಅವಳ ಗಮನ ನರಳುತ್ತಾ ಮಲಗಿದ್ದ ಮಗ ಪ್ರಮೋದನತ್ತ ಹರಿದು ರೊಟ್ಟಿಯನ್ನು ಅರ್ಧ ಮುರಿದು ಮಡಿಕೆಯಲ್ಲೇ ಇಟ್ಟಳು. ಒಂದು ಲೋಟ ನೀರನ್ನು ಗಟಗಟನೆ ಕುಡಿದು ತುತ್ತು ಬಾಯಿಗಿಡುತ್ತಿರುವಾಗಲೇ ಕಣ್ಣೀರು ತಪತಪನೆ ಉದುರಲಾರಂಭಿಸಿತು. (ಕಥೆ)

೭. ಒಂದು ಜನ್ಮದಿನದ ನೆನಪು (ಕಥೆ)

ಮಲೆಯಾಳ ಮೂಲ : ಎಂ.ಟಿ.ವಾಸುದೇವನ್ ನಾಯರ್
ಅನು: ಡಾ.ಪ್ರಮೀಳಾ ಮಾಧವ್
ಪುಟ-೫೪





೮. ತಸ್ಲಿಮಾರ ಮೂರು ಕವಿತೆಗಳು

ಅನು : ತಾ.ಶ್ರೀ. ಗುರುರಾಜ್
ಪುಟ-೬೪

೯. ನೈಷದಂ ಎಸ್ಸೆ ಅನುವಾದಿಸಿದ ಆಫ್ರಿಕನ್ ಕಾವ್ಯ


ಪುಟ-೭೦

ರಾತ್ರಿ ಬೆಂಕಿಯ ಬೆಳಕುಗಳಲ್ಲಿ
ಅವರ ಪೂರ್ವಜರ ಕಥೆಗಳ ಹೇಳಲಾರದವರು
ಪ್ರಭು, ನಾನವರ ಶಾಲೆಗಳಿಗೆ ಮತ್ತೆ ಹೋಗಬೇಕಿಲ್ಲ.


ಅನಿಕೇತನ
ಸಂಯುಕ್ತ
ಸಂಚಿಕೆ



ಪ್ರಖ್ಯಾತ ಉರ್ದು ಸಾಹಿತಿ ಇಸ್ಮತ್ ಚುಗ್ತಾಯ್ ವಿವಾದಗಳಲ್ಲೇ ಬದುಕಿದವಳು. ಆಕೆಯ ಸಾವಿನಲ್ಲೂ ವಿವಾದವನ್ನು ಸೃಷ್ಟಿಸಿದ್ದಳು. ಆಕೆ ಸತ್ತಾಗ ಇಸ್ಲಾಂನ ಪದ್ಧತಿಗಳನುಸಾರ ಆಕೆಯನ್ನು ಮಣ್ಣಿನಲ್ಲಿ ಹೂಳದೆ ಸುಡಬೇಕೆಂದು ಆಕೆ ಬರೆದಿಟ್ಟಿದ್ದಳಂತೆ. ಮತ್ತೊಬ್ಬ ಪ್ರಖ್ಯಾತ ಸಾಹಿತಿ ಸಾದತ್ ಹಸನ್ ಮಾಂಟೋನ ಸಮಕಾಲೀನಳಾದ ಈಕೆ ಮಾಂಟೋನ ಆತ್ಮೀಯ ಗೆಳತಿಯಾಗಿದ್ದಳು. ಅವರಿಬ್ಬರ ಆದರ್ಶ ಮತ್ತು ಗೆಳೆತನ ಹೇಗಿತ್ತೆಂದರೆ ಒಮ್ಮೆ ಮಾಂಟೊ, 'ಇಸ್ಮತ್ ಗಂಡಸಾಗಿದ್ದರೆ ಆಕೆ ಮಾಂಟೊ ಆಗಿರುತ್ತಿದ್ದಳು ಹಾಗೂ ನಾನೇನಾದರೂ ಹೆಂಗಸಾಗಿದ್ದರೆ ನಾನು ಇಸ್ಮತ್ ಆಗಿರುತ್ತಿದ್ದೆ' ಎಂದಿದ್ದ. ಎಷ್ಟೋ ಜನ ನೀವೇ ಏಕೆ ಒಬ್ಬರನ್ನೊಬ್ಬರು ಮದುವೆಯಾಗಲಿಲ್ಲ ಎಂದೂ ಕೇಳಿದ್ದರು. ಮಾಂಟೊ ತಮಾಷೆಗೆ ತಾವಿಬ್ಬರೂ ಮದುವೆಯಾಗಿದ್ದಿದ್ದರೆ ಇಬ್ಬರೂ ಬರೆಯುವುದನ್ನೇ ನಿಲ್ಲಿಸಿಬಿಡುತ್ತಿದ್ದೆವೇನೋ ಎಂದಿದ್ದ. ಮಾಂಟೊ, ಕ್ರಿಷನ್ ಚಂದರ್ ಮತ್ತು ರಾಜೆಂದರ್ ಸಿಂಗ್ ಬೇಡಿಯ ಜೊತೆಗೆ ಇಸ್ಮತ್ ಉರ್ದು ಸಣ್ಣ ಕಥಾ ಸಾಹಿತ್ಯದ ನಾಲ್ಕನೇ ಆಧಾರ ಸ್ತಂಭವಾಗಿದ್ದಳು. ಮಹಿಳೆಯರು, ಅದರಲ್ಲೂ ಮುಸಲ್ಮಾನ ಮಹಿಳೆಯರು ಮನೆಯಿಂದಲೇ ಹೊರಗೆ ಬರಬಾರದು ಎಂದಿದ್ದ ಸಮಯದಲ್ಲಿ ಸಾಂಪ್ರದಾಯಿಕ ಧೋರಣೆಯನ್ನು ಧಿಕ್ಕರಿಸಿ ಬರಹಗಾರಳಾಗಲು ಹೊರಟಂಥ ಬಂಡಾಯಗಾರ್ತಿ ಆಕೆ. ಆಕೆಯ ಕತೆ ಅಶ್ಲೀಲ ಎಂದು ಸ್ವಾತಂತ್ರ್ಯಪೂರ್ವದಲ್ಲಿ ಆಕೆಯ ಮೇಲೆ ದಾವೆಯನ್ನು ಹೂಡಲಾಗಿತ್ತು. ಹತ್ತು ಮಕ್ಕಳಲ್ಲಿ ಒಂಬತ್ತನೆಯವಳಾದ ಆಕೆ ಸಣ್ಣ ಮಗುವಾಗಿರುವಾಗಲೇ ಆಕೆಯ ಅಕ್ಕಂದಿರಿಗೆ ಮದುವೆಯಾಗಿತ್ತು.



ತನ್ನ ಅಣ್ಣ ತಮ್ಮಂದಿರೊಂದಿಗೆ ಬೆಳೆದ ಆಕೆಯನ್ನು ಆಕೆಯ ತಂದೆ ತಾಯಿಯರು ಶಾಲೆಗೆ ಕಳುಹಿಸದಿದ್ದಾಗ ತನ್ನ ಅಣ್ಣಂದಿರು ಶಾಲೆಗೆ ಹೋಗುತ್ತಿದ್ದಾರೆ, ನಾನೂ ಹೋಗುತ್ತೇನೆ ಎಂದು ಹಠ ಹಿಡಿದು ಶಾಲೆಗೆ ಹೊರಟವಳು. 'ಬೇಡಮ್ಮಾ, ಶಾಲೆಗೆ ಹೋಗಬೇಡ, ನೀನು ಅಡುಗೆ ಮಾಡೋದು ಕಲಿತುಕೊ, ಇಲ್ಲವಾದಲ್ಲಿ ಮದುವೆಯಾದ ಮೇಲೆ ಏನು ಮಾಡುತ್ತೀ?' ಎಂದಾಗ, 'ನಾನು ಮದುವೆಯಾಗುವ ಗಂಡ ಬಡವನಾಗಿದ್ದಲ್ಲಿ ನಾವು ಕಿಚಡಿ ಮಾಡಿಕೊಂಡು ತಿನ್ನುತ್ತೀವಿ ಅಥವಾ ಅವನು ಸಾಹುಕಾರನಾಗಿದ್ದಲ್ಲಿ ಅಡುಗೆಯವನನ್ನು ಇಟ್ಟುಕೊಳ್ಳುತ್ತೇವೆ' ಎಂದಿದ್ದಳು.

ಇಸ್ಮತ್ ಚುಗ್ತಾಯ್ ಒಂದು ಮಧ್ಯಮ ವರ್ಗದ ಕುಟುಂಬವೊಂದರಲ್ಲಿ ಉತ್ತರ ಪ್ರದೇಶದ ಬದಯುನ್‌ನಲ್ಲಿ 1915ರ ಆಗಸ್ಟ್ 15ರಂದು ಜನಿಸಿದಳು. ಆಕೆಯ ಅಣ್ಣ ಮಿರ್ಜಾ ಅಜೀಮ್ ಬೇಗ್ ಚುಗ್ತಾಯ್ ಆಕೆ ಚಿಕ್ಕ ಹುಡುಗಿಯಾಗಿದ್ದಾಗಲೇ ಖ್ಯಾತ ಲೇಖಕನಾಗಿದ್ದ. ಆತನೇ ಆಕೆಯ ಮೊದಲ ಗುರು ಮತ್ತು ಮಾರ್ಗದರ್ಶಿ. ಆಕೆ ಥಾಮಸ್ ಹಾರ್ಡಿಯ ಕೃತಿಗಳ ಜೊತೆಗೆ ಹಿಜಾಬ್ ಇಮ್ತಿಯಾಜ್ ಅಲಿ, ಮಜ್ನೂನ್ ಗೋರಖ್‌ಪುರಿ ಮತ್ತು ನಿಯಾಜ್ ಫತೇಪುರಿಯವರ ಕೃತಿಗಳನ್ನು ಓದಿದ್ದಳು. ಅದಕ್ಕೂ ಮೊದಲು ಆಕೆ ಯಾರಿಗೂ ತಿಳಿಯದಂತೆ ಗೋಪ್ಯವಾಗಿ ಪ್ರೇಮದ ಕತೆಗಳನ್ನು ಬರೆಯುವ ಪ್ರಯತ್ನ ಮಾಡಿದ್ದಳು. ಹೆಣ್ಣಾಗಿ ಬರೆಯುವಂಥ 'ಅಪರಾಧ' ಮಾಡುತ್ತಿದ್ದುದರಿಂದ ಸಿಕ್ಕಿಹಾಕಿಕೊಂಡರೆ ಆಕೆಯನ್ನು ಶಿಕ್ಷಿಸುವರೆಂಬ ಭಯವಿತ್ತು. ದಾಸ್ತೋವ್‌ಸ್ಕಿ, ಡಿಕನ್ಸ್, ಟಾಲ್‌ಸ್ಟಾಯ್, ಸೋಮರಸೆಟ್ ಮಾಮ್, ಚೆಕೋವ್, ಓ ಹೆನ್ರಿ ಮುಂತಾದ ಲೇಖಕರು ಆಕೆಯ ಮೆಚ್ಚಿನ ಲೇಖಕರಾಗಿದ್ದರು. ಓ ಹೆನ್ರಿಯಿಂದಲೇ ಕತೆ ಬರೆಯುವುದನ್ನು ಕಲಿತೆ ಎಂದು ಆಕೆಯೇ ಹೇಳಿಕೊಂಡಿದ್ದಾಳೆ. ಮುನ್ಷಿ ಪ್ರೇಮ್ ಚಂದ್ ಉರ್ದು ಲೇಖಕರಲ್ಲಿ ಆಕೆಗೆ ಪ್ರಿಯವಾದವರು. ಆನಂತರ ಆಕೆ ಗಾಂಧಿಯ ಕೃತಿಗಳನ್ನೂ ಮೆಚ್ಚುಗೆಯಿಂದ ಓದತೊಡಗಿದಳು. ತನ್ನ ಕಾಲೇಜಿನಲ್ಲಿ ಆಕೆ ಗ್ರೀಕ್ ನಾಟಕಗಳನ್ನು, ಶೇಕ್ಸ್‌ಪಿಯರ್‌ನ ನಾಟಕಗಳನ್ನು, ಇಬ್ಸನ್ ಮತ್ತು ಬರ್ನಾಡ್ ಷಾ ಅವರ ನಾಟಕಗಳನ್ನು ಅತ್ಯಂತ ಆಸಕ್ತಿಯಿಂದ ಓದಿದಳು.

ಆಕೆಗೆ ಶಾಲೆಗೆ ಹೋಗಿ ಓದಬೇಕೆಂಬ ಬಯಕೆ ಎಷ್ಟಿತ್ತೆಂದರೆ, ಹದಿನೈದು ವರ್ಷವಾಗಿ ಒಂಬತ್ತನೇ ತರಗತಿಯಲ್ಲಿದ್ದಾಗ ಆಕೆಗೆ ಮದುವೆ ಮಾಡಬೇಕೆನ್ನುವ ಸಿದ್ಧತೆಯನ್ನು ಆಕೆಯ ತಂದೆತಾಯಿಗಳು ಮಾಡುತ್ತಿದ್ದರು. ಒಂದು ದಿನ ಆಕೆ ಶಾಲೆಯಿಂದ ಮನೆಗೆ ಬಂದಾಗ ಮನೆಯಲ್ಲಿ ಚಿನಿವಾರರು ಮತ್ತು ದರ್ಜಿಗಳು ಬೀಡುಬಿಟ್ಟಿದ್ದರು. ಆಕೆಯೊಂದಿಗೆ ಅಂತಹ ವಿಷಯಗಳನ್ನು ಮಾತನಾಡುವಂತಹ ಅವಿವಾಹಿತ ಅಕ್ಕ ತಂಗಿಯರೂ ಇರಲಿಲ್ಲ. ಕೊನೆಗೆ ವಿಷಯ ತಿಳಿದ ಆಕೆ ಮದುವೆಯಾದಲ್ಲಿ ತನ್ನ ಓದನ್ನು ಮುಂದುವರೆಸಲು ಸಾಧ್ಯವಾಗುವುದಿಲ್ಲವೆಂದು ತನಗೆ ಮದುವೆಯೇ ಬೇಡವೆಂದು ಹಠ ಹಿಡಿದಳು. 'ನಿನಗೆ ಹುಚ್ಚು ಹಿಡಿದಿದೆ' ಎಂದು ತಾಯಿ ಬೈದರು. 'ನೀನು ಗಂಡನ ಮನೆಗೆ ಹೋದಮೇಲೆ

ಓದಬಹುದಲ್ಲಾ?' ಎಂದರು ತಂದೆ. 'ಗಂಡನ ಮನೆಯಲ್ಲಿ ಓದಿದ ಹಾಗೆ! ಆ ಗಂಡನೂ ನನ್ನ ತಂದೆಯಂಥವನೇ ಆದಲ್ಲಿ ಪ್ರತಿ ವರ್ಷ ಒಂದು ಮಗುವನ್ನು ಹೆತ್ತುಕೊಡಲೆ? ಅಥವಾ ಪರೀಕ್ಷೆಗಳನ್ನು ಬರೆಯಲೆ?' ಎಂದು ಮನಸ್ಸಿನಲ್ಲೇ ಗೊಣಗಿ ಆ ಮದುವೆ ನಿಲ್ಲಿಸಲು ಉಪಾಯವೊಂದನ್ನು ಹುಡುಕಿದಳು. ಆಕೆಯ ಮಾವನ ಮಗನೊಬ್ಬ ಬಾಂಬೆಯಲ್ಲಿ ವೈದ್ಯ ಪದವಿ ಓದುತ್ತಿದ್ದ. ಇಸ್ಮತ್ ಅವನಿಗೊಂದು ಪತ್ರ ಬರೆದು 'ನನ್ನನ್ನು ಈಗ ನೀನೇ ಪಾರು ಮಾಡಬೇಕು, ಅದಕ್ಕಾಗಿ ನೀನು ಏನೂ ಮಾಡಬೇಕಾಗಿಲ್ಲ. ನೀನು ನಮ್ಮ ತಂದಗೆ ನನ್ನನ್ನು ಕಂಡರೆ ಇಷ್ಟ ಹಾಗೂ ನನ್ನನ್ನು ಮದುವೆಯಾಗುತ್ತೇನೆ ಎಂದು ಪತ್ರ ಬರೆದುಬಿಡು. ಇದು ಮಾತ್ರ ನನ್ನ ಮದುವೆಯನ್ನು ನಿಲ್ಲಿಸಬಹುದು. ಆಮೇಲೆ ನೀನು ಹೆದರಿಕೊಳ್ಳುವ ಅವಶ್ಯಕತೆಯೇನೂ ಇಲ್ಲ, ನಾನು ಖುರಾನ್ ಮೇಲೆ, ಅಲ್ಲಾಹ್‌ನ ಮೇಲೆ ಹಾಗೂ ನನ್ನ ಶಿಕ್ಷಣದ ಮೇಲೆ ಪ್ರಮಾಣ ಮಾಡಿ ಹೇಳುತ್ತೇನೆ ನಿನ್ನನ್ನು ಮದುವೆಯಾಗುವುದಿಲ್ಲವೆಂದು. ದಯಪಿಟ್ಟು ಈ ಮದುವೆಯನ್ನು ನಿಲ್ಲಿಸಿಬಿಡು' ಎಂದು ಹೇಳಿದಳು. ಆತ ಅದೇ ರೀತಿ ಮಾಡಿದ. ಕೆಲ ದಿನಗಳ ನಂತರ ಇಸ್ಮತ್ ತಾಯಿ ಮದುವೆಯ ಸಿದ್ಧತೆಯ ಉತ್ಸಾಹದಲ್ಲೇ ಇರುವಾಗ ಅವಳ ಮಾವ ಓಡಿಬಂದು, 'ನೋಡಿಲ್ಲಿ, ನಮ್ಮ ಶೌಕತ್‌ಗೆ ಇಸ್ಮತ್ ಕಂಡರೆ ಇಷ್ಟವಂತೆ. ನೀನು ಅವಳನ್ನು ಹೊರಗಿನವನಿಗೆ ಮದುವೆ ಮಾಡಿಕೊಡುವುದು ಬೇಡ. ಬೇಕಾದರೆ ಈ ಪತ್ರ ನೋಡು' ಎಂದು ತೋರಿಸಿದ. ಇಸ್ಮತ್‌ಳ ಅಮ್ಮನ ಮುಖವೂ ಸಂತೋಷದಿಂದ ಊರಗಲವಾಯಿತು. ದರ್ಜಿಗಳು ಮತ್ತು ಚಿನಿವಾರರು ಕತ್ತರಿಸಿದ ಬಟ್ಟೆ ಹಾಗೂ ಕರಗಿಸಿದ ಚಿನ್ನ ಬಿಟ್ಟು ಹೊರಟರು. ಇಸ್ಮತ್‌ಳ ಮದುವೆ ಸಧ್ಯಕ್ಕೆ ಅನಿರ್ದಿಷ್ಟ ಕಾಲ ಮುಂದೆ ಹೋಯಿತು.

ತನಗೆ ಇಪ್ಪತ್ತಮೂರು ವರ್ಷಗಳಾಗಿದ್ದಾಗ ತಾನೂ ಬರೆಯಬಲ್ಲೆ ಎಂದು ಆಕೆಗೆ ಆತ್ಮವಿಶ್ವಾಸ ಬಂದಾಗ ಆಕೆ ತನ್ನ ಮೊಟ್ಟಮೊದಲ ಕತೆ 'ಫಾಸದಿ' ಬರೆದಳು ಹಾಗೂ ಅದು ಪ್ರತಿಷ್ಠಿತ ಸಾಹಿತ್ಯ ಪತ್ರಿಕೆ 'ಸಾಖಿ'ಯಲ್ಲಿ ಪ್ರಕಟವಾಯಿತು. ಅದನ್ನು ಓದಿದವರು ಅಜೀಮ್ ಬೇಗ್ ಚುಗ್ತಾಯ್ (ಆಕೆಯ ಸಾಹಿತಿ ಅಣ್ಣ) ಯಾವಾಗ ತನ್ನ ಹೆಸರು ಬದಲಿಸಿಕೊಂಡು ಬರೆಯಲು ಶುರುಮಾಡಿದ ಎಂದು ಅಚ್ಚರಿಗೊಂಡರು!

1936ರಲ್ಲಿ ತನ್ನ ಬ್ಯಾಚುಲರ್ ಪದವಿಯಲ್ಲಿದ್ದಾಗಲೇ ಆಕೆ ಲಕ್ನೋದಲ್ಲಿನ ಪ್ರಗತಿಪರ ಬರಹಗಾರರ ಸಂಘದ ಸಭೆಗೆ ಹಾಜರಾದಳು. ಇಂಗ್ಲೆಂಡಿನಲ್ಲಿ ಪ್ರಾರಂಭವಾಗಿದ್ದ ಆ ಸಂಘ ಭಾರತಕ್ಕೂ ಬಂದಿತ್ತು ಹಾಗೂ ಅದು ಫಯಾಜ್ ಅಹ್ಮದ್ ಫಯಾಜ್, ಸಜ್ಜದ್ ಜಹೀರ್, ಕೈಫಿ ಅಜ್ಮಿಯಂಥವರನ್ನು ಆಕರ್ಷಿಸಿತ್ತು. ಇವರೆಲ್ಲಾ ಉರ್ದು ಸಾಹಿತ್ಯ ಹೊಸ ದಿಕ್ಕಿನೆಡೆ ಸಾಗಲು ಸಂಪೂರ್ಣ ಹೊಸ ಮೌಲ್ಯಗಳನ್ನು ಹುಟ್ಟುಹಾಕುತ್ತಿದ್ದರು. ಅಲ್ಲಿ ಭೇಟಿಯಾದ ರಶೀದ್ ಜಾನ್ ಎಂಬ ವೈದ್ಯೆ ಮತ್ತು ಲೇಖಕಿ, ಇಸ್ಮತ್‌ಳ ಮೇಲೆ ಅಗಾಧ ಪ್ರಭಾವ ಬೀರಿದಳು. ರಶೀದ್ ಜಾನ್ ದೃಢಚಿತ್ತದ ಮತ್ತು ಸ್ವತಂತ್ರ ಮನೋಭಾವದ ಹೆಣ್ಣಾಗಿದ್ದಳು. ಇಸ್ಮತ್, 'ದಿಟ್ಟ ಹಾಗೂ ಮನಸ್ಸಿನಲ್ಲಿದ್ದುದನ್ನು ನೇರವಾಗಿ ಹೇಳಿಬಿಡುವ

ಆಕೆಯನ್ನು ನೋಡಿದಾಕ್ಷಣ ನಾನೂ ಸಹ ಅದೇ ರೀತಿ ಇರಬೇಕೆಂದೆನ್ನಿಸಿತ್ತು' ಎಂದು ಹೇಳಿದ್ದಾಳೆ. ತನ್ನ ಬ್ಯಾಚುಲರ್ ಪದವಿಯ ನಂತರ ಶಿಕ್ಷಣದಲ್ಲಿ ಬ್ಯಾಚುಲರ್ ಪದವಿ ಪಡೆದಳು ಹಾಗೂ ಈ ಎರಡೂ ಪದವಿಗಳನ್ನು ಪಡೆದ ಮೊಟ್ಟ ಮೊದಲ ಭಾರತದ ಮುಸಲ್ಮಾನ ಮಹಿಳೆಯಾದಳು. ಆಕೆ ಬಾಂಬೆಯಲ್ಲಿನ ಮಹಿಳಾ ಕಾಲೇಜಿನ ಪ್ರಿನ್ಸಿಪಾಲಳಾಗಿ ನೇಮಕಗೊಂಡಳು. ಅನಂತರ ಶಾಲೆಗಳ ನಿರೀಕ್ಷಕಳಾದಳು. ಆಕೆ ಕೆಲ ಸಮಯ ಅಲಿಘರ್‌ನಲ್ಲಿ ಸಹ ಕೆಲಸ ಮಾಡಿದಳು. ಅಲ್ಲಿ ಆಕೆ ಆಗ ಮಾಸ್ಟರ್ಸ್ ಪದವಿ ಮಾಡುತ್ತಿದ್ದ ಶಾಹೀದ್ ಲತೀಫ್‌ನನ್ನು ಭೇಟಿಯಾದಳು. ಗೆಳೆತನ ಕೆಲ ಸಮಯದ ನಂತರ ಪ್ರೇಮವಾಗಿ ಅವರಿಬ್ಬರೂ 1942ರಲ್ಲಿ ಮದುವೆಯಾದರು. ಆಕೆಯೇ ಬರೆದುಕೊಂಡಿರುವಂತೆ ಶಾಹೀದ್‌ನನ್ನು ಮದುವೆಯಾಗುವ ಮುನ್ನ, 'ಮತ್ತೊಮ್ಮೆ ಸರಿಯಾಗಿ ಆಲೋಚಿಸು, ನಾನು ಸ್ವತಂತ್ರ ಆಲೋಚನೆಗಳುಳ್ಳವಳು. ನಾನು ನಿನಗೆ ಸರಿಹೊಂದುತ್ತೇನೆಯೋ ಇಲ್ಲವೋ' ಎಂದು ಹೇಳಿದ್ದಳು. ತನ್ನ ಮದುವೆಯ ಬಗ್ಗೆ ಹೇಳುತ್ತ ಆಕೆ, 'ಗಂಡು ಹೆಣ್ಣನ್ನು ದೇವತೆ ಎನ್ನುವಂತೆ ಪೂಜಿಸುತ್ತಾನೆ, ಪ್ರೀತಿಸುತ್ತಾನೆ, ಗೌರವಿಸುತ್ತಾನೆ. ಆದರೆ ಆಕೆಯನ್ನು ತನ್ನ ಸಮಾನಳು ಎಂದು ಸ್ವೀಕರಿಸಲು ಮಾತ್ರ ಸಿದ್ಧವಿರುವುದಿಲ್ಲ. ಒಬ್ಬ ಅನಕ್ಷರಸ್ಥ ಹೆಣ್ಣಿನೊಂದಿಗೆ ಆತ ಹೇಗೆ ಗೆಳೆಯನಾಗಿರಲು ಸಾಧ್ಯ? ಆದರೆ ಗೆಳೆತನಕ್ಕೆ ಬೇಕಾಗಿರುವುದು ಪ್ರೀತಿ ಪ್ರೇಮಗಳು, ಶಿಕ್ಷಣವಲ್ಲ. ಶಾಹೀದ್ ನನ್ನನ್ನು ತನ್ನ ಸರಿಸಮಳೆಂದು ಪರಿಗಣಿಸಿದ. ಆದಕ್ಕಾಗಿಯೇ ನಮ್ಮ ದಾಂಪತ್ಯ ಜೀವನ ಸುಖಕರವಾಗಿತ್ತು' ಎಂದಿದ್ದಳು.

ತನ್ನ ಮದುವೆಗೆ ಎರಡು ತಿಂಗಳಿದ್ದಾಗಲೇ ಆಕೆಯ ಕತೆ 'ಲಿಹಾಫ್' (ಕವುದಿ) ಪ್ರಕಟವಾಯಿತು ಹಾಗೂ ಅದು ವಿವಾದವನ್ನೂ ಹುಟ್ಟುಹಾಕಿತು. ಇಂದಿಗೂ ಈ ಕತೆ ಉಪಖಂಡದಲ್ಲಿ ಹೆಣ್ಣೊಬ್ಬಳು ಬರೆದ ಅತ್ಯಂತ ವಿವಾದಾಸ್ಪದ ವಿಷಯದ ಕತೆಯೆಂದು ಪರಿಗಣಿಸಲ್ಪಟ್ಟಿದೆ. ನವಾಬನ ಪತ್ನಿಯೊಬ್ಬಳು ತನ್ನ ಗಂಡ ತನಗಾಗಿ ಸಮಯವನ್ನೇ ಕೊಡದಿದ್ದಾಗ ತನ್ನ ಸಹಜ ಲೈಂಗಿಕ ತೃಷೆಯ ತೃಪ್ತಿಯನ್ನು ಹಾಗೂ ಭಾವನಾತ್ಮಕ ಸಾಂತ್ವನವನ್ನು ತನ್ನ ಸೇವಕಿಯಲ್ಲಿ ಕಂಡುಕೊಳ್ಳುತ್ತಾಳೆ. ವಯಸ್ಕ ಹೆಣ್ಣು ನಿರೂಪಕಿ ವಹಿಸಬೇಕಾದ ಎಚ್ಚರಿಕೆ ಮತ್ತು ನಿಗ್ರಹವನ್ನು ತೊಡಗಿಸಲು ಈ ಕತೆಯ ನಿರೂಪಣೆಯನ್ನು ಒಂಬತ್ತು ವರ್ಷಗಳ ಹುಡುಗಿಯ ದೃಷ್ಟಿಯಿಂದ ಮಾಡಲಾಗಿದೆ. ಇಸ್ಮತ್ 1941ರಲ್ಲಿ 'ಲಿಹಾಫ್' ಕತೆಯನ್ನು ಪ್ರಕಟಣೆಗೆ ಕಳುಹಿಸಿದಾಗ ಪತ್ರಿಕೆಯ ಸಂಪಾದಕ ಅಂತಹ ಕತೆಯನ್ನು ಹೆಣ್ಣೊಬ್ಬಳು ಬರೆಯಲು ಸಾಧ್ಯವೇ ಇಲ್ಲ, ಯಾರೋ ಗಂಡಸರು ಹೆಣ್ಣಿನ ಹೆಸರಿನಲ್ಲಿ ಬರೆದಿದ್ದಾರೆ ಎಂದೇ ನಂಬಿದ್ದ. ಕತೆ ಪ್ರಕಟವಾದ ನಂತರ ಓದುಗರು ಮತ್ತು ವಿಮರ್ಶಕರು ಕೃತಿ ಮತ್ತು ಕೃತಿಕಾರಳನ್ನು ಖಂಡಿಸಿದರು. ಕತೆ ಅಶ್ಲೀಲವೆಂದು ಆಕೆಯ ಮೇಲೆ ನ್ಯಾಯಾಲಯದಲ್ಲಿ ದಾವೆ ಹೂಡಲಾಯಿತು. ಲಾಹೋರಿನ ನ್ಯಾಯಾಲಯದಲ್ಲಿ ನಾಲ್ಕು ವರ್ಷ ನಡೆದ ವಿಚಾರಣೆಯಲ್ಲಿ ಕೃತಿಯಲ್ಲಿ ಅಶ್ಲೀಲದ 'ನಾಲ್ಕಕ್ಷರ' ಸಿಗದಿದ್ದುದರಿಂದ ದಾವೆ ವಜಾ ಆಯಿತು. ಅದೇ ಸಮಯದಲ್ಲಿ ಸಾದತ್ ಹಸನ್ ಮಾಂಟೊನ ಕತೆಗಳ

ಮೇಲೂ ಸಹ ಅವು ಅಶ್ಲೀಲವೆಂದು ದಾವೆ ಹೂಡಲಾಗಿತ್ತು. ಎಷ್ಟೋ ಸಾರಿ ಇಬ್ಬರೂ ಜೊತೆಯಲ್ಲಿಯೇ ಲಾಹೋರಿನ ನ್ಯಾಯಾಲಯದಲ್ಲಿ ವಿಚಾರಣೆಗೆ ಹಾಜರಾಗಿದ್ದಾರೆ. ಲಾಹೋರಿನ ನ್ಯಾಯಾಲಯದಲ್ಲಿ ನಡೆದ ವಿಚಾರಣೆಯ ಸನ್ನಿವೇಶಗಳನ್ನು ಇಸ್ಮತ್ ತಾನೇ ಸ್ವತಃ ಹೀಗೆ ದಾಖಲಿಸಿದ್ದಾಳೆ :

"ಮರುದಿನ ನ್ಯಾಯಾಲಯ ಕಿಕ್ಕಿರಿದಿತ್ತು. ನನ್ನನ್ನು ಮತ್ತು ಮಾಂಟೋನನ್ನು ನೋಡಲು ಬಹಳಷ್ಟು ಜನ ಬಂದಿದ್ದರು. ಆಗ ನಾನು ಮಾಂಟೊ ಕಿವಿಯಲ್ಲಿ ತಮಾಷೆಗೆ ಪಿಸುಗುಟ್ಟಿದೆ. 'ನಮ್ಮನ್ನು ನೋಡಬೇಕಾದಲ್ಲಿ ಟಿಕೀಟು ತೆಗೆದುಕೊಳ್ಳಬೇಕೆಂದು ಹೇಳೋಣ. ಕನಿಷ್ಠ ನಮಗೆ ವಾಪಸ್ಸು ಹೋಗಲು ಟ್ರೈನಿನ ಚಾರ್ಜಾದರೂ ಸಿಗುತ್ತದೆ'. ಕ್ಷಮಾಪಣೆ ಕೇಳಿ ಕೇಸನ್ನು ವಾಪಸ್ಸು ತೆಗೆದುಕೊಳ್ಳಿ ಹಾಗೂ ಬೇಕಾದಲ್ಲಿ ನಾವೇ ಜುಲ್ಮಾನೆಯ ಅರ್ಧ ಹಣ ಪಾವತಿಸುತ್ತೇವೆ ಎಂದು ಬಹಳಷ್ಟು ಜನ ನಮಗೆ ಸಲಹೆ ನೀಡಿದ್ದರು. ನಾನು ಬರೆದಿರುವುದು ನಿಜವಾಗಿಯೂ ಅಶ್ಲೀಲ ಅಥವಾ ತಪ್ಪು ಎಂದು ರುಜುವಾತಾದಲ್ಲಿ ನಾನು ಶಿಕ್ಷೆ ಅನುಭವಿಸಲು ಸಿದ್ಧಳಿದ್ದೆ. *ಲಿಹಾಫ್* ಅಶ್ಲೀಲ ಎಂದು ಸಾಕ್ಷಿ ನೀಡಲು ಬಂದಿದ್ದವನನ್ನು ನನ್ನ ವಕೀಲ ಗೊಂದಲಕ್ಕೀಡುಮಾಡಿದಾಗ ಅದರಲ್ಲಿ ಅಶ್ಲೀಲವಾಗಿರುವುದು ಯಾವುದೆಂದು ಹೇಳಲು ಅವನಿಂದ ಸಾಧ್ಯವಾಗಲೇ ಇಲ್ಲ. ಕೊನೆಗೆ ಒಬ್ಬ ಸಾಕ್ಷಿದಾರ ಹೇಳಿದ : 'ನೋಡಿ ಈ ವಾಕ್ಯ..... ಪ್ರೇಮಿಗಳನ್ನು ಸೆಳೆದುಕೊಳ್ಳುವುದು..... ಇದು ಅಶ್ಲೀಲ' ಎಂದ.

'ಯಾವ ಪದ ಅಶ್ಲೀಲ? 'ಪ್ರೇಮಿಗಳನ್ನು' ಎನ್ನುವುದೋ ಅಥವಾ 'ಸೆಳೆದುಕೊಳ್ಳುವುದು' ಎನ್ನುವುದೋ?' ನನ್ನ ವಕೀಲ ಕೇಳಿದ.

'ಪ್ರೇಮಿಗಳನ್ನು' ಕೊಂಚ ಅನಿಶ್ಚಿಯದ ಮನಸ್ಸಿನಿಂದಲೇ ಹೇಳಿದ ಸಾಕ್ಷಿದಾರ.

'ಮೈ ಲಾರ್ಡ್, ಪ್ರೇಮಿ ಎನ್ನುವ ಪದವನ್ನು ಮಹಾನ್ ಕವಿಗಳು ಎಲ್ಲೆಡೆ ಬೇಕಾದಷ್ಟು ಬಳಸಿದ್ದಾರೆ. ಪ್ರವಾದಿಯನ್ನು ಪ್ರಶಂಸಿಸಿ ಬರೆದಿರುವ ಪದ್ಯಗಳಲ್ಲಿಯು ಪ್ರೇಮಿ ಎನ್ನುವ ಪದ ಬಳಕೆಯಿದೆ. ದೇವರಿಗೆ ಅಂಜುವ ಜನರು ಈ ಪದಕ್ಕೆ ಮಹತ್ವದ ಸ್ಥಾನ ನೀಡಿದ್ದಾರೆ'.

'ಆದರೆ ಹುಡುಗಿಯರು ತಾವಾಗಿಯೇ ಪ್ರೇಮಿಗಳನ್ನು ಸೆಳೆದುಕೊಳ್ಳುವುದು ಆಕ್ಷೇಪಾರ್ಹ'. ಹೇಳಿದ ಸಾಕ್ಷಿದಾರ.

'ಏಕೆ?'

'ಏಕೆಂದರೆ.... ಒಳ್ಳೆಯ ಹುಡುಗಿಯರು ಈ ರೀತಿ ಮಾಡುವುದು ಆಕ್ಷೇಪಾರ್ಹ'

'ಹಾಗಾದರೆ ಹುಡುಗಿಯರು ಕೆಟ್ಟವರಾದರೆ, ಆ ರೀತಿ ಮಾಡುವುದರಿಂದ ಆಕ್ಷೇಪಾರ್ಹವಾಗುವುದಿಲ್ಲವೇ?'

'ಹ್ಞೂಂ... ಇಲ್ಲ'.

'ನನ್ನ ಕಕ್ಷಿದಾರಳಾದ ಲೇಖಕಿ ತನ್ನ ಕತೆಯಲ್ಲಿ ಕೆಟ್ಟ ಹುಡುಗಿಯರ ಬಗ್ಗೆಯೇ ಬರೆದಿರಬಹುದು (ನನ್ನೆಡೆಗೆ ತಿರುಗಿ) ಅಲ್ಲವೇ? ನೀವು ನಿಮ್ಮ ಕತೆಯಲ್ಲಿ ಹುಡುಗಿಯರು ಪ್ರೇಮಿಗಳನ್ನು ಸೆಳೆದುಕೊಂಡರು ಎನ್ನುವ ಅರ್ಥದಲ್ಲಿ ಬರೆದಿದ್ದೀರಿಯೆ?'

'ಹೌದು', ನಾನು ಹೇಳಿದೆ.

'ಇಲ್ಲಿ ಅದು ಅಶ್ಲೀಲವಲ್ಲದಿರಬಹುದು. ಆದರೆ ಒಂದು ಮರ್ಯಾದಸ್ಥ ಕುಟುಂಬದ, ಶಿಕ್ಷಿತ ಹೆಣ್ಣು ಈ ರೀತಿ ಬರೆಯುವುದು ನಿಂದನೀಯ' ಗುಡುಗಿದ ಕಕ್ಷಿದಾರ.

'ನೀ ಎಷ್ಟು ಬೇಕಾದರೂ ನಿಂದಿಸಿಕೊ. ಆದರೆ ಅದು ನನ್ನ ಕಾನೂನಿನಡಿ ಅಪರಾಧವಲ್ಲ'.

ಅಷ್ಟರಲ್ಲಿ 'ಕ್ಷಮಾಪಣೆ ಕೇಳಿಬಿಡಿ, ಕೇಸು ವಜಾ ಆಗುತ್ತದೆ ಹಾಗೂ ನೀವು ಇದುವರೆಗೆ ಮಾಡಿರುವ ಖರ್ಚನ್ನೆಲ್ಲಾ ನಾನು ನಿಮಗೆ ಕೊಟ್ಟುಬಿಡುತ್ತೇನೆ' ಎಂದು ಯಾರೋ ಬಂದು ನನ್ನ ಕಿವಿಯಲ್ಲಿ ಪಿಸುಗುಟ್ಟಿದರು. ನಾನು ಪಕ್ಕದಲ್ಲಿದ್ದ ಮಾಂಟೊನನ್ನು, 'ಏನು ಹೇಳುವಿರಿ ಮಾಂಟೊ ಸಾಹೇಬ್? ಕ್ಷಮಾಪಣೆ ಕೇಳಿಬಿಡೋಣವೆ? ಅವರು ಕೊಡುವ ದುಡ್ಡಿನಿಂದ ಬೇಕಾದಷ್ಟು ವಸ್ತುಗಳನ್ನು ಖರೀದಿಸಿ ನಾವು ಬಾಂಬೆಗೆ ಹೋಗಬಹುದು', ಎಂದು ಹೇಳಿದೆ.

'ನಾನ್‌ಸೆನ್ಸ್' ಎಂದು ಗುಡುಗಿದ ಮಾಂಟೊ.

'ಕ್ಷಮಿಸಿ, ಈ ನನ್ನ ಹುಚ್ಚು ಗೆಳೆಯ ಮಾಂಟೊ ಒಪ್ಪುತ್ತಿಲ್ಲ' ಎಂದು ನನ್ನ ಕಿವಿಯಲ್ಲಿ ಪಿಸುಗುಟ್ಟಿದವರಿಗೆ ಹೇಳಿದೆ.

'ಅವರು ಒಪ್ಪದಿದ್ದರೆ ಹೋಗಲಿ, ನೀವು.... ಏನನ್ನುತ್ತೀರಿ?'

'ಅಯ್ಯೋ, ನಿಮಗೆ ಗೊತ್ತಿಲ್ಲ, ಈ ಮಾಂಟೊ ಎಂಥ ಜಗಳಗಂಟ ಎಂಬುದು. ನಾನು ಹಾಗೇನಾದರೂ ಮಾಡಿದರೆ ಬಾಂಬೆಯಲ್ಲಿ ಆತ ನನ್ನ ಬದುಕನ್ನು ಸಂಕಟವಾಗಿಸಿಬಿಡುತ್ತಾನೆ. ಬೇಕಾದರೆ ನನ್ನ ಕತೆ ಅಶ್ಲೀಲ ಎಂದು ನನಗೆ ಜೈಲು ಶಿಕ್ಷೆ ಕೊಟ್ಟುಬಿಡಲಿ, ಅದನ್ನು ಸುಲಭವಾಗಿ ಅನುಭವಿಸುತ್ತೇನೆ. ಆದರೆ ಅವನೊಂದಿಗೆ ಜಗಳ ಮಾತ್ರ ನನಗೆ ಬೇಡ' ಎಂದೆ. ನಮಗೆ ಏನೂ ಶಿಕ್ಷೆ ಆಗಿಲ್ಲವೆಂದು ಆ ವ್ಯಕ್ತಿಗೆ ಬೇಸರವಾಯಿತೋ ಏನೋ. ವಿಚಾರಣೆ ಮುಗಿದ ನಂತರ ನ್ಯಾಯಾಧೀಶರು ನನ್ನನ್ನು ಅವರ ಹೊರಕೋಣೆಗೆ ಕರೆಸಿಕೊಂಡು ಅನೌಪಚಾರಿಕವಾಗಿಯೇ, 'ನಾನು ನಿಮ್ಮ ಬಹುಪಾಲು ಎಲ್ಲಾ ಕತೆಗಳನ್ನು ಓದಿದ್ದೇನೆ. ಅವೇನೂ ಅಶ್ಲೀಲವಲ್ಲ. *ಲಿಹಾಫ್* ಸಹ ಅಶ್ಲೀಲವಲ್ಲ. ಆದರೆ ಆ ಮಾಂಟೊನ ಕೆಲವು ಬರಹಗಳಲ್ಲಿ ಹೊಲಸು ತುಂಬಿರುತ್ತದೆ' ಎಂದರು.

'ಈ ಜಗತ್ತು ಸಹ ಹೊಲಸಿನಿಂದಲೆ ತುಂಬಿದೆ', ನಾನು ಹೇಳಿದೆ.

'ಹಾಗೆಂದು, ಅದನ್ನು ಕೆದಕಿ ಮೇಲೆಸೆಯಬೇಕೆ?'

'ಅದನ್ನು ಕೆದಕಿ, ಮೇಲಸೆದರೇನೇ ಅದು ಎಲ್ಲರ ಕಣ್ಣಿಗೆ ಬೀಳುವುದು ಹಾಗೂ ಜನರಿಗೆ ಆಗಲೇ ಅದನ್ನು ಶುಚಿಗೊಳಿಸುವ ಅವಶ್ಯಕತೆಯೂ ಕಂಡುಬರುವುದು'. ನ್ಯಾಯಾಧೀಶರು ಜೋರಾಗಿ ನಕ್ಕು ಸುಮ್ಮನಾದರು. ನನ್ನ ಮೇಲೆ ದಾವೆ ಹೂಡಿದಾಗ ನನಗೇನೂ ತುಂಬಾ ಚಿಂತೆಯಾಗಿರಲಿಲ್ಲ. ಅದೇ ರೀತಿ ಅದು ವಜಾ ಆದಾಗಲೂ ನನಗೇನೂ ತುಂಬಾ ಸಂತೋಷವಾಗಲಿಲ್ಲ. ಆದರೆ ಲಾಹೋರ್‌ಗೆ ಹೋಗುವ ಅವಕಾಶ ಮತ್ತೆ ಸಿಗುವುದಿಲ್ಲವಲ್ಲಾ ಎಂದು ಬೇಸರವಾಯಿತು".

'ಕಲಯಾಂ' ಮತ್ತು 'ಕೋಟೀನ್' ಆಕೆಯ ಮೊದಲ ಕಥಾ ಸಂಕಲನಗಳು ಹಾಗೂ ಅವು ಆಕೆ ಅಣ್ಣ ಅಜೀಂ ಬೇಗ್ ಚುಗ್ತಾಯ್ ಬದುಕಿದ್ದಾಗಲೇ ಪ್ರಕಟವಾದವು. ಅದಾದನಂತರ ಹಲವಾರು ಸಂಕಲನಗಳು ಪ್ರಕಟವಾದವು 'ಏಕ್ ಬಾತ್', 'ಚುಯ್ ಮುಯ್', 'ದೋ ಹಾತ್', 'ಖರೀದ್ ಲೋ', 'ಏಕ್ ಕತ್ರಾಯೆ ಖೂನ್' ಮತ್ತು 'ಥೋಡಿ ಸಿ ಪಾಗಲ್'. 'ತೇರ್ಧಿ ಲಖೀರ್' ಮತ್ತು 'ಸೌದಾಯೆ' ಎಂಬ ಕಾದಂಬರಿಗಳು ಮತ್ತು 'ಜದ್ದಿ', 'ದಿಲ್ ಕಿ ದುನಿಯಾ' ಹಾಗೂ 'ಮಾಸೂಮಾ' ಎಂಬ ಕಿರು ಕಾದಂಬರಿಗಳೂ ಪ್ರಕಟವಾದವು. ಇದರ ಜೊತೆಗೆ ಆಕೆಯ ಹಲವಾರು ಪ್ರಬಂಧಗಳು ಮತ್ತು ಲೇಖನಗಳೂ ಪ್ರಕಟವಾದವು. ತನ್ನ ಪತಿಯೊಂದಿಗೆ ಹನ್ನೆರಡು ಚಲನಚಿತ್ರಗಳಿಗೆ ಚಿತ್ರಕತೆಗಳನ್ನು ಬರೆದಳು ಮತ್ತು ಸ್ವತಂತ್ರವಾಗಿ ಐದು ಚಲನಚಿತ್ರಗಳನ್ನು ಸಹ ನಿರ್ಮಿಸಿದಳು. ಶಶಿಕಪೂರ್‌ನ 'ಜುನೂನ್' ಸಿನೆಮಾದಲ್ಲಿ ಒಂದು ಪಾತ್ರವನ್ನು ಸಹ ನಿರ್ವಹಿಸಿದ್ದಳು.

ಇಸ್ಮತ್ ಚುಗ್ತಾಯ್ ಬರೆಯಲು ಆರಂಭಿಸಿದ ಸಮಯದಲ್ಲಿ ಮಹಿಳೆಯರಿಗೆ ಅದರಲ್ಲೂ ಮುಸಲ್ಮಾನ್ ಮಹಿಳೆಯರಿಗೆ ಯಾವುದೇ ಸ್ವಾತಂತ್ರ್ಯವಿರಲಿಲ್ಲ. ಅವರನ್ನು ಅಡುಗೆ ಮನೆಗಳಲ್ಲಿ ಕೂಡಿಹಾಕಿ ಅವರ ದನಿಗಳನ್ನು ಅದುಮಿಡಲಾಗಿತ್ತು. ಸಂಪ್ರದಾಯದ ಮತ್ತು ನೈತಿಕತೆಯ ಸರಪಳಿಗಳನ್ನು ಮಹಿಳೆಯರಿಗಾಗಿಯೇ ಇದೆಯೆಂಬಂತೆ ಅವರನ್ನು ಬಂಧಿಸಿಡಲಾಗಿತ್ತು. ಆಗ ಭಾರತೀಯ ಮುಸಲ್ಮಾನ ಮಹಿಳೆಯರಿಗೆ ಓದಲು ಸಿಗುತ್ತಿದ್ದ ಪುಸ್ತಕವೆಂದರೆ 1905ರಲ್ಲಿ ಪ್ರಕಟವಾಗಿದ್ದ ಎರಡು ಸಂಪುಟಗಳ 'ಗೂದರ್ ಕ ಲಾಲ್' ಎಂಬ ಕಾದಂಬರಿ. ಅದರ ಕರ್ತೃ ವಲೀದಾ ಅಫ್ಜಲ್ ಅಲಿ, ಅಂದರೆ 'ಅಫ್ಜಲ್ ಅಲಿಯ ತಾಯಿ' ಎಂದರ್ಥ. ಆಗ ಹೆಣ್ಣೊಬ್ಬಳು ಕೃತಿಕಾರಳಾಗಿದ್ದರೂ ಆಕೆ ತನ್ನ ಹೆಸರನ್ನು ಇಟ್ಟುಕೊಳ್ಳುವಂತಿರಲಿಲ್ಲ! ಆ ಕಾದಂಬರಿಯಲ್ಲಿ ಮುಲಸ್ಮಾನ ಸಂಸ್ಕೃತಿಯ ಬಗ್ಗೆ, ಸಂಪ್ರದಾಯ ಮತ್ತು ಆಚರಣೆಗಳ ಬಗ್ಗೆ ವಿವರಗಳಿತ್ತು. ಹಾಗಾಗಿ ಅದನ್ನು ಹೊಸದಾಗಿ ಮದುವೆಯಾದ ಹೆಣ್ಣಿಗೆ ಓದಲು ಕೊಡುತ್ತಿದ್ದರು. ಅದೇ ಸಮಯದಲ್ಲಿ ಮುಸಲ್ಮಾನ ಹೆಣ್ಣು ಹೇಗೆ ನಡೆದುಕೊಳ್ಳಬೇಕು ಎನ್ನುವುದ ಬಗ್ಗೆಯೂ ಹಲವಾರು ಕಾದಂಬರಿಗಳು

ಇದ್ದವು ಹಾಗೂ ಅವುಗಳನ್ನೆಲ್ಲಾ ಗಂಡಸರೇ ಬರೆದಿದ್ದರು. ಅಂತಹ ಸಮಯದಲ್ಲಿ ಇಸ್ಮತ್‌ಳ ಕೃತಿಗಳು ಉಪಖಂಡದ ಉರ್ದು ಸಾಹಿತ್ಯಕ್ಕೆ ಹೊಸ ದಾರಿಯನ್ನು ರೂಪಿಸಿಕೊಟ್ಟವು. ಹೆಣ್ಣುಗಳು 'ನಿಷೇಧಿತ' ಎಂದು ಪರಿಗಣಿಸುವಂತಹ ವಿಷಯಗಳಾದ ತಮ್ಮ ಭಾವನೆಗಳು, ಪ್ರೀತಿ ಪ್ರೇಮ, ಸಂಬಂಧಗಳು, ಲೈಂಗಿಕತೆಯ ಬಗ್ಗೆ ಬರೆಯಬಹುದೆಂದು ತೋರಿಸಿಕೊಟ್ಟಳು ಆದರೆ ವಿಪರ್ಯಾಸವೆಂದರೆ ಆಕೆಯನ್ನು ಅದರಿಂದಾಗಿ ಅಶ್ಲೀಲ ಲೇಖಕಿಯೆಂದೇ ಗುರುತಿಸಿದರು ಮತ್ತು ಲಿಹಾಫ್‌ಗಿಂತಲೂ ಮೊದಲು ಮತ್ತು ಅನಂತರ ಬರೆದ ಕೃತಿಗಳನ್ನು ಲೆಕ್ಕಕ್ಕೇ ತೆಗೆದುಕೊಳ್ಳಲಿಲ್ಲ. 'ಕಳೆದ ಕೆಲ ವರ್ಷಗಳಿಂದಷ್ಟೇ ಯುವಕರಿಗೆ ನನ್ನ ಇತರ ಕೃತಿಗಳನ್ನು ಓದಿ ನಾನೊಬ್ಬ ವಾಸ್ತವವಾದಿ, ಅಶ್ಲೀಲ ಲೇಖಕಿಯಲ್ಲ ಎಂದು ಗುರುತಿಸಿದ್ದಾರೆ' ಎಂದು ಚುಗ್ತಾಯ್ ನೋವಿನಿಂದ ಹೇಳಿಕೊಂಡಿದ್ದಾಳೆ.

ಇಸ್ಮತ್ ಮಧ್ಯಮ ವರ್ಗದ ಸಾಧಾರಣ ಮಹಿಳೆಯರ ಬದುಕಿನ ಬಗ್ಗೆಯೇ ಹೆಚ್ಚು ಬರೆದಿದ್ದಾಳೆ ಎಂದು ವಿಮರ್ಶಕರು ಗುರುತಿಸುತ್ತಿದ್ದರು. ಆದರೆ ಆಕೆಯ ಖ್ಯಾತಿ ಅದಾಗಿತ್ತು ಉತ್ತರ ಪ್ರದೇಶದ ಮಧ್ಯಮ ವರ್ಗದ ಮುಸಲ್ಮಾನ ಕುಟುಂಬಗಳಲ್ಲಿನ ಮಹಿಳೆಯ ಸಂವೇದನೆಗಳ ಚಿತ್ರಣವನ್ನು ಆಕೆಯಷ್ಟು ಸೂಕ್ಷ್ಮವಾಗಿ ಮತ್ತಾವ ಉರ್ದು ಬರಹಗಾರರು ಮಾಡಿಲ್ಲ. ತನ್ನ ಕತೆಗಳಲ್ಲಿ ಆತುರತೆ ಇದೆಯಲ್ಲವೇ ಎಂದು ಯಾರೋ ಕೇಳಿದ್ದಕ್ಕೆ ತನಗೆ ಬಿಡುವಾಗಿ, ಪ್ರಶಾಂತವಾಗಿ ಬರೆಯಲು ಅವಕಾಶವೇ ಇರಲಿಲ್ಲವೆಂದು ಆಕೆ ಹೇಳಿದ್ದಳು. ತನ್ನ ಸಮಕಾಲೀನ ಉರ್ದು ಲೇಖಕರಾದ ಸಾದತ್ ಹಸನ್ ಮಾಂಟೊ, ರಾಜೇಂದರ್ ಸಿಂಗ್ ಬೇಡಿ ಮತ್ತು ಕಿಶನ್ ಚಂದರ್‌ರವರಂತೆ ಆಕೆಯೂ ಪ್ರಸಿದ್ಧವಾದ ಕಥಾ ಲೇಖಕಿ ಪ್ರಭಾವಶಾಲಿಯಾಗಿದ್ದಳು. ಅದು ಆಕೆಯ ಕೃತಿಗಳಲ್ಲಿನ ಸಾಮಾಜಿಕ ಮತ್ತು ಲೈಂಗಿಕ ವಿಷಯಗಳ ಅಭಿವ್ಯಕ್ತಿಯಲ್ಲಿಯೂ ಕಂಡುಬರುತ್ತದೆ. ಆದರೆ ಆಕೆ ಆ ವಿಷಯಗಳ ಮುಕ್ತತೆಯಿಂದ ಮತ್ತು ಅಷ್ಟೇ ಸೂಕ್ಷ್ಮತೆಯಿಂದ ಯಾವುದೇ ತೀರ್ಪು ನೀಡದ ಎಚ್ಚರ ವಹಿಸಿ ತನ್ನ ಕೃತಿಗಳಲ್ಲಿ ಬಳಸಿಕೊಂಡಿದ್ದಳು. ಅದರಿಂದಾಗಿಯೇ ಆಕೆ ಲಿಹಾಫ್ ಬರೆಯಲು ಸಾಧ್ಯವಾಯಿತು.

ಲಿಹಾಫ್ ಕತೆಯಲ್ಲಿನ ಬೇಗಂ ಅಲಿಘರ್ ನವಾಬನ ಪತ್ನಿಯಾಗಿದ್ದಳು. ಯಾರೋ ಈ ವಿಷಯವನ್ನು ಬೇಗಂಗೆ ತಿಳಿಸಿದ್ದರು. ಎಷ್ಟೋ ವರ್ಷಗಳ ನಂತರ ಇಸ್ಮತ್ ಅಲಿಘರ್‌ಗೆ ಹೋದಾಗ ಆ ಬೇಗಂಳನ್ನು ಭೇಟಿಯಾಗಬೇಕಾಯ್ತು ಆಕೆ ಏನನ್ನುವಳೋ ಎಂದು ಇಸ್ಮತ್ ತುಂಬ ಹೆದರಿಕೊಂಡೇ ಇದ್ದಳು. ಆ ಭೇಟಿಯ ಬಗ್ಗೆ ಇಸ್ಮತ್ ಸ್ವತಃ ಈ ರೀತಿ ಬರೆದಿದ್ದಾಳೆ:

"ಇಬ್ಬರೂ ಎದುರುಬದುರು ನಿಂತಾಗ ನನ್ನ ಕಾಲ ಕೆಳಗಿನ ಭೂಮಿ ಕುಸಿಯುತ್ತಿದೆ ಎಂದೆನ್ನಿಸಿತು. ಆಕೆ ತನ್ನ ಬಟ್ಟಲುಗಣ್ಣುಗಳಿಂದ ನನ್ನನ್ನೇ ನೋಡುತ್ತಿದ್ದಳು. ಆಕೆಯ ಕಣ್ಣುಗಳಲ್ಲಿ ಸಂತೋಷ ಮತ್ತು ಉತ್ಸಾಹವಿತ್ತು. ಜನಜಂಗುಳಿಯಲ್ಲಿ ಆಕೆ ನುಗ್ಗಿ ನನ್ನೆಡೆಗೆ ಬಂದು ನನ್ನನ್ನು ತಬ್ಬಿಕೊಂಡಳು. ನನ್ನನ್ನು ಪಕ್ಕಕ್ಕೆ ಕರೆದೊಯ್ದು, 'ನನಗೆ

ಗೊತ್ತೇನು, ನವಾಬನಿಗೆ ವಿಚ್ಛೇದನ ನೀಡಿ ಎರಡನೆಯ ಮದುವೆಯಾಗಿದ್ದೇನೆ. ದೇವರ ದಯೆಯಿಂದ ನನಗೆ ಮುತ್ತಿನಂತಹ ಮಗ ಹುಟ್ಟಿದ್ದಾನೆ' ಎಂದಳು. ನಾನು ಯಾರದಾದರೂ ಎದೆಗೊರಗಿ ಜೋರಾಗಿ ಅಳಬೇಕೆನ್ನಿಸಿತು. ನನ್ನ ಕಣ್ಣೀರು ತಡೆಯಲಾಗಲಿಲ್ಲ, ಆದರೂ ತೋರಗೊಡದೆ ನಗುತ್ತಿದ್ದೆ. ಬೇಗಂ ನನ್ನನ್ನು ಅತ್ಯದ್ಭುತ ಔತಣಕ್ಕೆ ಆಹ್ವಾನಿಸಿದಳು. ಹೂವಿನಂಥ ಆಕೆಯ ಮಗನನ್ನು ನೋಡಿ ನನಗೆ ಬಹಳ ಸಂತೋಷವಾಯಿತು. ಆ ಮಗು ನನ್ನದೂ ಸಹ ಎನ್ನಿಸುತ್ತಿತ್ತು. ನನ್ನ ಮಾನಸಪುತ್ರ, ನನ್ನ ಮನಸ್ಸಿನ ಒಂದು ಜೀವಂತ ಭಾಗ, ನನ್ನ ಲೇಖನಿಯ ಕುಡಿ ಅವನು ಎನ್ನಿಸುತ್ತಿತ್ತು. ಆ ಕ್ಷಣ ನನಗನ್ನಿಸಿತು, ಕಲ್ಲುಗಳಲ್ಲಿಯೂ ಹೂಗಳನ್ನು ಅರಳಿಸಬಹುದು. ಆದರೆ ಅದಕ್ಕಾಗಿ ತಮ್ಮ ಹೃದಯದಿಂದ ನೀರೆರೆಯುವರು ಬೇಕಷ್ಟೆ..."

ಇಸ್ಮತ್ ಚುಗ್ತಾಯ್‌ರವರ ಬದುಕಿನ ಬಗ್ಗೆ ಬರೆದಿರುವ ಹಾಗು ಆಕೆಯ ಹಲವಾರು ಕೃತಿಗಳನ್ನು ಅನುವಾದ ಮಾಡಿರುವ ತಾಹಿರಾ ನಕ್ವಿಯವರ ಪ್ರಕಾರ ಇಸ್ಮತ್ ಒಬ್ಬ ಪ್ರಜ್ಞಾಪೂರ್ವಕವಲ್ಲದ ಮತ್ತು ಅಘೋಷಿತ ಸ್ತ್ರೀವಾದಿ. ಸ್ತ್ರೀವಾದಿಗಳು ಅಥವಾ ಮುಕ್ತಗೊಂಡ ಮಹಿಳೆಯರು ಮಾಡುತ್ತಿದ್ದ ಎಲ್ಲಾ ಹೋರಾಟಗಳನ್ನು ಆಕೆ ಮಾಡುತ್ತಿದ್ದಳು. ಆದರೆ ಆಕೆಗೆ ಅವು ಯಾವುದೇ ವಿಶೇಷ ಕೃತ್ಯಗಳೆನ್ನಿಸುತ್ತಿರಲಿಲ್ಲ. ಆಕೆಗೆ ಇಬ್ಬರು ಪುತ್ರಿಯರಿದ್ದು ತನ್ನ ಪತಿಯ ಮರಣಾನಂತರ ಬಾಂಬೆಯಲ್ಲೇ ವಾಸಿಸುತ್ತಿದ್ದಳು. ಆಕೆಯ ಈಡೇರದ ಆಸೆಯೇನಾದರೂ ಇದೆಯೇ ಎಂದು ಒಮ್ಮೆ ಕೇಳಿದ್ದಕ್ಕೆ ಆಕೆ ತನಗೆ ಪುನಃ ಭಾರತದಲ್ಲೇ ಹುಟ್ಟುವ ಆಸೆ ಎಂದಿದ್ದಳು. ವಿಷಾದವೆಂದರೆ ಆಕೆಗೆ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಸಹ ಸಿಗಲಿಲ್ಲ. ಆದರೆ ತನ್ನ ಸಾವಿನ ಒಂದು ವರ್ಷದ ಮೊದಲು 1990ರಲ್ಲಿ ಉರ್ದು ಸಾಹಿತ್ಯಕ್ಕಾಗಿ ಸಮ್ಮಾನ್ ಪ್ರಶಸ್ತಿ ಲಭಿಸಿತು. ಇಸ್ಮತ್ ಚುಗ್ತಾಯ್ 1991ರ ಅಕ್ಟೋಬರ್ 24ರಂದು ಕೊನೆಯುಸಿರೆಳೆದರು.



ಉರ್ದು ಮೂಲ : ಇಸ್ಮತ್ ಚುಗ್ತಾಯ್
ಕನ್ನಡಕ್ಕೆ : ಡಾ.ಜೆ.ಬಾಲಕೃಷ್ಣ

[illegible]ಯಲ್ಲಿ ನನ್ನ ಕವುದಿಯೊಳಗೆ ನಾನು [illegible]ಮಗಿಕೊಂಡಾಗ ಗೋಡೆಯ ಮೇಲೆ ಮೂಡುವ ಅದರ ನೆರಳು ಆನೆ ಓಲಾಡುತ್ತಿರುವಂತೆ ಕಾಣುತ್ತದೆ. ನನ್ನ ಮನಸ್ಸು ಕತ್ತಲ ಗತದೊಳಕ್ಕೆ ಛುಟ್ಟಿದ್ದ ಕುದುರೆಯಂತೆ ನಾಗಾಲೋಟದಿಂದ ಓಡಲು ಪ್ರಾರಂಭಿಸುತ್ತದೆ; ನೆನಪುಗಳ ಮಹಾಪೂರವೇ ಹರಿದುಬರುತ್ತದೆ. ಕ್ಷಮಿಸಿ. ನನ್ನದೇ ಕವುದಿಗೆ ಸಂಬಂಧಿಸಿದಂತೆ ಯಾವುದಾದರೂ ರೊಮ್ಯಾಂಟಿಕ್ ಘಟನೆಯನ್ನು ನಿಮಗೆ ನಾನೀಗ ಹೇಳಲು ಹೊರಟಿಲ್ಲ– ಅದರಲ್ಲಿ ಮಹತ್ತರ ರೊಮ್ಯಾನ್ಸ್ ಇದೆಯೆಂದೂ ನಾನು ಭಾವಿಸಿಲ್ಲ. ಕಂಬಳಿ ಅಷ್ಟೊಂದು ಹಿತಕರವಲ್ಲದಿದ್ದರೂ ಕವುದಿಗಿಂತಲೂ ಪರವಾಗಿಲ್ಲ. ಏಕೆಂದರೆ ಗೋಡೆಯ ಮೇಲೆ ಕಂಬಳಿ ಆ ರೀತಿಯ ಹೆದರಿಸುವ ನೆರಳುಗಳನ್ನು ಮೂಡಿಸುವುದಿಲ್ಲ!

ಇದು ನಡೆದದ್ದು ನಾನು ಚಿಕ್ಕಹುಡುಗಿಯಾಗಿದ್ದಾಗ. ಇಡೀ ದಿನ ನನ್ನ ಅಣ್ಣ ತಮ್ಮಂದಿರ ಜೊತೆ ಹಾಗೂ ಅವರ ಗೆಳೆಯರ ಜೊತೆ

[ಕವುದಿ = ಬಟ್ಟೆಯ ಎರಡು ಪದರಗಳ ಮಧ್ಯೆ ಹತ್ತಿ, ತುಪ್ಪಟ, ಮೊದಲಾದ ಮೆತ್ತನೆಯ ಪದಾರ್ಥವನ್ನಿಟ್ಟು ಅಡ್ಡಹೊಲಿಗೆ ಹಾಕಿ ಮಾಡಿದ ಹಾಸಿಗೆ; ಮೆತ್ತೆ; ಕ್ವಿಲ್ಟು; ರಜಾಯಿ; ಕವುದಿ; ಗೊಂಗಡಿ; ತಡಿ]

ಹೊಡೆದಾಡುತ್ತಿದ್ದೆ. ಕೆಲವೊಮ್ಮೆ ನನಗೇ ಅನ್ನಿಸುತ್ತಿತ್ತು, ನಾನೇಕೆ ಅಂತಹ ಜಗಳಗಂಟಿಯೆಂದು. ನನ್ನ ವಯಸ್ಸಿನಲ್ಲಿದ್ದಾಗ ನನ್ನ ಅಕ್ಕಂದಿರು ತಮ್ಮ ಪ್ರೇಮಿಗಳನ್ನು ತಮ್ಮೆಡೆಗೆ ಸೆಳೆದುಕೊಳ್ಳುವ ಉತ್ಸಾಹದಲ್ಲಿರುತ್ತಿದ್ದಂತಹವರು; ಆದರೆ ನಾನೋ ಎದುರು ಸಿಕ್ಕುವ ಯಾವುದೇ ಹುಡುಗ ಆಗಿರಲಿ ಅಥವಾ ಹುಡುಗಿ ಆಗಿರಲಿ ಅವರೊಂದಿಗೆ ಮುಷ್ಟಿ ಬಿಗಿಹಿಡಿದು ಜಗಳವಾಡಲು ಕಾದಿರುತ್ತಿದ್ದೆ!

ಅದೇ ಕಾರಣಕ್ಕಾಗಿಯೇ ನನ್ನ ಅಮ್ಮಿ ಆಕೆ ಆಗ್ರಾಕ್ಕೆ ಹೊರಟಾಗ ನನ್ನನ್ನು ಆಕೆಯ 'ದತ್ತು' ಸೋದರಿಯೊಡನೆ ಬಿಡಲು ನಿರ್ಧರಿಸಿದ್ದು. ಆ ಸೋದರಿಯ ಮನೆಯಲ್ಲಿ ನಾನು ಜಗಳವಾಡಲು ಇತರ ಮಕ್ಕಳಿರಲಿ, ಒಂದು ಸಾಕು ಪ್ರಾಣಿಯೂ ಸಹ ಇಲ್ಲವೆಂಬುದು ಆಕೆಗೆ ತಿಳಿದಿತ್ತು! ಬಹುಶಃ ನನಗೆ ಆ ರೀತಿಯ ಶಿಕ್ಷೆ ಸಿಗಬೇಕಿತ್ತೇನೋ. ಹಾಗಾಗಿ ನನ್ನ ಅಮ್ಮಿ ಬೇಗಂ ಜಾನ್‌ಳೊಂದಿಗೆ ನನ್ನನ್ನು ಬಿಟ್ಟರು. ಅದೇ ಬೇಗಂಜಾನ್‌ಳ ಕವುದಿಯೇ ನನ್ನ ಮನಸ್ಸಿನಲ್ಲಿ ಅಳಿಸಲಾಗದ ಕಮ್ಮಾರನ ಅಚ್ಚಿನಂತೆ ಶಾಶ್ವತವಾಗಿ ಮೂಡಿಬಿಟ್ಟಿದೆ.

ಬಡತನದಲ್ಲಿದ್ದ ಆದರೆ ತುಂಬಾ ಪ್ರೀತಿಸುತ್ತಿದ್ದ ತಂದೆತಾಯಿಗಳು, ಈ ಹೆಂಗಸನ್ನು ನವಾಬ್ ಸಾಹೇಬರೊಂದಿಗೆ ಮದುವೆ ಮಾಡಿಕೊಡಲು ಕಾರಣವೂ ಇತ್ತು. ನವಾಬ ಸಾಹೇಬರ ಯೌವನಾವಸ್ಥೆ ಮುಗಿದುಹೋಗಿದ್ದರೂ ಆತ ಅತ್ಯಂತ ಸಾಧ್ವಿ ಮನುಷ್ಯ. ಆತನ ಮನೆಯಲ್ಲಿ ಯಾವುದೇ ನರ್ತನದ ಹುಡುಗಿಯನ್ನಾಗಲೀ ಅಥವಾ ವೇಶ್ಯೆಯನ್ನಾಗಲಿ ಯಾರೂ ಕಂಡಿರಲಿಲ್ಲ. ಆತ ಸ್ವತಃ ತಾನೇ ಹಜ್‌ಗೆ ಹೋಗಿದ್ದುದಲ್ಲದೆ, ಯಾರಾದರೂ ಬಡವರು ಹಜ್ ಯಾತ್ರೆ ಹೋಗುವವರಿದ್ದಲ್ಲಿ ಅವರಿಗೆ ಸಹಾಯ ಮಾಡುತ್ತಿದ್ದ.

ನವಾಬ್ ಸಾಹೇಬರಿಗೆ ಒಂದು ವಿಚಿತ್ರ ಹವ್ಯಾಸವಿತ್ತು. ಕೆಲವರಿಗೆ ಪಾರಿವಾಳಗಳನ್ನು ಸಾಕುವ ಅಥವಾ ಕೋಳಿ ಪಂದ್ಯಗಳನ್ನು ನಡೆಸುವಂಥ ಕಿರಿಕಿರಿಯುಂಟು ಮಾಡುವ ಆಸಕ್ತಿಗಳಿರುತ್ತವೆ. ಆದರೆ ನವಾಬ್ ಸಾಹೇಬರು ಅಂತಹ ಅಸಹ್ಯದ ಕ್ರೀಡೆಗಳಿಂದ ದೂರವಿದ್ದವರು; ಆದರೆ ವಿದ್ಯಾರ್ಥಿಗಳಿಗೆ ಅವರು ಆಸರೆ ನೀಡಿದ್ದರು– ಎಳೆಯ, ಸ್ಫುರದ್ರೂಪಿ ಮತ್ತು ತೆಳು ನಡುವಿನ ಹುಡುಗರು. ಅವರ ಖರ್ಚುಗಳನ್ನು ಅವರೇ ಭರಿಸುತ್ತಿದ್ದರು. ಬೇಗಂಜಾನ್‌ಳನ್ನು ಮದುವೆಯಾದ ನಂತರ ಆಕೆಯನ್ನು ಎಲ್ಲಾ ಅವಶ್ಯಕತೆಗಳೊಂದಿಗೆ ಮನೆಯಲ್ಲಿರಿಸಿ ಆಕೆಯನ್ನು ಮರೆತೇಬಿಟ್ಟರು! ಯೌವನದ ಹೂಹಾಸಿನ ಮೇಲಿದ್ದ ಬಡಪಾಯಿ ಬೇಗಂ ಒಂಟಿತನದಿಂದ ನಲುಗಿಹೋಗಿದ್ದಳು. ಬೇಗಂಜಾನ್ ಬದುಕಲು ಪ್ರಾರಂಭಿಸಿದ್ದು ಯಾವಾಗೆಂಬುದು ಯಾರಿಗೆ ತಿಳಿದಿದೆ? ಆಕೆಯ ಬದುಕು ಪ್ರಾರಂಭವಾದದ್ದು ತಾನು ಹುಟ್ಟುವ ತಪ್ಪು ಮಾಡಿದಾಗಲೆ? ಅಥವಾ ನವಾಬನ ಹೊಸ ಮದುವಣಗಿತ್ತಿಯೆಂದು ಈ ಮನೆ ಪ್ರವೇಶಿಸಿ ನಾಲ್ಕು ಗಜದ ಹಾಸಿಗೆಯ ಮೇಲೆ ಮಲಗಿ ದಿನಗಳನ್ನು ಎಣಿಸಲು ಪ್ರಾರಂಭಿಸಿದಾಗಲೆ? ಅಥವಾ ಇಡೀ ಮನೆವಾರ್ತೆ ವಿದ್ಯಾರ್ಥಿಗಳಾದ ಬಾಲಕರ ಸುತ್ತಲೇ ಸುತ್ತುತ್ತಿದೆ ಹಾಗೂ ಅಡುಗೆ ಮನೆಯಲ್ಲಿ

ಸಿದ್ಧವಾಗುವ ಎಲ್ಲಾ ರುಚಿಕರ ಖಾದ್ಯಗಳು ಅವರಿಗಾಗಿಯೇ ಎಂಬುದು ಅರಿವಾದಾಗಲೆ? ಬೇಗಂಜಾನ್ ನಡುಪಡಸಾಲೆಯ ಬಾಗಿಲ ಸಂದುಗಳಿಂದ ಆಗಾಗ ತೆಳುವಾದ ಅಂಗಿಗಳೊಳಗಿನ ಯುವ ವಿದ್ಯಾರ್ಥಿಗಳ ತೆಳ್ಳನೆ ನಡುವನ್ನು, ಬೆಳ್ಳನೆ ಹಿಮ್ಮಡಿಗಳನ್ನು ಕಂಡಾಗ ಆಕೆಗೆ ತಾನು ನಿಗಿನಿಗಿ ಕೆಂಡಗಳ ಮೇಲೆ ನಿಂತಿರುವಂತೆ ಭಾಸವಾಗುತ್ತಿತ್ತು!

ಆಕೆ ಹರಕೆ, ಪ್ರಾರ್ಥನೆ, ಪಾಠ, ಮಂತ್ರಗಳನ್ನೆಲ್ಲಾ ನಿಲ್ಲಿಸಿದ ನಂತರ ಪ್ರಾರಂಭವಾದದ್ದೆನ್ನಿಸುತ್ತದೆ. ಕಲ್ಲಿನಿಂದ ನೆತ್ತರು ತೆಗೆಯುವುದು ಸಾಧ್ಯವೆ? ನವಾಬರಂತೂ ಒಂದಿಂಚೂ ಕದಲಲಿಲ್ಲ. ಹೃದಯ ಛಿದ್ರಮಾಡಿಕೊಂಡ ಬೇಗಂಜಾನ್ ಬೇರೇನೂ ತೋಚದೆ ಅಧ್ಯಯನದೆಡೆಗೆ ಗಮನ ಹರಿಸಿದಳು. ಅಲ್ಲಾದರೂ ಏನಿದೆ! ಪ್ರೇಮ ಕಾದಂಬರಿಗಳು ಮತ್ತು ಕಣ್ಣೀರು ಬರಿಸುವ ಕಾವ್ಯ ಆಕೆಯನ್ನು ಮತ್ತಷ್ಟು ಖಿನ್ನಳನ್ನಾಗಿಸಿದವು. ಪ್ರತಿ ರಾತ್ರಿಯೂ ನಿದ್ರೆಯಿಲ್ಲದ ರಾತ್ರಿಯಾಯಿತು. ಕ್ರಮೇಣ ಬೇಗಂಜಾನ್ ವಿಷಣ್ಣತೆಯ ಮತ್ತು ಹತಾಶೆಯ ಪ್ರತಿರೂಪವಾದಳು. ತನ್ನೆಲ್ಲ ಬೆಲೆಬಾಳುವ ಅತ್ಯುತ್ತಮ ರೇಷ್ಮೆ ಮತ್ತು ಚಿನ್ನದ ಜರಿಯ ಬಟ್ಟೆಯನ್ನು ಒಲೆಗೆ ತುರುಕಬೇಕೆನ್ನಿಸಿತು. ಬಟ್ಟೆ ಧರಿಸುವುದು ಇತರರನ್ನು ಮೆಚ್ಚಿಸಲು. ಆ ತೆಳು ಅಂಗಿ ಬಾಲಕರ ನಡುವೆ ಇರುವ ನವಾಬ್ ಸಾಹೇಬರಿಗೆ ಇತ್ತ ಬರಲು ಸಮಯವಿಲ್ಲ ಅಥವಾ ಈಕೆಯನ್ನು ಮನೆಯಿಂದ ಹೊರಕ್ಕೆ ಹೋಗಲು ಬಿಡುವುದೂ ಇಲ್ಲ. ಆಕೆಯ ಸಂಬಂಧಿಕರು ಬಂದು ಅವಳ ಬಳಿ ತಿಂಗಳಾನುಗಟ್ಟಲೆ ಇದ್ದು ಹೋಗುತ್ತಿದ್ದರು. ಆದರೆ ಈಕೆಗೆ ಮಾತ್ರ ಮನೆಯೇ ಬಂಧಿಖಾನೆಯಾಗಿತ್ತು. ತನ್ನ ಮನೆಗೆ ಬಂದು ಸಂತೋಷದಿಂದ ಇದ್ದು ಹೋಗುವ ಸಂಬಂಧಿಕರನ್ನು ಕಂಡಾಗ ಈಕೆಯ ರಕ್ತ ಕುದಿಯುತ್ತಿತ್ತು. ಅವರಿಗೆ ಅಡುಗೆ ಮನೆಯಲ್ಲಿನ ರುಚಿಕರ ತಿಂಡಿಗಳನ್ನು ತಿನ್ನುವ ಮತ್ತು ತುಪ್ಪವನ್ನು ಬೆರಳುಗಳಲ್ಲಿ ನೆಕ್ಕುವ ಸ್ವಾತಂತ್ರ್ಯವಿತ್ತು.

ಆ ಮನೆಯಲ್ಲಿ ಎಲ್ಲರೂ ಚಳಿಗಾಲವನ್ನು ಎದುರಿಸಲು ಸಿದ್ಧಮಾಡಿಕೊಳ್ಳುತ್ತಿದ್ದರು. ತನ್ನ ಕವುದಿಯಲ್ಲಿನ ಹತ್ತಿಯನ್ನು ಪ್ರತಿವರ್ಷ ಮರುತುಂಬಿಸುತ್ತಿದ್ದರೂ ಬೇಗಂಜಾನ್ ಪ್ರತಿ ರಾತ್ರಿ ನಡುಗುವುದು ತಪ್ಪಿರಲಿಲ್ಲ. ಪ್ರತಿಸಾರಿಯೂ ತನ್ನ ಮಗ್ಗುಲು ಬದಲಿಸಿದಾಗಲೆಲ್ಲಾ ಆ ಕವುದಿ ಭಯಂಕರ ರೂಪವನ್ನು ತಾಳುತ್ತಿತ್ತು ಹಾಗೂ ಅದರ ನೆರಳು ಗೋಡೆಯ ಮೇಲೆ ರಕ್ಕಸರ ಆಕಾರಗಳಂತೆ ಕಾಣುತ್ತಿತ್ತು. ಆಕೆ ಹೆದರಿಕೆಯಿಂದಲೇ ಮಲಗುತ್ತಿದ್ದಳು. ಆ ಯಾವುದೇ ನೆರಳು ಆಕೆಯ ಬಾಳಿನಲ್ಲಿ ಬೆಳಕು ತರುವಂಥದಾಗಿರಲಿಲ್ಲ. ಇಂಥ ದರಿದ್ರ ಬದುಕಾದರೂ ಏಕೆ ಬೇಕು? ಬದುಕುವುದಾದರೂ ಏಕೆ? ಆದರೆ ಬೇಗಂಜಾನ್ ಬದುಕಬೇಕೆಂದು ವಿಧಿ ನಿರ್ಧರಿಸಿತ್ತು ಹಾಗೂ ಆಕೆ ಎಂದು ಬದುಕಲು ಪ್ರಾರಂಭಿಸಿದಳೋ ಅಂದಿನಿಂದ ಆ ಬದುಕು ನಿರಂತರವಾಯಿತು!

ಬೇಗಂಜಾನ್ ಸಂಪೂರ್ಣ ಕುಸಿಯುವ ಮುನ್ನ ಆಕೆಯನ್ನು ರಕ್ಷಿಸಲು ಬಂದವಳು ರಬ್ಬೊ. ಆಕೆಯ ಸೊರಗಿದ ದೇಹ ಇದ್ದಕ್ಕಿದ್ದಂತೆ ಪುಟಿದೆದ್ದಿತು. ಕೆನ್ನೆಗಳು ಗುಲಾಬಿ

ರಂಗು ತುಂಬಿಕೊಂಡವು; ಸೌಂದರ್ಯವೆನ್ನುವುದು ಆಕೆಯ ನರನಾಡಿಗಳಲ್ಲೆಲ್ಲಾ ಹೊಳೆಯುತೊಡಗಿತು! ಬೇಗಂಜಾನ್‌ಳಲ್ಲಿ ಬದಲಾವಣೆ ತಂದದ್ದು ಆ ವಿಶೇಷ ತೈಲದ ಮಾಲೀಸು. ಕ್ಷಮಿಸಿ, ಈ ವಿಶೇಷ ತೈಲದಲ್ಲಿ ಏನೇನಿತ್ತು ಎಂಬುದು ಯಾವ ವಿಶೇಷ ಅಥವಾ ದುಬಾರಿ ಪತ್ರಿಕೆಯಲ್ಲೂ ನಿಮಗೆ ದೊರೆಯುವುದಿಲ್ಲ!

ನಾನು ಬೇಗಂಜಾನ್‌ಳನ್ನು ಕಂಡಾಗ ಆಕೆಗೆ ಆಗ ತಾನೆ ನಲವತ್ತು ತುಂಬಿತ್ತು. ಆಕೆ ದಿಂಬಿಗೊರಗಿ ಕೂತಿದ್ದರೆ ಆಕೆ ಘನತೆ ಮತ್ತು ವೈಭವದ ಪ್ರತಿರೂಪದಂತೆ ಕಾಣುತ್ತಿದ್ದಳು. ರಬ್ಬೊ ಆಕೆಯ ಬೆನ್ನ ಹಿಂದೆ ಕೂತು ಆಕೆಯ ಸೊಂಟಕ್ಕೆ ಮಾಲೀಸು ಮಾಡುತ್ತಿದ್ದಳು. ಒಂದು ಕೆನ್ನೀಲಿ ಬಣ್ಣದ ಶಾಲನ್ನು ಆಕೆಯ ಕಾಲ ಮೇಲೆ ಹಾಸಿಕೊಂಡಿರುತ್ತಿದ್ದಳು. ನಿಜವಾಗಿಯೂ ವೈಭವದ ದೃಶ್ಯ; ಮಹಾರಾಣಿಯಂತೆಯೇ ಕಾಣುತ್ತಿದ್ದಳು! ಆ ರೀತಿ ಆಕೆಯನ್ನು ನೋಡುವುದು ನನಗೆ ಎಷ್ಟು ಸಂತೋಷ ಕೊಡುತ್ತಿತ್ತೆಂದರೆ ಆಕೆಯ ಪಕ್ಕ ಗಂಟೆಗಟ್ಟಲೆ ವಿನಯಶೀಲ ಭಕ್ತಳಂತೆ ಕೂತುಬಿಡಬೇಕೆನ್ನಿಸುತ್ತಿತ್ತು. ಗೌರವರ್ಣದ ಆಕೆಯ ದೇಹದಲ್ಲಿ ಎಲ್ಲೂ ಐಬಿರಲಿಲ್ಲ. ಆಕೆಯ ಕಪ್ಪನೆಯ ಸೊಂಪಾದ ಕೂದಲು ಸದಾ ಎಣ್ಣೆಯಿಂದ ಮಿರಿಮಿರಿ ಮಿಂಚುತ್ತಿತ್ತು. ಆಕೆಯ ಕೂದಲ ಬೈತಲೆ ಒಂದು ದಿನ ಓರೆಕೋರೆಯಾಗಿದ್ದನ್ನು ಅಥವಾ ಕೂದಲು ಒಂದೆಳೆಯೂ ಅತ್ತಿತ್ತ ಚಲಿಸಿದ್ದುದನ್ನು ನಾನು ಕಂಡಿಲ್ಲ. ಆಕೆಯ ಕಪ್ಪನೆ ಸುಂದರ ಕಣ್ಣುಗಳು ಹಾಗೂ ಅವುಗಳ ಮೇಲೆ ಬಿಲ್ಲಿನಂತಹ ಎಚ್ಚರಿಕೆಯಿಂದ ತಿದ್ದಿದ ಬಾಗಿದ ಹುಬ್ಬುಗಳು! ಆಕೆಯ ಕಣ್ಣುಗಳು ತುಸು ಬಿಗಿ ಎನ್ನಿಸುವಂತಿದ್ದವು ಮತ್ತು ರೆಪ್ಪೆಗಳು ತೂಕದಂತಿದ್ದು ದಪ್ಪನೆ ಕಣ್ಣ ರೆಪ್ಪೆಗಳನ್ನು ಹೊಂದಿದ್ದವು. ಆಕೆಯ ಮುಖದ ಅದ್ಭುತ ಮತ್ತು ಅತ್ಯಾಕರ್ಷಕ ಭಾಗವೆಂದರೆ ಆಕೆಯ ತುಟಿಗಳು. ಸದಾ ಲಿಪ್‌ಸ್ಟಿಕ್ ಹಾಕಿರುತ್ತಿದ್ದ ಅವುಗಳಲ್ಲಿ ಮೇಲ್ತುಟಿ ವಿಶಿಷ್ಟ ಆಕಾರ ಹೊಂದಿ ಕೊಂಚ ಬಾಗಿತ್ತು. ಆಕೆಯ ಕಪೋಲಗಳು ಉದ್ದನೆ ಕೂದಲಿನಿಂದ ಮುಚ್ಚಲ್ಪಟ್ಟಿರುತ್ತಿದ್ದವು. ಕೆಲವೊಮ್ಮೆ ಆಕೆಯ ಮುಖ ನಾನು ಮೆಚ್ಚುಗೆಯಿಂದ ನೋಡನೋಡುತ್ತಿರುವಂತೆಯೇ ಎಳೆಯ ಬಾಲಕನ ಮುಖದಂತಾಗಿಬಿಡುತ್ತಿತ್ತು. ಆಕೆಯ ನಸುಗೆಂಪು ಬಣ್ಣದ ಚರ್ಮ ಆರ್ದ್ರತೆಯಿಂದ ಕೂಡಿರುತ್ತಿತ್ತು ಹಾಗೂ ಅದನ್ನು ಬಿಗಿಯಾಗಿ ಎಳೆದು ಆಕೆಯ ದೇಹಕ್ಕೆ ಬಿಗಿಯಾಗಿ ಹೊಲಿದಂತಿತ್ತು. ಮಾಲೀಸಿಗೆಂದು ಆಕೆ ತನ್ನ ಹಿಮ್ಮಡಿಗಳನ್ನು ತೆರೆದಿಟ್ಟಾಗ ಅವು ದುಂಡಗೆ ನವಿರಾಗಿರುವುದು ನನ್ನ ಕಣ್ಣಿಗೆ ಬೀಳುತ್ತಿದ್ದವು. ಆಕೆ ಎತ್ತರದ ಹೆಣ್ಣು ಹಾಗೂ ತನ್ನ ಮೈಮೇಲೆ ಬೇಕಾದ ಸ್ಥಳಗಳಲ್ಲಿ ಸಾಕಷ್ಟು ಮಾಂಸವನ್ನೂ ಹೊಂದಿದ್ದುದರಿಂದ ಇನ್ನೂ ಎತ್ತರ ಕಾಣುತ್ತಿದ್ದಳು. ಆಕೆಯ ಹಸ್ತಗಳು ದೊಡ್ಡದಾಗಿದ್ದು ಆರ್ದ್ರವಾಗಿರುತ್ತಿದ್ದವು ಮತ್ತು ಸೊಂಟ ನವಿರಾಗಿತ್ತು. ರಬ್ಬೊ ಆಕೆಯ ಪಕ್ಕ ಕೂತು ಗಂಟೆಗಟ್ಟಲೆ ಆಕೆಯ ಬೆನ್ನನ್ನು ಕೆರೆಯುತ್ತಿದ್ದಳು– ಈ ರೀತಿ ಕೆರೆಸಿಕೊಳ್ಳುವುದೇ ಬೇಗಂಳ ಬದುಕಿನ ಪರಮೋದ್ದೇಶವಿರುವಂತೆ! ಒಂದು ರೀತಿಯಲ್ಲಿ, ಬದುಕಲು ಬೇಕಾಗಿರುವ ಇತರ ಮೂಲಭೂತ ಅವಶ್ಯಕತೆಗಳಿಗಿಂತ ಅದೇ ಹೆಚ್ಚು ಅವಶ್ಯಕವೆನ್ನುವಂತೆ!

ರಬ್ಬೋಳಿಗೆ ಮನೆಯ ಬೇರೆ ಯಾವುದೇ ಕೆಲಸವಿರಲಿಲ್ಲ. ಆಕೆ ಸದಾ ಆ ನಾಲ್ಕು ಗಜದ ಹಾಸಿಗೆಯ ಮೇಲೆ ಕೂತು ಬೇಗಂಜಾನ್‌ಳ ತಲೆ, ಪಾದ ಅಥವಾ ಆಕೆಯ ದೇಹದ ಯಾವುದಾದರೂ ಭಾಗವನ್ನು ಮಾಲೀಸು ಮಾಡುತ್ತಿರುತ್ತಿದ್ದಳು. ಬೇಗಂಜಾನ್‌ಳ ಹೊರತು ಮತ್ತಾರಿಗಾದರೂ ಅಷ್ಟೊಂದು ಮಾನವ ಸ್ಪರ್ಶ ಸಿಕ್ಕಿದ್ದಿದ್ದರೆ ಅದರ ಪರಿಣಾಮ ಏನಾಗಿರುತ್ತಿತ್ತು? ಈಗ ನನ್ನ ಬಗ್ಗೆಯೇ ಹೇಳಬೇಕೆಂದರೆ, ಯಾರಾದರೂ ನನ್ನನ್ನು ನಿರಂತರವಾಗಿ ಆ ರೀತಿ ಸ್ಪರ್ಶಿಸಿದ್ದಿದ್ದರೆ ನಾನು ಖಂಡಿತವಾಗಿ ಕೊಳೆತುಹೋಗಿಬಿಡುತ್ತಿದ್ದೆ. ಈ ರೀತಿ ಮಾಲೀಸು ಅಲ್ಲದೆ, ಆಕೆ ಸ್ನಾನ ಮಾಡುವ ದಿನಗಳಂತೂ ಈ ಕ್ರಿಯಾವಿಧಿ ಎಂಟು ಗಂಟೆಗಳವರೆಗೆ ನಡೆಯುತ್ತಿತ್ತು! ಸುವಾಸಿತ ತೈಲ ಮತ್ತು ಮುಲಾಮುಗಳನ್ನು ಆಕೆಯ ಹೊಳೆಯುವ ಚರ್ಮದೊಳಕ್ಕೆ ಮಾಲೀಸಿನ ಮೂಲಕ ಸೇರಿಸಲಾಗುತ್ತಿತ್ತು. ಆ ರೀತಿ ನಿರಂತರವಾಗಿ ಚರ್ಮವನ್ನು ತಿಕ್ಕುವುದು ನೆನೆಸಿಕೊಂಡಾಗಲೆಲ್ಲಾ ನನಗೆ ಕೊಂಚ ವಾಕರಿಕೆ ತರಿಸುತ್ತಿತ್ತು. ಅಗಿಷ್ಟಿಕೆಯನ್ನು ಬಾಗಿಲು ಮುಚ್ಚಿದ ಕೋಣೆಯೊಳಗೆ ಹೊತ್ತಿಸಿದ ನಂತರ ಈ ಕ್ರಿಯಾವಿಧಿಗಳು ಪ್ರಾರಂಭವಾಗುತ್ತಿದ್ದವು. ಆ ಕೋಣೆಯೊಳಕ್ಕೆ ಪ್ರವೇಶವಿದ್ದುದು ರಬ್ಬೋಳಿಗೆ ಮಾತ್ರ. ಇತರ ಕೆಲಸಗಾರರು ತಮ್ಮನ್ನು ಒಳಕ್ಕೆ ಬಿಡದಿದ್ದುದಕ್ಕೆ ಗೊಣಗಿಕೊಂಡು ಬೇಕಾದ ಹಲವಾರು ವಸ್ತುಗಳನ್ನು ಬಾಗಿಲ ಬಳಿಯೇ ಕೊಟ್ಟು ಹಿಂದಿರುಗುತ್ತಿದ್ದರು.

ವಾಸ್ತವಾಂಶವೇನೆಂದರೆ, ಬೇಗಂಜಾನ್‌ಳಿಗೆ ಎಂಥದೋ ನಿರಂತರ ನವೆಯ ಕಾಯಿಲೆಯೊಂದು ಅಂಟಿಕೊಂಡಿತ್ತು. ಎಂತೆಂಥದೋ ತೈಲಗಳನ್ನು ಮತ್ತು ಮುಲಾಮುಗಳನ್ನು ಹಚ್ಚಲಾಗಿತ್ತು. ಆದರೆ ನವೆ ವಾಸಿಯಾಗಿರಲಿಲ್ಲ. ಹಕೀಮರು ಮತ್ತು ವೈದ್ಯರು ಪರೀಕ್ಷಿಸಿ 'ಯಾವ ಕಾಯಿಲೆಯೂ ಇಲ್ಲ, ಚರ್ಮದ ಮೇಲೆ ಏನೂ ಕಾಣುವುದಿಲ್ಲ. ಆದರೆ ಕಾಯಿಲೆ ಚರ್ಮದ ಒಳಗಿದ್ದರೆ ಅದು ಬೇರೆಯದೇ ಮಾತು' ಎನ್ನುತ್ತಿದ್ದರು 'ಹುಚ್ಚು ವೈದ್ಯರು!' ಎನ್ನುತ್ತಿದ್ದಳು ರಬ್ಬೊ. ಬೇಗಂಜಾನ್‌ಳ ಕಡೆಗೆ ಕನಸಿನಲ್ಲಿಯಂತೆ ನೋಡಿ ಅರ್ಥಪೂರ್ಣವಾಗಿ ನಗುತ್ತಾ, 'ನಿಮ್ಮ ಶತ್ರುಗಳಿಗೆ ಬರಲಿ ಚರ್ಮರೋಗ! ಈ ಎಲ್ಲಾ ಸಮಸ್ಯೆಗಳಿಗೆ ಮೂಲ ನಿಮ್ಮ ಬಿಸಿ ರಕ್ತ!'

ರಬ್ಬೊ! ಬೇಗಂಜಾನ್ ಎಷ್ಟು ಬೆಳ್ಳಗಿದ್ದಳೋ ಅಷ್ಟೇ ಕಪ್ಪಗಿದ್ದಳು ಆಕೆ. ಸುಟ್ಟ ಕಬ್ಬಿಣದ ಅದಿರಿನಂತೆ! ಆಕೆಯ ಮುಖದ ಮೇಲೆ ಅಲ್ಲಲ್ಲಿ ತೆಳುವಾಗಿ ಸಿಡುಬಿನ ಅಮ್ಮ ಹಾಕಿದ್ದ ಗುರುತುಗಳಿದ್ದವು. ಆಕೆಯ ದೇಹ ಕಟ್ಟುಮಸ್ತಾಗಿತ್ತು; ಸಣ್ಣ ಕುಶಲ ಕೈಗಳು, ಸ್ವಲ್ಪ ಬೊಜ್ಜು ಮತ್ತು ಸ್ವಲ್ಪ ಊದಿದಂತಿದ್ದ ತುಂಬಿದ ತುಟಿಗಳು. ಆ ತುಟಿಗಳು ಯಾವಾಗಲೂ ತೇವವಾಗಿರುತ್ತಿದ್ದವು. ಆಕೆಯ ಕೈಗಳು ಮಿಂಚಿನಂತೆ ಚಲಿಸುತ್ತಿದ್ದವು. ಈಗ ಸೊಂಟದ ಬಳಿ ಇದ್ದರೆ ಅರೆಕ್ಷಣದಲ್ಲಿ ತುಟಿಗಳ ಬಳಿ ಇರುತ್ತಿದ್ದವು. ಈಗ ತೊಡೆಗಳನ್ನು ತೀಡುತ್ತಿದ್ದವು ಮತ್ತು ಮುಂದಿನ ಕ್ಷಣ ಹಿಮ್ಮಡಿಗಳ ಬಳಿ ಇರುತ್ತಿದ್ದವು. ನಾನು ಬೇಗಂಜಾನ್‌ಳ ಬಳಿ ಕುಳಿತಾಗಲೆಲ್ಲಾ ಹಾವಿನಂತೆ ಹರಿದಾಡುವ ಆ ಕೈಗಳನ್ನೇ ನೋಡುತ್ತಿರುತ್ತಿದ್ದೆ.

ಚಳಿಗಾಲವಿರಲಿ ಬೇಸಿಗೆಯಿರಲಿ, ಬೇಗಂಜಾನ್ ಯಾವಾಗಲೂ ಹೈದರಾಬಾದ್ ಜಲ್ಲಿ ಕರ್ಗಾದ ಕುರ್ತಾಗಳನ್ನೇ ಧರಿಸುತ್ತಿದ್ದಳು. ಮೇಲೆ ಫ್ಯಾನ್ ನಿಧಾನವಾಗಿ ತಿರುಗುತ್ತಿರುವಾಗ

ಆಕೆ ಯಾವಾಗಲೂ ಮೃದುವಾದ ಹೊದಿಕೆಯನ್ನು ಹೊದ್ದಿರುತ್ತಿದ್ದಳು. ಆಕೆಗೆ ಚಳಿಗಾಲವೆಂದರೆ ಇಷ್ಟ. ನನಗೂ ಸಹ ಆಕೆಯ ಮನೆಯಲ್ಲಿ ಚಳಿಗಾಲ ಇಷ್ಟವಾಗುತ್ತಿತ್ತು. ಆಕೆ ಆಗ ಎಲ್ಲೂ ಓಡಾಡುತ್ತಿರಲಿಲ್ಲ. ಜಮಖಾನೆಯ ಮೇಲೆ ಒರಗಿ ಕೂತು, ಒಣಕರ್ಜೂರ ಮೆಲ್ಲುತ್ತಾ ಇಡೀ ದಿನವೆಲ್ಲಾ ತನ್ನ ಬೆನ್ನಿಗೆ ಮಾಲೀಸು ಮಾಡಿಸಿಕೊಳ್ಳುತ್ತಿದ್ದಳು. ಮನೆಯ ಇತರ ಕೆಲಸಗಾರರಿಗೆ ರಬ್ಬೋಳನ್ನು ಕಂಡರೆ ಹೊಟ್ಟೆಕಿಚ್ಚು. ಮಾಟಗಾತಿ! ಆಕೆ ಬೇಗಂಜಾನ್‌ರೊಂದಿಗೇ ತಿನ್ನುತ್ತಾಳೆ, ಕೂಡುತ್ತಾಳೆ, ಮಲಗುತ್ತಾಳೆ ಸಹ! ರಬ್ಬೊ ಮತ್ತು ಬೇಗಂಜಾನ್– ಜನ ಒಂದೆಡೆ ಸೇರಿದಾಗಲೆಲ್ಲಾ ಅವರ ವಿಷಯ ಬಂದೇ ಬರುತ್ತಿತ್ತು. ಯಾರಾದರೂ ಅವರಿಬ್ಬರ ಹೆಸರು ಹೇಳಿದೊಡನೆ ಜೋರಾಗಿ ನಗುವಿನ ಅಲೆ ಉಕ್ಕಿ ಬರುತ್ತಿತ್ತು. ಯಾರಿಗೆ ಗೊತ್ತು, ಯಾರ್‍ಯಾರು ಅವರ ಬಗ್ಗೆ ಏನು ತಮಾಷೆಯ ಮಾತು ಹೇಳಿಕೊಳ್ಳುತ್ತಿದ್ದರೋ? ಆದರೆ ಒಂದು ವಿಷಯ ಮಾತ್ರ ನಿಜ– ಆ ಬಡಪಾಯಿ ಹೆಣ್ಣು ಹೊರಗಿನ ಒಬ್ಬರನ್ನೂ ಭೇಟಿಯಾಗಿರಲಿಲ್ಲ. ಇಡೀ ದಿನ ಆಕೆಯ ದುರಾದೃಷ್ಟದ ನವೆಯ ಚಿಕಿತ್ಸೆಯಲ್ಲೇ ಕಳೆದುಹೋಗುತ್ತಿತ್ತು.

ನಾನಾಗ ಚಿಕ್ಕ ಹುಡುಗಿ ಮತ್ತು ಬೇಗಂಜಾನ್‌ಳ ಆಕರ್ಷಣೀಯ ವ್ಯಕ್ತಿತ್ವಕ್ಕೆ ಮಾರುಹೋಗಿದ್ದೆ ಎಂದು ನಾನು ಈಗಾಗಲೇ ಹೇಳಿದ್ದೇನೆ. ಆಕೆಗೂ ಸಹ ನನ್ನನ್ನು ಕಂಡರೆ ತುಂಬಾ ಇಷ್ಟವಿತ್ತು. ನನ್ನ ಅಮ್ಮಿ ಆಗ್ರಾಕ್ಕೆ ಹೋಗಬೇಕಾದಾಗಲೆಲ್ಲಾ ನನ್ನನ್ನು ಎಲ್ಲಾದರೂ ಬಿಟ್ಟುಹೋಗಬೇಕಿತ್ತು. ನನ್ನನ್ನು ಮನೆಯಲ್ಲೇ ಬಿಟ್ಟರೆ ನಾನು ನನ್ನ ಸಹೋದರರೊಂದಿಗೆ ಕಿತ್ತಾಡುತ್ತೇನೆ ಅಥವಾ ಅಲ್ಲಿ ಇಲ್ಲಿ ಅಲೆದಾಡಲು ಹೋಗಿಬಿಡಬಹುದು. ಅಂತಹ ಸಮಯಗಳಲ್ಲಿ ನನ್ನನ್ನು ಬೇಗಂಜಾನ್‌ಳ ಮನೆಯಲ್ಲಿ ಒಂದು ವಾರ ಬಿಟ್ಟರೆ ನನಗೆ ತುಂಬಾ ಸಂತೋಷವಾಗುತ್ತಿತ್ತು ಹಾಗೂ ಬೇಗಂಜಾನ್ ಸಹ ಅಷ್ಟೇ ಸಂತೋಷಪಡುತ್ತಿದ್ದರು. ಎಷ್ಟಾದರೂ ಆಕೆ ಅಮ್ಮಿಯ ದತ್ತು ಸಹೋದರಿಯಲ್ಲವೆ!

ನಾನು ಆ ಮನೆಯಲ್ಲಿ ಎಲ್ಲಿ ಮಲಗಬೇಕು ಎಂಬ ಪ್ರಶ್ನೆ ಎದುರಾಯಿತು. ನನಗೆ ಇದ್ದ ಜಾಗವೇ ಬೇಗಂಜಾನ್‌ಳ ಕೋಣೆ. ಅದರಂತೆ ಆಕೆಯ ದೊಡ್ಡ ನಾಲ್ಕು ಗಜದ ಹಾಸಿಗೆಯ ಪಕ್ಕದಲ್ಲಿ ಒಂದು ಚಿಕ್ಕ ಹಾಸಿಗೆಯನ್ನು ಹಾಸಲಾಯಿತು. ರಾತ್ರಿ ಹತ್ತು ಅಥವಾ ಹನ್ನೊಂದು ಗಂಟೆಯವರೆಗೂ ನಾವು ಚಾನ್ಸ್ ಇಸ್ಪೀಟ್ ಆಟ ಆಡಿದೆವು. ಅದೂ ಇದು ಮಾತನಾಡಿದೆವು; ಅನಂತರ ನಾನು ಹಾಸಿಗೆಯಲ್ಲಿ ಹೊರಳಿದೆ. ನಾನು ನಿದ್ರಿಸಿದಾಗ ರಬ್ಬೊ ಆಕೆಯ ಬೆನ್ನು ಕೆರೆಯುತ್ತಿದ್ದಳು. 'ಹೊಲಸು ಸೂಳೆ' ಎಂದು ನಾನು ಗೊಣಗಿ ಮಗ್ಗಲು ಬದಲಿಸಿದೆ. ರಾತ್ರಿ ಇದ್ದಕ್ಕಿದ್ದಂತೆ ಎಚ್ಚರವಾಯಿತು. ಗಾಢ ಕತ್ತಲು ಆವರಿಸಿತ್ತು. ಬೇಗಂಜಾನ್‌ಳ ಕವುದಿ ಜೋರಾಗಿ ಅಲುಗಾಡುತ್ತಿತ್ತು, ಅದರೊಳಗೆ ಆನೆಯೊಂದು ಸಿಕ್ಕಿಕೊಂಡು ಒದ್ದಾಡುತ್ತಿರುವಂತೆ.

ಹೆದರಿಕೆಯಿಂದ ನಾನು ಮೆಲುದನಿಯಲ್ಲಿ 'ಬೇಗಂಜಾನ್' ಎಂದು ಕರೆದೆ. ಆನೆ ಸುಮ್ಮನಾಯಿತು. 'ಏನಿದು? ನಿದ್ರೆ ಮಾಡು'. ಎಲ್ಲೋ ದೂರದಿಂದ ಬೇಗಂಜಾನ್‌ಳ

ದನಿ ಬಂದಂತಾಯಿತು.

'ನನಗೆ ಹೆದರಿಕೆಯಾಗುತ್ತಿದೆ'. ಹೆದರಿಕೊಂಡ ಇಲಿಯಂತೆ ನನಗನ್ನಿಸಿತು.

'ನಿದ್ರೆ ಮಾಡು. ಹೆದರಿಕೊಳ್ಳುವಂಥದು ಏನೂ ಇಲ್ಲ. ಅಯಾತ್-ಉಲ್-ಕುರ್ಸಿ ಪಠನ ಮಾಡು'.

'ಆಯಿತು!' ಎಂದು ನಾನು ಆಯಾತ್ ಪಠನ ಆರಂಭಿಸಿದೆ. ಆದರೆ ಪ್ರತಿ ಬಾರಿ ನಾನು ಯಲಿಮು ಮುರ್ದೇನ್ ತಲುಪಿದಾಕ್ಷಣ ಮುಂದಿನದು ಮರೆತುಹೋಗುತ್ತಿತ್ತು. ನನಗೆ ವಿಚಿತ್ರವೆನ್ನಿಸಿತು. ಏಕೆಂದರೆ ನನಗೆ ಇಡೀ ಅಯಾತ್ ಬಾಯಿಪಾಠವಾಗಿದೆ!

'ನಾನು ನಿಮ್ಮ ಬಳಿ ಬರಲೆ, ಬೇಗಂಜಾನ್?'

'ಬೇಡ ಮಗು. ಈಗ ನಿದ್ದೆ ಮಾಡು.' ಆಕೆಯ ದನಿ ಕೊಂಚ ಗದರಿಸಿದಂತಿತ್ತು. ಯಾರೋ ಪಿಸುಗುಟ್ಟುತ್ತಿರುವುದು ನನಗೆ ಕೇಳಿಸಿತು. ಹೋ ದೇವರೆ! ಆ ಮತ್ತೊಬ್ಬ ವ್ಯಕ್ತಿ ಯಾರು? ನನ್ನ ಹೆದರಿಕೆ ಹೆಚ್ಚಾಯಿತು.

'ಬೇಗಂಜಾನ್, ಇಲ್ಲಿ ಯಾರಾದರೂ ಕಳ್ಳ ಇದ್ದಾನೆಯೆ?'

'ಕಳ್ಳನೂ ಇಲ್ಲ, ಗಿಳ್ಳನೂ ಇಲ್ಲ. ಸುಮ್ಮನೆ ನಿದ್ರೆ ಮಾಡು.' ಅದು ರಜ್ಜೋಳ ದನಿ. ನಾನು ನನ್ನ ಕವುದಿಯೊಳಕ್ಕೆ ಹುದುಗಿ ನಿದ್ರೆ ಮಾಡಲು ಯತ್ನಿಸಿದೆ..

ಮರುದಿನ ನನಗೆ ರಾತ್ರಿ ಆ ಭಯಾನಕ ಗಳಿಗೆಗಳು ಯಾವುದೂ ನೆನಪಿರಲಿಲ್ಲ. ನಮ್ಮ ಕುಟುಂಬದಲ್ಲಿ ಮೂಢನಂಬಿಕೆಗಳಲ್ಲಿ ಹೆಚ್ಚು ನಂಬಿಕೆ ಇರಿಸಿಕೊಂಡವಳು ನಾನು. ರಾತ್ರಿ ಹೆದರಿಕೊಳ್ಳುವುದು, ನಿದ್ರೆಯಲ್ಲಿ ಮಾತನಾಡುವುದು, ನಿದ್ರೆಯಲ್ಲಿ ನಡೆದಾಡುವುದು ಇವೆಲ್ಲಾ ನಾನು ಚಿಕ್ಕವಳಾಗಿದ್ದಾಗ ಬಹಳಷ್ಟು ಮಾಡುತ್ತಿದ್ದೆನಂತೆ. ನನಗೆ ದೆವ್ವ ಕಾಟ ಕೊಡುತ್ತಿದೆಯೆಂದು ಕೆಲವರು ಹೇಳುತ್ತಿದ್ದರು. ಆ ಘಟನೆಯನ್ನು ನಾನು ನನ್ನ ಇತರ ಕಾಲ್ಪನಿಕ ಅಂಜಿಕೆಗಳಂತೆ ಅದಷ್ಟು ಬೇಗ ಮರೆತುಬಿಟ್ಟೆ. ಅಲ್ಲದೆ, ಹಾಸಿಗೆಯ ಏನೂ ಅರಿಯದ ಒಂದು ತುಂಬಾ ಮುಗ್ಧ ಭಾಗ ಕವುದಿಯಲ್ಲವೆ?

ಮಾರನೆಯ ರಾತ್ರಿ ನನಗೆ ಎಚ್ಚರವಾದಾಗ, ಹಾಸಿಗೆಯ ಮೇಲೆಯೇ ಬೇಗಂಜಾನ್ ಮತ್ತು ರಜ್ಜೋ ಜಗಳವಾಡುತ್ತಿದ್ದರು. ಅದು ಹೇಗೆ ತೀರ್ಮಾನವಾಯಿತೆಂಬುದರ ಬಗೆಗೆ ನನಗೆ ತಿಳಿದಿಲ್ಲ, ಆದರೆ ರಜ್ಜೋ ಅಳುತ್ತಿರುವುದು ನನಗೆ ಕೇಳಿಸಿತು. ಅದಾದನಂತರ ಬೆಕ್ಕು ತಟ್ಟೆಯಿಂದ ಹಾಲು ಕುಡಿಯುತ್ತಿರುವುದರ ಶಬ್ದಗಳು ಕೇಳಿಸಿದವು. ಹಾಳಾದ್ದಾಗಲಿ, ನನಗೇನು ಎಂದು ನಾನು ನಿದ್ರೆ ಮಾಡಿದೆ!

ಈ ದಿನ ರಜ್ಜೋ ತನ್ನ ಮಗನನ್ನು ನೋಡಿಬರಲೆಂದು ಊರಿಗೆ ಹೋಗಿದ್ದಾಳೆ. ಅವನೂ ಒಬ್ಬ ಜಗಳಗಂಟ. ಅವನು ಜೀವನದಲ್ಲಿ ನೆಲೆಯೂರಲೆಂದು ಬೇಗಂಜಾನ್ ಅವನಿಗೆ

ಬಹಳಷ್ಟು ಸಹಾಯ ಮಾಡಿದ್ದಾಳೆ- ಅವನಿಗೊಂದು ಅಂಗಡಿ ಹಾಕಲು ಸಹಾಯ ಮಾಡಿದಳು. ಹಳ್ಳಿಯಲ್ಲೊಂದು ಕೆಲಸ ಕೊಡಿಸಿದಳು. ಆದರೂ ಅವನು ಎಲ್ಲಿಯೂ ನಿಲ್ಲಲಿಲ್ಲ. ಅವನನ್ನು ನವಾಬ್ ಸಾಹೇಬರ ಹತ್ತಿರ ಇರುವಂತೆ ಪ್ರಯತ್ನಿಸಿದಳು. ಅವನಿಗೆ ಹೊಸ ಬಟ್ಟೆ ಕೊಡಿಸಿ ಚೆನ್ನಾಗಿ ನೋಡಿಕೊಂಡರೂ ಕೃತಘ್ನ ಮುಂಡ ಅವನು ಏನೂ ಕಾರಣ ನೀಡದೆ ಓಡಿಹೋದ. ಅವನ ತಾಯಿಯನ್ನು ನೋಡಲು ಸಹ ಬರಲಿಲ್ಲ. ಹಾಗಾಗಿ ರಬ್ಬೊನೆ ಅವನನ್ನು ನೆಂಟರೊಬ್ಬರ ಮನೆಯಲ್ಲಿ ಭೇಟಿಯಾಗುವ ವ್ಯವಸ್ಥೆ ಮಾಡಿದ್ದಳು. ಬೇಗಂಜಾನ್ ಆಕೆಯನ್ನು ಬಿಡಲು ಸಿದ್ಧಳೇ ಇರಲಿಲ್ಲ. ಆದರೆ ರಬ್ಬೊ ಅಸಹಾಯಕಳಾಗಿದ್ದಳು ಮತ್ತು ಹೋಗಲೇಬೇಕಾಗಿತ್ತು.

ಇಡೀ ದಿನ ಬೇಗಂಜಾನ್ ಚಡಪಡಿಸುತ್ತಿದ್ದಳು. ಆಕೆಯ ಕೀಲುಗಳು ವಿಪರೀತ ನೋಯುತ್ತಿದ್ದವು. ಆದರೆ ಆಕೆ ಯಾರನ್ನೂ ಮುಟ್ಟಗೊಡಿಸುತ್ತಿರಲಿಲ್ಲ. ಒಂದಗಳು ಅನ್ನವನ್ನೂ ತಿನ್ನಲಿಲ್ಲ; ಇಡೀ ದಿನ ಹಾಸಿಗೆಯಲ್ಲೇ ಉರುಳಾಡುತ್ತಿದ್ದಳು. 'ನಾನು ನಿಮ್ಮ ಬೆನ್ನು ಕೆರೆಯಲೆ ಬೇಗಂಜಾನ್?' ನಾನು ಉತ್ಸುಕತೆಯಿಂದ ಇಸ್ಪೀಟು ಎಲೆಗಳನ್ನು ಹರಡುತ್ತಾ ಕೇಳಿದೆ. ಬೇಗಂಜಾನ್ ನನ್ನನ್ನೇ ಎಚ್ಚರಿಕೆಯಿಂದ ನೋಡಿದಳು.

'ನಿಜವಾಗಿಯೂ, ಕೆರೆಯಲೆ?' ಎಲೆಗಳನ್ನು ಇಟ್ಟು ಕೆರೆಯಲು ಆರಂಭಿಸಿದೆ. ಬೇಗಂಜಾನ್ ಸೂಚನೆಗಳನ್ನು ಕೊಡಲು ಆರಂಭಿಸಿದಳು. ಮರುದಿನವೇ ರಬ್ಬೊ ಬರಬೇಕಿತ್ತು. ಆದರೆ ಆಕೆ ಬರಲೇ ಇಲ್ಲ. ಬೇಗಂಜಾನ್‌ಳ ಸಿಟ್ಟು ಕ್ಷಣ ಕ್ಷಣ ಏರುತ್ತಿತ್ತು. ಆ ಸಿಟ್ಟು ಚಡಪಡಿಕೆಯಲ್ಲಿ ಅದೆಷ್ಟು ಚಹಾ ಕುಡಿದಳೆಂದರೆ, ಆಕೆಯ ತಲೆ ತಿರುಗುವಂತಾಯಿತು. ನಾನು ಆಕೆಯ ಬೆನ್ನು ಕೆರೆಯಲಾರಂಭಿಸಿದೆ. ಹೋ! ಎಂಥಾ ನುಣುಪಾದ ಬೆನ್ನು! ನನ್ನಿಂದಲೂ ಬೇಗಂಜಾನ್‌ಳಿಗೆ ಸಹಾಯವಾಗುತ್ತಿದೆಯೆಂಬ ಸಂತೋಷದಿಂದ ಮೃದುವಾಗಿ ಕೆರೆಯತೊಡಗಿದೆ. 'ಇನ್ನೂ ಜೋರಾಗಿ ಕೆರಿ. ಆ ಪಟ್ಟಿಯನ್ನು ಬಿಚ್ಚು'. ಬೇಗಂಜಾನ್ ಹೇಳಿದಳು. 'ಹಾ, ಅಲ್ಲೇ, ಭುಜದ ಕೆಳಗೆ. ಹೂ.... ಚೆನ್ನಾಗಿದೆ!' ಸಂತೃಪ್ತಿಯಿಂದ ಆಕೆ ನಿಟ್ಟುಸಿರುಬಿಟ್ಟಳು. 'ಇಲ್ಲಿ ಕೆರೆ'. ಬೇಗಂಜಾನ್ ತೋರಿಸಿದಳು. ಆ ಜಾಗವನ್ನು ಆಕೆಯೇ ಕೆರೆದುಕೊಳ್ಳಬಹುದಾಗಿದ್ದರೂ! ಆದರೆ ಆಕೆಗೆ ನನ್ನ ಸ್ಪರ್ಶ ಬೇಕಾಗಿತ್ತು. ನನಗೋ ಒಂದು ರೀತಿಯ ಹೆಮ್ಮೆಯಾಗುತ್ತಿತ್ತು! 'ಇಲ್ಲಿ, ಇಲ್ಲಿ, ಹೋ, ನೀನು ಕಚಗುಳಿ ಇಡುತ್ತಿದ್ದೀಯ'. ಆಕೆ ನಕ್ಕಳು. ನಾನು ಮಾತನಾಡುವುದು ಹಾಗೂ ಕೆರೆಯುವುದು ಒಟ್ಟಿಗೇ ಮಾಡುತ್ತಿದ್ದೆ.

'ನಾಳೆ ನಾನು ನಿನ್ನನ್ನು ಮಾರುಕಟ್ಟೆಗೆ ಕಳುಹಿಸುತ್ತೇನೆ. ನಿನಗೇನು ಬೇಕು? ನಿದ್ದೆ ಮಾಡಿಸಬಲ್ಲ ಬೊಂಬೆ ಬೇಕೆ?'

'ನನಗೆ ಬೊಂಬೆ ಬೇಡ ಬೇಗಂಜಾನ್! ನಾನೇನು ಚಿಕ್ಕ ಮಗುವೆ? ನಿಮಗೇ ಗೊತ್ತಲ್ಲ ನಾನು...'

'ಹೋ ಗೊತ್ತು... ನೀನೊಂದು ಮುದಿ ಕಾಗೆಯಲ್ಲವೆ?' ಆಕೆ ನಕ್ಕಳು.

'ಆಯಿತು, ನಿನಗೊಂದು ಪುಟ್ಟ ಹುಡುಗನ ಬೊಂಬೆ ಕೊಡಿಸುತ್ತೇನೆ. ನೀನೇ ಅದಕ್ಕೆ ಬಟ್ಟೆ ತೊಡಿಸು. ಅದಕ್ಕೆ ಬೇಕಾದಷ್ಟು ಬಟ್ಟೆಯ ಚೂರುಗಳನ್ನು ನಾನು ಕೊಡುತ್ತೇನೆ. ಆಯಿತೆ?' ಎಂದು ಹೇಳಿ ಬೇಗಂಜಾನ್ ಮಗ್ಗುಲು ಬದಲಿಸಿದಳು.

'ಆಯಿತು', ಎಂದೆ ನಾನು.

'ಇಲ್ಲಿ... ಇಲ್ಲಿ...' ಎಂದು ಆಕೆಯೇ ನನ್ನ ಕೈಯನ್ನು ಆಕೆಗೆ ಎಲ್ಲೆಲ್ಲಿ ನವೆಯೋ ಅಲ್ಲೆಲ್ಲಾ ಕೊಂಡೊಯ್ಯುತ್ತಿದ್ದಳು. ನಾನು ಬೊಂಬೆಯದೇ ಯೋಚನೆಯಲ್ಲಿ ಯಾಂತ್ರಿಕವಾಗಿ, ಏನೊಂದೂ ಆಲೋಚಿಸಿದೆ ಕೆರೆಯುತ್ತಲೇ ಇದ್ದೆ. ಆಕೆ ಮಾತನಾಡುತ್ತಲೇ ಇದ್ದಳು.

'ನೋಡು, ನಿನ್ನ ಬಳಿ ಸಾಕಷ್ಟು ಬಟ್ಟೆಗಳಿಲ್ಲ. ನಿನಗೆ ಹೊಸ ಲಂಗ ಹೊಲಿಸಲು ನಾಳೆ ದರ್ಜಿಗೆ ಹೇಳುತ್ತೇನೆ. ನಿನ್ನ ಅಮ್ಮ ನನ್ನ ಬಳಿ ಸ್ವಲ್ಪ ಬಟ್ಟೆ ಕೊಟ್ಟಿದ್ದಾರೆ'.

'ನನಗೆ ಕಡಿಮೆ ಬೆಲೆಯ ಆ ಕೆಂಪು ಬಟ್ಟೆ ಬೇಡ. ಅದು ಚೆನ್ನಾಗಿ ಕಾಣುವುದಿಲ್ಲ'. ನನಗೆ ತಿಳಿಯದಂತೆ ನನ್ನ ಕೈ ಆಕೆಯ ದೇಹದ ಮೇಲೆ ಎಲ್ಲೆಲ್ಲೋ ಅಲೆದಾಡುತ್ತಿತ್ತು. ಅದು ನನ್ನ ಗಮನಕ್ಕೆ ಬರುವಷ್ಟರಲ್ಲಿ ಆಕೆ ಅಂಗಾತ ಮಲಗಿದ್ದಳು! ಹೋ ದೇವರೆ! ತಕ್ಷಣ ತನ್ನ ಕೈಯನ್ನು ಹಿಂದಕ್ಕೆಳೆದುಕೊಂಡೆ.

'ಹುಚ್ಚು ಹುಡುಗಿ, ಎಲ್ಲಿ ಕೆರೆಯುತ್ತಿದ್ದೀಯೆಂದು ನೋಡಲಿಲ್ಲವೆ? ನೋಡು ನನ್ನ ಪಕ್ಕೆಲುಬುಗಳನ್ನು ಮುರಿದುಹಾಕಿದ್ದೀಯ.' ಬೇಗಂಜಾನ್ ತುಂಟ ನಗೆ ಬೀರುತ್ತಾ ಹೇಳಿದಳು. ನಾನು ನಾಚಿಕೆಯಿಂದ ಕೆಂಪಾಗಿದ್ದೆ.

'ಬಾ ಇಲ್ಲಿ, ನನ್ನ ಜೊತೆ ಮಲಗಿಕೋ ಬಾ' ಎಂದು ನನ್ನನ್ನು ಪಕ್ಕದಲ್ಲಿ ಮಲಗಿಕೊಂಡು ತಾನೂ ತನ್ನ ಕೈಯನ್ನೇ ದಿಂಬಾಗಿಸಿಕೊಂಡು ಮಲಗಿದಳು.

'ಎಷ್ಟು ತೆಳ್ಳಗಿದ್ದೀಯ ಹುಡುಗಿ... ನೋಡಿಲ್ಲಿ ನಿನ್ನ ಪಕ್ಕೆಲುಬುಗಳು.' ಎಂದು ಹೇಳಿ ನನ್ನ ಪಕ್ಕೆಲುಬುಗಳನ್ನು ಎಣಿಸಲು ಶುರುಮಾಡಿದಳು.

'ಬೇಡ...' ಎಂದೆ ನಾನು ಕ್ಷೀಣವಾಗಿ ಪ್ರತಿಭಟಿಸುತ್ತಾ.

'ಬಿಡು, ನಾನೇನು ನಿನ್ನನ್ನು ತಿಂದುಬಿಡುವುದಿಲ್ಲ! ಇದ್ಯಾಕೆ ಇಷ್ಟು ಬಿಗಿಯಾದ ಸ್ವೆಟರ್ ಹಾಕಿಕೊಂಡಿದ್ದೀಯಾ? ಒಳಗೆ ಬೆಚ್ಚನೆಯ ಕುಬುಸ ಸಹ ಇಲ್ಲ'.

ನನಗೇಕೋ ಇರುಸು ಮುರುಸಾಗತೊಡಗಿತು.

'ಎಷ್ಟು ಪಕ್ಕೆಲುಬುಗಳಿರುತ್ತವೆ?' ಆಕೆ ಹೇಳಿದಳು, ವಿಷಯ ಬದಲಾಯಿಸುತ್ತಾ.

'ಒಂದು ಕಡೆ ಒಂಬತ್ತು ಹಾಗೂ ಮತ್ತೊಂದು ಕಡೆ ಹತ್ತು,' ನಾನು ಶಾಲೆಯಲ್ಲಿ ಓದಿದ್ದನ್ನು ನೆನಪುಮಾಡಿಕೊಂಡು ಹೇಳಿದೆ. ಎಲ್ಲವೂ ಗೊಂದಲಮಯ.

'ಎಲ್ಲಿ, ಎಣಿಸೋಣ...' ನನ್ನ ಕೈ ಪಕ್ಕಕ್ಕೆ ಸರಿಸಿ ಆಕೆ 'ಒಂದು, ಎರಡು, ಮೂರು...' ಎಂದು ಎಣಿಸತೊಡಗಿದಳು.

ನನಗೆ ಅಲ್ಲಿಂದ ಓಡಿಹೋಗಬೇಕೆನಿಸಿತು. ಆದರೆ ಆಕೆ ನನ್ನನ್ನು ಬಿಗಿಯಾಗಿ ಹಿಡಿದುಕೊಂಡಿದ್ದಳು. ಬಿಡಿಸಿಕೊಳ್ಳಲು ಒದ್ದಾಡಿದೆ. ಬೇಗಂಜಾನ್ ಜೋರಾಗಿ ನಗತೊಡಗಿದಳು.

ಆ ಕ್ಷಣ ಆಕೆ ಹೇಗೆ ಕಾಣಿಸುತ್ತಿದ್ದಳೆಂಬುದನ್ನು ಈ ದಿನ ನೆನಪಿಸಿಕೊಂಡರೂ ನನಗೆ ಮೈ ನಡುಕ ಬರುತ್ತದೆ. ಆಕೆಯ ಕಣ್ಣ ರೆಪ್ಪೆಗಳು ತೂಕದಿಂದ ಅರೆಮುಚ್ಚಿದಂತಿದ್ದವು; ಆಕೆಯ ಮೇಲ್ತುಟಿ ಕಂದಾಗಿ ಮತ್ತು ಚಳಿಯಲ್ಲಿಯೂ ಸಹ ಆಕೆ ಮೂಗು ಮತ್ತು ಕಣ್ಣ ಸುತ್ತಲೂ ಬೆವರುತ್ತಿದ್ದಳು. ಆಕೆಯ ಕೈಗಳು ಬಿರುಸಾಗಿ, ತಣ್ಣಗಿದ್ದವು ಆದರೆ ಚರ್ಮ ಸುಲಿದಂತೆ ಮೃದುವಾಗಿತ್ತು. ಆಕೆ ಹೊದ್ದಿದ್ದ ಶಾಲನ್ನು ಪಕ್ಕಕ್ಕೆ ಎಸೆದಿದ್ದಳು ಮತ್ತು ತಾನು ಧರಿಸಿದ ಕುರ್ಗಾ ಕುರ್ತಾದಲ್ಲಿ ಆಕೆಯ ಮೈ ನಾದಿದ ಹಿಟ್ಟಿನ ಚೆಂಡಿನಂತೆ ಹೊಳೆಯುತ್ತಿತ್ತು. ಕುರ್ತಾದ ತೂಕದ ಚಿನ್ನದ ಗುಂಡಿಗಳು ತೆರೆದುಕೊಂಡು ಪಕ್ಕಕ್ಕೆ ಓಲಾಡುತ್ತಿದ್ದವು. ಇದ್ದಕ್ಕಿದ್ದಂತೆ ಸಂಜೆಗತ್ತಲು ಆವರಿಸಿದಂತಾಗಿ ಆಕೆಯ ಕೋಣೆ ಕತ್ತಲಾಗುತ್ತಿತ್ತು, ನನಗೆ ಉಸಿರು ಬಿಗಿಹಿಡಿದಂತಾಗಿ ವಿಪರೀತ ಹೆದರಿಕೆಯಾಗತೊಡಗಿತು. ಬೇಗಂಜಾನ್‌ಳ ಕಡುಕಪ್ಪು ಕಣ್ಣುಗಳು ನನ್ನ ಮೇಲೆಯೇ ಕೇಂದ್ರೀಕೃತವಾಗಿದ್ದವು! ನಾನು ಅಳಲು ಪ್ರಾರಂಭಿಸಿದೆ. ಆಕೆ ನನ್ನನ್ನು ಮಣ್ಣಗೊಂಬೆಯಂತೆ ತಬ್ಬಿ ಹಿಡಿದಿದ್ದಳು. ಆಕೆಯ ಬೆಚ್ಚನೆ ಮೈ ನನ್ನಲ್ಲಿ ವಾಕರಿಕೆ ಉಂಟುಮಾಡಿತು. ಆಕೆಯೇನೋ ಮೈಮೇಲೆ ಬಂದವಳಂತಿದ್ದಳು. ನನಗೇನೂ ಮಾಡಲು ಆಗಲಿಲ್ಲ. ಅಳಲೂ ಆಗಲಿಲ್ಲ, ಜೋರಾಗಿ ಕಿರುಚಲೂ ಆಗಲಿಲ್ಲ! ಸ್ವಲ್ಪ ಹೊತ್ತಿಗೆ ಬಸವಳಿದಂತೆ ಕಂಡಳು. ಆಕೆಯ ಮುಖ ಹೆದರಿಕೊಂಡಂತೆ ಬಿಳಚಿಕೊಂಡಿತ್ತು. ದೀರ್ಘವಾಗಿ ಉಸಿರಾಡುತ್ತಿದ್ದಳು. ಆಕೆ ಕೆಲವೇ ಕ್ಷಣಗಳಲ್ಲಿ ಸತ್ತುಹೋಗುತ್ತಾಳೆ ಎಂದು ನನಗನ್ನಿಸಿತ್ತು. ತಕ್ಷಣ ಎದ್ದು ಹೊರಗೆ ಓಡಿದೆ.

ಆ ರಾತ್ರಿಯೇ ರಬ್ಬೊ ವಾಪಸ್ಸು ಬಂದಿದ್ದರಿಂದ ನಾನು ದೇವರನ್ನು ವಂದಿಸಬೇಕು. ರಾತ್ರಿ ಮಲಗಿದ್ದಾಗ ನನಗೆ ಮುಸುಕು ಹಾಕಿಕೊಳ್ಳಲೂ ಹೆದರಿಕೆಯಾಗುತ್ತಿತ್ತು. ಎಂದಿನಂತೆ ನನಗೆ ನಿದ್ರೆಯೂ ಬರಲಿಲ್ಲ. ಅದೆಷ್ಟು ಗಂಟೆಗಳು ನಾನು ಎಚ್ಚರವಾಗಿದ್ದೆನೋ ನನಗೆ ತಿಳಿದಿಲ್ಲ. ನನ್ನ ಅಮ್ಮಿ ಹಿಂದಿರುಗಬಾರದೆ ಎಂದು ಕೊರಗಿದೆ. ಬೇಗಂಜಾನ್‌ಳನ್ನು ಕಂಡರೆ ನನಗೆಷ್ಟು ಹೆದರಿಕೆಯಾಗುತ್ತಿತ್ತೆಂದರೆ ನಾನು ಉಳಿದ ದಿನಗಳೆಲ್ಲಾ ಮನೆಗೆಲಸದವರ ಜೊತೆಯೇ ಕಳೆದೆ. ಆಕೆಯ ಮಲಗುವ ಕೋಣೆಗೆ ತಲೆಯಿಡುತ್ತಲೇ ಹೆಸರಿಕೆಯಾಗುತ್ತಿತ್ತು. ಇತರರೊಂದಿಗೆ ನಾನು ಏನು ಹೇಳಿಕೊಳ್ಳಲಿ? ಬೇಗಂಜಾನ್‌ಳನ್ನು ಕಂಡು ಹೆದರಿಕೆಯಾಗುತ್ತಿದೆ ಎಂದು ಹೇಳಲೆ? ಅದೂ ನನ್ನನ್ನು ಅಷ್ಟೊಂದು ಇಷ್ಟಪಡುವ ಬೇಗಂಜಾನ್?

ಈ ದಿನ ಬೇಗಂಜಾನ್ ಮತ್ತು ರಬ್ಬೊಳ ನಡುವೆ ಮತ್ತೊಮ್ಮೆ ಜಗಳವಾಯಿತು. ಅವರ ಜಗಳ ಕಂಡು ನಾನು ಬಹಳ ಹೆದರಿಕೊಂಡಿದ್ದೆ ಏಕೆಂದರೆ, ನನ್ನ ದುರದೃಷ್ಟಗಳ ಪ್ರಾರಂಭವನ್ನು ಅದು ಸೂಚಿಸುತ್ತಿತ್ತು! ಇದ್ದಕ್ಕಿದ್ದಂತೆ ಬೇಗಂಜಾನ್ ನನ್ನ ಬಗ್ಗೆ ಆಲೋಚಿಸಿದಳು. ಚಳಿಯಲ್ಲಿ ನಾನೇಕೆ ಹೊರಗೆ ಓಡಾಡುತ್ತಿದ್ದೇನೆ? ಖಂಡಿತವಾಗಿಯೂ ನಾನು ನ್ಯುಮೋನಿಯಾದಿಂದ ಸತ್ತುಹೋಗುತ್ತೇನೆ! 'ಹೇ, ಹುಡುಗಿ, ಸಾರ್ವಜನಿಕರೆದುರು ನನ್ನ ತಲೆ ಬೋಳಿಸಿಕೊಳ್ಳುವಂತೆ ನೀನು ಮಾಡಿಬಿಡುತ್ತೀಯಾ. ನಿನಗೇನಾದರೂ ಆದರೆ ನಿಮ್ಮಮ್ಮನಿಗೆ ನಾನು ಏನು ಹೇಳಲಿ? ಬಾ ಇಲ್ಲಿ ಒಳಗೆ ಬಾ' ಎಂದು ಬೈದು ನನ್ನನ್ನು ಕರೆದಳು, ಅಲ್ಲೇ ಬೇಸಿನ್‌ನಲ್ಲಿ ತನ್ನ ಮುಖ ತೊಳೆಯುತ್ತಾ. ಅಲ್ಲೇ ಮೇಜಿನ ಮೇಲೆ ಚಹಾ ಇರಿಸಿತ್ತು. 'ನನಗೆ ಸ್ವಲ್ಪ ಚಹಾ ಹಾಕಿ ಕೊಡು'. ಆಕೆ ತನ್ನ ಮುಖ ಮತ್ತು ಕೈಗಳನ್ನು ಒರೆಸಿಕೊಂಡಳು. 'ಈ ಬಟ್ಟೆ ಬದಲಿಸಲು ನನಗೆ ಸಹಾಯ ಮಾಡು.' ಆಕೆ ಬಟ್ಟೆ ಬದಲಿಸುತ್ತಿರುವಂತೆ, ನಾನು ಚಹಾ ಕುಡಿದೆ. ಆಕೆ ತನ್ನ ದೇಹವನ್ನು ಮಾಲೀಸು ಮಾಡಿಸಿಕೊಳ್ಳುತ್ತಿರುವಾಗ ನನ್ನನ್ನು ಆಗಾಗ ಏನಾದರೊಂದು ಕೆಲಸಕ್ಕೆ ಕರೆಯುತ್ತಲೇ ಇರುತ್ತಿದ್ದಳು. ನನಗಿಷ್ಟವಿಲ್ಲದಿದ್ದರೂ ನಾನವುಗಳನ್ನು ಮಾಡುತ್ತಿದ್ದೆ, ಮತ್ತೊಂದೆಡೆ ಮುಖ ತಿರುಗಿಸಿ, ಕ್ಷಣ ಅವಕಾಶ ಸಿಕ್ಕರೂ ಅಲ್ಲಿಂದ ಚಹಾ ಕುಡಿಯುತ್ತ ಹೊರಕ್ಕೆ ಓಡುತ್ತಿದ್ದೆ.

'ಅಮ್ಮಿ!' ನನ್ನ ಹೃದಯ ಅತ್ಯಂತ ನೋವಿನಿಂದ ಒರಲಿತು. 'ನನ್ನ ಸಹೋದರರೊಂದಿಗೆ ಹೊಡೆದಾಡಿದ್ದಕ್ಕೆ ನನಗೇಕೆ ಇಂತಹ ಕಠಿಣ ಶಿಕ್ಷೆ?' ನಾನು ಹುಡುಗರೊಂದಿಗೆ ಆಟವಾಡುವುದು ನನ್ನ ಅಮ್ಮಿಗೆ ಇಷ್ಟವೇ ಇರಲಿಲ್ಲ, ಆ ಹುಡುಗರೇನು ತನ್ನ ಮುದ್ದಿನ ಮಗಳನ್ನು ತಿಂದುಬಿಡುವ ನರಭಕ್ಷಕರೆ! ಆ ಭಯಂಕರ ಗಂಡಸರಾದರೂ ಯಾರು? ನನ್ನದೇ ಸಹೋದರರು ಮತ್ತು ಅವರ ಅಂಜುಬುರುಕ ಗೆಳೆಯರು. ಹೆಂಗಸರನ್ನು ಏಳುಬೀಗಗಳು ಹಾಕಿದ ಬಂದೀಖಾನೆಯಲ್ಲಿರಿಸಬೇಕೆಂದು ನಂಬಿದ್ದವಳು ನನ್ನ ಅಮ್ಮಿ! ಆದರೆ ಬೇಂಗಂಜಾನ್‌ಳ 'ಆಶ್ರಯ' ಜಗತ್ತಿನ ಭಯಂಕರ ಗೂಂಡಾಗಳ ಹೆದರಿಕೆಗಿಂತ ಹೆಚ್ಚು ಭಯಂಕರವಾಗಿತ್ತು! ನನಗೇನಾದರೂ ಧೈರ್ಯವಿದ್ದಿದ್ದರೆ ನಾನು ರಸ್ತೆಯ ಮೇಲೆ ಓಡಿಹೋಗಿಬಿಡುತ್ತಿದ್ದೆ. ಆದರೆ ಅಸಹಾಯಕಳಾದ ನಾನು ಹೃದಯವನ್ನು ಅಂಗೈಯಲ್ಲಿ ಹಿಡಿದುಕೊಂಡು ಅಲ್ಲೇ ಕುಳಿತಿದ್ದೆ.

ವೈಭವವಾದ ವಸ್ತ್ರಗಳನ್ನು ಧರಿಸಿ ಮತ್ತು ಸುಗಂಧ ದ್ರವ್ಯಗಳಿಂದ ತನ್ನ ದೇಹವನ್ನು ಸುವಾಸಿತವಾಗುವಂತೆ ಮಾಡಿಕೊಂಡ ಬೇಗಂಜಾನ್ ನನ್ನೆಡೆಗೆ ತಿರುಗಿದಳು.

ಆಕೆ ಏನೇ ಹೇಳಿದರೂ ನಾನು 'ನಾನು ಮನೆಗೆ ಹೋಗಬೇಕು!' ಎನ್ನುತ್ತಿದ್ದೆ. ಕಣ್ಣಲ್ಲಿ ಬಳಬಳ ನೀರು ಸುರಿಯುತ್ತಿತ್ತು.

'ಇಲ್ಲಿ ನನ್ನ ಬಳಿ ಬಾ.' ಆಕೆ ನಯವಾಗಿ ಹೇಳಿದಳು. 'ನಿನ್ನನ್ನು ಬಜಾರಿಗೆ ಕರೆದುಕೊಂಡು ಹೋಗುತ್ತೇನೆ.'

ಎಲ್ಲದಕ್ಕೂ ನನ್ನ ಉತ್ತರ ಒಂದೇ ಆಗಿತ್ತು. ಜಗತ್ತಿನ ಎಲ್ಲ ಬೊಂಬೆಗಳು ಹಾಗೂ ಸಿಹಿತಿನಿಸುಗಳನ್ನು ನನ್ನ ಉತ್ತರದ ಎದುರಿಗೆ ಪೇರಿಸುತ್ತಾ ಹೋದರು. ಆದರೂ ನಾನು, 'ನಾನು ಮನೆಗೆ ಹೋಗಬೇಕು!' ಎನ್ನುತ್ತಲೇ ಇದ್ದೆ.

'ನಿನ್ನ ಅಣ್ಣಂದಿರು ನಿನ್ನನ್ನು ಚಚ್ಚಿಹಾಕುತ್ತಾರೆ, ಹುಚ್ಚಿ!' ಎಂದಳು ಆಕೆ ನನ್ನ ಕೆನ್ನೆಯ ಮೇಲೆ ನಯವಾಗಿ ಕೈಯಾಡಿಸುತ್ತಾ.

'ಚಚ್ಚಲಿ' ನಾನು ಕೊಸರಿಕೊಂಡು ಹೇಳಿದೆ.

'ಹಸಿ ಮಾವಿನಕಾಯಿ, ಹುಳಿಯಿದೆ ಬೇಗಂಜಾನ್' ಎಂದಳು ಕಿರಾತಕಿ ರಬ್ಬೊ ಅಸೂಯೆಯಿಂದ.

ಆಗ ಬೇಗಂಜಾನ್‌ಳಿಗೆ ಇದ್ದಕ್ಕಿದ್ದಂತೆ ಮೂರ್ಛೆ ಬಂದಿತು. ನನ್ನ ಕತ್ತಿಗೆ ಹಾಕಬೇಕೆಂದಿದ್ದ ಚಿನ್ನದ ಸರ ಕಿತ್ತು ಚೂರುಚೂರಾಯಿತು. ತೆಳುವಾದ ಜಾಲಿಯ ಶಿರೋವಸ್ತ್ರ ಹರಿದುಹೋಯಿತು. ಆಕೆಯ ತಲೆಯ ಮೇಲೆ ಎಂದಿಗೂ ಅತ್ತಿತ್ತ ಅಲುಗಾಡದ ಕೂದಲು ಚದುರಿಹೋಯಿತು. ಆಕೆ ಜೋರಾಗಿ 'ಹೋ...! ಹೋ...!' ಎಂದು ಕೂಗತೊಡಿದಳು. ದೇಹ ಸೆಡೆತದಿಂದೆಂಬಂತೆ ಕಂಪಿಸತೊಡಗಿತು. ಹೆದರಿಕೆಯಿಂದ ನಾನು ಹೊರಕ್ಕೆ ಓಡಿದೆ. ಬಹಳ ಹೊತ್ತಿನ ಆರೈಕೆಯ ನಂತರ ಆಕೆಯ ಪ್ರಜ್ಞೆ ಮರಳಿತು. ನಾನು ಸಪ್ಪಳ ಮಾಡದಂತೆ ಆಕೆಯ ಕೋಣೆಯೊಳಕ್ಕೆ ಹೋದೆ. ಬೇಗಂಜಾನ್‌ಳನ್ನು ರಬ್ಬೊ ತನ್ನ ದೇಹಕ್ಕೆ ಒರಗಿಸಿಕೊಂಡು ಕೈಕಾಲು ತೀಡುತ್ತಿದ್ದಳು.

'ನಿನ್ನ ಬೂಟುಗಳನ್ನು ಅಲ್ಲೇ ಬಿಟ್ಟುಬಿಡು' ಆಕೆ ಪಿಸುಗುಟ್ಟಿದಳು. ಇಲಿಯಂತೆ ನಾನು ನನ್ನ ಕವುದಿಯೊಳಕ್ಕೆ ಸೇರಿಕೊಂಡೆ.

'ಅಲ್ಲಾಹ್', ನನ್ನ ಗಂಟಲಿನಿಂದ ಸ್ವರವೇ ಹೊರಡಲಿಲ್ಲ. ಕವುದಿಯೊಳಗಿನ ಆನೆ ನೆಗೆದು ಕುಳಿತುಕೊಂಡಿತು. ನನ್ನ ಬಾಯಿಯಿಂದ ಸ್ವರವೇ ಹೊರಡಲಿಲ್ಲ. ಮತ್ತೊಮ್ಮೆ ಆನೆ ಓಲಾಡತೊಡಗಿತು. ನನ್ನಲ್ಲಿ ಗೊಂದಲ, ಅಂಜಿಕೆ ಹೆಚ್ಚಾಗುತ್ತಲೇ ಇತ್ತು. ಆದರೂ ಏನಾದರಾಗಲಿ, ನನ್ನ ಹಾಸಿಗೆಯ ಪಕ್ಕವಿರುವ ಲೈಟ್‌ನ ಸ್ವಿಚ್ ಹಾಕಬೇಕೆಂದು ನಿರ್ಧರಿಸಿದೆ. ಮತ್ತೊಮ್ಮೆ ಆನೆ ಅಲುಗಾಡಿ ಕೆಳಕ್ಕೆ ಕೂಡುತ್ತಿರುವಂತೆ ಅನ್ನಿಸಿತು. ಯಾರೋ ಲೊಚ ಲೊಚ ಎಂದು ಹಬ್ಬದೂಟ ಮೆಲ್ಲುತ್ತಿರುವ ಸದ್ದು. ಒಳಗೆ ಏನು ನಡೆಯುತ್ತಿದೆಯೆಂದು ನನಗೆ ತಕ್ಷಣ ಗೊತ್ತಾಯಿತು!


ಇಡೀ ದಿನ ಬೇಗಂಜಾನ್ ಊಟ ಮಾಡಿರಲಿಲ್ಲ ಹಾಗೂ ಕಿರಾತಕಿ ರಬ್ಬೊ ಬಟ್ಟಳು ತಿಂಡಿಪೋತೆ. ಖಂಡಿತವಾಗಿಯೂ ಅವರಿಬ್ಬರೂ ಕವುದಿಯೊಳಗೆ ಕಳ್ಳತನದಿಂದ ರಸವತ್ತಾದ ಊಟ ಮೆಲ್ಲುತ್ತಿದ್ದಾರೆ. ನನ್ನ ಮೂಗರಳಿಸಿ ಅವರು ಮೆಲ್ಲುತ್ತಿರುವ ಭೋಜನದ ಸುವಾಸನೆಯನ್ನು ಪಡೆಯಲು ಯತ್ನಿಸಿದೆ. ಆದರೆ ಇಡೀ ಕೋಣೆಯಲ್ಲಿ ಬರೀ ಅತ್ತರ್,

ಹೆನ್ನಾ, ಗಂಧದ ವಾಸನೆಯೇ ತುಂಬಿತ್ತು. ಭೋಜನದ ವಾಸನೆ ಇರಲೇ ಇಲ್ಲ. ಮತ್ತೊಮ್ಮೆ ಕವುದಿ ಓಲಾಡತೊಡಗಿತು. ನಾನು ಹಾಗೆಯೇ ಅಲುಗಾಡದೆ ಮಲಗಿದ್ದೆ. ಆದರೆ ಆ ಕವುದಿ ಈಗ ವಿಚಿತ್ರ ಆಕಾರಗಳನ್ನು ಪಡೆಯುತ್ತಿತ್ತು. ನನಗೆ ತಡೆಯಲಾಗಲಿಲ್ಲ. ಅದರೊಳಗೆ ಕಪ್ಪೆಯೊಂದು ದೊಡ್ಡದಾಗುತ್ತಿದೆಯೆಂದೂ ಹಾಗೂ ಅದು ಇನ್ನೇನು ನನ್ನ ಮೇಲೆ ನೆಗೆದುಬಿಡುತ್ತದೆಂದು ನನಗನ್ನಿಸಿತು.

'ಅಮ್ಮಿ!' ಧೈರ್ಯ ಮಾಡಿ ಕೂಗಿದೆ. ಆದರೆ ನನ್ನ ಕೂಗು ನನ್ನ ಗಂಟಲಿನಲ್ಲಿಯೇ ಉಳಿಯಿತು. ಅಷ್ಟರಲ್ಲಿ ನನ್ನ ಮನಸ್ಸನ್ನು ಪ್ರವೇಶಿಸಿದ್ದ ಕವುದಿ ದೊಡ್ಡದಾಗಿ ಬೆಳೆಯುತ್ತಾ ಹೋಯಿತು. ನಿಧಾನವಾಗಿ ನಾನು ಆ ಹಾಸಿಗೆಯವರೆಗೂ ತೆವಳಿಕೊಂಡು ಹೋಗಿ ಎದ್ದು ಕೂತೆ. ಕತ್ತಲಲ್ಲಿ ಲೈಟ್‌ನ ಸ್ವಿಚ್‌ಗಾಗಿ ತಡಕಾಡಿದೆ. ಆನೆ ಕವುದಿಯೊಳಗೇ ಮೇಲಕ್ಕೆ ನೆಗೆಯುತ್ತಿತ್ತು, ಕೆಳಕ್ಕೆ ಬೀಳುತ್ತಿತ್ತು. ಆ ರೀತಿ ನೆಗೆಯುವಾಗ ಕವುದಿಯ ಮೂಲೆಯೊಂದು ಹಾಸಿಗೆಗಿಂತ ಒಂದಡಿ ಮೇಲಕ್ಕೆದ್ದಿತು.

'ಅಲ್ಲಾಹ್!' ನಾನು ಓಡಿ ನನ್ನ ಕವುದಿಯೊಳಕ್ಕೆ ಸೇರಿಕೊಂಡೆ!

ಆ ಕವುದಿ ಮೇಲಕ್ಕೆದ್ದಾಗ ನಾನೇನು ಕಂಡೆ ಎಂಬುದನ್ನು ಎಂದಿಗೂ ಯಾರಿಗೂ ಹೇಳುವುದಿಲ್ಲ. ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟರೂ ಸಹ.



ಸೀತಾಕಾಂತ ಮಹಾಪಾತ್ರ
ಅವರ ಎರಡು ಕವಿತೆಗಳು
ಅನುವಾದ : ಡಿ.ಆರ್. ತುಕಾರಾಂ

ಸುಂಮನೇ ಹೊರಟು ಹೋದವನು

ಮುಂಜಾನೆ ಏಳುತ್ತಲೇ ದಿನದ ದುಡಿಮೆ
ಮೈ-ಮನ-ಕಂಣುಗಳಲ್ಲಿ ತುಂಬಿಕೊಳ್ಳುತ್ತಿದೆ.
ಹಳಸಿ ನೀರೊಡೆದ ಅನ್ನಕ್ಕೇ ಒಂದಿಷ್ಟು
ಉಪ್ಪೋ, ಉಪ್ಪಿನಕಾಯಿಯನ್ನೋ ಸೇರಿಸಿ
ಅವಸರವಸರವಾಗಿ ಹೊಟ್ಟೆಗಿಳಿಸಿ
ಗೋಡೆಮೇಲೆ ಫೋಟೋಫ್ರೇಮ್‌ನಲ್ಲಿರುವ
ಭಗವಂತನಿಗೆ ಕೈಮುಗಿದು
ನೇಗಿಲು ಎತ್ತಿ ಹೊಲದಕಡೆ ಹೋಗುತ್ತಾನೆ.

ಸೂರ್ಯನಿಗೆ ಮೈ ಒಡ್ಡಿ ಬೆವರಲ್ಲಿ ನೆಂದು
ಕೆಸರಲ್ಲಿ ಬೆಳೆದ ಕಸವನ್ನು ಕಿತ್ತೆಸೆದರೂ
ಮತ್ತೆ ಮತ್ತೆ ಚಿಗುರುವ ಕಸ ಕಂಟಿಗಳಿಗೆ
ಒಂದಿಷ್ಟು ಶಾಪ ಹಾಕಿ
ಹಾಕಿದ ಶಾಪಕ್ಕೆ ಅಪರಾಧ ಮನೋಭಾವ ಹೊತ್ತು
ಮನೆಗೆ ಮರಳುತ್ತಾನೆ.
ಕೈ-ಕಾಲು-ಮುಖ ತೊಳೆದು
ಕೆಲಕ್ಷಣ ಧ್ಯಾನಸ್ಥನಾಗಿ
ನಂತರ

ಒಲೆಯ ಮೇಲಿನ ಅನ್ನದ ಪಾತ್ರೆಯಿಂದ ಹೊರಬರುತ್ತಲಿರುವ
ಉಗಿಯಲ್ಲಿನ ಭಗವಂತನಿಗೆ ಕೈಮುಗಿದು
ಧನ್ಯವಾದ ಹೇಳುತ್ತಾನೆ.
ಆತ ತನ್ನ ದೌರ್ಭಾಗ್ಯ ನೆನೆದು ಎಂದೂ ಯಾರಿಗೂ ಹಳಿದುದಿಲ್ಲ.
ದೇವರಿಗೆ ಸಲ್ಲಿಸಬೇಕಾದ ವಿಷಯದಲ್ಲಿ
ಎಂದೂ ತಡ ಮಾಡಿದವನಲ್ಲ.
ಭೂಮಿಯ ಬಿರಾಡ ಕಟ್ಟುವಾಗಲೂ ಅಷ್ಟೇ.
ಬೀಜಗಳ ಉದ್ದರಿ, ನೆರೆಯವನಿಂದ ಪಡೆದ ಕಡ
ತೀರಿಸುವಲ್ಲಿ ಎಂದೂ ಮಾಡುತ್ತಿರಲಿಲ್ಲ ತಡ!
ಸಂಜೆ ಊರ ಹೊರಗಿನ ಗುಡಿಗೆ ಹೋಗುತ್ತಾನೆ ಆಗಾಗ
ಗುಡಿಯಲ್ಲಿನ ಭಜನೆ ಪ್ರಾರ್ಥನೆ ವಾದ್ಯಗಳ ನಾದ ಆಲಿಸುತ್ತಾನೆ.
ಧಾರ್ಮಿಕ ವಿಧಿ ವಿಧಾನಗಳನ್ನು ತಪ್ಪದೇ ಪಾಲಿಸುತ್ತಾನೆ.
ದೇವರಿಂದ ಬೀಳ್ಕೊಂಡು ದಾರಿಯಲ್ಲಿ ಬರುತ್ತ
ಏನೋ ವಿಚಾರಿಸುತ್ತಲಿರುತ್ತಾನೆ.

ಹೀಗೆ ನಡೆದು ಬರುತ್ತಲಿರುವಾಗ ಅಕಸ್ಮಾತ್
ದೇವರು ಭೇಟಿಯಾದರೆ
ಕತ್ತಲುದಾರಿಯ ಮೂಲೆಯೊಂದರಲ್ಲಿ ಕರೆದೊಯ್ದು
ಹೃದಯ ತೆರೆದು, ದೇವನೆದುರು ಎಲ್ಲ ತೋಡಿಕೊಂಡು
ಒಂದಿಷ್ಟು ನೆರವು ಯಾಚಿಸುವನು

ದೇವರು ದೈವ, ಭಾಗ್ಯದ ಮೇಲೆ
ಎಂದೂ ರೇಗಿದನವಲ್ಲ.
ಹೆಂಡತಿ ಮಕ್ಕಳ ಜವಾಬ್ದಾರಿ ನಿಭಾಯಿಸುತ್ತಲೇ
ದಿನದ ಕೆಲಸದಲ್ಲಿ ತೊಡಗುತ್ತಾನೆ.

ಆದರೆ,
ಇತ್ತಿತ್ತಲಾಗಿ ಆತ ಬದಲಾಗುತ್ತಲಿದ್ದಾನೆ.
ದಿನದಿಂದ ದಿನಕ್ಕೆ ಮೌನಿಯಾಗುತ್ತಲಿದ್ದಾನೆ.
ಮನೆಯಲಿ ಯಾರೊಂದಿಗೂ ಏನೂ ಆಡುತ್ತಿಲ್ಲ

ಹೊಲದ ನೆರೆಯವರೊಂದಿಗೂ ಅಷ್ಟೇ.
ಸುಮ್ಮನೇ ಹಾರುತ್ತ ಚಕ್ರ ಸುತ್ತುತ್ತಲಿರುವ ನೊಣದಂತೆ
ಅಥವಾ
ಬಾಯೊಳಗಿನ ಶಬ್ದಗಳನ್ನೆಲ್ಲಾ ಯಾರೋ
ಕಸಿದಿರುವರೇನೋ ಎಂಬಂತೆ
ದಾರಿಯಲ್ಲಿ ಬರುವಾಗ ತನಗೆ ತಾನೇ ಮಾತಾಡಿಕೊಳ್ಳದೇ
ಪೂರ್ತಿ ಮೂಕನಾಗಿಬಿಟ್ಟಿದ್ದಾನೆ.

ಒಂದು ದಿನ ನಿತ್ಯದಂತೆ
ಬೆಳಗ್ಗೆ ಏಳಲಿಲ್ಲ.
ತಡವಾಯಿತೆಂದು ಹೆಂಡತಿ
ಕೂಗುತ್ತಾಳೆ
ಕೇಳಲಿಲ್ಲ.
ಮತ್ತೆ ಕೂಗುತ್ತಾಳೆ
ಅವನಿಗೆ ತಟ್ಟಲಿಲ್ಲ
ಎದೆ ಡವಗುಟ್ಟಿ ಹತ್ತಿರ ಹೋಗಿ
ಅಲುಗಿಸುತ್ತಾಳೆ
ಮೌನ ಮುರಿಯಲಿಲ್ಲ
ಕಂಣು ತೆರೆಯಲಿಲ್ಲ.
ಇನ್ನೆಂದೂ ಆತ ಏಳ ಎಂಬುದು ಖಾತ್ರಿ ಆಗುತ್ತಲೇ
ಭೂಮಿ ಬಿರಿಯುವ ಹಾಗೆ ಕೂಗುತ್ತಾಳೆ.
ತಲೆ ಚಚ್ಚಿ, ಎದೆ ಹೊಡೆದುಕೊಂಡು ಮಕ್ಕಳನ್ನು ತಬ್ಬಿ
ರೋದಿಸತೊಡಗುತ್ತಾಳೆ,
ತನ್ನ ಆರಾಧ್ಯ ತನ್ನ ತೊರೆದುದ ಕಂಡು.

ಅವಳ ರೋದನೆಗೂ ಮೌನ ಮುರಿಯಲಿಲ್ಲ
ಅವಳ ಪಾಲಿನ ದೇವರು!
ತೊರೆದಿದ್ದ, ಯಾವಾಗ ತೊರೆದಿದ್ದನೋ ಗೊತ್ತಿಲ್ಲ
ಆತ ತನ್ನ ಹೃದಯದುಸಿರು!



ನಡೆಯುತ್ತ ನಡೆಯುತ್ತ ನಾನು
ಬಹು ದೀರ್ಘದಾರಿಯನ್ನು ಕ್ರಮಿಸಿ ಬಂದಿದ್ದೇನೆ.
ಸ್ವರ್ಗ–ನರಕ
ದೇವ–ದಾನವ
ನದಿ–ನಾಲೆ
ಗುಡ್ಡ–ಪರ್ವತ
ಪಾತಾಳ ಸಹಿತ ದಟ್ಟ ಕಾಡನ್ನೂ ದಾಟಿ ಬಂದಿದ್ದೇನೆ.
ಆದರೂ ಎಂದೂ ದಣಿವೆನಿಸಿರಲಿಲ್ಲ.
ನಡೆದ ಪಾದಗಳಲ್ಲಿ ರಕ್ತ ಒಸರಲಿಲ್ಲ
ಅಂದರೆ–
ದಾರಿಯಲ್ಲಿನ ನೆರಳೂಡುವ ದಟ್ಟ ಮರಗಳು
ನನ್ನ ಕೈ ಮಾಡಿ ಕರೆದವೆಂದೇನಲ್ಲ
ಅಥವಾ
ಜಾದೂಗಾರ ಕ್ಷಿತಿಜ ಬಾಲ್ಯದ ಬಯೋಸ್ಕೋಪಿನಲ್ಲಿ
ಹೊಸ ಹೊಸ ದೃಶ್ಯಗಳನ್ನು ತೆರೆದು ತೋರಿಸುತ್ತ

ಕಿವಿಯಲ್ಲಿ–
"ನೋಡು ಮರೀ ನೋಡಲ್ಲಿ ಹನ್ನೆರಡು ಮೊಳದ ರಾಣಿ
ಹದಿಮೂರು ಮೊಳದ ಸೀರೆಯುಟ್ಟು
ಹೇಗೆ ವೈನಾಗಿ ಮಲಗಿದ್ದಾಳೆ ನೋಡು" ಎಂದು ಹೇಳಲಿಲ್ಲ.
ನಾನು ನಿಶ್ಚಿತವಾಗಿ ಹೇಳಬಲ್ಲೆ–
ನಾನು ಹುಟ್ಟಿದಾಗ ನನ್ನ ಜನ್ಮಲಗ್ನದಲ್ಲಿ
ಕತ್ತಲರಾತ್ರಿ! ಗಾಢ ಅಂಧಕಾರ!
ಆರೋಗ್ಯವೂ ಸರಿ ಇರಲಿಲ್ಲ.
ಎಲ್ಲ ದೇವತೆಗಳೂ ಮಲಗಿದ್ದರೇನೋ
ಗಾಢ ನಿದ್ರೆಯಲ್ಲಿ.
ಅಂತೆ ನನ್ನ ಅವ್ವನ ಹೊರತು ಇನ್ನಾರೂ ಇರಲಿಲ್ಲ
ನನ್ನ ಆಶೀರ್ವದಿಸಲು!
ಗೋಡೆಯ ಮೇಲೆ ನರ್ತಿಸುತ್ತಲಿದ್ದ ನೆರಳು
ಆಕಳಿಸುತ್ತಲಿದ್ದ ಶೂನ್ಯತೆ
ಕಾರ್ಗತ್ತಲೆ ಹೊರತು ಮತ್ತೇನೂ ಇರಲಿಲ್ಲ
ಅಮ್ಮನ ಸುತ್ತ.

ನಂತರ ಸಮಯದ ನದಿ ಬಹಳಷ್ಟು ಹರಿದು ಹೋಯಿತು.
ನಾನು ದಂಡೆಗುಂಟ ನಡೆಯುತ್ತಲಿದ್ದೆ.
ಸ್ಕೂಲಿನ ಪಾಟಿಚೀಲ ಹಿಡಿದು
ಪಾಟಿಯ ಮೇಲೆ ಬರೆದ ಬ್ರಹ್ಮ-ವಿಷ್ಣು-ಮಹೇಶ್ವರರ
ಚಿತ್ರಗಳನ್ನು ಅಳಿಸಿ ಹಾಕಿ ಮನೆಗೆ ಬಂದೆ.

ಒಂದಲ್ಲ ನಾನಾತರದ ಕೆಲಸ ಮಾಡಿದೆ.
ಸಾವಿರಾರು ಪುಟಗಳ ಮೇಲೆ
ಅದೆಷ್ಟು ಅಂಕು-ಡೊಂಕು ಗೆರೆಗಳನ್ನೆಳೆದೆನೋ!
ಠರಾವರಿ ಕಚೇರಿಗಳಲ್ಲಿ
ಹೋಟಲುಗಳ ರಿಜಿಸ್ಟರುಗಳಲ್ಲಿ
ಅಸಂಖ್ಯ ಪತ್ರಗಳಲ್ಲಿ
ದಫ್ತರುಗಳ ದಸ್ತಾವೇಜುಗಳಲ್ಲಿ

ನನ್ನ ಸಹಿ, ಹಸ್ತಾಕ್ಷರಗಳು ಕಳೆದುಹೋದವು!
ಒಮ್ಮೊಮ್ಮೆ ಭಿನ್ನಭಿನ್ನ ಅಕ್ಷರಗಳ ಹೂಗಳಿಗಾಗಿ
ನನ್ನ ಅಳು-ನಗುವಿನ ದಾರಗಳಲ್ಲಿ
ಕವಿತೆಗಳ ಮಾಲೆ ಹೆಣೆದೆ.

2

ಈಗ ಈವರೆಗೆ ಸಾಗಿಬಂದ ಜೀವನದ ಹಿಸಾಬು ಕಿತಾಬು
ಮಾಡುವಾಗ ನೆನಪಾಗುತ್ತಿದೆ
ನಾನು ಅದೆಷ್ಟು ಬಾರಿ ದಾದಿ ಬಾಬೂಜಿಯ
ಹೆಗಲಿಗಂಟಿಕೊಂಡಿದ್ದೆ.

ಬಂಣ ಬಂಣದ ಚಿಟ್ಟೆಗಳು
ಚಿತ್ರೋತ್ಪಲಾ ನದಿಯ ಪುಟ್ಟ ಪುಟ್ಟ ಅಲೆಗಳು
ಕಾಮನಬಿಲ್ಲು ನಾನಾತರದ ಕನಸುಗಳೊಂದಿಗೆ
ಎಲ್ಲ ದುಃಖ, ಎಲ್ಲ ಗಾಯಗಳಲ್ಲದೆ
ನನ್ನ ಪತ್ನಿ ಮಕ್ಕಳಾದಿಯಾಗಿ ಎಲ್ಲರೂ ಎಲ್ಲವೂ
ಹೃದಯದ ಮೂಲೆಯಲ್ಲಿ ಚಿತ್ರವತ್ತಾಗಿ ಅಂಕಿತಗೊಂಡಾಗಿದೆ.

ನನ್ನ ಮಗ-ಮಗಳು ಅಳು-ನಗು
ಉಳಿದ ಸಂಬಂಧಿಗಳ
ಸ್ನೇಹ-ಪ್ರೀತಿ, ಹಟ-ಹುಡುಗಾಟ
ಚೆಲ್ಲಾಟ, ಕೀಟಲೆ ಕಿಲಾಡಿತನ ಇತ್ಯಾದಿ ಇತ್ಯಾದಿ
ಆಷಾಢದ ಅಮೃತಧಾರೆಯಂತೆ ಸುರಿದು
ಸಂತೋಷದ ಪೂರವನ್ನೇ ಹರಿಸಿದವು.
ಇವೆಲ್ಲವುಗಳೊಂದಿಗೆ
ದುಃಸ್ವಪ್ನ, ಆಶಾಭಂಗ
ನಿರಾಸೆ, ನೀರವ, ಶೂನ್ಯತೆ
ಬೂದಿ-ಧೂಳು, ಕಹಿ ಎಲ್ಲ
ನನ್ನ ಎದೆ ಏರಿ ಸವಾರಿ ಮಾಡಿದ್ದೂ ಉಂಟು
ಈಗಲೂ ನನ್ನ ಗ್ರಾಮದ ನದಿಯ ಉಸುಕಿನ ಮೇಲೆ

ಬಾಲ್ಯದಲ್ಲಿ ಕಟ್ಟಿದ ಗುಬ್ಬಿಮನೆ ನನ್ನನ್ನು ಕರೆಯುತ್ತಲಿದೆ.
ಒಮ್ಮೊಮ್ಮೆ ಸೂರ್ಯದೇವ
ಪಶ್ಚಿಮದ ಆಕಾಶವನ್ನೆಲ್ಲ ಆವರಿಸಿ ಹರಡಿದ
ಗುಲಾಲನ್ನೆಲ್ಲ ಗುಡಿಸಿ ಹೊರಟು ಹೋಗುವಾಗ
ಸಹಾ ನನ್ನನ್ನು ಯಾರೋ ಕೂಗಿ
ಕರೆದಂತಾಗುತ್ತದೆ
ದೂರ ಹೊಲಗಳ ಆಚೆ ಕ್ಷಿತಿಜ ಕಿನಾರೆ!

3
ಪ್ರತಿವರುಷ
ಮುಖದಲ್ಲಿ ಮುಗುಳುನಗೆ ಹೊತ್ತು
ಬಟ್ಟಲಲ್ಲಿ ವಿಷ-ಪಿಯೂಷ
ಹೂವು-ಹಣ್ಣು-ದೀಪ ಹಿಡಿದು
ಬರುತ್ತಿದೆ ನನ್ನ ಜನ್ಮದಿನ!

ಪದ್ಯದ ಅರ್ಧಭಾಗದ ನೆನಪನ್ನು
ಹೇಳುತ್ತವೆ ಪದಗಳು.
ಒಂದಿಷ್ಟು ನಗುತ್ತ ನನ್ನೊಂದಿಗೆ
ಸರಸವಾಡುತ್ತವೆ ನೆನಪುಗಳು!
ನಂತರ ಸಂಜೆಯಾಗುತ್ತದೆ
ರಾತ್ರಿ ಆವರಿಸುತ್ತದೆ.
ಆರೋಪಿ ತರ ಬೀಳ್ಕೊಡುಗೆ ಬೇಡುತ್ತ
ನನಗೆ ಹೇಳುತ್ತದೆ-
ನೀನು ಇಲ್ಲೇ ನಿಲ್ಲು.
ನಾನು ಹೊರಡುತ್ತೇನೆ.
ಎಲ್ಲೂ ಹೋಗದಿರು
ಮತ್ತೆ ನಾ ಬರುವದು ವರುಷದ ನಂತರವೇ
ಎಂಬುದು ನಿನಗೆ ಗೊತ್ತು!



ಈ ಕಿಟಕಿಗಳ ಮೂಲಕ ಆಚೆ ಮನೆಯ ಬದುಕಿನ ದೃಶ್ಯಗಳನ್ನು ಕಾಣಬಹುದು. ಅದರ ಚಿತ್ರವು ಕೆಲವು ಸ್ಪಷ್ಟ ಹಾಗೂ ಕೆಲವು ಅಸ್ಪಷ್ಟ ರೇಖೆಗಳಲ್ಲಿ ಜಿಡಿಸಲಾಗಿದೆ.

ಒಂದು ದಿನ. ಓದುತ್ತಾ ಕುಳಿತಿದ್ದಾಗ. ವನಮಾಲಿಯ ದೃಷ್ಟಿ ಆ ಕಡೆ ಹೋಯಿತು.

ಆಗ ಆ ಮನೆಯ ಪರಿಚಿತ ಕ್ಯಾನ್‌ವಾಸಿನ ಮೇಲೆ ಇಬ್ಬರು ಅಪರಿಚಿತರು ಕಂಡುಬಂದರು. ಒಬ್ಬಳು ಸ್ವಲ್ಪ ವಯಸ್ಸಾದ ವಿಧವೆ, ಇನ್ನೊಬ್ಬಳು ಹದಿನಾರೋ ಹದಿನೇಳೋ ವಯಸ್ಸಿನ ಒಬ್ಬ ಹುಡುಗಿ.

ಆ ವೃದ್ಧೆ ಕಿಟಕಿಯ ಬಳಿ ಕುಳಿತು ಆ ಹುಡುಗಿಯ ತಲೆ ಬಾಚಿ ಜಡೆ ಹಾಕುತ್ತಿದ್ದಳು ಮತ್ತು ಹುಡುಗಿಯ ಕೆನ್ನೆಯ ಮೇಲೆ ಕಣ್ಣೀರು ಹರಿಯುತ್ತಿತ್ತು.

ಇನ್ನೊಂದು ದಿನ ಆ ಹುಡುಗಿಗೆ ಜಡೆ ಹಾಕಿದ್ದ ಆ ಹೆಂಗಸು ಅಲ್ಲಿ ಇದ್ದಿಲ್ಲ. ಸೂರ್ಯಾಸ್ತದ ಸಮಯದಲ್ಲಿ ಆ ಹುಡುಗಿಯು ಫ್ರೇಮು ಹಾಕಿದ್ದ ಒಂದು ಹಳೆಯ ಭಾವಚಿತ್ರವನ್ನು ನೋಡುತ್ತಾ ಕುಳಿತಿದ್ದಳು ಮತ್ತು ಸೂರ್ಯನ ಕೊನೆಯ ಬೆಳಕಲ್ಲಿ ಆ ಫ್ರೇಮನ್ನು ತನ್ನ ಸೀರೆಯ ಅಂಚಿನಿಂದ ಒರೆಸುತ್ತಿದ್ದಳು.

ಆಗ ಕಿಟಕಿಗಳ ಸಂದುಗಳ ಮೂಲಕ ಅವಳ ದೈನಂದಿನ ಕೆಲಸವನ್ನು ಕಾಣಬಹುದಿತ್ತು. ತನ್ನ ತೊಡೆಯ ಮೇಲಿದ್ದ ಬುಟ್ಟಿಯಲ್ಲಿ ಅವಳು ಅವರೆಯನ್ನು ವಿಂಗಡಿಸುತ್ತಿದ್ದುದು; ಅಡಿಕೆ ಸುಲಿಯುತ್ತಿದ್ದುದು; ಸ್ನಾನವಾದ ಮೇಲೆ ಕೂದಲನ್ನು ಎಡಗೈಯಿಂದ ಕೊಡವಿ ಒಣಗಿಸುತ್ತಿದ್ದುದು; ವರಾಂಡದ ಕಂಬಿಗಳ ಮೇಲೆ ತಡಿಗಳನ್ನು ಬಿಸಿಲಿಗೆ ಹಾಕುತ್ತಿದ್ದುದು; ಇತ್ಯಾದಿ.

ಮಧ್ಯಾಹ್ನದ ವೇಳೆ ಗಂಡಸರು ಆಫೀಸಿನಲ್ಲಿರುತ್ತಿದ್ದರು. ಕೆಲವು ಹೆಣ್ಣುಮಕ್ಕಳು ಮಧ್ಯಾಹ್ನದ ಲಘು ನಿದ್ರೆಯಲ್ಲಿರುತ್ತಿದ್ದರು. ಇನ್ನು ಕೆಲವರು ಇಸ್ಪೀಟಾಟ ಆಡುತ್ತಿದ್ದರು. ಮಾಳಿಗೆ ಮೇಲೆ ಪಾರಿವಾಳಗಳ ಗೂಡುಗಳಲ್ಲಿ ಗುಟುರು ಧ್ವನಿಗಳು ಕಡಿಮೆಯಾಗುತ್ತಿದ್ದವು.

ಆ ಹೊತ್ತಿನಲ್ಲಿ ಆ ಹುಡುಗಿಯು ಕಾಲು ಚಾಚಿಕೊಂಡು ಮೇಲಟ್ಟದ ಕೋಣೆಯಲ್ಲಿ ಓದುತ್ತಾ ಕುಳಿತಿರುತ್ತಿದ್ದಳು. ಕೆಲವೊಮ್ಮೆ ಪುಸ್ತಕವನ್ನು ಒತ್ತಿಕೊಳ್ಳಲಿಟ್ಟುಕೊಂಡು ಪತ್ರಗಳನ್ನು ಬರೆಯುತ್ತಿದ್ದಳು. ಕೆದರಿದ ಅವಳ ಕೂದಲು ಹಣೆಯ ಮೇಲೆ ಬಂದು ನಿಂತಿರುತ್ತಿತ್ತು ಮತ್ತು ಬರೆಯುವಾಗ ಅವಳ ಬೆರಳುಗಳು ಪತ್ರಗಳ ಜೊತೆಗೆ ಪಿಸುಮಾತಾಡುತ್ತಿದ್ದವು.

ಒಂದು ದಿನ ಏನೋ ತಪ್ಪಾಯಿತು. ಆ ದಿನ ಪತ್ರವನ್ನು ಅರ್ಧಂಬರ್ಧ ಬರೆದು ಪೆನ್ನಿನ ಮೇಲೆ ಸುಮ್ಮನೆ ಕೈಯಾಡಿಸುತ್ತಾ ಕೂತಿದ್ದಳು. ಆಗ ಗೋಡೆಯ ಕಪೋತದ ಮೇಲೆ ಒಂದು ಕಾಗೆಯು ಅರ್ಧ ತಿಂದು ಬಿಟ್ಟಿದ್ದ ಮಾವಿನ ಹಣ್ಣಿನ ವಾಟೆಯನ್ನು ಕುಟುಕುತ್ತಾ ಕುಳಿತಿತ್ತು.

ಆಗ ಮೆಲ್ಲಗೆ ಮೋಡ ದಟ್ಟೈಸಿ ಅಮಾವಾಸ್ಯೆಯ ಅನ್ಯಮನಸ್ಕ ಚಂದ್ರ ಹಿಂದೆ ನಿಂತಿದ್ದಂತಿತ್ತು.

ಆಗ ಅಲ್ಲಿಗೆ ಬಂದ ಹೆಂಗಸು ಒಬ್ಬ ಮಧ್ಯ ವಯಸ್ಕಳು. ಅವಳ ದಪ್ಪ ಮಣಿಕಟ್ಟಿನ ಮೇಲೊಂದು ದಪ್ಪ ಕಡಗವಿತ್ತು. ಅವಳು ಬೈತಲೆಯಲ್ಲಿ ದೊಡ್ಡದಾಗಿ ಕುಂಕುಮವಿಟ್ಟಿದ್ದಳು.

ಅವಳು ಆ ಹುಡುಗಿಯ ತೊಡೆಯ ಮೇಲಿದ್ದ ಅಪೂರ್ಣ ಪತ್ರವನ್ನು ಕಸಿದುಕೊಂಡಳು. ಅಷ್ಟುಹೊತ್ತಿಗೆ ಸರಿಯಾಗಿ ಒಂದು ಗಿಡುಗ ಇದ್ದಕ್ಕಿದ್ದ ಹಾಗೆ ಒಂದು ಪಾರಿವಾಳದ ಮೇಲೆರಗಿತು.

ಮಾಳಿಗೆಯ ಮೇಲೆ ಆ ಹುಡುಗಿ ಮತ್ತೆ ಕಂಡುಬರಲಿಲ್ಲ. ಕೆಲವೊಮ್ಮೆ ರಾತ್ರಿ, ಕೆಲವೊಮ್ಮೆ ಬೆಳಗ್ಗೆ ಅಥವಾ ಸಂಜೆ, ಆ ಮನೆಯ ಅಸ್ಥಿಭಾರವು ಭೂಕಂಪದಿಂದ ನಡುಗುತ್ತಿದ್ದಂತೆ ಕಾಣಿಸುತ್ತಿತ್ತು.

ಕಿಟಕಿಗಳ ಸಂದುಗಳಿಂದ ನೋಡಿದಾಗ ರಸ್ತೆಯಾಚೆಯ ಆ ಮನೆಯಲ್ಲಿ ಅವರೆಗಳ ವಿಂಗಡಣೆ ಮತ್ತು ಅಡಿಕೆ ಸುಲಿಯುವಿಕೆಯ ದೃಶ್ಯ ಕಂಡುಬರುತ್ತಿತ್ತು; ಮತ್ತು ಆ ಹುಡುಗಿ ಕಾಲಕಾಲಕ್ಕೆ ಒಂದು ಹಾಲಿನ ಪಾತ್ರೆಯನ್ನು ಅಂಗಳದಲ್ಲಿನ ನಲ್ಲಿಯ ಬಳಿ ಕೊಂಡೊಯ್ಯುತ್ತಿದ್ದುದನ್ನು ಕಾಣಬಹುದಾಗಿತ್ತು.

ಹೀಗೆ ಕೆಲವು ದಿನಗಳು ಕಳೆದವು. ಕಾರ್ತೀಕ ಮಾಸದ ಒಂದು ಸಂಜೆ ಮಾಳಿಗೆಯ ಮೇಲೆ ಮಣ್ಣಿನ ಹಣತೆಯಲ್ಲಿ ದೀಪ ಉರಿಯುತ್ತಿತ್ತು ಮತ್ತು ಕೊಟ್ಟಿಗೆಯ ಮೇಲಿಂದ ಏಳುತ್ತಿದ್ದ ಹೊಗೆಯು ಹೆಬ್ಬಾವಿನಂತೆ ಮೈ ತಿರುಚುತ್ತಾ ಆಕಾಶದ ಕತ್ತನ್ನು ಹಿಚುಕುತ್ತಿದ್ದಂತೆ ಭಾಸವಾಗುತ್ತಿತ್ತು.

ವನಮಾಲಿ ಹೊರಗಡೆಯಿಂದ ಒಳಗೆ ಬಂದ ಮತ್ತು ಅವನು ಕಿಟಕಿಯನ್ನು ತೆರೆದಾಕ್ಷಣ ಮಾಳಿಗೆಯ ಮೇಲೆ ಕೈಮುಗಿದುಕೊಂಡು ನಿಂತಿದ್ದ ಆ ಹುಡುಗಿಯನ್ನು ಕಂಡನು. ರಸ್ತೆಯ ಮೂಲೆಯಲ್ಲಿದ್ದ ಮಲ್ಲಿಕ್ ಕುಟುಂಬದ ದೇವಸ್ಥಾನದಲ್ಲಿ ದೇವನೆದುರು ದೀಪಗಳನ್ನು ಹಚ್ಚುತ್ತಿದ್ದರು ಮತ್ತು ಗಂಟೆ ಬಾರಿಸುತ್ತಿದ್ದರು. ಸ್ವಲ್ಪ ಹೊತ್ತಿನ ನಂತರ ಅವಳು ದೀರ್ಘ ದಂಡ ನಮಸ್ಕಾರ ಮಾಡಿದಳು. ಪದೇ ಪದೇ ತಲೆಯನ್ನು ನೆಲಕ್ಕೆ ತಾಗಿಸುತ್ತಾ, ತಲೆ ಬಾಗಿಸುತ್ತಾ ಭಕ್ತಿಯಿಂದ ನಮಸ್ಕರಿಸುತ್ತಿದ್ದಳು. ಅದರ ನಂತರ ಅವಳು ಕಂಡು ಬರಲಿಲ್ಲ.

ಅವತ್ತು ವನಮಾಲಿ ಒಂದು ಪತ್ರ ಬರೆಯಲಿಕ್ಕೆಂದು ಕೆಳಗೆ ಹೋದ. ಬರೆದು ಮುಗಿಸಿದ ನಂತರ ಅದನ್ನು ಅಂಚೆಗೆ ಹಾಕಲು ಸ್ವತಃ ತಾನೇ ಹೋದ.

ಅವತ್ತಿನ ರಾತ್ರಿ ಅವನು ಹಾಸಿಗೆಯಲ್ಲಿ ಮಲಗಿದ್ದಾಗ ಆ ಪತ್ರ ಬಟವಾಡೆಯಾಗದೇ ಇದ್ದರೆ ಒಳ್ಳೆಯದು ಎಂದುಕೊಂಡ. ಅವನು ಬೆಳಗ್ಗೆ ಎದ್ದಾಗ ಆ ಮನೆಯ ಕಡೆ ನೋಡಲು ಅವನ ಕೈಲಾಗಲಿಲ್ಲ.

ಅವನು ವಾಪಸ್ಸು ಬಂದದ್ದು ಕಾಲೇಜಿನ ಕ್ಲಾಸುಗಳು ಶುರುವಾದಾಗ. ಆಗ ಸಾಯಂಕಾಲವಾಗಿತ್ತು. ಆಚೆ ಮನೆ ಪೂರ್ತಿ ಮುಚ್ಚಲಾಗಿತ್ತು, ಪೂರ್ತಿ ಕತ್ತಲಾಗಿತ್ತು. ಎಲ್ಲರೂ ಎಲ್ಲಿ ಹೋಗಿದ್ದರೋ?

ವನಮಾಲಿ ತನ್ನಷ್ಟಕ್ಕೆ ಹೇಳಿಕೊಂಡ "ಅದು ಹೋಗಲಿ ಬಿಡು, ಹೋದರೂ ಒಳ್ಳೆಯದೇ."

ಅವನು ತನ್ನ ಕೋಣೆಯೊಳ ಹೋದ ಮತ್ತು ಡೆಸ್ಕಿನ ಮೇಲೆ ಪತ್ರಗಳ ಒಂದು ಕಟ್ಟನ್ನು ಕಂಡ. ಆ ಪತ್ರರಾಶಿಯ ಬುಡದಲ್ಲಿ ಹೆಂಗಸೊಬ್ಬಳ ಕೈಬರಹದಲ್ಲಿದ್ದ, ಅಪರಿಚಿತ ಕೈ ಬರಹದ ಮತ್ತು ಪಕ್ಕದ ಪೋಸ್ಟಾಫೀಸಿನ ಸೀಲಿದ್ದ ಒಂದು ಪತ್ರವಿತ್ತು.

ಅವನು ಆ ಪತ್ರವನ್ನು ಕೈಯಲ್ಲಿ ಹಿಡಿದುಕೊಂಡು ಕೂತ. ಆ ಲಕೋಟೆ ಇನ್ನೂ ಹಾಗೇ ಇತ್ತು. ತೆರೆದಿರಲಿಲ್ಲ. ಅವನು ಅದನ್ನು ಕೇವಲ ಬೆಳಕಿಗೆ ಹಿಡಿದು ನೋಡಿದ. ಪತ್ರದೊಳಗಿನ ಬರಹವು ಕಿಟಕಿಯ ಮೂಲಕ ಕಾಣಿಸುತ್ತಿದ್ದ ಆಚೆ ಮನೆಯಷ್ಟೆ ಅಸ್ಪಷ್ಟವಾಗಿತ್ತು.

ಒಮ್ಮೆ, ಪತ್ರವನ್ನು ಒಡೆದು ನೋಡೋಣವೆಂದುಕೊಂಡ. ಆದರೆ ನಂತರ ಅವನು ಅದನ್ನು ಒಂದು ಪೆಟ್ಟಿಗೆಯಲ್ಲಿಟ್ಟು ಬೀಗ ಹಾಕಿ, ಮನಸ್ಸಿನಲ್ಲೇ ಅಂದುಕೊಂಡ "ನಾನು ಆ ಪತ್ರವನ್ನು ಯಾವತ್ತೂ ಒಡೆದು ನೋಡಲ್ಲ".





ಏಕೋಫೆಮಿನಿಸಂ

ವಿವಿಧ ಮೂಲಗಳಿಂದ :
ಕನ್ನಡಕ್ಕೆ : ಆರ್.ವಿಜಯರಾಘವನ್
ಕೆ.ಸಿ.ಶಿವಾರೆಡ್ಡಿ

ಏಕೋಫೆಮಿನಿಸಂ ಎಂಬ ಪ್ರಾಚೀನ ವಿವೇಕಕ್ಕೆ ಹೊಸ ಹೆಸರು ನೀಡಿದ ಚಳುವಳಿಯು ಫೆಮಿನಿಸಂ, ಶಾಂತಿ, ಪರಿಸರ ಮುಂತಾದ ಬೇರೆ ಬೇರೆ ಸಾಮಾಜಿಕ ಚಳುವಳಿಗಳಿಂದ 1970ರ ದಶಕದ ಕೊನೆಗೆ ಮತ್ತು 1980ರ ದಶಕದ ಮೊದಲಲ್ಲಿ ಹುಟ್ಟಿತು. ಈ ಹೆಸರನ್ನು ಮೊದಲಿಗೆ ಬಳಸಿದ್ದು ಫ್ರಾಂಚಾಯ್ಸ್ ಡೀವನ್. ಆದರೂ ಅದು ಖ್ಯಾತಿಗೆ ಬಂದದ್ದು ಮತ್ತೆ ಮತ್ತೆ ನಡೆದ ಪರಿಸರ ದುರಂತಗಳಿಗೆ ಕಾರಣವಾಗಿದ್ದ ಪರಿಸರ ವಿನಾಶದ ವಿಚಾರದಲ್ಲಿ ನಡೆದ ಹಲವಾರು ಪ್ರತಿಭಟನೆಗಳು ಮತ್ತು ಚಟುವಟಿಕೆಗಳಿಂದಾಗಿ. ಅಮೆರಿಕಾದ ಥ್ರೀ ಮೈಲ್ ಐಲ್ಯಾಂಡ್ ದ್ವೀಪ ಪರಮಾಣು ದುರಂತದಲ್ಲಿ ಕರಗಿಹೋದ ನಂತರ ಅಮೆರಿಕಾದ ಅಸಂಖ್ಯಾತ ಮಹಿಳೆಯರು ಒಟ್ಟಾಗಿ 1980ರ ಮಾರ್ಚ್ ತಿಂಗಳಿನಲ್ಲಿ Women and Life on Earth : A Conference on Eco Feminism in Eighties-ಎಂಬ ಹೆಸರಿನ ಏಕೋಫೆಮಿನಿಸ್ಟ್ ಸಮಾವೇಶವನ್ನು ನಡೆಸುವುದಕ್ಕೆ ಕಾರಣವಾಯಿತು. ಆಂಗ್‌ಹರ್ಸ್ಟ್‌ನಲ್ಲಿ ನಡೆದ ಆ ಸಮಾವೇಶದಲ್ಲಿ ಸ್ತ್ರೀವಾದ, ಮಿಲಿಟರೀಕರಣ, ಚಿಕಿತ್ಸೆ ಮತ್ತು ಪರಿಸರಗಳ ನಡುವಣ ಸಂಬಂಧಗಳನ್ನು ಅನಾವರಣಗೊಳಿಸುವ ಚರ್ಚೆಗಳಾದವು. ಸಮಾವೇಶದ ಆಯೋಜಕರಲ್ಲಿ ಒಬ್ಬರಾದ

ನೇಸ್ಟ್ರಾಕಿಂಗ್ ಪ್ರಕಾರ "ಎಕೋಫೆಮಿನಿಸಂ ಅಂದರೆ ಸಿದ್ಧಾಂತ ಮತ್ತು ಅನುಷ್ಠಾನಗಳು ಪರಸ್ಪರ ಸಂಪರ್ಕ ಹೊಂದಿರಬೇಕು ಮತ್ತು ಸಮಗ್ರವಾಗಿರಬೇಕು ಎಂದು. ಇದು ಬದುಕಿರುವ ಎಲ್ಲ ಜೀವಿಗಳ ವಿಶೇಷ ಶಕ್ತಿ ಮತ್ತು ಸಮಗ್ರತೆಯನ್ನು ಪ್ರತಿಪಾದಿಸುತ್ತದೆ. ನಮಗೆ ಸಮುದಾಯದ ನೀರಿನ ಅಗತ್ಯದ ಜೊತೆಗೇ ಬಸವನಹುಳು ತಿನ್ನುವ ಹಕ್ಕಿಯೂ ಬೇಕು. ಟುನಾ ಮೀನಿನ ಮೇಲೆ ಆಸೆಯೂ ಬೇಕು, ಡಾಲ್ಫಿನ್‌ಗಳೂ ಬೇಕು. ನಾವು ಹೆಣ್ಣೆಂದು ಗುರುತಿಸಿಕೊಂಡ ಚಳುವಳಿಗಾರರು. ಈ ವಿನಾಶದ ಯುಗದಲ್ಲಿ ನಮಗೆ ವಿಶೇಷ ಕರ್ತವ್ಯಗಳು ಇವೆ ಎಂದು ನಾವು ನಂಬುತ್ತೇವೆ. ಕಾರ್ಪೊರೇಟ್ ದಳಪತಿಗಳು ಭೂಮಿಯನ್ನು, ಅವಳ ಸಮವಸ್ತ್ರವನ್ನು ನುಂಗಿಹಾಕುತ್ತಿದ್ದಾರೆ. ಮಿಲಿಟರಿಗಳು ಪರಮಾಣು ಶಸ್ತ್ರಾಸ್ತ್ರಗಳನ್ನು ಬಳಸಿ ಜೀವಜಾಲವನ್ನು ಹೊಸಕಿಹಾಕುವರೆಂಬ ಭಯ ಭೂತಾಕಾರವಾಗಿ ಎದುರು ನಿಂತಿದೆ. ಇವನ್ನು ಸ್ತ್ರೀ ಸಂಕಟಗಳು ಎಂದು ನಾವು ಭಾವಿಸುತ್ತೇವೆ. ಪ್ರಚಲಿತ ಪುರುಷ ಪ್ರಧಾನ ಮನಸ್ಥಿತಿ ನಮಗೆ ನಮ್ಮ ದೇಹದ ಮೇಲೆ, ನಮ್ಮ ಲೈಂಗಿಕ ಜೀವನದ ಮೇಲೆ ಇರುವ ಹಕ್ಕನ್ನು ಕಬಳಿಸುವುದಾಗಿದೆ. ದಮನದ ಕೆಲವು ವ್ಯವಸ್ಥೆಗಳನ್ನು, ಪ್ರಭುತ್ವದ ಶಕ್ತಿಯನ್ನು ಬಳಸಿಕೊಂಡು ಅದು ತನ್ನ ಉದ್ದೇಶವನ್ನು ಸಾಧಿಸುವುದು. "ಎಲ್ಲೆಲ್ಲಿ ಮಹಿಳೆಯರು ಪರಿಸರ ವಿನಾಶವನ್ನು ಮತ್ತು ಜೀವರಾಶಿಗಳನ್ನು ಹೊಸಕಿಹಾಕುವ ಪರಮಾಣು ಬಳಕೆಯನ್ನು ಮುಂಗಾಣುವರೋ ಅಲ್ಲೆಲ್ಲ ಮಹಿಳೆಯರ, ಪರಿಸರದ, ಮುಗ್ಧರ ಮೇಲಿನ ಹಿಂಸೆಗೂ ಪುರುಷ ಶ್ರೇಷ್ಠತೆಯ ನಂಬಿಕೆಗೂ ಇರುವ ಒಳ ಸಂಬಂಧ ಅವರ ಅರಿವಿಗೆ ಬರುತ್ತದೆ ಎಂದು ಪುರುಷಪ್ರಾಧಾನ್ಯವನ್ನು ತಿರಸ್ಕರಿಸಿದಾಗಷ್ಟೆ ನಾವು ಮುಂದಿನ ಜನಾಂಗಗಳಿಗೆ, ಇಲ್ಲಿನ ಜೀವಜಾಲಕ್ಕೆ ಮತ್ತು ಈ ಭೂಮಿಗೆ ನಿಷ್ಠರಾಗಿದ್ದೇವೆ ಎಂಬ ಭಾವಸಿದ್ಧಿಯಾಗುವುದು. ನಮಗೆ ಇದರ ಆಳವಾದ ಹಾಗೂ ನಿರ್ದಿಷ್ಟವಾದ ತಿಳುವಳಿಕೆ ಇದೆ. ಇದು ಹೆಣ್ಣಾಗಿ ನಮಗಿರುವ ಅನುಭವಗಳು ಹಾಗೂ ಸ್ವಭಾವಗಳಿಂದ ಲಭ್ಯವಾದ ತಿಳುವಳಿಕೆ"–ಎಂದು ಬರೆದರು.

ಪರಿಸರದ ಮೇಲೆ ಕಾರ್ಪೊರೇಟ್ ದಳಪತಿಗಳು, ಮಿಲಿಟರಿ ದಳಪತಿಗಳು ನಡೆಸಿದ ಆಕ್ರಮಣವನ್ನು ನಮ್ಮ ಸ್ತ್ರೀದೇಹದ ಮೇಲೆ ನಡೆದ ಭೌತಿಕವಾದ ಆಕ್ರಮಣವೆಂದೇ ಭಾವಿಸಲಾಗುತ್ತದೆ. ಇಂಥ ಚಳುವಳಿಗಳಲ್ಲಿ ಭಾಗವಹಿಸಿದ ಹಲವಾರು ಮಹಿಳೆಯರು ಇದನ್ನೇ ವ್ಯಕ್ತಪಡಿಸಿದರು. ಸೆವೇಸೋ ವಿಷಪ್ರಾಶನದ ವಿರುದ್ಧ ಪ್ರತಿಭಟಿಸಿದ ಸ್ವಿಟ್ಜರ್‌ಲ್ಯಾಂಡಿನ ಮಹಿಳೆಯರು ಬರೆದದ್ದು ಇದು: "ನಾವು ನಮ್ಮ ದೇಹಗಳನ್ನು ಇನ್ನಷ್ಟು ನಿಯಂತ್ರಿಸಿಕೊಳ್ಳುವುದರ ಬಗ್ಗೆ ಯೋಚಿಸಬೇಕು. ಏಕೆಂದರೆ ಬರೀ ಪುರುಷರು ಹಾಗೂ ವೈದ್ಯರಷ್ಟೇ ನಮ್ಮ ದೇಹಗಳ ಬಗ್ಗೆ ಆಕ್ರಮಣಕಾರಿಯಾಗಿರುತ್ತಾರೆ ಎಂದಲ್ಲ, ಬಹುರಾಷ್ಟ್ರೀಯ ಕಂಪೆನಿಗಳೂ ಅವರನ್ನು ಕೂಡಿಕೊಂಡಿವೆ. ಮಹಿಳೆಯರ ದೇಹದ ಮೇಲೆ, ಮಕ್ಕಳ ಮೇಲೆ ಸೆವೇಸೋನಲ್ಲಿನ ಲಾ ರೋಶ್ ಜಿವಾವ್ದಾನ್‌ನಲ್ಲಿ ನಡೆದ ಆಕ್ರಮಣಗಳಿಗಿಂತ ಬೇರೆ ನಿದರ್ಶನ ಬೇಕೆ? 1976ರ ಜುಲೈ 10ರಿಂದ ಅವರ

ಬದುಕುಗಳನ್ನು ಅಪಘಾತ ಮತ್ತು ದೀರ್ಘಕಾಲ ಉಳಿದುಬಿಡುವ ಪರಿಣಾಮಗಳು ಇಡಿಯಾಗಿ ಆವರಿಸಿಕೊಂಡುಬಿಟ್ಟವೆ.

1948ರ ಡಿಸೆಂಬರ್ 2-3ರ ರಾತ್ರಿ 40 ಮೆಟ್ರಿಕ್ ಟನ್‌ಗಳಷ್ಟು ವಿಷಾನಿಲ ಭೋಪಾಲದಲ್ಲಿದ್ದ ಯೂನಿಯನ್ ಕಾರ್ಬೈಡ್‌ನ ಕ್ರಿಮಿನಾಶಕ ತಯಾರಿಸುವ ಕಾರ್ಖಾನೆಯಿಂದ ಸೋರಿ ನಗರವನ್ನಿಡೀ ಆವರಿಸಿಕೊಂಡುಬಿಟ್ಟಿತು. 3000 ಮಂದಿ ಅವಘಡದಲ್ಲಿ ಸತ್ತರು. ಕಾಲಾಂತರದಲ್ಲಿ ವಿಷಾನಿಲ ಪ್ರಭಾವಕ್ಕೆ ಸಿಕ್ಕಿದವರಲ್ಲಿ ಈವರೆಗೆ ನಾಲ್ಕು ಲಕ್ಷ ಮಂದಿ ಸತ್ತಿರಬೇಕು. ನೋವು ಸರಣಿಗಳು ಇನ್ನೂ ಮುಂದುವರೆದಿವೆ. ಮಹಿಳೆಯರೇ ತೊಂದರೆಗೀಡಾದವರು. ಅವರ ದನಿಯೋ ತುಂಬ ವಿಚಿತ್ರವೂ ದೃಢವಾಗಿ ಮುಂದುವರೆಯುತ್ತಿರುವಂಥದ್ದೂ ಆಗಿದೆ. ಭೋಪಾಲ ಅನಿಲ ದುರಂತ ಪೀಡಿತರ ಮಹಿಳಾ ಸಂಘಟನೆ ಎಂಬ ಅವರ ಸಂಸ್ಥೆಯು ನಿರಂತರವಾಗಿ ಭಾರತ ಸರ್ಕಾರವನ್ನು, ಯೂನಿಯನ್ ಕಾರ್ಬೈಡ್ ಅನ್ನು, ಮಿಕ್ಕ ಇಡೀ ವಿಶ್ವವನ್ನು ಕುರಿತು ಹೇಳುತ್ತಲೇ ಇದೆ: ನಮ್ಮ ಸಮಸ್ಯೆಗಳು ತೀರಲೇ ಇಲ್ಲ. ಎಷ್ಟು ಹಣ ಕೊಟ್ಟರೂ ಅಳಿದ ಜನರನ್ನು, ಉಳಿದ ಜನರ ಸ್ವಾಸ್ಥ್ಯವನ್ನು ಮರಳಿಸಲು ಸಾಧ್ಯವೇ ಇಲ್ಲ. ಹಮೀದಾಬೀ ಎಂಬ ಹೆಚ್ಚು ತೊಂದರೆಗೀಡಾದ ಬಡವರು ವಾಸಿಸುವ ಬಸ್ತಿಯ ಮುಸ್ಲಿಮ್ ಮಹಿಳೆ ಹೇಳುತ್ತಾಳೆ : 'ನಮ್ಮ ಎದೆಗೂಡಿನಲ್ಲಿ ಉರಿಯುತ್ತಿರುವ ಕಿಚ್ಚು ಆರುವತನಕ ಹೋರಾಟ ನಿಲ್ಲಿಸುವ ಪ್ರಶ್ನೆಯೇ ಇಲ್ಲ. ಈ ಕಿಚ್ಚು ಹುಟ್ಟಿದ್ದು 3000 ಹೆಣಗಳನ್ನು ಸುಡಲು ಒಟ್ಟಿದ ಕಿಚ್ಚಿನಲ್ಲಿ. ಅದು ನಮಗೆ ನ್ಯಾಯ ದೊರೆಯುವವರೆಗೂ ಆರುವುದೇ ಇಲ್ಲ'. ಅಥವಾ ಅವರ ದೇಶದಲ್ಲಿ ಪರಮಾಣು ಶಕ್ತಿಯ ಕ್ಷಿಪಣಿಗಳನ್ನು ತಂದಿಟ್ಟಿದ್ದಕ್ಕೆ ಪ್ರತಿಭಟಿಸಿದ ಸಿಸಿಲಿಯ ಮಹಿಳೆಯರು ಹೇಳಿದಂತೆ 'ಯುದ್ಧ ಬೇಡ ಎನ್ನುವ ನಿಮ್ಮ ನಿಲುವು ಬಿಡುಗಡೆಗಾಗಿ ನಡೆಸುತ್ತಿರುವ ನಮ್ಮ ಹೋರಾಟಕ್ಕೆ ಸರಿಹೊಂದಿಕೊಂಡಿದೆ. ನಾವು ಹಿಂದೆಂದೂ ಇಷ್ಟು ಸ್ಪಷ್ಟವಾಗಿ ಪರಮಾಣು ಶಸ್ತ್ರಗಳ ಹೆಚ್ಚಳಕ್ಕೂ, ಮಾಂಸಖಂಡಗಳ ಮನುಷ್ಯರ ಸಂಸ್ಕೃತಿಗೂ ನಡುವೆ, ಯುದ್ಧದ ಹಿಂಸೆಗೂ ಮಾನಭಂಗದ ಹಿಂಸೆಗೂ ನಡುವೆ ಇರುವ ಸಂಬಂಧವನ್ನು ಕಂಡಿದ್ದಿಲ್ಲ. ಮಹಿಳೆಯರು ಯುದ್ಧದ ಬಗ್ಗೆ ಹೊಂದಿರುವ ಐತಿಹಾಸಿಕ ಸ್ಮೃತಿ ಅಂಥದು. ಹಾಗೆಯೇ ಅದು ನಮ್ಮ ಅನುದಿನದ ಶಾಂತಿಕಾಲದ ಅನುಭವ ಕೂಡ. ಈ ದೃಷ್ಟಿಯಲ್ಲಿ ಮಹಿಳೆಯರು ನಿರಂತರ ಶಾಂತಿ ಯುದ್ಧದಲ್ಲಿ ತೊಡಗಿರುತ್ತಾರೆ. ಪುರುಷರ ಲೈಂಗಿಕತೆಯು ವಿಜೃಂಭಿಸಿ ಆನಂದಿಸುವಂತೆ ತೋರುವ ಯುದ್ಧದ ಘನಘೋರ ಆಟವು ಸಾಂಪ್ರದಾಯಿಕ ಲೈಂಗಿಕ ಸಂಬಂಧದಂತೆ ಆಕ್ರಮಣ, ಧಾಳಿ, ಸ್ವಾಧೀನ ಮತ್ತು ನಿಯಂತ್ರಣವೆಂಬ ಅವೇ ಸ್ತರಗಳಲ್ಲಿ ಸಾಗುತ್ತದೆ. ಅದು ಹೆಣ್ಣೋ, ಭೂಮಿಯೋ ಅಂತಹ ವ್ಯತ್ಯಾಸವೇನೂ ಆಗಲಾರದು.

ಜರ್ಮನಿಯಲ್ಲಿ ಅಣುವಿದ್ಯುತ್ ಸ್ಥಾವರಗಳನ್ನು ಕಟ್ಟುವುದರ ವಿರುದ್ಧ ನಡೆದ ಚಳುವಳಿಯಲ್ಲಿ ಪ್ರೇರಕ ಶಕ್ತಿಯಾಗಿ ಭಾಗವಹಿಸಿದ್ದ ಮಹಿಳೆಯರೇನೂ ಮಹಿಳಾ ಚಳುವಳಿಗಳಿಂದ

ಬಂದವರಾಗಿರಲಿಲ್ಲ. ಆದರೆ ಅವರಿಗೂ ಸಹ ತಂತ್ರಜ್ಞಾನಕ್ಕೂ ಮಹಿಳೆಯರು, ಪರಿಸರ ಹಾಗೂ ಭವಿಷ್ಯದ ಸಂತಾನಗಳ ವಿರುದ್ಧ ಸಾಗಿರುವ ಸಮರಕ್ಕೂ ನಡುವೆ ಇರುವ ಸಂಬಂಧದ ಸ್ಪಷ್ಟ ಅರಿವಿತ್ತು. ಅಣುವಿದ್ಯುತ್ ಸ್ಥಾವರವನ್ನು ಕಟ್ಟುವುದರ ವಿರುದ್ಧ ಚಳುವಳಿ ನಡೆಸಿದ ಆಗ್ನೇಯ ಜರ್ಮನಿಯ ವೈಲ್ ಪ್ರಾಂತ್ಯದ ರೈತ ಮಹಿಳೆಯರು ತಂತ್ರಜ್ಞಾನಕ್ಕೂ, ಕೈಗಾರಿಕೆಗಳ ಲಾಭದ ದೃಷ್ಟಿಯ ಅಭಿವೃದ್ಧಿಯ ಹುಚ್ಚು ಮತ್ತು ಮೂರನೇ ವಿಶ್ವದ ಶೋಷಣೆಗೂ ಸಂಬಂಧವನ್ನು ಮನಗಂಡಿದ್ದರು. 1986ರಲ್ಲಿ ಉಂಟಾದ ಚೆರ್ನೋಬಿಲ್ ದುರಂತದ ಬಳಿಕ ರಷ್ಯಾದ ಮಹಿಳೆಯರು ಸಹ ತುಂಬ ಸ್ಪಷ್ಟವಾಗಿ ಹೇಳಿದ್ದರು : 'ಪುರುಷರು ಬದುಕಿನ ಬಗ್ಗೆ ಯೋಚಿಸುವುದಿಲ್ಲ. ಅವರು ಬರೀ ಪರಿಸರವನ್ನು, ಶತ್ರುಗಳನ್ನು ಸ್ವಾಧೀನಪಡಿಸಿಕೊಳ್ಳುವುದರ ಬಗ್ಗೆ ಮಾತ್ರ ಯೋಚಿಸುತ್ತಾರೆ'.

ಚೆರ್ನೋಬಿಲ್ ದುರಂತವು ಯುದ್ಧತಂತ್ರಜ್ಞಾನ ವ್ಯವಸ್ಥೆಯ ಮತ್ತು ಸಾಮಾನ್ಯ ಕೈಗಾರಿಕಾ ಯೋಧ ವ್ಯವಸ್ಥೆಯ ಕುರಿತು ಮಹಿಳೆಯರಲ್ಲಿ ಸ್ವಯಂಪ್ರೇರಿತ ರೋಷ ಮತ್ತು ಪ್ರತಿರೋಧವನ್ನು ಉದ್ದೀಪಿಸಿತು. ಅಣು ತಂತ್ರಜ್ಞಾನವು ಬಾಂಬುಗಳಲ್ಲಿ ಬಳಸಿದಾಗ ಮಾನವನಾಶಕವೂ, ಉತ್ತರವಾಸಿಗಳ ಅಗತ್ಯಕ್ಕೆ ಬೇಕಾದ ವಿದ್ಯುತ್ ಉತ್ಪಾದಿಸಿದಾಗ ಮಾನವಪೋಷಕವೂ ಆಗಿರುವುದೆಂಬ ಮಾಯೆಯು ಕರಗಿಹೋಯಿತು. ಬಹಳಷ್ಟು ಮಹಿಳೆಯರು ಮನಗಂಡದ್ದು ಏನೆಂದರೆ ತಮ್ಮ ಕೊಳ್ಳುಬಾಕ ಜೀವನಪದ್ಧತಿಯು ಪರಿಸರ, ಮಹಿಳೆಯರು, ವಿದೇಶಿಯರು ಮತ್ತು ಭವಿಷ್ಯದ ಸಂತಾನಗಳ ವಿರುದ್ಧ ನಡೆಸಿರುವ ಯುದ್ಧದ ಭಾಗವಾಗಿದೆ ಎನ್ನುವುದು.

ಜೈವಿಕ ತಂತ್ರಜ್ಞಾನದಲ್ಲಿ, ವಂಶವಾಹಿ ಎಂಜಿನಿಯರಿಂಗ್‌ನಲ್ಲಿ ಮತ್ತು ಸಂತಾನೋತ್ಪತ್ತಿ ತಂತ್ರಜ್ಞಾನದಲ್ಲಿ ಆಗಿರುವ ನೂತನ ಆವಿಷ್ಕಾರಗಳು ಮಹಿಳೆಯರು ವಿಜ್ಞಾನ ತಂತ್ರಜ್ಞಾನಗಳ ಲಿಂಗತಾರತಮ್ಯ ಮನೋಭಾವವನ್ನು ಅತ್ಯಂತ ಎಚ್ಚರದಿಂದ ಗಮನಿಸುವಂತೆ ಮಾಡಿವೆ. ಅಲ್ಲದೆ ವಿಜ್ಞಾನದ ದೃಷ್ಟಿಕೋನವು ಮೂಲತಃ ಪುರುಷಕೇಂದ್ರಿತವೂ, ಪರಿಸರವಿರೋಧಿಯೂ, ವಸಾಹತುಶಾಹಿಯೂ ಆಗಿದೆ. ಅದು ಪರಿಸರದಿಂದ ಪುನರುತ್ಪಾದನೆಯ ಶಕ್ತಿಯನ್ನು ಕಸಿದುಕೊಂಡಂತೆಯೇ ಹೆಣ್ಣಿನಿಂದಲೂ ಅದನ್ನು ಕಸಿದುಕೊಳ್ಳುವ ಉದ್ದೇಶ ಹೊಂದಿದೆ. 1984ರಲ್ಲಿ Feminist International Network of Resistance to Genetic and Reproductive Engineering (FIRRAGE)ನ ಸ್ಥಾಪನೆಯಾಯಿತು. ಅದರ ಬೆನ್ನಲ್ಲಿ ಹಲವು ಪ್ರಮುಖ ಸಮಾವೇಶಗಳು ನಡೆದವು: 1985ರಲ್ಲಿ ಬಾನ್ ಮತ್ತು ಸ್ವೀಡನ್ನಿನಲ್ಲಿ, 1988ರಲ್ಲಿ ಬಾಂಗ್ಲಾದೇಶದಲ್ಲಿ, 1991ರಲ್ಲಿ ಬ್ರಝಿಲ್‌ನಲ್ಲಿ. ಈ ಚಳುವಳಿಯು ಸಂಕುಚಿತವಾಗಿ ವಿವರಿಸಲ್ಪಟ್ಟ ಮಹಿಳಾ ಅಥವಾ ಸ್ತ್ರೀವಾದಿ ಚಳುವಳಿಗಳಿಗಿಂತ ತುಂಬ ದೂರ ಸಾಗಿತು. ಜರ್ಮನಿಯಲ್ಲಿ ಕಾರ್ಮಿಕ ಸಂಘಟನೆಗಳಿದ್ದ, ಚರ್ಚುಗಳ, ವಿಶ್ವವಿದ್ಯಾಲಯಗಳ, ಪಕ್ಷ-ಪೇಟೆಗಳ, ಹೊರಗೆ ದುಡಿಯುತ್ತಿದ್ದ- ಮನೆಗೆಲಸದ ಮಹಿಳೆಯರು ಈ ತಂತ್ರಜ್ಞಾನದ ವಿರುದ್ಧ ಸಂಘಟಿತರಾದರು. ಇಂದಿಗೂ ತಂತ್ರಜ್ಞಾನಗಳ ನೈತಿಕ, ಆರ್ಥಿಕ ಮತ್ತು

ಆರೋಗ್ಯದ ಪರಿಣಾಮಗಳನ್ನು ಕುರಿತು ಗಂಭೀರ ಚರ್ಚೆಗಳು ನಡೆಯುತ್ತಲೇ ಇವೆ. ಈ ಚಳುವಳಿಯು ಫ್ರಾಂಕ್‌ಫರ್ಟ್‌ನಲ್ಲಿ ಸ್ಥಾಪಿಸಲು ಉದ್ದೇಶಿಸಿದ್ದ ಬಾಡಿಗೆ ತಾಯ್ತನದ ಸಂಸ್ಥೆಯು (Surrogate Motherland Agency) ಸ್ಥಾಪನೆಗೊಳ್ಳದಿರಲು ಮುಖ್ಯ



ಕಾರಣ. ಎಲ್ಲಿ ಬಂಡವಾಳಶಾಹಿ ಪುರುಷ ಪ್ರಾಧಾನ್ಯತೆಯೂ. ಯುದ್ಧಾಸಕ್ತ ವಿಜ್ಞಾನವೂ ಯಾವುದು ಜೀವಂತವೂ. ಇಡಿಯೂ ಆಗಿರುವುದೋ ಅದನ್ನು ವಿಘಟಿಸುವ. ಬಗೆದು ನೋಡುವ ಉದ್ಯಮದಲ್ಲಿರುವವೋ ಅಲ್ಲಿ ಜೀವಂತ ಸಂಬಂಧಗಳಿಗಾಗಿ ಕೊರಳು ನಿರುಕಿಸಿ ನೋಡುವ ಎಕೋಫೆಮಿನಿಸ್ಟ್ ಆದರ್ಶವು ಈ ಚಳುವಳಿಯ ಬಗ್ಗೆ ಸಮಗ್ರ ಹಾಗೂ ಸೂಕ್ತ ಮಾಹಿತಿಯನ್ನು ನೀಡುತ್ತದೆ. ಹಾಗಾಗಿ ಇವುಗಳಲ್ಲಿ ತೊಡಗಿಕೊಂಡವರೆಲ್ಲ ಈ ಬಗೆಯ ತಂತ್ರಜ್ಞಾನಗಳು ಮಹಿಳೆಯರ ಮೇಲೆ ಎಂಥ ಪರಿಣಾಮವನ್ನು ಉಂಟುಮಾಡುತ್ತವೆ ಎನ್ನುವುದಷ್ಟೇ ಅಲ್ಲದೆ ತೃತೀಯ ಜಗತ್ತಿನ ಹಾಗೂ ಕೈಗಾರಿಕರಣಗೊಂಡಿರುವ ಉತ್ತರದ ರಾಷ್ಟ್ರಗಳಲ್ಲಿ ಸಸ್ಯಗಳ. ಪ್ರಾಣಿಗಳ. ಕೃಷಿಚಟುವಟಿಕೆಗಳ

ಮೇಲೆ ಇವುಗಳ ಪ್ರಭಾವ ಎಂಥದ್ದು ಎನ್ನುವುದನ್ನೂ ಗಮನಿಸುತ್ತಾರೆ. ಅವರು ಅವುಗಳು ಅರಿತುಕೊಂಡಿದ್ದಾರೆ : ಮಹಿಳೆಯರ ವಿಮೋಚನೆಯು ಬಿಡಿಯಾಗಿ ಆಗುವಂಥದ್ದಲ್ಲ, ಅದು ಈ ಭೂಮಿಯ ಉಳಿವಿಗಾಗಿ ನಡೆವ ಬೃಹತ್ ಸಂಗ್ರಾಮದ ಜೊತೆ ಥಳಕು ಹಾಕಿಕೊಂಡಿದೆ.

ಈ ಚಳುವಳಿಯ ಹೊಸ ಸಂಬಂಧಗಳು ಅಂತರ್ಗತ ಕಾರ್ಯಜಾಲಗಳು ಜನ್ಮತಾಳಲು ಅವಕಾಶ ಕಲ್ಪಿಸುತ್ತದೆ. ಬಾಂಗ್ಲಾದೇಶದ ಸಮಾವೇಶದಲ್ಲಿ ಈ ತಂತ್ರಜ್ಞಾನದ ಬಗ್ಗೆ ಕೇಳಿದ ಆಫ್ರಿಕನ್ ಮಹಿಳೆಯೊಬ್ಬರು ಉದ್ಗರಿಸಿದ್ದು ಹೀಗೆ : ಅದೇ ಅಭಿವೃದ್ಧಿ ಅನ್ನುವುದಾದರೆ ನಮಗೆ ಅದು ಬೇಡ, ನೀವೇ ಇಟ್ಟುಕೊಳ್ಳಿ'.

ಆಧ್ಯಾತ್ಮಿಕ ಅಥವಾ ರಾಜಕೀಯ ಎಕೋಫೆಮಿನಿಸಂ :

ಪರಿಸರ, ಶಾಂತಿ, ಸ್ತ್ರೀವಾದ ಮತ್ತು ಮುಖ್ಯವಾಗಿ ಸ್ವಾಸ್ಥ್ಯ ಹೀಗೆ ಬೇರೆ ಬೇರೆ ಚಳುವಳಿಗಳಲ್ಲಿದ್ದ ಮಹಿಳೆಯರು ಎಲ್ಲದರಲ್ಲು ಇರುವ ಅಂತರ್-ಅವಲಂಬನೆ ಮತ್ತು ಸಂಸರ್ಗಗಳನ್ನು ಕಂಡುಕೊಂಡರು. ಅಷ್ಟೇ ಅಲ್ಲ, ನಾವು ಯಾವುದನ್ನು ಬದುಕಿನ ಆಧ್ಯಾತ್ಮಿಕ ಆಯಾಮವೆಂದು ಕರೆಯುತ್ತೇವೆಯೋ ಅದನ್ನು ಕೂಡ ಕಂಡುಕೊಂಡರು. ಅಂತರ್-ಸಂಸರ್ಗಗಳನ್ನೇ ಹಲವು ಸಲ ಆಧ್ಯಾತ್ಮಿಕತೆಯೆಂದು ಕರೆಯುವುದುಂಟು. ಮನುಷ್ಯನ ಸಂತೋಷವು ಮೂಲಭೂತವಾಗಿ ಉಪಭೋಗಿಸುವ ವಸ್ತುಗಳ ಉತ್ಪಾದನೆಯ ಹೆಚ್ಚಳದ ಮೇಲೆ ನಿಲ್ಲುವುದೆಂಬ ನಿಲುವಿನ ಬಂಡವಾಳಶಾಹಿ ಹಾಗೂ ಮಾರ್ಕ್ಸ್‌ವಾದೀ ಮೆಟೀರಿಯಲಿಂಸಂಗಳು ಮೇಲೆ ಹೇಳಿದ ಆಯಾಮಗಳನ್ನು ಕೀಳುಗಳೆದವು ಅಥವಾ ನಿರಾಕರಿಸಿದವು. ಸ್ತ್ರೀವಾದಿಗಳು ಹೊಸಯುಗದ ಆರಂಭದಲ್ಲಿ ನಡೆದ ಭೂತಕಾಲದ ಬೇಟೆಯ ಮಹತ್ವವನ್ನು ಕಂಡುಕೊಂಡವು; ಪುರುಷಕೇಂದ್ರಿತ ವಿಜ್ಞಾನ ತಂತ್ರಜ್ಞಾನಗಳು ಆ ಮಹಿಳೆಯರನ್ನು ಬಳಸಿಕೊಂಡೇ ಅಭಿವೃದ್ಧಿಗೊಂಡವು. ಜೊತೆಜೊತೆಗೇ ಅವರ ಜ್ಞಾನ, ವಿವೇಕ ಮತ್ತು ಪರಿಸರದೊಂದಿಗೆ ಅವರು ಹೊಂದಿದ್ದ ನಿಕಟ ಸಂಬಂಧ ಎಲ್ಲವೂ ನಾಶವಾದವು. ಮಹಿಳೆಯರನ್ನು ಹಾಗೂ ಪರಿಸರವನ್ನು ಪುರುಷಮೂಲ ವಿನಾಶಕಾರಿ ಹಿಡಿತದಿಂದ ವಿಮುಕ್ತಿಗೊಳಿಸುವ, ಪುನಶ್ಚೇತನಗೊಳಿಸುವ ಸಾಧನವಾಗಿ ಈ ವಿವೇಕವನ್ನು ಕಂಡದ್ದು, ಅದನ್ನು ಮರಳಿ ಪಡೆಯುವ ಹಂಬಲವು ಅವರನ್ನು ಅಧ್ಯಾತ್ಮದ ಕಡೆಗೆ ಒಯ್ಯಿತು ಎನ್ನಬಹುದು. ಆಧ್ಯಾತ್ಮಿಕ ಎಂಬ ಮಾತೇ ಗೊಂದಲಮಯವಾಗಿದೆ. ಅದು ಬೇರೆ ಬೇರೆ ಜನರಲ್ಲಿ ಬೇರೆಬೇರೆ ಚಿತ್ರಗಳನ್ನು ಮೂಡಿಸುತ್ತದೆ. ಕೆಲವರಿಗೆ ಅದೊಂದು ಬಗೆಯ ಧರ್ಮ; ಜುದಾಯಿ, ಇಸ್ಲಾಂ ಅಥವಾ ಕ್ರಿಶ್ಚಿಯಾನಿಟಿಯಂತಹ ಏಕದೇವೋಪಾಸಿ ಅಥವ ಪುರುಷಶ್ರೇಷ್ಠವಾದಿ ನಂಬಿಕೆಗಳನ್ನು ಮುಂದುವರೆಸಿಕೊಂಡು ಹೋಗುವುದಲ್ಲ. ಅವೆಲ್ಲವೂ ಸೈನಿಕ ಮನೋಭಾವದ ಪರಂಪರೆಯಿಂದ ಬಂದವು ಹಾಗೂ ಆ ಕಾರಣದಿಂದ ಪರಿಸರದ ಬಗ್ಗೆ, ಮಹಿಳೆಯರ

ಬಗ್ಗೆ ಪ್ರತಿಕೂಲ ಭಾವವನ್ನು ಹೊಂದಿರುವಂಥವು. ಹಾಗಾಗಿ ಕೆಲವರು ದೇವತೆಯ ಕಲ್ಪನೆ ಆಧರಿಸಿ ಧರ್ಮವನ್ನು ಮರುಜೀವನಗೊಳಿಸಲು ಅಥವಾ ಸ್ಥಾಪಿಸಲು ಪ್ರಯತ್ನ ಮಾಡಿದರು. ಅಧ್ಯಾತ್ಮವನ್ನು ದೇವತೆ ಎಂದು ಕರೆಯಲಾಯಿತು.

ಕೆಲವರು ಇದನ್ನು ಎಲ್ಲಾ ವಸ್ತುಗಳಲ್ಲೂ ಇರುವ ಮತ್ತು ಎಲ್ಲಾ ವಸ್ತುಗಳನ್ನೂ ವ್ಯಾಪಿಸಿಕೊಂಡಿರುವ ಸ್ತ್ರೀತತ್ವ ಎನ್ನುತ್ತಾರೆ. ಈ ಅಧ್ಯಾತ್ಮವನ್ನು ಕಡಿಮೆ ಮೌಲ್ಯದ ಅಧ್ಯಾತ್ಮವಾಗಿ ಅರ್ಥಮಾಡಿಕೊಳ್ಳಲಾಗಿದೆ. ಅಂದರೆ ಕಡಿಮೆ ಮೌಲ್ಯದ ಆದರ್ಶವಾದಿ ನೆಲೆಯಲ್ಲಿ. ಅಧ್ಯಾತ್ಮವು ಸ್ತ್ರೀ ಆದರೂ ಪ್ರಾಪಂಚಿಕ ಬದುಕಿಗೆ ಅದು ಹೊರಗಲ್ಲ. ಬದಲಿಗೆ ಅದನ್ನು ಎಲ್ಲದರಲ್ಲೂ, ಎಲ್ಲಾ ಮಾನವರಲ್ಲೂ ಇರುವ ಜೀವಶಕ್ತಿ ಎಂದು ನೋಡಲಾಗಿದೆ. ನಿಜಕ್ಕೂ ಅದು ಸಂಸರ್ಗದ ಅಧ್ಯಾತ್ಮ. ಅಧ್ಯಾತ್ಮಿಕತೆಯು ಹೆಚ್ಚು ವಸ್ತು ವಿಷಯಕ ಆಗಿಹೋದ ಪರಿಭಾಷೆಯಲ್ಲಿ ಯುಕ್ತಿಗೊಂಡಾದೀತೇ ಹೊರತು ನಾವೆಲ್ಲ ಸಾಮಾನ್ಯವಾಗಿ ಅಂದುಕೊಂಡಿರುವಂತೆ ಧರ್ಮವಾಗಲಾರದು. ಅಧ್ಯಾತ್ಮವನ್ನು ಕುರಿತ ಈ ನೋಟವನ್ನು ಸ್ಟಾರ್‌ಹಾಕ್‌ರ ಬರವಣಿಗೆಯಲ್ಲಿ ಕಾಣುತ್ತೇವೆ. ಅವರಿಗೆ ಅಧ್ಯಾತ್ಮಿಕತೆಯು ಸ್ತ್ರೀಯರ ಐಂದ್ರಿಕ ಮೋಹಕತೆಗೆ, ಅವರ ಲೈಂಗಿಕ ಶಕ್ತಿಗೆ, ಅವರ ಅಮೂಲ್ಯ ಜೀವಶಕ್ತಿಗೆ ಹೆಚ್ಚು ಸಂವಾದಿಯಾಗಿ ಕಂಡಿದೆ. ಅವು ಅವರ - ಎರಡು ಜೀವಶಕ್ತಿಗಳ- ಮತ್ತು ಇತರ ಜೀವರೂಪಗಳ ಹಾಗೂ ಪ್ರಕೃತಿಯ ಮೂಲಧಾತುಗಳ ನಡುವೆ ಸಂಪರ್ಕವೇರ್ಪಡಿಸುತ್ತದೆ. ಆ ಶಕ್ತಿಯೇ ಸ್ತ್ರೀಯರಿಗೆ ಪ್ರೀತಿಸಲು ಮತ್ತು ಬದುಕನ್ನು ಸಂಭ್ರಮಿಸಲು ಅವಕಾಶ ಮಾಡಿಕೊಡುತ್ತದೆ. ಲೋಕೋತ್ತರವಲ್ಲದ ಈ ಐಂದ್ರಿಕ ಅಥವಾ ಲೈಂಗಿಕ ಅಧ್ಯಾತ್ಮಿಕತೆಯು ಎಲ್ಲದರ ಕೇಂದ್ರದಲ್ಲಿದೆ ಹಾಗಾಗಿ ವಸ್ತು ಮತ್ತು ಚೈತನ್ಯ, ಅತೀಂದ್ರಿಯ ಮತ್ತು ಸಹಜ ಎನ್ನುವುದರ ಮಧ್ಯೆ ಇರುವ ವಿರೋಧವನ್ನು ತಿಳಿಗೊಳಿಸುತ್ತದೆ. ಇರುವುದು ಎಲ್ಲವೂ ನೈಸರ್ಗಿಕವೇ. ಆದರೆ ಈ ನೈಸರ್ಗಿಕವೆಂಬುದು ಚೈತನ್ಯರಹಿತವೂ, ಭಾವರಹಿತವೂ ಆದ ಕ್ರಿಯಾಶೂನ್ಯ ವಸ್ತುವಲ್ಲ. ಚೈತನ್ಯವು ಸ್ವಾಭಾವಿಕವಾಗಿ ಎಲ್ಲದರಲ್ಲು ಅದರಲ್ಲೂ ಮುಖ್ಯವಾಗಿ ನಮ್ಮ ಲೈಂಗಿಕ ಅನುಭವದಲ್ಲಿ ಅಂತಸ್ಥವಾಗಿರುವಂತಹದು. ಏಕೆಂದರೆ ನಾವು ನಮ್ಮ ಶರೀರದ ಮೂಲಕ ಪ್ರಾಪಂಚಿಕ ಮತ್ತು ಅಧ್ಯಾತ್ಮಿಕಗಳನ್ನು ಬೇರ್ಪಡಿಸಲಾರೆವು. ಅಧ್ಯಾತ್ಮಿಕತೆ ಎನ್ನುವ ಪ್ರೀತಿ ಇಲ್ಲದೆ ಯಾವ ಜೀವವೂ ಅರಳದು. ಅದೊಂದು ಎದರಲ್ಲೂ ಅವಿಚ್ಛಿನ್ನವಾಗಿ ಬೆರೆತಿರುವ ಮಾಯೆ. ನಾವು ಪುನರಾವಿಷ್ಕಾರ ಮಾಡಿದ ಪ್ರಾಚೀನ ವಿವೇಕವು ಈ ಎಲ್ಲವ ತಬ್ಬಿ ಕುಳಿತ ಸಂಬಂಧಗಳ ಅಸ್ತಿತ್ವದ ಬಗ್ಗೆ ಐಂದ್ರಜಾಲಿಕ ಒಳನೋಟವನ್ನು ಹೊಂದಿತ್ತು ಮತ್ತು ಅದರ ಮೂಲಕ ಅಶಕ್ತ ಸ್ತ್ರೀಯರು ಸಶಕ್ತ ಪುರುಷರ ಮೇಲೆ ಪ್ರಭಾವ ಬೀರುವಲ್ಲಿ ಸಫಲರಾಗಿದ್ದರು. 1980ರಲ್ಲಿ ಪೆಂಟಗನ್ ಅನ್ನು ಸುತ್ತುವರಿದು ತಮ್ಮ ಕ್ರಿಯಾವಿಧಿಗಳನ್ನು ಆಚರಿಸಿದ ಮಹಿಳೆಯರು ಮೊದಲು ಎಕೋಫೆಮಿನಿಸ್ಟ್ ಮ್ಯಾನಿಫೆಸ್ಟೋವನ್ನು ಸಿದ್ಧಪಡಿಸಿದರು.

ಅಧ್ಯಾತ್ಮಿಕತೆಗೆ ಕೊಟ್ಟ ಪ್ರಾಧಾನ್ಯತೆಗೆ ಪಾರಿಸರಿಕ ಸಾಂಗತ್ಯವುಂಟು. ಇದು ಬದುಕಿನ ಪಾವಿತ್ರ್ಯವನ್ನು ಪುನರಾವಿಷ್ಕರಿಸಿದ್ದರ ಫಲ. ಇದರ ಅನ್ವಯ ಜೀವರಾಶಿಯನ್ನು

ಕಾಪಾಡಿಕೊಳ್ಳುವುದು ಸಾಧ್ಯವಾಗುವುದು ಈ ಭೂಮಿಯ ಮೇಲೆ ಇರುವ ಎಲ್ಲ ಜೀವಪ್ರಕಾರಗಳೂ ಪವಿತ್ರವೆಂದು ಗ್ರಹಿಸಲು ಮತ್ತು ಅವನ್ನು ಹಾಗೆ ಗೌರವಿಸಲು ಜನ ಮೊದಲಿಟ್ಟಾಗ ಮಾತ್ರ. ಈ ಗುಣ ಪರಲೋಕದ ದೈವಗಳಲ್ಲಿ, ಅತೀಂದ್ರಿಯತೆಯಲ್ಲಿ ಇರುವುದಲ್ಲ. ಬದಲಿಗೆ ಅದು ಅನುದಿನದ ಬದುಕಿನಲ್ಲಿ, ನಮ್ಮ ಕೆಲಸದಲ್ಲಿ, ನಮ್ಮ ಸುತ್ತಲಿನ ವಸ್ತುಗಳಲ್ಲಿ ಮತ್ತು ನಮ್ಮ ಪರಿಸರದಲ್ಲಿ ಇರುತ್ತದೆ. ಕಾಲಕಾಲಕ್ಕೆ ಇವುಗಳನ್ನು ನಾವು ಕ್ರಿಯೆಗಳ ಮೂಲಕ, ಹಾಡಿನ ಮೂಲಕ, ನೃತ್ಯದ ಮೂಲಕ ಸಂಭ್ರಮಿಸಬೇಕಿದೆ.

ಈ ತಾಯಿನೆಲದ ಮೇಲಿನ ನಮ್ಮ ಅವಲಂಬನೆಯನ್ನು ಪಾಡಿ ಸಂಭ್ರಮಿಸುವುದು ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನದ ಪಿತಾಮಹರಾದ ಫ್ರಾನ್ಸಿಸ್ ಬೇಕನ್ ಮತ್ತು ಅವನ ಸಂಗಡಿಗರು ಪ್ರತಿಪಾದಿಸಿದ ವರ್ತನೆ ಅಥವಾ ಸ್ವಭಾವಕ್ಕೆ ವಿರುದ್ಧವಾದುದು. ಅವರಿಗೆ ಈ ಅವಲಂಬನೆಯ ಅತ್ಯಾಚಾರ, ಮನುಷ್ಯನ ಇಚ್ಛಾಸ್ವಾತಂತ್ರ್ಯದ ಹಕ್ಕಿನ ಅಣುಕು. ಆದ್ದರಿಂದ ಅದನ್ನು ಬಲತ್ಕಾರದಿಂದ, ಶಕ್ತಿಯನ್ನು ಪ್ರಯೋಗಿಸಿ ತೆಗೆದುಹಾಕಬೇಕು ಎನ್ನುವುದು ಈ ಅವಲಂಬನೆಯನ್ನು ನಿವಾರಿಸಿಕೊಳ್ಳುವ, ಮೀರುವ ಹಾಗೂ ಪರಿಸರವನ್ನು ಪುರುಷನ ಇಚ್ಛಾವರ್ತಿಯನ್ನಾಗಿಸುವ, ಅಡಿಯಾಳಾಗಿಸುವ ಹಾಗೂ ಅವಳ ಎಲ್ಲ ಮಾಯಾಶಕ್ತಿಗಳಿಂದ ಮನುಷ್ಯನನ್ನು ವಿಮುಕ್ತಗೊಳಿಸುವ ವಿಚಾರದ ಮೇಲೆ ನಿಂತಿದೆ. ಈ ಸಂದರ್ಭದಲ್ಲಿ ಆಧ್ಯಾತ್ಮಿಕತೆಯು ತಾಯಿಭೂಮಿಯ ಹುಣ್ಣುಗಳನ್ನು ಮಾಯಿಸುವ ಕೆಲಸದಲ್ಲಿ ತೊಡಗುತ್ತದೆ ಹಾಗೂ ವಿಶ್ವವನ್ನು ಮರುಮಾಯಾವೃತಗೊಳಿಸುವತ್ತ ದುಡಿಯುತ್ತದೆ. ಅಂದರೆ ಅದು ನಿರ್ವಾಣಯುಗೊಳಿಸುವ ಕ್ರಿಯೆಯನ್ನು ನಿರಾಕಾರಗೊಳಿಸುವುದು. ಇದನ್ನೇ ಮಾರ್ಕ್‌ವೆಬರ್ ಯುರೋಪಿನ ವೈಚಾರಿಕೀಕರಣ ಪ್ರಕ್ರಿಯೆಯ ಅನಿವಾರ್ಯ ಉತ್ಪನ್ನವೆಂದು ಕಂಡಿರುವುದು.

ಯುರೋಪಿನಲ್ಲಿ ಇರುವವರಿಗಿಂತ ಅಮೆರಿಕದಲ್ಲಿನ ಎಕೋಫೆಮಿನಿಸ್ಟರು ಆಧ್ಯಾತ್ಮಿಕತೆಗೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಡುತ್ತಾರೆ. ಉದಾಹರಣೆಗೆ ಜರ್ಮನಿಯಲ್ಲಿ, ಅದರಲ್ಲೂ 1980ರ ದಶಕದ ಪ್ರಾರಂಭದಿಂದ ಈಚೆಗೆ ಈ ಪ್ರವೃತ್ತಿಯನ್ನು ಪಲಾಯನವಾದ ಎಂದು ಒಂದು ಬಗೆಯಲ್ಲಿ ರಾಜಕೀಯ ವಲಯದಿಂದ ಹಿಂದೆ ಸರಿದು, ವಾಸ್ತವದಿಂದ ವಿಚ್ಛೇದನ ಪಡೆದು ಕನಸುಗಳ ಲೋಕಕ್ಕೆ ಓಡಿಹೋಗುವುದರ ಸೂಚಕ ಎಂದು, ಇದರಿಂದ ಪುರುಷರ ಕೈಲಿ ಅಧಿಕಾರ ಉಳಿಸಿಕೊಡಲಾಗಿದೆ ಎಂದು ಟೀಕಿಸಲಾಗುತ್ತಿದೆ. ಆದರೆ ಆಧ್ಯಾತ್ಮಿಕ ಸ್ತ್ರೀವಾದಿಗಳು ತಮ್ಮ ರಾಜಕೀಯವೆನ್ನುವುದು ಪ್ರತಿದಿನದ ಬದುಕಿನಲ್ಲಿ ಇದ್ದೇ ಇರುವ ರಾಜಕೀಯ, ಎಷ್ಟೇ ಸಣ್ಣ ಸಮುದಾಯದಲ್ಲಿ ಘಟಿಸಿದರೂ ಅದು ಮೂಲಭೂತ ಸಂಬಂಧಗಳ ಪರಿವರ್ತನೆ ಎಂದು ವಾದಿಸುತ್ತಾರೆ. ಪುರುಷರ ಅಧಿಕಾರದ ಆಟಗಳನ್ನು ಅಂಥವೇ ಆಟಗಳಿಂದ ಎದುರಿಸುವುದಕ್ಕಿಂತ ಈ ರಾಜಕೀಯ ಹೆಚ್ಚು ಪರಿಣಾಮಕಾರಿ ಎಂದು ನಂಬುತ್ತಾರೆ. ಜರ್ಮನಿಯಲ್ಲಿ ಕೂಡ ಈ ಚರ್ಚೆಯನ್ನು 1978ರಲ್ಲಿ ರಾಜಕೀಯವನ್ನು ಪ್ರವೇಶಿಸಿದ ಗ್ರೀನ್ಸ್ ಸಂಘಟನೆಯ ಹುಟ್ಟಿನ ಹಿನ್ನೆಲೆಯಲ್ಲಿ

ಗಮನಿಸಬೇಕು. ಬಹಳ ಮಂದಿ ಮಹಿಳೆಯರು ಗ್ರೀನ್ ಸಂಘಟನೆಯನ್ನು ಸೇರಿದ್ದು ಪರಿಸರ ಕಾಳಜಿಯಿಂದಲೇ ಅಲ್ಲ. ಅವರಲ್ಲಿ ಅದಕ್ಕಿಂತ ಹೆಚ್ಚು ಪ್ರಾಮುಖ್ಯತೆ ಇದ್ದದ್ದು ಸ್ತ್ರೀವಾದಿ ಕಾಳಜಿಗಳಿಗೆ. ಗ್ರೀನ್ ಸಂಘಟನೆಯ ಲಕ್ಷ್ಯವಿದ್ದದ್ದು ತಮ್ಮ ಕಾಳಜಿಗಳನ್ನು ತಮ್ಮ ಯೋಜನೆಗಳ ಹಾಗೂ ರಾಜಕೀಯದ ಜೊತೆ ಐಕ್ಯಗೊಳಿಸುವುದರ ಕಡೆಗೆ. ಎಕೋಫೆಮಿನಿಸ್ಟ್ ಚಳುವಳಿಯಲ್ಲಿನ ಆಧ್ಯಾತ್ಮಿಕ ನಿಲುವಿನ ವಿಮರ್ಶೆಗೆ ದನಿಗೂಡಿಸಿದ್ದು ಮುಖ್ಯವಾಗಿ ಎಡಪಂಥೀಯ ನಿಲುವಿನ ಪುರುಷರು ಹಾಗೂ ಮಹಿಳೆಯರು. ಬಂಡವಾಳಶಾಹಿಯ ವಿಮರ್ಶೆಯನ್ನು ಪುರುಷ ಪ್ರಾಧಾನ್ಯತೆಯ ವಿಮರ್ಶೆಯೊಂದಿಗೆ ಕೂಡಿಸಿದ ಹಾಗೂ ಚರಿತ್ರೆಯನ್ನು ಕುರಿತು ಭೌತವಾದಕ್ಕೆ ಅಂಟಿಕೊಂಡಿರುವ ಮಹಿಳೆಯರು ಸುಲಭವಾಗಿ ಆಧ್ಯಾತ್ಮಿಕ ಎಕೋಫೆಮಿನಿಸಮ್ಮನ್ನು ಒಪ್ಪುವುದಿಲ್ಲ. ಏಕೆಂದರೆ ನಿಶ್ಚಿತವಾಗಿ ಬಂಡವಾಳಶಾಹಿಯು ಆಧ್ಯಾತ್ಮಿಕ ಸ್ತ್ರೀವಾದಿಗಳ ಭೌತವಾದದ ವಿಮರ್ಶೆಯನ್ನು ತನ್ನ ಸಹಯೋಗಕ್ಕೆ ಒಗ್ಗಿಸಿಕೊಳ್ಳಬಲ್ಲದು.

ಇದು ನಿಜಕ್ಕೂ ಈಗಾಗಲೇ ಆರಂಭವಾಗಿಬಿಟ್ಟಿದೆ. ಹೊಸ ಯುಗ ಮತ್ತು ಇಂದ್ರಿಯಾತೀತ ತತ್ವ ಚಳುವಳಿಗಳು ಪೌರಾತ್ಯ- ಅದರಲ್ಲಿಯೂ ಪ್ರಮುಖವಾಗಿ ಚೀನೀ ಮತ್ತು ಭಾರತೀಯ ಸಂಸ್ಕೃತಿಗಳಿಂದ ಆನಾಮತ್ತಾಗಿ ಎತ್ತಿಕೊಂಡ ಅತೀಂದ್ರಿಯ ಧ್ಯಾನ, ಮನನ, ಯೋಗ, ಯಕ್ಷಿಣಿ, ಪರ್ಯಾಯ ಆರೋಗ್ಯ ಪದ್ಧತಿಗಳು ಮುಂತಾದವಕ್ಕೆ ಒಳ್ಳೆಯ ಮಾರುಕಟ್ಟೆಯನ್ನು ಹುಟ್ಟುಹಾಕಿವೆ. ವಸಾಹತುಗಳಿಂದ ಭೌತಿಕ ಸಂಪತ್ತನ್ನು ಲೂಟಿ ಮಾಡಿ ಆಗಿದೆ. ಈಗ ವಿಶ್ವ ಮಾರುಕಟ್ಟೆಗೆ ಒದಗಿಸಲು ಆಧ್ಯಾತ್ಮಿಕ ಹಾಗೂ ಸಾಂಸ್ಕೃತಿಕ ಸಂಪತ್ತನ್ನು ಸರಕೀಕರಣಗೊಳಿಸಲಾಗುತ್ತಿದೆ.


ಆಧ್ಯಾತ್ಮಿಕ ವಸ್ತುಗಳ ಕುರಿತ ಆಸಕ್ತಿ ಎನ್ನುವುದು ಪಶ್ಚಿಮದ ಪುರುಷಪ್ರಧಾನವಾದ ಬಂಡವಾಳಶಾಹಿ ನಾಗರಿಕತೆಯು ತಂದುಕೊಂಡ ಆಳವಾದ ಸಮಸ್ಯೆಯು ವ್ಯಕ್ತವಾದ ಬಗೆ. ಪಶ್ಚಿಮದಲ್ಲಿ ಬದುಕಿನ ಆಧ್ಯಾತ್ಮಿಕ ಅಂಶಗಳ ಬಗ್ಗೆ ಆಸಕ್ತಿಯು ಯಾವಾಗಲೂ ಭೌತಿಕ ಜಗತ್ತಿನಿಂದ ಪ್ರತ್ಯೇಕಗೊಳಿಸಲ್ಪಟ್ಟು ಹೆಚ್ಚು ಹೆಚ್ಚು ಸವೆದುಹೋದಂತೆಲ್ಲ ಅಲ್ಲಿನ ಜನ ತಮ್ಮದೇ ಸಂಸ್ಕೃತಿಯಲ್ಲಿ ತಾವು ನಾಶಮಾಡಿಕೊಂಡಿದ್ದೇನು ಎನ್ನುವುದನ್ನು ಹುಡುಕಲು ಪೂರ್ವದತ್ತ, ಕೈಗಾರಿಕೀಕರಣ ಪೂರ್ವದ ಸಂಸ್ಕೃತಿಯತ್ತ ತಿರುಗುತ್ತಿದ್ದಾರೆ. ಸ್ಪಷ್ಟವಾಗಿ ತೋರುವಂತೆ ಈ ಹುಡುಕಾಟವು ಸಮಗ್ರತೆಯನ್ನು ಸಂಪೂರ್ಣತೆಯನ್ನು ಪಡೆದುಕೊಳ್ಳುವ ಮನುಷ್ಯರ ಹಂಬಲದಿಂದ ಹುಟ್ಟಿರುವಂಥದು. ಇಲ್ಲಿ ನಾವು ದೂಷಿಸಬೇಕಾಗಿರುವುದು ಅದು ಬಿಡಿಬಿಡಿ ತುಂಡುಗಳಾಗಿ ಹರಿದುಹೋದ ಹಾಗೂ ಸರಕೀಕರಣಗೊಂಡ ಬಗೆಯನ್ನು. ಪೌರಾತ್ಯ ಆಧ್ಯಾತ್ಮಿಕತೆಯ ಬಗ್ಗೆ ಆಸಕ್ತಿ ಹೊಂದಿದ ಜನರು ನಿಜಕ್ಕೂ ಯಾವ ನೆಲದ ಸಂಸ್ಕೃತಿಯಿಂದ ಯೋಗ, ತಾಯ್-ಚಿ ಮುಂತಾದ ತುಣುಕುಗಳನ್ನು ಹೆಕ್ಕಿಕೊಳ್ಳಲಾಗಿದೆಯೋ ಆ ಪ್ರದೇಶಗಳಲ್ಲಿ ಜನ ಹೇಗೆ ಬದುಕುತ್ತಾರೆ ಎನ್ನುವ ಬಗ್ಗೆ ತಿಳಿದುಕೊಂಡಿರುವುದಿಲ್ಲ. ತಿಳಿದುಕೊಳ್ಳುವ ಆಸಕ್ತಿಯನ್ನೂ ಹೊಂದಿರುವುದಿಲ್ಲ. ಇಲ್ಲಿನ ಸಾಮಾಜಿಕ, ಆರ್ಥಿಕ

ಹಾಗೂ ರಾಜಕೀಯ ಸಂದರ್ಭಗಳ ಅರಿವೂ ಅವರಿಗೆ ಇರುವುದಿಲ್ಲ. ಇದೊಂದು ರೀತಿ ಬಜಾರಾಮೀ ಅಧ್ಯಾತ್ಮಿಕತೆ. ಸರಳ್ ಸರ್ಕಾರ್ ಹೇಳುವಂತೆ ಪಶ್ಚಿಮದ ಇಹಭೋಗದ ಜೀವನಮಟ್ಟವೆಂಬ ಕೇಕ್‌ನ ಮೇಲೆ ಹರಡಿದ ಆದರ್ಶವಾದೀ ಐಸಿಂಗ್. ಇಂತಹ ಬಜಾರಾಮೀ ಅಧ್ಯಾತ್ಮಿಕತೆಯು ವಸ್ತು ಮತ್ತು ಚೈತನ್ಯ ಹಾಗೂ ಆರ್ಥಿಕತೆ ಮತ್ತು ಸಂಸ್ಕೃತಿಗಳ ನಡುವಿನ ಭಿನ್ನತೆಯನ್ನು ತೊಡೆದುಹಾಕಲಾರದು. ಪೂರ್ಣತೆಯ ಕುರಿತ ಹುಡುಕಾಟವನ್ನು ಇಂದು ಅಸ್ತಿತ್ವದಲ್ಲಿರುವ ದಮನಕಾರೀ ವಿಶ್ವವ್ಯವಸ್ಥೆಯನ್ನು ಎಲ್ಲಿಯವರೆಗೂ ನೇರ್ಮಗೊಳಿಸಲಾಗದೋ, ಈ ಹುಡುಕಾಟವನ್ನು ಒಳ್ಳೆಯ ಸಮಾಜಕ್ಕೆ ನಡೆಸುವ ಹುಡುಕಾಟವನ್ನಾಗಿ ಮಾರ್ಪಡಿಸಲಾಗದೋ ಅಲ್ಲಿಯವರೆಗೂ ಅದನ್ನು ಸಹಭಾಗಿಯನ್ನಾಗಿಸಿಕೊಂಡು ತಟಸ್ಥಗೊಳಿಸುವುದನ್ನು ಕೂಡ ತಡೆಯಲಾಗದು.

ತಮ್ಮ ಅಸ್ತಿತ್ವದ ಮೂಲವನ್ನು ಸಂರಕ್ಷಿಸಿಕೊಳ್ಳಲು ಹೋರಾಡುವ ತೃತೀಯ ವಿಶ್ವದ ಮಹಿಳೆಯರಿಗೆ ಆದರ್ಶವಾದೀ ಐಸಿಂಗ್ ಹಾಗೂ ವಸ್ತುವಿನಿಂದ ಚೈತನ್ಯವನ್ನು ವಿಚ್ಛೇದನಗೊಳಿಸುವುದು ಎಂಬ ಎರಡೂ ಪರಿಕಲ್ಪನೆಗಳು ಗ್ರಹಣಾತೀತವಾದವು. ಭೂಮಿತಾಯಿ ಎನ್ನುವ ಮಾತನ್ನು ಉದ್ಧರಣ ಚಿಹ್ನೆಗಳಲ್ಲಿ ಇಡುವ ಅಗತ್ಯವಿಲ್ಲ. ಏಕೆಂದರೆ ಅವರು ಈ ಭೂಮಿಯನ್ನು ಜೀವಂತವೆಂದು ಭಾವಿಸುತ್ತಾರೆ. ಅದು ತಮ್ಮ ಹಾಗೂ ಉಳಿದೆಲ್ಲ ಜೀವಿಗಳಿಗೂ ಬದುಕಿನ ಖಾತರಿಯನ್ನು ಕೊಡುತ್ತದೆ. ಅವರು ಭೂಮಿಯ ಪಾವಿತ್ರ್ಯವನ್ನು ಗೌರವಿಸುತ್ತಾರೆ ಮತ್ತು ಅದನ್ನು ಸಂಭ್ರಮಿಸುತ್ತಾರೆ. ಹಾಗೆಯೇ ಭೂಮಿಯನ್ನು ಕೈಗಾರಿಕೆಗಳ ಹಸಿವಿಗೆ, ಸರಕೀಕರಣಕ್ಕೆ ಬೇಕಾದ ಮೃತ ಕಚ್ಚಾವಸ್ತುವನ್ನಾಗಿ ಮಾರ್ಪಡಿಸುವುದನ್ನು ವಿರೋಧಿಸುತ್ತಾರೆ. ಹಾಗಾಗಿ ಅವರು ಪರಿಸರದ ವೈವಿಧ್ಯತೆಯನ್ನೂ, ಮೀರಿದರೆ ತಮ್ಮ ಅಸ್ತಿತ್ವಕ್ಕೆ ಮಾರಕವಾಗುವ ಅದರ ಗಡಿಯನ್ನೂ ಗೌರವಿಸುತ್ತಾರೆ. ಈ ಮಾದರಿಯ ಮೆಟೀರಿಯಲಿಸಂನಲ್ಲಿ, ಈ ಮಾದರಿಯ ಸಹಜ ಪರಿಸರವಾದದಲ್ಲಿ ವಿಶ್ವದ ಬಹುತೇಕ ಮಹಿಳೆಯರು ಉತ್ಪಾದಿಸುವ ಪ್ರತಿದಿನದ ಬದುಕಿನ ಅಗತ್ಯಗಳಲ್ಲಿ ನಮ್ಮ ಎಕೋಫೆಮಿನಿಸ್ಟ್ ನೆಲೆಯಿದೆ. ಈ ಮೆಟೀರಿಯಲಿಸಂ ಸರಕೀಕರಣಗೊಂಡ ಬಂಡವಾಳಶಾಹಿಯಲ್ಲ. ಯಾಂತ್ರಿಕವಾಗಿ ಪರಿಭಾವಿಸಿದ ಮಾರ್ಕ್ಸ್‌ವಾದವೂ ಅಲ್ಲ. ಆ ಎರಡೂ ಪರಿಭಾವಿಸುವಂತೆ ಪರಿಸರದೊಂದಿಗೆ ಮನುಷ್ಯ ಹೊಂದಿರುವ ಸಂಬಂಧ ಒಂದೇ ರೀತಿಯದು. ಆದರೆ ಎಕೋಫೆಮಿನಿಸ್ಟ್ ಅಧ್ಯಾತ್ಮಿಕತೆಯು ಒಂದು ಬಗೆಯ ಲೋಕೋತ್ತರ ಲೋಕೋತ್ತರ ಅಧ್ಯಾತ್ಮಿಕತೆಯೆಂಬ ಭ್ರಾಂತಿಗೆ ನಾವು ಈಡಾಗಬಾರದು. ಲೋಕೋತ್ತರ ಅಧ್ಯಾತ್ಮಿಕತೆಯೋ ಬೆವರಿಳಿಸದೆ ಅನ್ನ ಬೇಕೆನ್ನುತ್ತದೆ. ಅನ್ನ ಎಲ್ಲಿಂದ ಬಂತು, ಅದಕ್ಕೆ ಯಾರು ಬೆವರು ಸುರಿಸಿದರು ಎನ್ನುವ ವಿಚಾರಗಳ ಬಗ್ಗೆ ಅದಕ್ಕೆ ಯೋಚನೆಯಿಲ್ಲ.

ಎಕೋಫೆಮಿನಿಸಂ ಕುರಿತ ನಮ್ಮ ವ್ಯಾಖ್ಯೆಗಳು ಸಂರಕ್ಷಣೆ ಮತ್ತು ಸಂಗೋಪನೆಯ ದೃಷ್ಟಿಕೋನದಿಂದ ರೂಪಿತವಾದವು. ನಮ್ಮ ದೃಷ್ಟಿಯಲ್ಲಿ ಪುರುಷರಿಗಿಂತ ಮಹಿಳೆಯರು ಈ ವ್ಯಾಖ್ಯಾನಕ್ಕೆ ಸನಿಹದಲ್ಲಿದ್ದಾರೆ; ತಮ್ಮ ಬದುಕಿಗಾಗಿ ದುಡಿಯುತ್ತ, ತಮ್ಮ ಸದ್ಯದ

ಬಾಳಿಗಾಗಿ ಹೋರಾಡುತ್ತ ಅವರು ನಗರವಾಸಿಗಳಿಗಿಂತ, ಮಧ್ಯಮ ವರ್ಗದವರಿಗಿಂತ, ಉತ್ತರ ಭೂಭಾಗವಾಸಿಗಳಿಗಿಂತ ಹೆಚ್ಚು ಸಮೀಪದಲ್ಲಿದ್ದಾರೆ. ಆದರೂ ಎಲ್ಲ ಮಹಿಳೆಯರಿಗೂ, ಕೊನೆಗೆ ಎಲ್ಲ ಪುರುಷರಿಗೂ ದೇಹವೆನ್ನುವುದಿದೆ. ಅದು ಕೈಗಾರಿಕಾ ವ್ಯವಸ್ಥೆಯ ಫಲಶ್ರುತಿಯಾದ ವಿನಾಶಕ್ಕೆ ಒಡ್ಡಿಕೊಂಡಿದೆ. ಆದ್ದರಿಂದ ಎಲ್ಲ ಮಹಿಳೆಯರಿಗೂ ಹಾಗೆಯೇ ಕೊನೆಗೆ ಎಲ್ಲ ಪುರಷರಿಗೂ ಮೆಟೀರಿಯಲ್ ಆದ ತಳಹದಿಯೊಂದು ಇದೆ. ಇದರಿಂದ ಸಮಸ್ಯೆಯನ್ನು ವಿಶ್ಲೇಷಿಸಿ ಪ್ರಕ್ರಿಯೆಯನ್ನು ಮಾರ್ಪಾಡು ಮಾಡಬಹುದು.



ಮಧ್ಯಾಹ್ನದ ...

ಅನುವಾದ : ತಾ.ಶ್ರೀ...ರಾಜ್

ಅಡುಗೆ ಮಾಡಿದ ನಂತರ ಒಲೆಯ... ಮಂಡಿಗಳ ಮಧ್ಯೆ ತಲೆಯಿಟ್ಟು ಕುಳಿ... ...ಯೋಗಿದ್ದ ... ಮೇಲೆ ಹರಿದಾಡುತ್ತಿದ್ದ ... ಳು. ಬಹಳ ಹೊತ್ತಿನಿಂದ ತನಗೆ ... ದ್ದುದು ಅವಳಿಗೀಗ ಇದ್ದಕ್ಕಿದ್ದಂತೆ ನೆನಪಾ... ತಕ್ಷಣವೇ ಉನ್ಮತ್ತಳಂತೆ ಎದ್ದು ಹರವಿಯಿಂದ ಲೋಟ ತುಂಬಾ ನೀರು ತುಂಬಿಕೊಂಡು ಗಟಗಟನೆ ಕುಡಿದಳು. ಬರೀ ನೀರು ಅವಳ ಗಂಟಲಲ್ಲಿ ಸಿಕ್ಕಿಕೊಂಡಂತಾಗಿ, "ಅಯ್ಯೋ ದೇವರೇ!" ಎನ್ನುತ್ತಾ ಅಲ್ಲೇ ...ದ ಮೇಲೆ ಕುಸಿದಳು. ಹೆಚ್ಚು ಕಡಿಮೆ ಅರ್ಧ ಘಂಟೆ ಅಷ್ಟೇ ಅದೇ ರೀತಿ ಬಿದ್ದಿದ್ದ ಅವಳಿಗೆ ನಂತರ ನಿಧಾನವಾಗಿ ಉಸಿರು ಬಂದಂತಾಯ್ತು. ಎದ್ದು ಕುಳಿತಳು. ಕಣ್ಣು ಬಿಳಿಬಿಳಿ ಬಿಡುತ್ತ ನೋಡಿದಾಗ ಮತ್ತೆ ಅವಳ ಚಪ್ಪರದ ಕೆಳಗೆ ಮುರುಕು ಬೆಂಚಿನ ಮೇಲೆ ಮಲಗಿದ್ದ ತನ್ನ ಆರು ವರ್ಷದ ಮಗ ಪ್ರಮೋದನ ಮೇಲೆ ಬಿತ್ತು. ಹುಡುಗ ಬತ್ತಲು ಬಿದ್ದಿದ್ದ. ಅವನ ಕೆನ್ನೆ ಮತ್ತು ಎದೆಯ ಮೂಳೆಗಳು ಸ್ಪಷ್ಟವಾಗಿ ಕಾಣುತ್ತಿದ್ದವು. ಕೈಕಾಲು ಬಾಗಿದ ಸೌತೆಕಾಯಿಯಂತೆ ಬಡಕಲಾಗಿದ್ದು ಅಸ್ತವ್ಯಸ್ತವಾಗಿ ಬಿದ್ದಿದ್ದವು. ಅವನ ಹೊಟ್ಟೆ ಕರಿಮಡಕೆಯಂತೆ ಊದಿಕೊಂಡಿತ್ತು. ತೆರೆದು ಜೊಲ್ಲು ಸೋರುತ್ತಿರುವ ಬಾಯಿಯ ಮೇಲೆ ಅಸಂಖ್ಯಾತ ನೊಣಗಳು ಕೂತೆದ್ದು ಹಾರಾಡುತ್ತಿದ್ದವು.

ಸಾವರಿಸಿಕೊಂಡು ಎದ್ದ ಸಿದ್ಧೇಶ್ವರಿ ಮಗುವಿನ ಮುಖದ ಮೇಲೆ ತನ್ನ ಮಾಸಿ ಹರಿದ ಕುಪ್ಪಸವೊಂದನ್ನು ಹಾಕಿ ಒಂದರ್ಧ ನಿಮಿಷ ಸ್ತಬ್ದಳಾಗಿ ನಿಂತಿದ್ದಳು. ನಂತರ ಹೊರ ಬಾಗಿಲಿನ ಬಳಿ ಹೋಗಿ ಬಾಗಿಲ ಸಂದಿನಿಂದ ಬೀದಿಯನ್ನು ದಿಟ್ಟಿಸಿ ನೋಡತೊಡಗಿದಳು. ಗಂಟೆ ಹನ್ನೆರಡಾಗಿತ್ತು. ಬಿಸಿಲು ಬಹಳ ಬಿರುಸಾಗಿತ್ತು. ಆಗೊಮ್ಮೆ, ಈಗೊಮ್ಮೆ ಒಂದಿಬ್ಬರು ತಲೆಯ ಮೇಲೆ ಟವಲ್ಲನ್ನೋ, ಕರವಸ್ತ್ರವನ್ನೋ ಹಾಕಿಕೊಂಡು ಅಥವಾ ಕೊಡೆ ಹಿಡಿದುಕೊಂಡು ಸರಸರನೆ ಮುಂದಿನ ದಾರಿಗುಂಟ ಸಾಗಿಹೋಗುತ್ತಿದ್ದರು.

ಹತ್ತು-ಹದಿನೈದು ನಿಮಿಷಗಳ ತನಕ ಅವಳು ಅಲ್ಲೇ ನಿಂತಿದ್ದಳು. ನಂತರ ಅವಳ ಮುಖದ ತುಂಬ ವ್ಯಾಕುಲತೆ ಹರಡಿಕೊಳ್ಳುತ್ತಿದ್ದಂತೆ ಆಕಾಶ ಮತ್ತು ಉರಿಬಿಸಿಲಿನತ್ತ ಬಹಳ ಚಿಂತಿತಳಾಗಿ ನೋಡಿದಳು. ಒಂದೆರಡು ಕ್ಷಣದ ನಂತರ ಒರಗಿಕೊಂಡಿದ್ದ ಬಾಗಿಲಿನಿಂದ ಒಂದಿಷ್ಟು ಮುಂದೆ ಹೋಗಿ ಬೀದಿಯ ಅಂಚನ್ನು ದಿಟ್ಟಿಸಿದಾಗ ಅವಳ ದೊಡ್ಡಮಗ ರಾಮಚಂದ್ರ ಮನೆಕಡೆಗೆ ನಿಧಾನವಾಗಿ ಕಾಲೆಳೆದುಕೊಂಡು ಬರುತ್ತಿದ್ದುದು ಕಾಣಿಸಿತು. ಲಗುಬಗೆಯಿಂದ ಸಿದ್ಧೇಶ್ವರಿ ಒಂದು ಲೋಟ ನೀರನ್ನು ತಂದು ಚಪ್ಪರದ ಕೆಳಗಿದ್ದ ಮುರುಕು ಬೆಂಚಿನ ಪಕ್ಕ ಇಟ್ಟಳು. ಒಳಗೆ ಹೋಗಿ ಊಟದ ಜಾಗವನ್ನು ಬಿರಬಿರನೆ ನೀರು ಹಾಕಿ ಒರೆಸಿ ಒಪ್ಪಗೊಳಿಸತೊಡಗಿದಳು. ನಂತರ ಮಣೆ ಹಾಕುತ್ತಾ ಬಾಗಿಲಿನತ್ತ ಕಣ್ಣಾಡಿಸಿದಳು. ಅಷ್ಟರಲ್ಲೇ ರಾಮಚಂದ್ರ ಒಳಗೆ ಕಾಲಿಡುತ್ತಿದ್ದ.

ಬಂದವನೇ ರಾಮಚಂದ್ರ ಧೊಪ್ಪೆಂದು ಮುರುಕು ಬೆಂಚಿನ ಮೇಲೆ ಕುಸಿದು ಕುಳಿತವನು ನಂತರ ಅಲ್ಲೇ ಹೆಣದಂತೆ ಉರುಳಿಕೊಂಡ. ಅವನ ಬಾಯಿ ಕೆಂಪಾಗಿ ಊದಿಕೊಂಡಿತ್ತು. ಕೂದಲು ಅಸ್ತವ್ಯಸ್ತವಾಗಿದ್ದರ ಜೊತೆ ಅವನ ಹರಿದ ಹಳೆಯ ಬೂಟಿನ ಮೇಲೆ ಧೂಳು ಮುಸುಕಿತ್ತು.

ಸಿದ್ಧೇಶ್ವರಿಗೆ ಮೊದಲು ಅವನ ಬಳಿಗೆ ಹೋಗುವ ಧೈರ್ಯವಾಗಲಿಲ್ಲ. ಹಾಗಾಗಿ ಇದ್ದಲ್ಲಿಂದಲೇ ಗಾಬರಿಗೊಂಡ ಜಿಂಕೆಯ ಹಾಗೆ ತಲೆಯೆತ್ತಿ ಮಗನ ವ್ಯಾಕುಲ ಸ್ಥಿತಿಯನ್ನು ನೋಡತೊಡಗಿದಳು. ಆದರೆ ಸುಮಾರು ಹತ್ತು ನಿಮಿಷಗಳಾದರೂ ರಾಮಚಂದ್ರ ಏಳದೇ ಇದ್ದಾಗ ಅವಳ ಎದೆ ಜೋರಾಗಿ ಬಡಿದುಕೊಳ್ಳಲಾರಂಭಿಸಿತು. ಹತ್ತಿರ ಹೋಗಿ ನಿಧಾನವಾಗಿ ಕೂಗಿದಳು. "ಬಡ್ಕೂ, ಏ ಬಡ್ಕೂ..." ಆದರೆ ಅವನಿಂದ ಏನೂ ಪ್ರತಿಕ್ರಿಯೆ ಬಾರದ ಕಾರಣ ಭಯಗೊಂಡು ತನ್ನ ನಡುಗುವ ಕೈಬೆರಳನ್ನು ಮಗನ ಮೂಗಿನ ಬಳಿ ಇಟ್ಟು ನೋಡಿದಳು. ಉಸಿರಾಟ ಮಾಮೂಲಿನಂತಿತ್ತು. ನಂತರ ಹಣೆಯ ಮೇಲೆ ಕೈಯಿಟ್ಟು ನೋಡಿದಳು ಜ್ವರವಿರಲಿಲ್ಲ. ಕೈತಾಕಿದ್ದರಿಂದ ರಾಮಚಂದ್ರ ಸಾವರಿಸಿಕೊಂಡು ಕಣ್ತೆರೆದ. ಮೊದಲು ತನ್ನ ಅವ್ವನ ಕಡೆಗೆ ಓರೆಗಣ್ಣಿನಿಂದ ನೋಡಿದವನೇ ಲಗುಬಗೆಯಿಂದ ಎದ್ದು ಕುಳಿತ. ಬೂಟನ್ನು ಕಳಚಿ ಕೈಕಾಲು ತೊಳೆದ ನಂತರ ಅವನು ಯಾಂತ್ರಿಕವಾಗಿ ಮತ್ತೆ ಬೆಂಚಿನ ಮೇಲೆ ಕುಳಿತು ಲೋಟದಲ್ಲಿದ್ದ ನೀರನ್ನು ಕುಡಿದ. ಸಿದ್ಧೇಶ್ವರಿ ಅಳುಕುತ್ತಾ

ಕೇಳಿದಳು, "ಅಡ್ಗೆ ಆಗಿದೆ, ಇಲ್ಗೇ ತಂದು ಕೊಡ್ಲೇನು?" ಮೇಲೇಳುತ್ತ ರಾಮಚಂದ್ರ ಕೇಳಿದ, "ಅಪ್ಪಂದು ಊಟ ಆಯ್ತಾ?" ಸಿದ್ಧೇಶ್ವರಿ ಅಡುಗೆ ಪಾತ್ರೆಗಳತ್ತ ಹೋಗುತ್ತಾ ಹೇಳಿದಳು, "ಇಲ್ಲ, ಇನ್ನೇನು ಬರ್ತಾರೆ ಅನ್ಸುತ್ತೆ".

ರಾಮಚಂದ್ರ ಮಣೆಯ ಮೇಲೆ ಕುಳಿತ. ಅವನ ವಯಸ್ಸು ಸುಮಾರು ಇಪ್ಪತ್ತೊಂದು ವರ್ಷವಿರಬೇಕು. ಎತ್ತರವಿದ್ದು, ಸಣಕಲಾಗಿದ್ದ. ಬಿಳಿಬಣ್ಣ, ದೊಡ್ಡ ದೊಡ್ಡ ಕಣ್ಣುಗಳು. ತುಟಿಗಳು ಸುಕ್ಕುಗಟ್ಟಿದ್ದವು. ಅವನು ಸ್ಥಳೀಯ ದಿನಪತ್ರಿಕೆಯೊಂದರ ಕಚೇರಿಯಲ್ಲಿ ಸ್ವಇಚ್ಛೆಯಿಂದ ಪ್ರೂಫ್ ರೀಡರ್ ಕೆಲಸ ಕಲಿಯುತ್ತಿದ್ದ. ಕಳೆದ ವರ್ಷವಷ್ಟೇ ಅವನು ಪಿಯುಸಿ ಪರೀಕ್ಷೆ ಪಾಸು ಮಾಡಿದ್ದ.

ಸಿದ್ಧೇಶ್ವರಿ ಊಟದ ತಟ್ಟೆಯನ್ನು ತಂದು ಅವನ ಮುಂದಿಟ್ಟು ಪಕ್ಕದಲ್ಲೇ ಕುಳಿತು ಬೀಸಣಿಕೆಯಿಂದ ಗಾಳಿ ಬೀಸಲಾರಂಭಿಸಿದಳು. ರಾಮಚಂದ್ರ ಊಟದ ತಟ್ಟೆಯತ್ತ ತತ್ವಜ್ಞಾನಿಯಂತೆ ನೋಡಿದ. ಒಟ್ಟು ಎರಡು ತೆಳು ರೊಟ್ಟಿಗಳು, ಮುಟ್ಟಿ ಬಟ್ಟಲಿನ ತುಂಬಾ ತೀರಾ ನೀರುನೀರಾದ ಬೇಳೆ ತೊವ್ವೆ ಮತ್ತು ಕಡಲೆಕಾಳಿನ ಪಲ್ಲೆ.

ರಾಮಚಂದ್ರ ರೊಟ್ಟಿಯ ಮೊದಲ ತುಣುಕನ್ನು ನುಂಗುತ್ತಾ ಕೇಳಿದ. "ಮೋಹನ ಎಲ್ಲಿ? ಬಿಸ್ಲು ಏರ್ತಾನೇ ಇದೆ".

ಮೋಹನ ಸಿದ್ಧೇಶ್ವರಿಯ ಎರಡನೇ ಮಗ. ಅವನ ವಯಸ್ಸು ಸುಮಾರು 18 ವರ್ಷ. ಈ ವರ್ಷ ಅವನು ಖಾಸಗಿ ಅಭ್ಯರ್ಥಿಯಾಗಿ ಸೆಕೆಂಡರಿ ಸ್ಕೂಲ್ ಪರೀಕ್ಷೆಗೆ ಸಿದ್ಧತೆ ಮಾಡಿಕೊಳ್ಳುತ್ತಿದ್ದ. ಅವನು ಮನೆಯಿಂದ ಯಾವಾಗ ಮಾಯವಾಗಿದ್ದನೋ ಬಲ್ಲವರಾರು? ಅವನು ಎಲ್ಲಿ ಹೋಗಿರುವನೆಂದು ಸ್ವತಃ ಸಿದ್ಧೇಶ್ವರಿಗೂ ಗೊತ್ತಿರಲಿಲ್ಲ. ಆದರೆ ನಿಜ ಹೇಳುವ ಮನಸ್ಸಾಗಲಿಲ್ಲ. ಹಾಗಾಗಿ ಹಸಿಹಸಿ ಸುಳ್ಳು ಹೇಳಿದಳು. "ಯಾವ್ದೋ ಹುಡ್ಗನ ಮನ್ಗೆ ಓದ್ಕೊಳ್ಳಕ್ಕೆ ಅಂತ ಹೋದ. ಇನ್ನೇನ್ ಬಂದಾನು. ಅವ್ನ ಬುದ್ಧಿ ಬಲು ಚುರುಕು. ದಿನೆಲ್ಲ ಓದೋದ್ರಲ್ಲೇ ಮುಳ್ಗಿರ್ತಾನಂತೆ. ಇವ್ನಂತೂ ಯಾವಾಗ್ಲೂ ಅವ್ನ ಬಗ್ಗೇನೇ ಹೇಳ್ತಿರ್ತಾನೆ".

ರಾಮಚಂದ್ರ ಏನೂ ಹೇಳಲಿಲ್ಲ. ರೊಟ್ಟಿಯ ಚೂರೊಂದನ್ನು ಬಾಯಲ್ಲಿಟ್ಟುಕೊಂಡು ಲೋಟದಲ್ಲಿದ್ದ ಅಷ್ಟೂ ನೀರನ್ನು ಗಟಗಟನೆ ಕುಡಿದು ಮತ್ತೆ ತನ್ನ ಊಟ ಮುಂದುವರಿಸಿದ. ರೊಟ್ಟಿಯನ್ನು ಬಹಳ ಸಣ್ಣ ಸಣ್ಣ ಚೂರುಗಳಾಗಿ ಮುರಿದುಕೊಂಡು ಒಂದೊಂದೇ ಚೂರನ್ನು ನಿಧಾನವಾಗಿ ಅಗಿದಗಿದು ತಿನ್ನುತ್ತಿದ್ದ.

ಸಿದ್ಧೇಶ್ವರಿ ಭಯ ಮತ್ತು ಆತಂಕದಿಂದ ಒಂದೇ ಸಮನೆ ತನ್ನ ಮಗನನ್ನು ನೋಡುತ್ತಾ ಕುಳಿತಿದ್ದಳು. ಕೆಲಕ್ಷಣಗಳ ನಂತರ ಮಗನ ಮುಖವನ್ನೇ ದಿಟ್ಟಿಸಿ ಅಂಜುತ್ತಾ ಅಳುಕುತ್ತಾ ಕೇಳಿದಳು. "ಅಲ್ಲೇನಾದ್ರೂ ಆಗಿದ್ಯೇನು?"

ರಾಮಚಂದ್ರ ತನ್ನ ದೊಡ್ಡ ದೊಡ್ಡ ಭಯರಹಿತ ಕಣ್ಣುಗಳಿಂದ ತನ್ನವ್ವನನ್ನು ನೋಡಿ ಮತ್ತೆ ತಲೆ ತಗ್ಗಿಸಿ ವಿಚಿತ್ರ ನೀರಸ ಧ್ವನಿಯಲ್ಲಿ ಹೇಳಿದ, "ಸಮಯ ಬಂದಾಗ ಏನೆಲ್ಲ ಆಗೋಗ್ತದೆ, ಬಿಡು".

ಏನೂ ಅರ್ಥವಾಗದ ಸಿದ್ಧೇಶ್ವರಿ ಸುಮ್ಮನಿದ್ದಳು. ಬಿಸಿಲು ಮತ್ತಷ್ಟು ಏರಿತ್ತು. ಪುಟ್ಟ ಅಂಗಳದ ಮೇಲಿನ ಆಕಾಶದಲ್ಲಿ ಒಂದೆರಡು ಮೋಡದ ತುಣುಕುಗಳು ತೇಲುದೋಣಿಗಳಂತೆ ಸಾಗುತ್ತಿದ್ದವು. ಆಚಿನ ಬೀದಿಯಲ್ಲಿ ದಡಬಡನೆ ಓಡುತ್ತಿದ್ದ ಜಟಕಾ ಗಾಡಿಯ ಸದ್ದು ಕೇಳಿಬರುತ್ತಿತ್ತು. ಬೆಂಚಿನ ಮೇಲೆ ಮಲಗಿದ್ದ ಹುಡುಗನ ಉಸಿರಾಟದ ಕರಕರ ಸದ್ದು ಕರುಳಿರಿಯುತ್ತಿತ್ತು.

ರಾಮಚಂದ್ರ ಇದ್ದಕ್ಕಿದ್ದಂತೆ ಮೌನ ಮುರಿಯುತ್ತಾ ಕೇಳಿದ, "ಪ್ರಮೋದನ ಊಟ?"

ಸಿದ್ಧೇಶ್ವರಿ ಪ್ರಮೋದನತ್ತ ನೋಡುತ್ತಾ ನೋವು ತುಂಬಿದ ದನಿಯಲ್ಲಿ ಉತ್ತರಿಸಿದಳು, "ಹಾಂ, ಆಯ್ತು, ತಿಂದ".

"ಅಳಲಿಲ್ವೇನು?"

ಸಿದ್ಧೇಶ್ವರಿ ಮತ್ತೆ ಸುಳ್ಳು ಹೇಳಿದಳು, "ಇವತ್ತಂತೂ ನಿಜ್ವಾಗ್ಲೂ ಅಳಲೇ ಇಲ್ಲ. ಅವ್ನು ಬಲು ಬುದ್ವಂತ ಆಗ್ಬಿಟ್ಟವ್ನೆ. ದೊಡ್ಡಣ್ಣನ್ ಜೊತೆ ಹೋಗ್ತೀನಿ ಅಂತಿದ್ದ. ಇಂಥಾ ಹುಡ್ಗ... "ಆದರೆ ಗಂಟಲಲ್ಲಿ ಏನೋ ಸಿಕ್ಕಿ ಹಾಕಿಕೊಂಡಂತಾಗಿ ಅವಳಿಗೆ ಮುಂದಕ್ಕೆ ಏನೂ ಹೇಳಲಾಗಲಿಲ್ಲ. ನಿನ್ನೆ ಪ್ರಮೋದ ಎಳ್ಳಿನ ಮಿಠಾಯಿ ಬೇಕೆಂದು ಹಠ ಹಿಡಿದುಬಿಟ್ಟಿದ್ದ. ಈಗಲೂ ಅದಕ್ಕಾಗಿ ಒಂದೂವರೆ ಗಂಟೆ ಅತ್ತು ಗೋಳಾಡುತ್ತಾ ಸ್ವಲ್ಪ ಹೊತ್ತಿನ ಮುಂಚೆಯಷ್ಟೇ ಮಲಗಿದ್ದ.

ರಾಮಚಂದ್ರ ಒಂದಿಷ್ಟು ಆಶ್ಚರ್ಯದಿಂದ ತನ್ನವ್ವನ ಮುಖವನ್ನೊಮ್ಮೆ ನೋಡಿ ನಂತರ ತಲೆತಗ್ಗಿಸಿ ಒಂದಿಷ್ಟು ಬೇಗ ಬೇಗ ತಿನ್ನಲಾರಂಭಿಸಿದ.

ತಟ್ಟೆಯಲ್ಲಿ ರೊಟ್ಟಿಯ ಒಂದೇ ಒಂದು ಚೂರು ಉಳಿದಿತ್ತು. ಸಿದ್ಧೇಶ್ವರಿ ಏಳಲು ಪ್ರಯತ್ನಿಸುತ್ತಾ ಕೇಳಿದಳು, "ಇನ್ನೊಂದು ರೊಟ್ಟಿ ತಂದ್‌ಕೊಡ್ಲೇನು?"

ರಾಮಚಂದ್ರ ಕೈಸನ್ನೆ ಮಾಡಿ ಬೇಡವೆಂದು ಸೂಚಿಸುತ್ತಾ ಗಡಿಬಿಡಿಯಿಂದ ಹೇಳಿದ, "ಬೇಡ ಬೇಡ, ಒಂಚೂರೂ ಬೇಡ. ನನ್ ಹೊಟ್ಟೆ ಮೊದ್ಲೇ ತುಂಬೋಗಿದೆ. ನಾನಂತೂ ಇದ್ನೂ ಬಿಟ್ಟುಬಿಡ್ತೀನೇನೋ. ಸಾಕು, ಬೇಡ ಬೇಡ".

ಸಿದ್ಧೇಶ್ವರಿ ಇದ್ದಲ್ಲಿಂದಲೇ ಒತ್ತಾಯಿಸಿದಳು. "ಹೋಗ್ಲಿ, ಅರ್ಧನಾದ್ರೂ ತಗೋ".

ರಾಮಚಂದ್ರ ಸಿಟ್ಟಿಗೆದ್ದ, "ಜಾಸ್ತಿ ತಿನ್ಸಿ ತಿನ್ಸಿ ಖಾಯ್ಲೆ ಕೆಡವ್ಬೇಕು ಅಂತಿದ್ದೀಯೇನು?

ನಿಮ್ಗೇನೂ ಗೊತ್ತಾಗೋದೇ ಇಲ್ಲ. ಬಲವಂತ ಮಾಡೋದೊಂದು ಚೆನ್ನಾಗಿ ಗೊತ್ತು. ಹಸ್ವಾಗಿದ್ರೆ ತಗೊಳ್ತಿರ್ಲಿಲ್ವೇನು?"

ಸಿದ್ಧೇಶ್ವರಿ ಎಲ್ಲಿದ್ದಳೋ ಅಲ್ಲೇ ಕುಳಿತಿದ್ದಳು. ರಾಮಚಂದ್ರ ತಟ್ಟೆಯಲ್ಲಿ ಉಳಿದಿದ್ದ ಚೂರುಪಾರನ್ನೆಲ್ಲಾ ಗೋರಿಗೊಂಡು ನೀರಿನ ಲೋಟದತ್ತ ನೋಡುತ್ತಾ ಹೇಳಿದ, "ನೀರು ಕೊಡು".

ಸಿದ್ಧೇಶ್ವರಿ ಲೋಟ ತೆಗೆದುಕೊಂಡು ನೀರು ತರಲು ಹೋದಳು. ರಾಮಚಂದ್ರ ಬಟ್ಟಲನ್ನೊಮ್ಮೆ ಬೆರಳಿನಿಂದ ಮೆಲುವಾಗಿ ಬಾರಿಸಿದ. ನಂತರ ತಟ್ಟೆಯಲ್ಲಿ ಬೆರಳಿನಿಂದ ಏನನ್ನೋ ಗೀಚುತ್ತಾ ಕುಳಿತ. ಒಂದೆರಡು ಕ್ಷಣದ ನಂತರ ಕೈಯಲ್ಲಿ ಇನ್ನೂ ಉಳಿಸಿಕೊಂಡಿದ್ದ ಕೊನೆಯ ಚೂರನ್ನು ನಿಧಾನವಾಗಿ ಎತ್ತಿ ಒಮ್ಮೆ ಅದರ ಮೇಲೆ ಕಣ್ಣಾಡಿಸಿ ಕಡೆಗೆ ಅತ್ತಿತ್ತ ನೋಡಿ ಅದು ಊಟದ ತುತ್ತಿನ ಬದಲು ತಾಂಬೂಲವೇನೋ ಎನ್ನುವಂತೆ ಸಲೀಸಾಗಿ ತಿಂದ.

ಎರಡನೇ ಮಗ ಮೋಹನ ಬಂದವನೇ ಕೈಕಾಲು ತೊಳೆದು ಮಣೆಯ ಮೇಲೆ ಕುಳಿತುಬಿಟ್ಟ. ಅವನು ಸ್ವಲ್ಪ ಕಪ್ಪು ಮತ್ತು ಕಣ್ಣು ಸ್ವಲ್ಪ ಚಿಕ್ಕವು. ಮುಖದ ಮೇಲೆ ಸಿಡುಬಿನ ಕಲೆಗಳಿದ್ದವು. ಉಳಿದಂತೆ ತನ್ನಣ್ಣನಂತೆಯೇ ಸಣಕಲಾಗಿದ್ದರೂ ಅವನಷ್ಟು ಎತ್ತರವಿರಲಿಲ್ಲ. ಅವನು ತನ್ನ ವಯಸ್ಸಿಗಿಂತ ಬಹಳ ಗಂಭೀರ ಹಾಗೂ ಚಿಂತಿತನಾಗಿರುವಂತೆ ಕಾಣುತ್ತಿದ್ದ.

ಸಿದ್ಧೇಶ್ವರಿ ಅವನ ಮುಂದೆ ತಟ್ಟೆಯನ್ನಿಡುತ್ತಾ ಕೇಳಿದಳು, "ಎಲ್ಹೋಗಿದ್ದೆ ಮಗೂ, ಅಣ್ಣ ಕೇಳ್ತಾ ಇದ್ದ."

ಮೋಹನ ರೊಟ್ಟಿಯ ದೊಡ್ಡ ಚೂರೊಂದನ್ನು ನುಂಗಲು ಪ್ರಯತ್ನಿಸುತ್ತಾ ಒಂದು ರೀತಿಯ ಅಸ್ವಾಭಾವಿಕ ಧ್ವನಿಯಲ್ಲಿ ಉತ್ತರಿಸಿದ. "ಇನ್ನೆಲ್ಲಿಗ್ ಹೋಗ್ಲಿ, ಇಲ್ಲೇ ಎಲ್ಲೋ ಇದ್ದೆ."

ಸಿದ್ಧೇಶ್ವರಿ ಅಲ್ಲೇ ಕುಳಿತು ಬೀಸಣಿಕೆಯನ್ನು ಅತ್ತಿತ್ತ ಆಡಿಸುತ್ತಾ ಬಡಬಡಿಸುತ್ತಿರುವಳೇನೋ ಎನ್ನುವಂತೆ, "ಅಣ್ಣ ನಿನ್ನ ಬಲು ಹೊಗಳ್ತಿದ್ದ, ಮೋಹನ ಬಲು ಬುದ್ಧಿವಂತ ಆಗ್ತಾನೆ. ದಿನೆಲ್ಲ ಅವ್ನ ಗಮನ ಓದೋದ್ರ ಕಡೆಗೇ ಇರುತ್ತೆ ಅಂತಿದ್ದ." ಹೀಗೆನ್ನುತ್ತಾ ಮೋಹನ ಏನೋ ಕಳ್ಳತನ ಮಾಡಿರುವನೇನೋ ಎನ್ನುವಂತೆ ಸಿದ್ಧೇಶ್ವರಿ ಅವನತ್ತ ನೋಡತೊಡಗಿದಳು.

ಮುಂದೇನು ಹೇಳಬೇಕು, ಏನು ಮಾಡಬೇಕೆಂದೇ ಸಿದ್ಧೇಶ್ವರಿಗೆ ಹೊಳೆಯಲಿಲ್ಲ. ಈ ಇಬ್ಬರು ಮಕ್ಕಳ ಬಗ್ಗೆ ಅವಳಿಗೆ ಬಹಳ ಭಯವೆನಿಸುತ್ತಿತ್ತು. ಇದ್ದಕ್ಕಿದ್ದಂತೆ ಅವಳ ಕಣ್ಣುಗಳು ತುಂಬಿ ಬಂದು ದೃಷ್ಟಿಯನ್ನು ಬೇರೊಂದು ಕಡೆಗೆ ಹರಿಸಿದಳು.

ಸ್ವಲ್ಪ ಹೊತ್ತಿನ ನಂತರ ಮೋಹನನತ್ತ ದೃಷ್ಟಿ ಹರಿಸುವಷ್ಟರಲ್ಲಿ ಆವನು ಊಟವನ್ನು ಬಹುತೇಕ ಮುಗಿಸಿಬಿಟ್ಟಿದ್ದ. ಬೆಚ್ಚಿಬಿದ್ದವಳಂತೆ ಅವ್ವ ಕೇಳಿದಳು. "ಇನ್ನೊಂದ್ ರೊಟ್ಟಿ ತರ್ಲಾ?"

ಮೋಹನ ಒಲೆಯ ಕಡೆಗೆ ಕಳ್ಳ ರಹಸ್ಯಮಯ ನೋಟದಿಂದ ನೋಡುತ್ತಾ ದುರ್ಬಲ ದನಿಯಲ್ಲಿ ಹೇಳಿದ. "ಬೇಡ".

ಸಿದ್ದೇಶ್ವರಿ ಅಂಗಲಾಚುವಂತೆ ಹೇಳಿದಳು. "ಬೇಡ ಅನ್ಬೇಡ. ನನ್ನಾಣೆ. ಒಂದರ್ಧ ತಗೋ. ನಿಮ್ಮಣ್ಣ ಒಂದೇ ರೊಟ್ಟಿ ತಿಂದಿದ್ದು".

ಮೋಹನ ತನ್ನವ್ವನತ್ತ ತದೇಕವಾಗಿ ನೋಡಿ ನಂತರ ಶಿಕ್ಷಕರು ವಿದ್ಯಾರ್ಥಿಗಳಿಗೆ ಅರ್ಥ ಮಾಡಿಸಲು ಪ್ರಯತ್ನಿಸುವ ಹಾಗೆ ನಿಧಾನವಾಗಿ ಹೇಳಿದ. "ಬೇಡಾಂದ್ರೆ ಬೇಡ. ನಿಜ್ವಾಗ್ಲೂ ಹಸ್ವಿಲ್ಲ. ಅದೂ ಅಲ್ದೇ ಆ ರೊಟ್ಟೀನ ತಿನ್ನೋ ತರ ಮಾಡಿದ್ದೀಯೇನು? ಆದ್ರೂ ಹಾಕ್ಲೇಬೇಕು ಅಂತಿದ್ರೆ ಈ ಬಟ್ಲಿಗೆ ಚೂರು ತೊವ್ವೆ ಹಾಕು. ತೊವ್ವೆ ಬಲು ಚೆನ್ನಾಗಿದೆ".

ಸಿದ್ದೇಶ್ವರಿಗೆ ಮತ್ತೇನೂ ಮಾತನಾಡಲು ಆಗಲಿಲ್ಲ. ಎದ್ದು ಬಟ್ಟಲು ತುಂಬಾ ತೊವ್ವೆ ತಂದು ಹಾಕಿದಳು.

ಮೋಹನ ಬಟ್ಟಲನ್ನೆತ್ತಿ ತುಟಿಗೆ ತಾಕಿಸಿ ಕುಡಿಯುತ್ತಿರುವಾಗಲೇ ಮುನ್ಶಿ ಚಂದ್ರಿಕಾಪ್ರಸಾದ್ ತಮ್ಮ ಬೂಟುಗಳನ್ನು ದರದರನೆ ಎಳೆಯುತ್ತಾ ಬಂದವರು ರಾಮನಾಮವನ್ನು ಸ್ಮರಿಸುತ್ತಾ ಮುರುಕು ಬೆಂಚಿನ ಮೇಲೆ ಕೂತರು. ಸಿದ್ದೇಶ್ವರಿ ಹಣೆಯ ಮೇಲಿನ ಸೆರಗನ್ನು ಒಂದಿಷ್ಟು ಕೆಳಗೆಳೆದುಕೊಂಡಳು. ಮೋಹನ ನೀರು ತೊವ್ವೆಯನ್ನು ಒಂದೇ ಉಸಿರಿಗೆ ಕುಡಿದು ಮುಗಿಸಿ ನೀರಿನ ಲೋಟವನ್ನು ಕೈಯಲ್ಲಿ ಹಿಡಿದುಕೊಂಡು ಬಿರಬಿರನೆ ಹೊರಗೆ ಹೊರಟುಹೋದ.

ಎರಡು ರೊಟ್ಟಿ, ಬಟ್ಟಲು ತುಂಬಾ ತೊವ್ವೆ ಮತ್ತು ಕಡಲೆಪಲ್ಲೆ. ಮುನ್ಶಿ ಚಂದ್ರಿಕಾಪ್ರಸಾದ್ ಬೆಂಚಿನ ಮೇಲೆ ಚಕ್ಕಂಬಕ್ಕಳ ಹಾಕಿ ಕುಳಿತು ರೊಟ್ಟಿಯ ಒಂದೊಂದು ಗುಕ್ಕನ್ನೂ ಮುದಿ ಹಸುವೊಂದು ಮೆಲುಕು ಹಾಕುವ ಹಾಗೆ ಚಪ್ಪರಿಸಿ ಅಗಿಯುತ್ತಾ ತಿನ್ನಲಾರಂಭಿಸಿದರು. ಅವರ ವಯಸ್ಸು ಸುಮಾರು ನಲವತ್ತೈದು ವರ್ಷಗಳಿರಬಹುದು. ಆದರೆ ಐವತ್ತು-ಐವತ್ತೈದು ವರ್ಷದವರಂತೆ ಕಾಣಿಸುತ್ತಿದ್ದರು. ಮೈಮೇಲಿನ ಚರ್ಮ ತೂಗಾಡುತ್ತಿತ್ತು, ಬೋಡುತಲೆ ಕನ್ನಡಿಯಂತೆ ಹೊಳೆಯುತ್ತಿತ್ತು. ಕೊಳೆಯಾದ ಧೋತಿಯ ಮೇಲೆ ಇದ್ದುದರಲ್ಲಿ ಸ್ವಚ್ಛವೆನಿಸುವಂತಹ ಬನಿಯನ್ ಕಡ್ಡಿಗೆ ತೊಡಿಸಿದಂತೆ ಸಡಿಲವಾಗಿ ತೂಗಾಡುತ್ತಿತ್ತು.

ಮುನ್ಶಿಯವರು ಬಟ್ಟಲನ್ನು ಕೈಯಲ್ಲಿ ಹಿಡಿದುಕೊಂಡು ಬಾಯಲ್ಲಿದ್ದ ತೊವ್ವೆಯನ್ನು ನುಂಗುತ್ತಾ ಕೇಳಿದರು. "ದೊಡ್ಡವ್ನೆಲ್ಲಿ. ಕಾಣ್ತಾನೇ ಇಲ್ವಲ್ಲ?"

ಎದೆಯನ್ನು ಏನೋ ಇರಿಯುತ್ತಿರುವ ಹಾಗೆನಿಸಿ ತನ್ನ ಮನಸ್ಸಿನಲ್ಲಿ ಏನಾಗುತ್ತಿದೆಯೆಂದೇ ಸಿದ್ಧೇಶ್ವರಿಗೆ ಅರ್ಥವಾಗದಂತಾಗಿತ್ತು. ಬಳಲಿದ್ದ ಕೈಗಳು ಬಿದ್ದು ಹೋಗುವವೇನೋ ಎನಿಸುತ್ತಿದ್ದರೂ ಮುನ್ನಿಯವರ ಧ್ವನಿಗೆ ಎಚ್ಚೆತ್ತಂತೆ ಕೈಯಲ್ಲಿದ್ದ ಬೀಸಣಿಕೆಯನ್ನು ಒಂದಿಷ್ಟು ಜೋರಾಗಿ ಆಡಿಸುತ್ತಾ ಹೇಳಿದಳು, "ಈಗಷ್ಟೇ ಊಟ ಮಾಡಿ ಕೆಲ್ಸಕ್ಕೆ ಹೋದ. ಇನ್ನೊಂದಿಷ್ಟು ದಿನ್ದಲ್ಲೇ ಕೆಲ್ಸ ಕಾಯಂ ಆಗ್ತೋದು ಅಂತ ಹೇಳ್ತಿದ್ದ. ಬಂದಾಗ್ನಿಂದ 'ಅಪ್ಪಯ್ಯ ಅಪ್ಪಯ್ಯ' ಅಂತ ಕೇಳ್ತಾನೇ ಇದ್ದ. ಅಪ್ಪ ದೇವ್ರ ಸಮಾನ ಅಂತಿದ್ದ".

ಮುನ್ನಿಯವರ ಮುಖದ ಮೇಲೊಂದಿಷ್ಟು ಹೊಳಪು ಬಂದಂತಾಯ್ತು. ನಾಚಿಕೊಳ್ಳುತ್ತ ಕೇಳಿದರು, "ಏನು?... ಏನಂತಿದ್ದ?... ಅಪ್ಪ ದೇವ್ರ ಸಮಾನ ಅಂತ್ಲಾ? ಅದೊಂದು ಹುಚ್ಚುಹುಡ್ಗ".

ಸಿದ್ಧೇಶ್ವರಿಗೀಗ ನಶೆ ಹತ್ತಿದಂತಾಯಿತು. ಉನ್ಮತ್ತಗೊಂಡ ರೋಗಿಯ ಹಾಗೆ ಬಡಬಡಿಸಲಾರಂಭಿಸಿದಳು. "ಹುಚ್ಚುಹುಡ್ಗ ಅಂತ ಯಾಕಂತೀರಿ? ಬಲು ಬುದ್ವಂತ. ಯಾವ್ದೋ ಕಾಲ್ದ ದೊಡ್ಡ ಮನುಷ್ಯನ್ ತರ! ಮೋಹನನ್ಗಂತೂ ಅವ್ನ ಬಗ್ಗೆ ಬಲು ಗೌರವ. ಅಣ್ಣಂಗೆ ಪಟ್ಣದಾಗೆ ಬಾಳ ಗೌರವ ಐತೆ. ಓದಿ ಬರೆದೋರ ಮಧ್ಯೆ ಬಾಳ ವಿಶ್ವಾಸ ಗಳ್ಸಿಕೊಂಡವ್ನೆ ಅಂತ ಈಗಷ್ಟೇ ಹೇಳ್ತಾ ಇದ್ದ. ದೊಡ್ಡವ್ನಿಗಂತೂ ತಮ್ಮಂದಿರೂಂದ್ರೆ ಪಂಚಪ್ರಾಣ. ಅವ್ನು ಜಗತ್ನಾಗೆ ಏನ್ ಬೇಕಾದರೂ ಸೈಸಿಕೊಳ್ತಾನೆ. ಆದ್ರೆ ತನ್ನ ತಮ್ಮ ಪ್ರಮೋದಂಗೆ ಏನಾದ್ರು ಆದ್ರೆ ಅವ್ನು ಖಂಡಿತ ತಡ್ಕೊಳ್ಳಾರ".

ಮುನ್ನಿಯವರು ತೊವ್ವೆ ಮೆತ್ತಿಕೊಂಡ ಬೆರಳುಗಳನ್ನು ನೆಕ್ಕುತ್ತಿದ್ದರು. ಶೂನ್ಯದತ್ತ ಕಣ್ಣುನೆಟ್ಟು, ಒಂದಿಷ್ಟು ನಗುತ್ತಾ ಹೇಳಿದರು. "ದೊಡ್ಡವ್ನ ಬುದ್ಧಿ ನಿಜ್ವಾಗ್ಲೂ ಬಲು ಚುರುಕು. ಚಿಕ್ಕವ್ನಿದ್ದಾಗ ಅದೆಷ್ಟು ತುಂಟ ಆಗಿದ್ದ! ಯಾವಾಗ್ಲೂ ಆಟ, ನೆಗ್ದಾಟದಲ್ಲೇ ಮುಳ್ಗಿರ್ತಿದ್ದ. ಆದ್ರೆ ಯಾವ ಮಾತ್ನ ನೆನಪಿಟ್ಕಳ್ಳಕ್ಕೆ ಹೇಳ್ತಿದ್ನೋ ಅದ್ನ ಜಾಸ್ತಿ ತಪ್ಪೆ ಮಾಡ್ತಿದ್ದ. ಸಂಗ್ತಿ ಅಂದ್ರೆ ಮೂರು ಮಕ್ಳೂ ಬುದ್ವಂತರೇ. ಪ್ರಮೋದನ್ನ ಕಡ್ಮೆ ಅಂದ್ಕೊಂಡಿದಿಯೇನು?" ಎನ್ನುತ್ತಾ ಇದ್ದಕ್ಕಿದ್ದಂತೆ ನಗತೊಡಗಿದರು.

ಒಂದೂವರೆ ರೊಟ್ಟಿಯನ್ನು ತಿಂದು ಮುಗಿಸಿದ ನಂತರ ಒಂದು ಗುಕ್ಕಿನೊಂದಿಗೆ ಹೋರಾಡುತ್ತಿದ್ದರು. ಏನೋ ತೊಂದರೆಯಾದಂತೆ ಒಂದು ಲೋಟ ನೀರು ಕುಡಿದರು. ನಂತರ ಗರಗರನೆ ಕೆಮ್ಮಿ ತಿನ್ನುವುದನ್ನು ಮುಂದುವರಿಸಿದರು.

ಮತ್ತೆ ಮೌನ ಆವರಿಸಿತು. ದೂರದಲ್ಲೆಲ್ಲೋ ಯಾವುದೋ ಹಿಟ್ಟಿನ ಗಿರಣಿಯ ಕರಕರ ಸದ್ದು ಕೇಳಿಬರುತ್ತಿತ್ತು. ಹತ್ತಿರದ ಬೇವಿನ ಮರದ ಮೇಲೆ ಕುಳಿತಿದ್ದ ಯಾವುದೋ ಹಕ್ಕಿಯ ಹಾಡು ಎಡೆಬಿಡದೆ ಕೇಳಿಬರುತ್ತಿತ್ತು.

ಮುಂದಕ್ಕೆ ಏನು ಮಾತನಾಡುವುದೆಂದು ತಿಳಿಯಲಿಲ್ಲ. ಎಲ್ಲವನ್ನು ಸರಿಯಾಗಿ ಸ್ಪಷ್ಟವಾಗಿ ಕೇಳಿಬಿಡಬೇಕೆನ್ನಿಸುತ್ತಿತ್ತು ಸಿದ್ಧೇಶ್ವರಿಗೆ. ಜಗತ್ತಿನ ಎಲ್ಲದರ ಬಗ್ಗೆ ಮೊದಲಿನಂತೆ ಬಡಬಡನೆ

ಮಾತನಾಡಬೇಕೆನ್ನಿಸುತ್ತಿತ್ತು. ಆದರೆ ಧೈರ್ಯವೇ ಬರುತ್ತಿರಲಿಲ್ಲ. ಅವಳ ಮನಸ್ಸಿನಲ್ಲಿ ಈಚೆಗೆ ಅದೆಂಥದೋ ಭಯ ಸೇರಿಕೊಂಡುಬಿಟ್ಟಿತ್ತು.

ಈಗಂತೂ ಮುನ್ನಿಯವರು ಕಳೆದೆರಡು ದಿನಗಳಿಂದ ಮೌನವ್ರತ ಆಚರಿಸುತ್ತಿದ್ದು, ಎಲ್ಲೋ ಹೋಗಿ ಈ ಸಂಜೆ ವ್ರತ ಬಿಡಲಿರುವರೇನೋ ಎನ್ನುವಂತೆ ಮುಗುಮ್ಮಾಗಿ ಕುಳಿತು ಊಟವನ್ನು ಮುಂದುವರೆಸಿದ್ದರು.

ಸುಮ್ಮನೆ ಇರಲಾಗದವಳಂತೆ ಸಿದ್ಧೇಶ್ವರಿ ಹೇಳಿದಳು, "ಇನ್ನೇನು ಮಳೆ ಬರಲ್ಲ ಅನ್ಸುತ್ತೆ..."

ಮುನ್ನಿಯವರು ಒಂದು ಕ್ಷಣ ಅತ್ತಿತ್ತ ಕತ್ತಾಡಿಸಿದ ನಂತರ ನಿರ್ಲಿಪ್ತ ಧ್ವನಿಯಲ್ಲಿ ತಮ್ಮ ಮಾತು ಹೊರಡಿಸಿದರು. "ನೊಣ ವಿಪರೀತ ಆಗೋಗ್ಯವೆ".

ಸಿದ್ಧೇಶ್ವರಿ ಒಂದಿಷ್ಟು ಉತ್ಸಾಹದಿಂದ ಹೇಳಿದಳು. "ಮಾವ ಕಾಯ್ಲೆ ಬಿದ್ದವ್ರೆ, ಈಚ್ಗೆ ಯಾವ್ ಸಮಾಚಾರಾನೂ ಗೊತ್ತಾಗ್ತಿಲ್ಲ".

ಮುನ್ನಿಯವರು ಕಡಲೆಕಾಳುಗಳೊಂದಿಗೆ ಮಾತನಾಡುತ್ತಿರುವರೇನೋ ಎನ್ನುವಂತೆ ನೋಡುತ್ತಿದ್ದರು. ತಮ್ಮ ದೃಷ್ಟಿಯನ್ನು ಬೇರೆಡೆಗೆ ಹರಿಸುತ್ತಾ ಹೇಳಿದರು, "ಗಂಗಾಶರಣಬಾಬು ಮಗಳು ಮದುವೆ ನಿಶ್ಚಯ ಆಗಿದೆ. ಹುಡುಗ ಎಂ.ಎ. ಪಾಸು ಮಾಡಿದ್ದಾನಂತೆ".

ಸಿದ್ಧೇಶ್ವರಿ ಇದ್ದಕ್ಕಿದ್ದಂತೆ ಸುಮ್ಮನಾದಳು. ಮುನ್ನಿಯವರೂ ಮತ್ತೇನೂ ಹೇಳಿಲ್ಲ. ಅವರ ಊಟ ಮುಗಿದಿದ್ದು ತಟ್ಟೆಯಲ್ಲಿ ಉಳಿದಿದ್ದ ಚೂರುಪಾರು ಕಾಳುಗಳಿಗಾಗಿ ಕೋತಿಯಂತೆ ತಡಕುತ್ತಿದ್ದರು.

ಸಿದ್ಧೇಶ್ವರಿ ಕೇಳಿದಳು, "ದೊಡ್ಡವ್ನ ಮೇಲಾಣೆ. ಇನ್ನೊಂದ್ ರೊಟ್ಟಿ ಕೊಡ್ತೀನಿ. ಇನ್ನೂ ಬೇಕಾದಷ್ಟವೆ".

ಮುನ್ನಿಯವರು ಹೆಂಡತಿಯತ್ತ ಅಪರಾಧಿಯಂತೆ ಮತ್ತು ಒಲೆಯತ್ತ ಓರೆನೋಟದಿಂದ ನೋಡಿ ಆನಂತರ ಕಟ್ಟಿಹಾಕಲ್ಪಟ್ಟ ಉಸ್ತಾದನಂತೆ ಹೇಳಿದರು. "ರೊಟ್ಟಿನಾ? ಬೇಡ ಬಿಡು. ಹೊಟ್ಟೆ ಸಾಕಷ್ಟು ತುಂಬಿದೆ. ಕಾಳು, ಉಪ್ಪಿನ ತಿಂಡಿ ತಿಂದೂ ತಿಂದೂ ನಾಲ್ಗೆ ರುಚಿನೇ ಕೆಟ್ಟೋಗಿದೆ. ನೀನಂತೂ ಸುಮ್‌ಸುಮ್ನೆ ಆಣೆ ಹಾಕ್ಬಿಡ್ತೀಯಾ. ನಿಜ್ವಾಗ್ಲೂ, ಆಣೆ ಹಾಕಿದ್ದೀಯಾಂತ ಕೇಳ್ತಾ ಇದೀನಿ. ಬೆಲ್ಲ ಇದ್ಯೇನು?"

ಸಿದ್ಧೇಶ್ವರಿ ಮಡಕೆಯಲ್ಲಿ ಒಂದಿಷ್ಟು ಬೆಲ್ಲವಿದೆಯೆಂದು ಹೇಳಿದಳು.

ಮುನ್ನಿಯವರು ಉತ್ಸಾಹದಿಂದ ಹೇಳಿದರು "ಹೌದೇನು? ಹಾಗಿದ್ರೆ ಒಂದಿಷ್ಟು ಬೆಲ್ಲದ ಪಾನ್ಕ ಮಾಡಿಬಿಡು. ಕುಡೀತೀನಿ. ನಿನ್ನ ಆಣೆನೂ ಉಳಿದಂಗಾಗ್ತಾದೆ. ರುಚಿನೂ ಬದ್ಲಾದಂಗಾಗ್ತದೆ. ಜೊತ್ಗೆ ತಿಂದಿದ್ದೂ ಚೆನ್ನಾಗಿ ಜೀರ್ಣ ಆಗ್ತದೆ. ರೊಟ್ಟಿ ಅಗ್ದೂ ಅಗ್ದೂ

ಏದುಸ್ರು ಬಿಡೋ ಹಂಗಾಗಿದೆ" ಎನ್ನುತ್ತಾ ಗಹಗಹಿಸಿ ನಗಲಾರಂಭಿಸಿದರು.

ಹಾಗೂ ಹೀಗೂ ಮುನ್ನಿಯವರ ಊಟ ಮುಗಿದ ನಂತರ ಸಿದ್ಧೇಶ್ವರಿ ಅವರ ಎಂಜಲು ತಟ್ಟೆಯನ್ನು ತೆಗೆದುಕೊಂಡು ಬೆಂಚಿನ ಪಕ್ಕ ನೆಲದ ಮೇಲೆ ಕುಳಿತಳು. ಮಡಿಕೆಯಲ್ಲಿ ಉಳಿದಿದ್ದ ತೊವ್ವೆಯನ್ನೆಲ್ಲಾ ಬಗ್ಗಿಸಿಕೊಂಡಳಾದರೂ ಅದು ತುಂಬಲಿಲ್ಲ. ಒಲೆ ಮುಂದಿನ ತಟ್ಟೆಯಲ್ಲಿ ಒಂದಿಷ್ಟು ಕಡಲೆಪಲ್ಲೆ ಉಳಿದಿತ್ತು ಮತ್ತು ಕೇವಲ ಒಂದು ರೊಟ್ಟಿಯಿತ್ತು.

ದಪ್ಪ, ಕಿತ್ತು ಹರುಕಲಾಗಿ ಒಂದಿಷ್ಟು ಸೀದಿದ್ದ ರೊಟ್ಟಿಯೊಂದನ್ನು ಸಿದ್ಧೇಶ್ವರಿ ಇನ್ನೇನು ತನ್ನ ಮುಂದಿದ್ದ ಎಂಜಲು ತಟ್ಟೆಗೆ ಹಾಕಿಕೊಳ್ಳುವವಳಿದ್ದಳು. ಅಷ್ಟರಲ್ಲಿ ಇದ್ದಕ್ಕಿದ್ದಂತೆ ಅವಳ ಗಮನ ಚಪ್ಪರದಡಿ ಮುರುಕು ಬೆಂಚಿನ ಮೇಲೆ ಆಗೀಗ ನರಳುತ್ತಾ ಮಲಗಿದ್ದ ಪ್ರಮೋದನತ್ತ ಹರಿಯಿತು. ಒಂದಿಷ್ಟು ಹೊತ್ತು ಅವನತ್ತ ತದೇಕವಾಗಿ ನೋಡಿದಳು. ಒಂದಿಷ್ಟು ರೊಟ್ಟಿಯ ಹಿಟ್ಟನ್ನೇ ಎರಡು ಲೋಟ ನೀರಿನಲ್ಲಿ ಕುದಿಸಿ ಅವನಿಗೆ ಉಪ್ಪುಗಂಜಿ ಕೊಟ್ಟು ಬಹಳ ಹೊತ್ತೇ ಕಳೆದಿತ್ತು. ತಟ್ಟೆಯಲ್ಲಿದ್ದ ರೊಟ್ಟಿಯನ್ನು ಅರ್ಧ ಮುರಿದಳು. ಒಂದು ಮುರುಕನ್ನು ವಾಪಸ್ಸು ಅದೇ ತಟ್ಟೆಯಲ್ಲಿಟ್ಟು ಮತ್ತೊಂದು ಮುರುಕನ್ನು ತನ್ನ ಮುಂದಿದ್ದ ಎಂಜಲು ತಟ್ಟೆಗೆ ಹಾಕಿಕೊಂಡಳು. ಅದಾದ ನಂತರ ಒಂದು ಲೋಟ ನೀರನ್ನು ಗಟಗಟನೆ ಕುಡಿದು ಊಟಕ್ಕೆ ಕುಳಿತಳು. ಮೊದಲನೇ ತುತ್ತನ್ನು ಬಾಯಿಗಿಡುತ್ತಿರುವಾಗಲೇ ಅದೆಲ್ಲಿಂದ ಬಂದವೋ ಕಣ್ಣು ಮಬ್ಬಾಗಿಸಿದ ಕಣ್ಣೀರು ತಪತಪನೆ ಉದುರಲಾರಂಭಿಸಿತು.

ಇಡೀ ಮನೆ ನೊಣಗಳಿಂದ ಗುಂಯ್‌ಗುಡುತ್ತಿತ್ತು. ಅಂಗಳದ ಅಡ್ಡೆಯ ಮೇಲೆ ಅನೇಕ ತೇಪೆಗಳಿಂದ ಕೊಳೆಯಾದ ಸೀರೆಯೊಂದು ನೇತಾಡುತ್ತಿತ್ತು. ಇಬ್ಬರು ದೊಡ್ಡ ಮಕ್ಕಳ ಸುಳಿದಾಟವೂ ಇರಲಿಲ್ಲ. ಆಚೆ ಕೋಣೆಯಲ್ಲಿ ಮುನ್ನಿಯವರು ಮೇಲ್ಮುಖವಾಗಿ, ಹಣೆಯ ಮೇಲೊಂದು ಎದೆಯ ಮೇಲೊಂದು ಕೈಯಿಟ್ಟುಕೊಂಡು, ಒಂದೂವರೆ ತಿಂಗಳ ಹಿಂದೆ ಹಳೆಯ ಮನೆಯ ಒಡೆಯ ಕೂಗಾಡಿ ಮನೆ ಖಾಲಿ ಮಾಡಿಸಿಲ್ಲವೇನೋ, ಇಂದು ಸಂಜೆ ಮತ್ತೆ ಯಾವುದಾದರೂ ಕೆಲಸದ ಹುಡುಕಾಟಕ್ಕೆ ಎಲ್ಲೂ ಹೋಗುವಂತಿಲ್ಲವೇನೋ ಎನ್ನುವಂತೆ ನಿಶ್ಚಿಂತರಾಗಿ ಮಲಗಿದ್ದರು.



ಒಂದು ಜನ್ಮದಿನದ ನೆನಪು

ಮಲಯಾಳ ಮೂಲ :
ಎಂ.ಟಿ.ವಾಸುದೇವನ್ ನಾಯರ್
ಅನು : ಡಾ.ಪ್ರಮೀಳಾ ಮಾಧವ್

ನಾಳೆ ನನ್ನ ಜನ್ಮದಿನ!

ನನಗೆ ನೆನಪಿರಲಿಲ್ಲ. ಅವಳ ಪತ್ರದಿಂದ ತಿಳಿದೆ.

ಅವಳು ಬರೆದಿದ್ದಳು : 'ಮುಂದಿನ ಗುರುವಾರವೇ ಜನ್ಮದಿನ. ಸೇವಿಸುವುದೇನಿದ್ದರೂ ಬೆಳಗ್ಗೆ ಸ್ನಾನ ಮಾಡಿದ ಮೇಲೆಯೇ. ಗುರುವಾರ ಜನ್ಮದಿನ ಬರುವುದು ಒಳ್ಳೆಯದು. ನಾನು ಶಿವಮಂದಿರದಲ್ಲಿ ಕ್ಷೀರಾಭಿಷೇಕಕ್ಕೂ ಪಣಪಾಯಸಕ್ಕೂ ಏರ್ಪಾಡು ಮಾಡುತ್ತೇನೆ. ಅಲ್ಲಿ ಹತ್ತಿರದಲ್ಲಿ ದೇವಸ್ಥಾನವಿದ್ದರೆ ಸ್ನಾನ ಮಾಡಿ ಹೋಗಿ ಕೈ ಮುಗಿದು ಬನ್ನಿ....' ನನ್ನ ಹಿತಕ್ಕಾಗಿ ಏನು ಬೇಕೋ ಅದೆಲ್ಲವನ್ನೂ ನನ್ನ ಮಡದಿ ಮಾಡುತ್ತಾಳೆ. ಎಷ್ಟೋ ಸಮಯದಿಂದ ಅವಳು ನನಗಾಗಿ ಪ್ರಾರ್ಥಿಸುತ್ತಿದ್ದಾಳೆ. ದೇವಾನುದೇವತೆಗಳ ಕಣ್ಮಣಿಯಾಗಿ ಬೆಳದವಳಾದ್ದರಿಂದ ಅವಳ ಪ್ರಾರ್ಥನೆ ಫಲಿಸುತ್ತದೆ.

ನಾಳೆ ನನಗೆ ಬಿಡುವು. ಆದರೆ ನನ್ನ ಜನ್ಮದಿನವೆಂಬ ವಸ್ತುಸ್ಥಿತಿಯನ್ನು ಮುಚ್ಚಿಡುವುದು ಒಳ್ಳೆಯದು. ತಿಳಿದರೆ ಸ್ನೇಹಿತರೆಲ್ಲ ಜಮಾಯಿಸುತ್ತಾರೆ. ಪಾರ್ಟಿ ಕೊಡಿಸಬೇಕೆಂದು ದುಂಬಾಲುಬಿದ್ದರೆ ನನ್ನ ಜೇಬೆಲ್ಲ ಖಾಲಿಯಾದೀತು. ಅವರಲ್ಲಿ ಬಹಳಷ್ಟು ಜನರ ಜನ್ಮದಿನಗಳಲ್ಲಿ ನಾನೂ ಪಾರ್ಟಿ, ಡಿನ್ನರ್‌ಗಳನ್ನು ಪಡೆದಿದ್ದೇನೆ.

ಜನ್ಮದಿನ ಹತ್ತಿರವಾಗುತ್ತಿದ್ದಂತೆ ಹಿಂದೆಲ್ಲ ಬಹಳ ಖುಷಿಯಾಗುತ್ತಿತ್ತು. ಈಗ ಬಹುಸೂಕ್ಷ್ಮವಾದ ನೋವಿನ ಅನುಭವವಷ್ಟೇ ಆಗುತ್ತಿದೆ. ಬದುಕಿನ ವಸಂತ ಕಾಲವೆಂದು ಕವಿಗಳು ವರ್ಣಿಸುವ ಕಾಲಘಟ್ಟದ

ಚರಮಾವಸ್ಥೆ ನನ್ನನ್ನು ಸಮೀಪಿಸುತ್ತಿದೆ. ನಾಳೆಯ ದಿನಚರಿಯನ್ನು ಕಂಡು ಯೋಚಿಸಿದೆ. ಬೆಳಗ್ಗಿನ ಒಂಬತ್ತು ಗಂಟೆಯವರೆಗಿನ ನಿದ್ದೆಯಲ್ಲಿ ಯಾವ ವ್ಯತ್ಯಾಸವೂ ಇಲ್ಲ. ರಜಾದಿನಗಳಲ್ಲಿ ಅದೇ ರೂಢಿ. ಆಮೇಲೆ ಒಂದು ಸ್ನಾನ. ಅದಲ್ಲವೇ ನನ್ನ ಶ್ರೀಮತಿಯ ಆಜ್ಞೆ! ಅನಂತರ ಆನಂದಭವನದಿಂದ ತರಿಸಿದ ಪೂರಿಮಸಾಲೆ ಮತ್ತು ಕಾಫಿ. ಆಮೇಲೆ ಒಂದು ರೂಪಾಯಿಯನ್ನು ಮೇಜಿನ ಮೇಲಿಟ್ಟು ಒಂದು ಪ್ಯಾಕೇಟ್ ಸಿಗರೇಟ್ ಆರ್ಡರ್ ಮಾಡುವಾಗ ರಾಜನ್ ಕೇಳುತ್ತಾನೆ: 'ಏನಯ್ಯ ಬಹಳ ಉಲ್ಲಾಸವಾಗಿದ್ದೀಯಾ? ತಂಗಿ ಹೆತ್ತಳೆ'?

ರಹಸ್ಯವಾಗಿಟ್ಟುಕೊಳ್ಳಬೇಕೆಂಬ ರೀತಿಯಲ್ಲಿ ನನ್ನ ಜನ್ಮದಿನದ ವಿಚಾರವನ್ನು ಹೇಳುತ್ತೇನೆ. ಮಧ್ಯಾಹ್ನದ ಊಟಕ್ಕೆ 'ಕುರ್ಮ ಸ್ಪೆಷಲ್' ತರಿಸಬಹುದು. ಜನ್ಮದಿನದಂದು ಮಾಂಸಾಹಾರ ಸೇವಿಸಿದ್ದು ಅವಳಿಗೆ ತಿಳಿಯಬಾರದು. ಸಾಯಂಕಾಲ ಒಂದು ಸಿನೆಮಾ. ಅಲ್ಲಿಗೆ ಕಾರ್ಯಕ್ರಮ ಮುಗಿಯಿತು. ತಿಂಗಳ ಮೊದಲಾಗುತ್ತಿದ್ದರೆ ಒಂದು ಫೋಟೋ ಕೂಡ ಬಜೆಟ್ಟಿಗೆ ಸೇರಿಸಬಹುದಿತ್ತು.

ರಾಜನ್ ಇನ್ನೂ ಬಂದಿಲ್ಲ. ಆತ ದಿನವೂ ಆಫೀಸು ಬಿಟ್ಟ ಮೇಲೆ ಕ್ಲಬ್ಬಿಗೆ ಹೋಗುತ್ತಾನೆ. 'ಪಿಂಗ್ ಪೊಂಗ್' ಆಡದಿದ್ದರೆ ಆತನಿಗೆ ರಾತ್ರಿ ನಿದ್ದೆಯೇ ಬರುವುದಿಲ್ಲ.

ಹೂಜಿಯಲ್ಲಿ ತುಂಬಿಸಿಟ್ಟ ತಣ್ಣಗಿನ ನೀರು ಕುಡಿದು ಹಜಾರದ ಆರಾಮ ಕುರ್ಚಿಯಲ್ಲಿ ಮಲಗಿದೆ. ನೆರೆಮನೆಯ ಸೇತುವಿನ ಐದು ವರ್ಷದ ಹುಡುಗ ಮುಂಭಾಗದ ಅಂಗಳದಲ್ಲಿ ಉಗಿಬಂಡಿ ಓಡಿಸುತ್ತಿದ್ದ. ಏನೇನೋ ನೆನಪುಗಳು. ಪುಟ್ಟ ಬಾಲಕನಾಗಿದ್ದ ದಿನಗಳು. ಕಳೆದುಹೋದ ಜನ್ಮದಿನಗಳು... ಇಪ್ಪತ್ತು ವರ್ಷಗಳಿಗೂ ಹಿಂದಿನ ಒಂದು ಜನ್ಮದಿನದ ನೆನಪು ನಿಚ್ಚಳವಾಗಿ ಮೂಡುತ್ತಿದೆ.

ಅಂದು ಕೊಲ್ಲಬೇಕೆಂಬ ಭಾವನೆಯೇನೋ ದೃಢವಾಗಿತ್ತು. ಯಾವ ವಿಧದಲ್ಲೂ ಕೊಂದೇ ತೀರಬೇಕು. ಆರೋ ಏಳೋ ವರ್ಷ ಪ್ರಾಯದ ತನಗೆ ಶಾಸ್ತ್ರೀಯವಾದ ರೀತಿಯಲ್ಲಿ ಕೊಲ್ಲಲು ತಿಳಿಯದು. ಕೊನೆಯಲ್ಲಿ ಕೊಲೆಪಾತಕದ ಒಂದು ನೂತನ ಸಾಂಕೇತಿಕವಾದ ಮಾರ್ಗವನ್ನು ಅನುಸರಿಸಿದೆ. ಸ್ನಾನ ಮಾಡಿ ಬಂದು ಪ್ರಾರ್ಥಿಸಿದೆ.

ಈ ವಿಧಾನವನ್ನು ಯಾರು ಕಲಿಸಿಕೊಟ್ಟರೆಂದು ಗೊತ್ತಿಲ್ಲ. ವಿಷಯ ಇಷ್ಟೆ. ನಮ್ಮೂರ ದೇವತೆಗಳಲ್ಲಿ ಕೊಲ್ಲುವುದಕ್ಕೆಂದೇ ಪ್ರಸಿದ್ಧರಾದ ಕೆಲವು ದೈವಗಳಿವೆ. ಅಯ್ಯಪ್ಪ, ಭಗವತಿಯರು ಈ ಗುಂಪಿಗೆ ಸೇರುವುದಿಲ್ಲ. ಅವರಿಗಿಂತ ಕೆಳಗಿನ ದೇವತೆಗಳು. ಅವರನ್ನು ಕರೆದು ಪ್ರಾರ್ಥನೆ ಮಾಡಿದರೆ ಶತ್ರುವಿನ ಕತೆ ಮುಗಿಯುತ್ತದೆ. ನಾನು ಪ್ರಾರ್ಥಿಸಿದೆ. ಕರುಳು ಕರಗುವಂತೆ ಮೊರೆಯಿಟ್ಟೆ. ಏಕೋ ನನ್ನ ಶತ್ರು ಸಾಯಲಿಲ್ಲ. ಅವನನ್ನು ವಧಿಸಲೇಬೇಕೆಂದು ನಾನು ತೀರ್ಮಾನಿಸಿದ್ದು ನನ್ನ ಜನ್ಮದಿನದಂದೇ.

ಈಗಲೂ ನನಗೆ ನೆನಪಾಗುತ್ತದೆ. ಜನ್ಮದಿನವೆಂದರೆ ಅದು ಅತ್ಯಂತ ಪ್ರಧಾನವಾದ ದಿನವೆಂದು ನನಗೆ ಗೊತ್ತಿತ್ತು. ಅದನ್ನು ಅತ್ಯಂತ ಸಂಭ್ರಮದಿಂದ ಆಚರಿಸಬೇಕೆಂದೂ

ನನಗೆ ಗೊತ್ತಿತ್ತು. ಆದರೆ ಅದು ದೊಡ್ಡವರಿಗೆ ಮಾತ್ರ ಅನ್ವಯಿಸುವ ವಿಷಯವೆಂಬುದು ನನ್ನ ಭಾವನೆಯಾಗಿತ್ತು.

ನಮ್ಮ ಶಾಲೆಯಲ್ಲಿ ವರ್ಷದ ಒಂದು ದಿನ ಅವಲಕ್ಕಿಯೂ ಬೆಲ್ಲದ ಪಾನಕವೂ ಸಿಗುತ್ತಿತ್ತು. ಆವತ್ತು ನಮ್ಮ ಸ್ಕೂಲು ಮೇನೇಜರರ ಜನ್ಮದಿನ ತಾನೆ! ಮೇನೇಜರರ ಮನೆಯಲ್ಲಿ ಆ ದಿನ ಮಧ್ಯಾಹ್ನ ಹಾಲುಪಾಯಸ, ಹಪ್ಪಳ, ಸಿಹಿಭಕ್ಷ್ಯಗಳು ಸೇರಿದ ಭೂರಿಭೋಜನ. ನಮ್ಮ ಮಾಸ್ತರುಗಳಿಗೆಲ್ಲ ಆ ದಿನ ಮೇನೇಜರರ ಮನೆಯಲ್ಲೇ ಮಧ್ಯಾಹ್ನದ ಊಟ. ನಂಬಿಡಿ (ನಂಬೂದಿರಿ) ಮಾಸ್ತರರು ಮಾತ್ರ ಹೋಗುತ್ತಿರಲಿಲ್ಲ. ಅವರು ಮೇನೇಜರರಿಗಿಂತ ಮೇಲ್ಜಾತಿಯವರಾದುದರಿಂದ ಊಟ ಮಾಡಬಾರದಲ್ಲವೇ? ಜನ್ಮದಿನ ಓಣಂ ಹಬ್ಬಕ್ಕಿಂತಲೂ ದೊಡ್ಡ ಹಬ್ಬವಿರಬೇಕೆಂದು ನನಗೆ ಅನ್ನಿಸಿತ್ತು. ಓಣಂ ಹಬ್ಬಕ್ಕೆ ನಮ್ಮ ಮನೆಯಲ್ಲಿ ವಿಶೇಷ ಭೋಜನವಿರುತ್ತಿತ್ತು. ಆದರೆ ಹಾಲುಪಾಯಸವಿರುತ್ತಿರಲಿಲ್ಲ.

ಮೇನೇಜರರಿಗೆ ವಯಸ್ಸಾಗಿತ್ತು. ತಲೆ ನೆರೆದಿತ್ತು. ನನ್ನ ದೊಡ್ಡ ಮಾವನಿಗೂ ತಲೆ ಹಣ್ಣಾಗಿತ್ತು. ಆದರೆ ದೊಡ್ಡ ಮಾವನಿಗೆ ಅಜ್ಜಿಯಷ್ಟು ವಯಸ್ಸಾಗಿರಲಿಲ್ಲ. ಅಜ್ಜಿಯ ಮಗನಲ್ಲವೇ ದೊಡ್ಡಮಾವ!

ದೊಡ್ಡಮಾವನ ಜನ್ಮದಿನ ವಿಜೃಂಭಣೆಯಿಂದ ನಡೆಯುತ್ತಿತ್ತು. ಅಂದು ಮಧ್ಯಾಹ್ನದ ಊಟಕ್ಕೆ ಬಹಳಷ್ಟು ಜನ ಬರುತ್ತಿದ್ದರು. ಹಜಾರದಲ್ಲೂ, ತೆಂಕುದಿಕ್ಕಿನ ಕೋಣೆಯಲ್ಲೂ ಪೂರ್ತಿ ಎಲೆ ಹಾಕುತ್ತಿದ್ದರು. ಮನೆಯಲ್ಲಿ ಹಬ್ಬದೂಟವೆಂದರೆ ನಮಗೆಲ್ಲ ಇಷ್ಟವೇ. ನಮಗೆಂದರೆ ಮಕ್ಕಳಿಗೆ. ದಾಮೋದರನನ್ನೂ ಸೇರಿಸಿದರೆ ನಾವು ಐವರು. ದಾಮೋದರ ಬೇಸಿಗೆ ರಜೆಯಲ್ಲಿ ಮಾತ್ರ ಮನೆಯಲ್ಲಿರುತ್ತಿದ್ದ. ಅವನಿಗೆ ನಮಗಿಂತ ಶಕ್ತಿಯಿತ್ತು. ಒಳಗೊಳಗೇ ನಾನು ಮತ್ತು ಅಪ್ಪು ಅವನನ್ನು 'ವಂಜಿಪ್ಪೋತ' (ಹೊಟ್ಟೆಬಾಕ)ನೆಂದು ಕರೆಯುತ್ತಿದ್ದೆವು. ಬಹಿರಂಗವಾಗಿ ಕರೆಯುವುದಕ್ಕೆ ಸಾಧ್ಯವಿಲ್ಲ! ಅವನು ದೊಡ್ಡ ಮಾವನ ಮಗನಲ್ಲವೇ? ಗೋಳಿಯಾಟವಾಡುವಾಗ ಅವನು ಎರಡನೇ ಗುಳಿಗೆ ಕಲ್ಲೆಸೆದರೆ ನೋಡುವುದೇ ಬೇಡ. ಬೆರಳುಗಳು ನಡುಗುತ್ತವೆ. ನಾವೆಲ್ಲ ಹೊನ್ನೆಕಾಯಿಯನ್ನು ಉಪಯೋಗಿಸಿ ಗೋಳಿಯಾಡುತ್ತಿದ್ದುದು. ದಾಮೋದರನಿಗೆ ಕಲ್ಲುಗಳೇ ಬೇಕು. ಅದರಿಂದ ಏಟು ತಗಲಿದರೆ ಮೂರು ದಿನಗಳವರೆಗೆ ನೋವಿರುತ್ತಿತ್ತು.

ದೊಡ್ಡಮಾವನ ಜನ್ಮದಿನದಂದು ನಮಗೆ ಊಟ ಸಿಗುತ್ತಿದ್ದುದು ಮಧ್ಯಾಹ್ನದ ಮೇಲೆಯೇ. ಅತಿಥಿಗಳು ಊಟಮಾಡಿ ಹೋಗಬೇಕು. ದಾಮೋದರ ಮಾತ್ರ ದೊಡ್ಡಮಾವನ ಜೊತೆಯಲ್ಲೇ ಕುಳಿತು ಊಟಮಾಡಬಹುದು. ಉಳಿದ ದಿನಗಳಲ್ಲೂ ದಾಮೋದರ ದೊಡ್ಡಮಾವನ ಜತೆಯಲ್ಲೇ ಕುಳಿತು ಊಟಮಾಡುವುದು. ಉತ್ತರದಿಕ್ಕಿನ ಕೋಣೆಯಲ್ಲಿ ಮಣೆಯನ್ನೂ, ಉದ್ದವಾದ ಕುಡಿಬಾಳೆಯೆಲೆಗಳನ್ನೂ ಹಾಕಿದರೆ ನಾವೆಲ್ಲ ಜಾಗ ಖಾಲಿ

ಮಾಡಬೇಕು. ಹೋಗದಿದ್ದರೆ 'ಪುಂಡು ಹುಡುಗ್ರು, ಒಂದು ಕೆಲಸಕ್ಕೂ ಬಿಡುವುದಿಲ್ಲ. ಯಾವ ಸಂಭ್ರಮ ನೋಡಲು ಎಲ್ಲ ಇಲ್ಲಿ ಸೇರಿದ್ದೀರಾ?' ಇದು ದೊಡ್ಡಮಾವನ ಅತ್ತೆ ಕೇಳುವ ಪ್ರಶ್ನೆ.

ಪುಂಡು ಹುಡುಗರೆಂದರೆ ನಾವು ನಾಲ್ವರು. ನಾನು, ಗೋಪಿ, ಅಪ್ಪು, ಕುಂಞಮಾಳು. ದಾಮೋದರ ಪುಂಡು ಹುಡುಗರ ಪೈಕಿಯವನಲ್ಲ. ಅವನನ್ನು ಅತ್ತೆ ರಾಗವಾಗಿ ಕರೆಯುತ್ತಾರೆ. 'ದಾಮೋದರಾ...'! ಅಮ್ಮನೋ ಚಿಕ್ಕಮ್ಮನೋ ಹೇಳುತ್ತಾರೆ, ನೀವೆಲ್ಲ ಹೋಗಿ ಆಟವಾಡ್ತಿರಿ. ಆದಾಗ ಕರೆಯುತ್ತೇನೆ. ಅದರಂತೆ ನಡೆಯಲು ನಾವು ಸಿದ್ಧರೇ. ಅವರ ಅಭಿಪ್ರಾಯದಲ್ಲಿ ನಾವು ಪುಂಡರೋ, ಪಿಶಾಚಿಗಳೋ ಅಲ್ಲ. ಸುಮ್ಮಸುಮ್ಮನೆ ನಮ್ಮನ್ನವರು ಬಯ್ಯುವುದಿಲ್ಲ. ಹಲವು ಬಾರಿ ಯೋಚಿಸಿದ್ದಿದೆ. ಈ ಅಮ್ಮನಿಗೆ ಅತ್ತೆಯನ್ನು ಹಿಡಿದು ನಾಲ್ಕು ತದಕಿದರೇನು? ಯಾಕೋ ಅಮ್ಮನಿಗೆ ಅತ್ತೆಯೆಂದರೆ ಭಯ. ಚಿಕ್ಕಮ್ಮನಿಗೂ ಅಷ್ಟೆ. ದೊಡ್ಡಮಾವನ ಅತ್ತೆಯಾದುದರಿಂದಲೋ ಏನೋ. ದೊಡ್ಡಮಾವ ಹಜಾರದಲ್ಲಿ ಕುಳಿತಿದ್ದರೆ ಸ್ನಾನ ಮಾಡಿ ಆ ದಾರಿಯಾಗಿ ಬರುವುದಕ್ಕೂ ಅಮ್ಮ, ಚಿಕ್ಕಮ್ಮನಿಗೆ ಭಯ.

ಆದರೆ ಅತ್ತೆ 'ಪತ್ತಾಯಣ ಕೋಣೆ'ಯಲ್ಲಿರುವಾಗ ಅಮ್ಮ, ಚಿಕ್ಕಮ್ಮ ಅವರ ಬಗ್ಗೆ ಗುಸುಗುಸು ಮಾತಾಡುವುದು ಕೇಳಬಹುದು. ಅತ್ತೆಯ ಕೊರಳಲ್ಲಿ ನಾಲ್ಕು ಪವನಿನ ಪದಕವನ್ನು ಪೋಣಿಸಿರುವ ಚಿನ್ನದ ಸರವಿದೆಯಲ್ಲ! ಬಳೆಗಳನ್ನು ಮುರಿಸಿ ಬೇರೆ ಮಾಡಿಸಲು ಕೊಟ್ಟಿದ್ದಾರೆ.

ಅಮ್ಮನಿಗೆ ಚಿನ್ನದ ಸರವಾಗಲೀ ಚಿನ್ನದ ಬಳೆಗಳಾಗಲೀ ಇಲ್ಲ. ಚಿಕ್ಕಮ್ಮನಿಗೆ ಓಲೆಯೂ, ಸೊಗಸಾದ ಕೆತ್ತನೆಗಳುಳ್ಳ ಬಳೆಗಳೂ ಇವೆ. ಅಪ್ಪುವಿನ ತಂದೆಗೆ ಅಂಗಡಿ ವ್ಯಾಪಾರದಲ್ಲೂ ಸಾಕಷ್ಟು ಸಂಪಾದನೆಯಿದೆಯಲ್ಲ! ನನ್ನ ಅಪ್ಪನಿಗೆ ಯಾವ ಸಂಪಾದನೆಯೂ ಇಲ್ಲವಾದ್ದರಿಂದ ಬಹುಶಃ ನನ್ನ ಅಮ್ಮನಿಗೆ ಯಾವ ಆಭರಣವೂ ಇಲ್ಲ.

ದೊಡ್ಡ ಮಾವನೂ ದಾಮೋದರನೂ ಊಟ ಮಾಡುವುದನ್ನು ನಾವು ಕುತೂಹಲದಿಂದಲೇ ಇಣುಕಿ ನೋಡುತ್ತಿದ್ದೆವು. ಕಾಯಿಸಿದ ಹಪ್ಪಳ ಮತ್ತು ಬೇಳೆ ರುಬ್ಬಿ ಮಾಡಿದ ಸಂಡಿಗೆ ಎಲೆಯಲ್ಲಿ ಕಾಣಿಸುತ್ತಿತ್ತು. ಹೆಸರುಬೇಳೆ ನನಗೆ ತುಂಬ ಇಷ್ಟ. ಕರಿದು ಗರಿಗರಿಯಾಗಿರುವ ಸಂಡಿಗೆಯನ್ನು ದಾಮೋದರ 'ಕರಂ ಕರಂ' ಅಂತ ತಿನ್ನುವಾಗ ನನ್ನ ಬಾಯಲ್ಲಿ ನೀರೂರುತ್ತಿತ್ತು.

ನಾವು ನಾಲ್ವರೂ ಉಣ್ಣಿಮಾವಿನ ಮರದ ಬುಡಕ್ಕೆ ಹೋಗುತ್ತಿದ್ದೆವು. ದೊಡ್ಡ ಮಾವನಿಗಿಂತಲೂ ನಮ್ಮ ಸ್ನೇಹ, ಗೌರವಗಳನ್ನು ಸಂಪಾದಿಸಿದ್ದು ಉಣ್ಣಿಮಾವಿನ ಮರ. ಆ ಬೃಹತ್ತಾದ ಮಾವಿನ ಮರದ ಬುಡದ ಕಸಕಡ್ಡಿಗಳನ್ನು ಜಾಡಿಸಿ ನೂಕಿ ಚೆನ್ನಾಗಿ

ಗುಡಿಸಿ ಶುಚಿಮಾಡುತ್ತಿದ್ದೆವು. ರಜೆಯ ದಿನಗಳಲ್ಲಿ ಹಗಲೆಲ್ಲ ಅದರ ಬುಡದಲ್ಲೇ ಕುಳಿತುಕೊಳ್ಳುತ್ತಿದ್ದೆವು. ಉಣ್ಣಿಮಾವಿನ ಮರಕ್ಕೆ ಆ ಹೆಸರು ಬರಲು ಅದರ ಮಾವಿನಕಾಯಿಗಳು ಬಹಳ ಕಿರಿದಾದುದೇ ಕಾರಣ. ಒಂದು ಲಿಂಬೆ ಹಣ್ಣಿನ ಗಾತ್ರದ ಮಾವಿನ ಕಾಯಿಗಳು. ಆದರೂ ಎಷ್ಟೊಂದು ರುಚಿ!

ಸುತ್ತಲೂ ಮಧ್ಯಾಹ್ನದ ಉರಿಬಿಸಿಲು. ನಾವು ನಾಲ್ವರೇ ಇದ್ದಾಗ ಯಾವ ಜಗಳವೂ ಇರುವುದಿಲ್ಲ. ಆ ಬಡಗಣ ಮನೆಯ ಮಕ್ಕಳು ಬಂದರೆ ಜಗಳವೇ ಜಗಳ. ಅವರ ಧಾಳಿಯನ್ನು ಎದುರಿಸಲು ನಾವು ನಾಲ್ವರೂ ಒಂದಾಗುತ್ತಿದ್ದೆವು. ಕಾಯುತ್ತ ಕುಳಿತಿರುವಾಗಲೇ ಮನೆಯ ಬಡಗುದಿಕ್ಕಿನ ಕೋಣೆಯಲ್ಲಿ ಆವಿಯೇಳುವ ಅನ್ನ, ಸಂಡಿಗೆ, ಕಾಯಿಸಿದ ಹಪ್ಪಳಗಳು.

'ನಾವು ದೊಡ್ಡಮಾವನ ಮಗನಾಗಬಹುದಿತ್ತು'

ಅಪ್ಪುವಿನ ಅಭಿಪ್ರಾಯವನ್ನು ಎಲ್ಲರೂ ಅಂಗೀಕರಿಸುತ್ತಿದ್ದೆವು. ದಾಮೋದರ ದೊಡ್ಡದಾಗಿ ತೇಗುತ್ತಾ ಹೊಟ್ಟೆಯನ್ನು ನೀವುತ್ತ ಒಳಗೆ ಬರುತ್ತಿದ್ದರೆ ಮೇಲೋಗರಗಳ ಸುವಾಸನೆ ಮೂಗಿನೊಳಗೆ ತುಂಬುತ್ತಿತ್ತು. ಅದು ಇಂಗಿನ ವಾಸನೆಯೇ? ಕಜ್ಜಾಯದ ರುಚಿಯನ್ನು ಕೇಳಬೇಕೆಂದು ಆಸೆ. ಆದರೆ ಕೇಳುವುದಿಲ್ಲ. ಕೆಲವೊಮ್ಮೆ ದಾಮೋದರ ಎಲೆಯಲ್ಲಿ ಬಡಿಸಿದ್ದ ಕಜ್ಜಾಯವನ್ನು ತಿನ್ನದೇ ಉಳಿಸುತ್ತಿದ್ದ. ನಮ್ಮ ಮುಂದೆ ಕುಳಿತು ತಿನ್ನುವುದು ಅವನಿಗೆ ಇಷ್ಟ. ನನಗೋ ಒಂದು ತುಂಡು ಸಿಕ್ಕಿದರೆ ಎಂಬ ಆಸೆ. ಅಪ್ಪುವೂ, ಗೋಪಿಯೂ, ಕುಂಞಮಾಳುವೂ ಇದ್ದಾಗ ಕೇಳುವುದಕ್ಕೆ ಸಂಕೋಚ.

ಒಮ್ಮೆ ನಾನು ಮೆಲ್ಲಗೆ ಕೇಳಿದ್ದೆ, 'ನನಗೊಂದು ಚೂರು...'

ಅವನು ಗಂಟಲು ಒಡೆಯುವನಂತೆ, ಅಣಕಿಸುವ ಸ್ವರದಲ್ಲಿ ಕೇಳಿದ್ದ. 'ಅಷ್ಟೊಂದು ಆಸೆಯೇ?'

ನನ್ನ ಅಭಿಮಾನ ಚೂರಾಗಿತ್ತು.

ಮಾವಿನ ಹಣ್ಣು ಸಿಕ್ಕಿದಾಗ ಅವನಿಗೆ ಆಸೆ ಹುಟ್ಟಿಸಿ ಒಂದು ಚೂರೂ ಕೊಡದೆ ತಿಂದು ಮುಗಿಸಿಯೇ ಆ ಸೇಡನ್ನು ತೀರಿಸಿದ್ದೆ. ದಾಮೋದರ ಆಸೆಬುರುಕ. ಆದರೆ ಅತ್ತೆಯ ಅಭಿಪ್ರಾಯದಲ್ಲಿ ನಾನೇ ಎಲ್ಲರಿಗಿಂತ ಹೆಚ್ಚಿನ ಆಸೆಬುರುಕ. ಅವರ ದಾಮೋದರನಿಗೆ ಹೊಟ್ಟೆನುಲಿತವುಂಟಾಗಲು ಕಾರಣ ನನ್ನ ಆಸೆಯಂತೆ. ತುಂಬ ಹೊತ್ತು ಕಾದ ಮೇಲೆ ಅಮ್ಮ ಕರೆಯುವುದು ಕೇಳಿಸುತ್ತದೆ. 'ಕುಞ. ಕೃಷ್ಣಾ, ಇನ್ನು ನೀವು ಬಂದುಬಿಡಿ'.

ನಮಗೆ ನಡುಮನೆಯಲ್ಲಿ ಬಡಿಸಿಟ್ಟಿರುತ್ತಿದ್ದರು. ಅನ್ನವಲ್ಲ, ನೆಗ್ಗಿದ ತಾಮ್ರದ ತಳಿಗೆಗಳಲ್ಲಿ ಗಂಜಿ ಮತ್ತು ಹಳದಿಬಣ್ಣದ ಪಲ್ಯ. ಅದನ್ನು ನೋಡುವಾಗಲೇ ಅಸಹ್ಯವಾಗುತ್ತಿತ್ತು.

ಯಾರ ಮೇಲೆ ಎಂದು ಗೊತ್ತಾಗುತ್ತಿರಲಿಲ್ಲ. ಇಡೀ ಲೋಕವನ್ನೇ ಶಪಿಸುತ್ತ ನಾನದನ್ನು ಒಳಗೆ ತಳ್ಳುತ್ತಿದ್ದೆ.

ಅಪ್ಪುವಿಗೆ ಒಂದು ಉಪಾಯವಿತ್ತು. ಅವನು ತಳಿಗೆಯನ್ನು ತುಟಿಗಳ ಮಧ್ಯೆ ಹಿಡಿದು ಒಮ್ಮೆಗೇ ಎಳೆಯುತ್ತಿದ್ದ. ಆಮೇಲೆ ತಟ್ಟೆ ಕೆಳಗಿಟ್ಟಾಗ ಗಂಜಿನೀರಿಲ್ಲದೆ ಅನ್ನದ ರಾಶಿ ತಟ್ಟೆಯಲ್ಲಿ ನಡುಗಡ್ಡೆಯಂತೆ ಕಾಣುತ್ತಿತ್ತು.

ಊಟ ಮಾಡುವ ಸಮಯದಲ್ಲಿ ನಾನೂ ಅಮ್ಮನೊಂದಿಗೆ ವಿನಾಕಾರಣ ಜಗಳ ಕಾಯುತ್ತಿದ್ದೆ. ಅಮ್ಮ ಅಸಹಾಯಕಳೆಂದು ನನಗೆ ಗೊತ್ತು. ಆದರೂ ಗಂಜಿ ಊಟ ಮಾಡಲು ನನಗಾಗದು. ಅದು ಕೀಳೆಂದು ನನ್ನ ಭಾವನೆ. ಚೆರುಮನ್ ಚಾತ್ತನ ಗುಡಿಸಲಲ್ಲೂ ಅಂಗಳಗುಡಿಸುವ ಮಾಣಿಯ ಮನೆಯಲ್ಲೂ ಗಂಜಿ. ಅವರಿಗೆ ಭತ್ತವಿಲ್ಲದುದರಿಂದ ಹಾಗೆ. ನಮ್ಮ ಮನೆಯಲ್ಲಿ ಪತ್ತಾಯ ಎಂಬ ಭತ್ತವಿದೆ. ಮಾವನಿಗೂ ದಾಮೋದರನಿಗೂ ಅನ್ನ ಸಿಗುತ್ತದೆ. ನಮಗೆ ಮಾತ್ರ ಯಾಕೆ ಗಂಜಿ? ದೊಡ್ಡಮಾವನಿಗೆ ನಮ್ಮ ಮೇಲೆ ಇಷ್ಟು ದ್ವೇಷವಿರಲು ಕಾರಣವೇನು? ಎಷ್ಟು ಯೋಚಿಸಿದರೂ ಅರ್ಥವಾಗುವುದಿಲ್ಲ. ದಾಮೋದರನಿಗೆ ಕೊಡುವಂತೆ ಕವರಿ ಚೆಂಡೂ, ಪಾವುಮುಂಡೂ ಬೇಡ. ಬಯ್ಯದಿರಬಹುದಲ್ಲ? ಇಲ್ಲ ದಿನ ನಿಂದೆ, ಬಯ್ಗುಳ. 'ಏನ್ರೋ, ಸೈತಾನರುಗಳೆಲ್ಲ ಮಲಗಿಬಿಟ್ಟಿದ್ದಾರಾ?' ಎಂಬುದೇ ಅವರ ಪ್ರಶ್ನೆ.

ನಾವೇನು ಬಾಯಲ್ಲಿ ಬೆಂಕಿಉಂಡೆಗಳನ್ನು ಇಟ್ಟುಕೊಂಡು ಮಧ್ಯರಾತ್ರಿಯಲ್ಲಿ ಸುತ್ತಾಡುತ್ತೇವೆಯೇ? ಮತ್ತೆ ಅದೇಗೆ ನಾವು ಸೈತಾನರುಗಳಾಗುವುದು? ಒಳಗಿನಿಂದ ಏನಾದರೂ ಶಬ್ದ ಕೇಳಿದರೆ ಸಾಕು, ಆರ್ಭಟಿಸುತ್ತಿದ್ದರು.

'ಉಸಿರೆತ್ತದೆ ಬಿದ್ದುಕೊಂಡಿದ್ದರೆ ಸರಿ. ಒದ್ದೆನೆಂದರೆ....'

ನಾವು ನಡುಗಿಬಿಡುತ್ತಿದ್ದೆವು. ಮನೆಯಲ್ಲಿದ್ದ ಎಲ್ಲರ ಮೇಲೂ ಮಾವನಿಗೆ ತಿರಸ್ಕಾರವೇ. ಈ ತರವಾಡು (ಮನೆತನ) ಒಡೆಯಲು ಎರಡು ಕರಿಭಗಳು ಸೇರಿವೆ. ಕರಿಭವೆಂದರೆ ಏನೆಂದು ನಮಗಾರಿಗೂ ಗೊತ್ತಿಲ್ಲ. ಅನೇಕ ಸಲ ಕೇಳಿದಾಗ ಅದು ಅಮ್ಮನಿಗೂ ಚಿಕ್ಕಮ್ಮನಿಗೂ ಮಾವ ಕೊಟ್ಟ ಹೆಸರೆಂದು ಗೊತ್ತಾಯಿತು. ಅಜ್ಜಿಯ ಭಯವೂ ಮಾವನಿಗಿರಲಿಲ್ಲ. ನನ್ನ ಅಮ್ಮ ನನ್ನನ್ನು ಹೊಡೆಯುತ್ತಿದ್ದರು. ಅದೇ ರೀತಿ ಅಜ್ಜಿಯೂ ಮಾವನನ್ನು ಹೊಡೆದರೇನು?

ಒಂದು ಸಲ ಮಾವ ಗೋಪಿಯನ್ನು ನಡು ಅಂಗಳದ ಕಂಬಕ್ಕೆ ಕಟ್ಟಿ ಒಂದು ಹುಣಸೆ ಬರಲು ತುಂಡಾಗುವವರೆಗೂ ಹೊಡೆದಿದ್ದರು. ಅದನ್ನು ನೋಡಿದಾಗ ಅಜ್ಜಿ ಹೇಳಿದ್ದಳು, 'ಲೋ, ಅಷ್ಟು ನೀಚನಾಗಬೇಡ. ಬಾಲಶಾಪ ತಗಲಿದರೆ ಹೋಗುವುದಿಲ್ಲ'. ಅದಕ್ಕೆ ಮಾವ ಕೊಟ್ಟ ಉತ್ತರ 'ಲೇ ಮುದುಕಿ, ನಿನ್ನ ಪಾಡಿಗೆ ನೀನಿರು'. ಅಷ್ಟಕ್ಕೆ ಅಜ್ಜಿ ಸುಮ್ಮನಾಗಿದ್ದರು.

ದೊಡ್ಡವರ ಜನ್ಮದಿನದಂದು ಮಾತ್ರವೇ ಹಬ್ಬದಡಿಗೆ ಮಾಡುತ್ತಾರೆಂದು ನನ್ನ ಭಾವನೆಯಾಗಿತ್ತು. ಸ್ಕೂಲು ಮೇನೇಜರರೂ ದೊಡ್ಡಮಾವನೂ ವಯಸ್ಸಾದವರು ತಾನೆ? ದೊಡ್ಡವನಾದಾಗ ನನ್ನ ಹುಟ್ಟುಹಬ್ಬವನ್ನೂ ವಿಜೃಂಭಣೆಯಿಂದ ಮಾಡಬೇಕು; ಊರವರನ್ನೆಲ್ಲ ಕರೆಯಬೇಕು.

ದೊಡ್ಡವರದು ಮಾತ್ರವಲ್ಲ ಮಕ್ಕಳ ಜನ್ಮದಿನದಂದೂ ಹಬ್ಬದಡಿಗೆ ಮಾಡುತ್ತಾರೆಂದು ಮೊತ್ತಮೊದಲು ನನಗೆ ತಿಳಿಸಿದ್ದು ನನ್ನ ಸಹಪಾಠಿ ಮಣಿ. ಮಣಿಯ ಜನ್ಮದಿನದಂದು ವಿಶೇಷ ಭೋಜನವಿರುತ್ತಿತ್ತು. ಅವನದ್ದು ಮಾತ್ರವಲ್ಲ ಅವನ ತಂಗಿಯದ್ದೂ. ನನಗೆ ನಂಬಿಕೆಯೇ ಬರಲಿಲ್ಲ. ಅವನು ಸುಳ್ಳು ಹೇಳುತ್ತಾನೆ. ಮನೆಯ ನಾಗಬನದಲ್ಲಿ ಮೂರು ಚೆಂಬಿನ ಕೊಡಗಳ ತುಂಬ ಚಿನ್ನವನ್ನು ಹುಗಿದಿಟ್ಟಿದ್ದಾರೆಂದು ಹೇಳಿದ ವೀರನಲ್ಲವೇ ಅವನು? ಆದರೆ ಜನ್ಮದಿನದ ಬಗ್ಗೆ ಮಣಿ ಹೇಳಿದ ವಿಚಾರ ವಾಸ್ತವವಾಗಿತ್ತು. ನಮ್ಮ ಮನೆಯಲ್ಲಿ ಮೊತ್ತಮೊದಲಿಗೆ ದಾಮೋದರನ ಜನ್ಮದಿನವನ್ನು ಆಚರಿಸಿದರು. ಸಾಧಾರಣವಾಗಿ ದಾಮೋದರನ ಜನ್ಮದಿನವನ್ನು ಅವನ ಮನೆಯಲ್ಲೇ ಆಚರಿಸುತ್ತಿದ್ದರು. ಆ ವರ್ಷ ಮೊದಲಬಾರಿಗೆ ನಮ್ಮ ಮನೆಯಲ್ಲಿ ನಡೆಸಿದರು.

ಮುನ್ನಾದಿನ ಉಣ್ಣೆಮಾವಿನ ಮರದ ಬುಡದಲ್ಲಿ ಕುಳಿತಿದ್ದಾಗ ದಾಮೋದರ ಹೇಳಿದ್ದ 'ನಾಳೆ ನನ್ನ ಜನ್ಮದಿನ ಗೊತ್ತೇ?' 'ಅದಕ್ಕೇನೀಗ? ನಾವೇನು ಮಾಡಬೇಕು?'

'ನಾಳೆ ಪಾಯಸ ಮಾಡುತ್ತಾರಂತೆ'

'ಹೂಂ!' ನಮಗೆ ನಗು ಬಂತು. ಬಡಾಯಿಯಲ್ಲವೇ? ಆದರೆ ಮರುದಿನ ನಮಗೆ ದಿಗ್ಭ್ರಮೆಯುಂಟಾಗಿತ್ತು. ದಾಮೋದರನ ಜನ್ಮದಿನ ಹಬ್ಬದಡಿಗೆ ಮಾಡಿದ್ದರು. ಇಷ್ಟುದಿನ ಅಮ್ಮನಿಗೆ ಈ ವಿಷಯ ಗೊತ್ತಿರಲಿಲ್ಲವೇ? ನನ್ನ ಜನ್ಮದಿನ ಬರಲಿ.... ಆಷಾಢದಲ್ಲಿ ಬರುವ ಜನ್ಮದಿನಕ್ಕಾಗಿ ಕಾದೆ. ಅಜ್ಜಿಗೆ ಊರಿನಲ್ಲಿರುವ ಪ್ರತಿಯೊಬ್ಬರ ಜನ್ಮದಿನ, ಶ್ರಾದ್ಧದಿನ ಗೊತ್ತು. ಅವರು ಎಣಿಸಿಕೊಂಡು ಮೊದಲೇ ಹೇಳಿದ್ದರು 'ಮುಂದಿನ ಬುಧವಾರ ಕಣೋ ನಿನ್ನ ಜನ್ಮದಿನ...'

ನಾನು ಮನಸ್ಸಿನಲ್ಲಿಯೇ ಗುಣುಗುಣಿಸಿದೆ. ಅಮ್ಮನಲ್ಲಿ ನಿವೇದಿಸಿದೆ. 'ನನ್ನ ಜನ್ಮದಿನದಂದು ಹಬ್ಬದಡಿಗೆ ಮಾಡಬೇಕು'.

'ನಿನಗೇನು ಹುಚ್ಚೇ?!'

ಅಮ್ಮ ಇಷ್ಟರಮಟ್ಟಿಗೆ ಉಪೇಕ್ಷಿಸುವರೆಂದು ಊಹಿಸಿರಲಿಲ್ಲ. ನನಗೆ ಅಳುಬಂತು. 'ದಾಮೋದರನ ಜನ್ಮದಿನದಂದು...' 'ಆನೆ ಲದ್ದಿ ಹಾಕುವುದನ್ನು ನೋಡಿ ಮೊಲ ಮುಕ್ಕಿತಂತೆ. ದಾಮೋದರನಾದರೆ ದೊಡ್ಡಮಾವನ ಮಗ....' 'ನನಗೆ ಅದೊಂದೂ

ಗೊತ್ತಿಲ್ಲ.' ಅಮ್ಮನಿಗೆ ನನ್ನ ನೋವು ಸ್ವಲ್ಪಮಟ್ಟಿಗೆ ಅರ್ಥವಾಗುತ್ತಿತ್ತು. ಅದಕ್ಕೆ ಅಮ್ಮ ತಾನೇ ಏನು ಮಾಡುತ್ತಾಳೆ? ಮಾವನಲ್ಲವೇ ಭತ್ತ ಅಳೆದುಕೊಡುವವರು. ಅದು ನಿಜ. ಮನೆಯ ಖರ್ಚಿಗೆ ಬೇಕಾದ ಭತ್ತವನ್ನು ಅಳೆದುಕೊಡುವವರು ಮಾವನೇ. ಪತ್ತಾಯದ ಎಲ್ಲ ಬೀಗದ ಕೈಗಳು ಮಾವನ ಕೈಯಲ್ಲೇ ಇರುವುದು. ವಾರಕ್ಕೊಮ್ಮೆ ಪತ್ತಾಯಮನೆಯ ದೊಡ್ಡ ಪತ್ತಾಯದ ಪೆಟ್ಟಿಗೆಯ ಬಾಗಿಲು ತೆರೆಯುತ್ತಿತ್ತು. ಆನಂತರ ನಾಲ್ಕು ಕೋಣೆಗಳಿಗೂ ಕೇಳಿಸುವಂತೆ ಒಂದು ಕರೆ 'ಯಾರದು ಒಳಗೆ?'

ಅಮ್ಮ ಕೂಡಲೇ ಹೊರಗೆ ಬರದಿದ್ದರೆ ಮಾವನ ಧ್ವನಿ ಏರುತ್ತಿತ್ತು. 'ಈ ದರಿದ್ರವುಗಳಿಗೆ ಒಂದಕ್ಕೂ ಕಿವಿ ಕೇಳಿಸುವುದಿಲ್ಲ'. ಅಷ್ಟರೊಳಗೆ ಅಮ್ಮ ಚೀಲದೊಂದಿಗೆ ಬಂದಿರುತ್ತಿದ್ದರು. ಮಾವ ಮೂರು ಕೊಳಗ ಭತ್ತವನ್ನು ಅಳೆದು ಸುರಿಯುತ್ತಿದ್ದರು. ಅದೇ ಒಂದು ವಾರದ ಖರ್ಚಿಗೆ. ಅದು ಸಾಲದೆಂದು ಅಜ್ಜಿ ಶಿಫಾರಸು ಮಾಡಿದರೆ ಮಾವ ಗರ್ಜಿಸುತ್ತಿದ್ದರು.

'ಅನ್ಯರ ಆಶ್ರಯವಿಲ್ಲದೆ ಬದುಕುವುದನ್ನು ಕಲಿಯಲಿ'

ಹಾಗಿದ್ದರೆ ನನ್ನ ಜನ್ಮದಿನದಂದು ಹಬ್ಬದಡಿಗೆ ಮಾಡಬೇಕೆಂದರೆ ಮಾವ ಹೆಚ್ಚು ಭತ್ತ ಕೊಡಬೇಕು. ಮಾವನಿಗೆ ಹೆಚ್ಚು ಕೊಡುವುದಕ್ಕೇನು? ಪತ್ತಾಯದಲ್ಲಿ ಬೇಕಾದಷ್ಟು ಭತ್ತವಿದೆಯಲ್ಲ? ನನಗೆ ಕೇಳುವುದಕ್ಕೆ ಸಾಧ್ಯವಿಲ್ಲ. ಹೊಡೆದರೆ ಎಂಬ ಭಯ. ಅಮ್ಮನೇ ಕೇಳಿದರೆ ಒಳ್ಳೆಯದಿತ್ತು.

ಸಾಯಂಕಾಲ ಸ್ನಾನಮಾಡಿ ಬರುವಾಗ ನಾನು ಅಮ್ಮನಲ್ಲಿ ಹೇಳಿದೆ 'ಅಮ್ಮ, ಕೇಳಿ ನೋಡಿ'

'ಏನನ್ನೋ?'

ನಾನು ಉತ್ತರಿಸಲಿಲ್ಲ.

'ಏನು ಬೇಕೋ?'

'ಮಾವನಲ್ಲಿ....'

'ನಿನಗೇನು ಹುಚ್ಚೇ?'

ನನ್ನ ಕಣ್ಣುಗಳು ತುಂಬಿದವು. ಏನು ಹೇಳಿದರೂ ಅದು ನನ್ನ ಹುಚ್ಚು. ಅಮ್ಮ ನನ್ನ ಮುಖವನ್ನು ನೋಡಿದರು. ಕಣ್ಣೀರು ಉಕ್ಕಿ ಹರಿಯಿತು. ಅದಕ್ಕೆಲ್ಲ ಹಣೆಬರಹ ಒಳ್ಳೆಯದಿರಬೇಕು ಕಣೋ. ಅಮ್ಮ ಬಟ್ಟೆಯಿಂದ ನನ್ನ ಕಣ್ಣೊರೆಸಿದರು. ಆವನನ್ನು

ಹುಣಸೆ ಬರಲಿನಿಂದ ಚೆನ್ನಾಗಿ ಬಾರಿಸಬೇಕು. ಅಮ್ಮನ ಮತ್ತು ನನ್ನ ಹಣೆಯಲ್ಲಿ ಕೆಟ್ಟ ಬರಹವನ್ನು ಬರೆದವನನ್ನು. ಎರಡು ರಾತ್ರಿ ಒಂದು ಹಗಲು ಕಳೆಯಿತು. ಮನಸ್ಸಿನ ತುಂಬಾ ನೋವು. ಯಾರೊಂದಿಗೂ ಏನೂ ಹೇಳಲಿಲ್ಲ. ಏನು ಮಾಡಲಿ? ನಾನು ಅಂಥ ಅದೃಷ್ಟ ಹೀನನಾಗಿದ್ದೆ.

ಬುಧವಾರ ಬೆಳಕು ಹರಿಯಿತು. ಆ ದಿನ ನನ್ನ ಜನ್ಮದಿನ. ನನಗೆ ಯಾವ ಉತ್ಸಾಹವೂ ಇರಲಿಲ್ಲ. ನನ್ನ ಜನ್ಮದಿನವೆಂಬ ವಿಚಾರ ದಾಮೋದರನಿಗೆ ತಿಳಿಯಬಾರದಲ್ಲ... ಆವತ್ತು ಭತ್ತ ಅಳೆದುಕೊಡುವ ದಿನ. ಬೆಳಗ್ಗೆ ಪತ್ತಾಯದ ಪೆಟ್ಟಿಗೆ ತೆರೆಯಿತು. ಮಾವ ಕರೆದರು 'ಯಾರು ಒಳಗೆ?' ಅಮ್ಮ ಚೀಲದೊಂದಿಗೆ ಪತ್ತಾಯದ ಕೋಣೆಗೆ ಬಂದರು. ಹಜಾರದ ಪಶ್ಚಿಮದಿಕ್ಕಿನ ಮೂಲೆಯಲ್ಲಿ ಗದ್ದಲು ಹಿಡಿದ ಕಂಬವನ್ನೊರಗಿ ನಾನು ಕುಳಿತಿದ್ದೆ. ಕಿಟಕಿಯಿಂದ ನೋಡಿದರೆ ಮಾವ ಭತ್ತ ಅಳೆದುಕೊಡುವುದು ಕಾಣಿಸುತ್ತಿತ್ತು.

ಮೂರುಸಲ ಸುರಿದು ಮಾವ ಪತ್ತಾಯದ ಬಾಗಿಲು ಮುಚ್ಚುವಾಗ ಅಮ್ಮ ಮೆಲ್ಲನೆ ಉಸುರಿದಳು. 'ಇವತ್ತು ಮಗುವಿನ ಜನ್ಮದಿನ...'

ನನ್ನ ಹೃದಯ ಢವಗುಟ್ಟಿತು. ನಾನು ಭಾವಿಸಿದಂತೆ ಅಲ್ಲ. ನನ್ನ ಅಮ್ಮ ಎಷ್ಟು ಒಳ್ಳೆಯ ಅಮ್ಮ...

'ಅದಕ್ಕೇ?'

'ಅವನ ಹೆಸರಲ್ಲಿ ಪಾಯಸದ ಹರಕೆಯಿದೆ. ಒಂದು ನಾಲ್ಕು ಬಳ್ಳವಾದರೂ...'

ಸಿಡಿಲೆರಗಿದಂಥ ಗರ್ಜನೆಯಿಂದ ಮಾವ ಹೇಳಿದರು 'ಹರಕೆ ಹೊರಲು ಯಾರು ಹೇಳಿದ್ದು? ಹೇಳಿದವರು ತೀರಿಸುತ್ತಾರೆ'.

'ಅವನಿಗೆ ಕಾಯಿಲೆ ಬಂದಾಗ ಹೇಳಿದ್ದು'.

'ಅವನನ್ನು ಹುಟ್ಟಿಸಿದವನಿಗೆ ಹೇಳು. ಅವನಿಂದ ಒಂದು ಕಾಸಿನ ಪ್ರಯೋಜನವಿದೆಯೇ?'.

'ನನ್ನ ಸ್ವಇಚ್ಛೆಯಿಂದ ನಡೆಸಿದ್ದಲ್ಲವಲ್ಲ?'

'ಈ ಮನೆಯಲ್ಲಿ ನನ್ನೊಂದಿಗೆ ಹೆಂಗಸರೂ ಪಾರುಪತ್ಯ ಮಾತನಾಡಲು ಪ್ರಾರಂಭಿಸಿದರೇ?'.

'ಅಣ್ಣನನ್ನಲ್ಲದೆ ಮತ್ತೆ ಯಾರನ್ನು ಕೇಳಲಿ? ಸ್ವಲ್ಪ ಹೆಚ್ಚು ಕೊಡುತ್ತಿದ್ದರೆ...'

ಬಲವಾದ ಏಟುಬಿದ್ದ ಶಬ್ದ. ಕಿಟಕಿಯಿಂದ ನೋಡಿದಾಗ ಅಮ್ಮ ಪತ್ತಾಯದ ಮೇಲೆ ಕುಸಿಯುತ್ತಿದ್ದಳು.

'ಅಮ್ಮಾ...' ನನಗರಿವಿಲ್ಲದೆ ಜೋರಾಗಿ ಕಿರುಚಿದೆ.


ಒಳಗಿದ್ದವರೆಲ್ಲ ಒಮ್ಮೆಲೇ ಹಜಾರಕ್ಕೆ ಓಡಿಬಂದು ಪತ್ತಾಯದ ಕೋಣೆಯತ್ತ ನೋಡಿ ಹಿಂತಿರುಗಿದರು. ಅಜ್ಜಿ ಮಾತ್ರ ಎರಡು ಸಲ ಜೋರಾಗಿ ಜಪಿಸಿದರು.

'ನಾರಾಯಣ... ನಾರಾಯಣ...'

ಸ್ವಲ್ಪ ಹೊತ್ತಾದ ಮೇಲೆ ಅಮ್ಮ ಭತ್ತದ ಚೀಲದೊಂದಿಗೆ ಪತ್ತಾಯದ ಕೋಣೆಯಿಂದ ಹೊರಗೆ ಬಂದರು. ಕಪೋಲಗಳಲ್ಲಿ ಕಣ್ಣೀರು ಇಳಿಯುತ್ತಿತ್ತು. ಎಡಹುಬ್ಬಿನ ಮೇಲ್ಭಾಗದಲ್ಲಿ ರಕ್ತ.

ಆ ಜನ್ಮದಿನದಂದು ನಾನು ಸ್ನಾನ ಮಾಡಲಿಲ್ಲ. ಅಮ್ಮ ಸ್ನಾನ ಮಾಡಲು ಒತ್ತಾಯಿಸಲೂ ಇಲ್ಲ.

ಆನಂತರದಲ್ಲಿ ಇಪ್ಪತ್ತು ಜನ್ಮದಿನಗಳು ಕಳೆದುಹೋದವು. ಇಂದು ಅಮ್ಮನೂ ಇಲ್ಲ, ಮಾವನೂ ಇಲ್ಲ, ಅಜ್ಜಿಯೂ ಇಲ್ಲ... ಕತ್ತಲೆ ಕವಿಯುವ ಆಕಾಶದತ್ತ ಕಣ್ಣು ನೆಟ್ಟು ಕುಳಿತಾಗ ನನಗೆ ನೆನಪಾಗುತ್ತದೆ : 'ನಾಳೆ ನನ್ನ ಜನ್ಮದಿನ!'



ತಸ್ಲಿಮಾ ನಸ್ರೀನ್‌ರವರ 'ಆಲ್ ಏಬೌಟ್ ವುಮನ್' ಕವನಸಂಕಲನದ ಬಹುತೇಕ ಕವಿತೆಗಳು ಸಾರ್ವತ್ರಿಕ ಮತ್ತು ಸಾರ್ವಕಾಲಿಕ ಎನ್ನಬಹುದಾದ ಹೆಣ್ಣಿನ ನೋವಿನ ಪ್ರಾತಿನಿಧಿಕ ಅಭಿವ್ಯಕ್ತಿ. ಧಾರ್ಮಿಕ ಮೂಲಭೂತವಾದ ಹಾಗೂ ಸ್ತ್ರೀ-ಶೋಷಣೆಯ ವಿರುದ್ಧ ಎದ್ದ ಒಂದು ಶಕ್ತ ಧ್ವನಿ. ಬಾಂಗ್ಲಾದೇಶದ ಮೇಮನ್‌ಸಿಂಗ್‌ನಲ್ಲಿ ಹುಟ್ಟಿದ ತಸ್ಲಿಮಾ ಢಾಕಾದ ಆಸ್ಪತ್ರೆಯೊಂದರಲ್ಲಿ ವೈದ್ಯಕೀಯ ಸಹಾಯಕಿಯಾಗಿ ಸೇವೆ ಸಲ್ಲಿಸಿದ್ದಾರೆ. ಅಧ್ಯಯನದ ಅವಧಿಯಲ್ಲಿಯೇ ತಸ್ಲಿಮಾ ಮಹಿಳಾವಾದದ ಪ್ರಮುಖ ಅಂಕಣಕಾರರಾಗಿದ್ದರು.

ಅವರ ವಿವಾದಾತ್ಮಕ 'ಲಜ್ಜಾ' ಕಾದಂಬರಿಯನ್ನು 1993ರಲ್ಲಿ ನಿಷೇಧಿಸಲಾಗಿತ್ತು. 1994ರಲ್ಲಿ ಯುರೋಪಿಯನ್ ಸಂಸತ್‌ನಿಂದ ವಿಚಾರಸ್ವಾತಂತ್ರ್ಯಕ್ಕಾಗಿ ನೀಡಲಾಗುವ 'ಸಖರೋವ್ ಪ್ರಶಸ್ತಿ'ಯನ್ನು ನೀಡಿ ಗೌರವಿಸಲಾಯಿತು. ಸಾಂಪ್ರದಾಯಿಕ ಶಕ್ತಿಗಳ ಒತ್ತಡದ ಕಾರಣ ದೇಶವನ್ನು ರಹಸ್ಯವಾಗಿ ತೊರೆದ ತಸ್ಲಿಮಾ ಸ್ವೀಡನ್ ದೇಶದಲ್ಲಿ ಆಸರೆ ಪಡೆದಿದ್ದರು.

2004ರಲ್ಲಿ ಯುನೆಸ್ಕೊದ 'ಅಹಿಂಸೆ ಮತ್ತು ಸಹಿಷ್ಣುತಾ ಪ್ರಶಸ್ತಿ', ಮಂಡಜೀತ್ ಸಿಂಗ್' ಬಹುಮಾನ ಪಡೆದಿರುವ ತಸ್ಲಿಮಾ ಯು.ಎಸ್.ಎ.ನಲ್ಲಿ ಸಂಶೋಧನೆ ನಡೆಸಿದ್ದು ಈಗ ಭಾರತದ ಪೌರತ್ವಕ್ಕಾಗಿ ಪ್ರಯತ್ನಿಸುತ್ತಿದ್ದಾರೆ.

ಗುರುರಾಜ್ ಅನುವಾದಿಸಿದ ತಸ್ಲಿಮಾ ನಸ್ರೀನ್‌ರ ಕವಿತೆಗಳು

ನನ್ನ ಮಾನವತೆ

ನನ್ನವ್ವನನ್ನು ಪ್ರೀತಿಸುವೆನೆಂದು ಅವಳಿಗೆಂದೂ ಹೇಳಿಲ್ಲ ನಾನು
ಇತರರ ತಾಯಂದಿರಿಗೆ ಹೇಳಿದ್ದೇನೆ.
ನನ್ನವ್ವ ಹಾಸಿಗೆ ಹಿಡಿದಾಗ ಎಂದೂ ಉಪಚರಿಸಲಿಲ್ಲ ನಾನು
ಇತರರ ತಾಯಂದಿರಿಗೆ ಮಾಡಿದ್ದೇನೆ.
ನನ್ನವ್ವನಿಗಾಗಿ ಎಂದೂ ನೊಂದಿಲ್ಲ ನಾನು
ಆದರೆ ಇತರರ ತಾಯಂದಿರ ನೋವಿಗೆ ನರಳಿದ್ದೇನೆ.
ಅವಳು ಅಂಗಲಾಚಿ ಕರೆದಾಗಲೂ ಅವಳ ಬಳಿ ಕುಳಿತು
ಪ್ರೀತಿಕೈಗಳಿಂದ ಅವಳ ತಲೆಯನ್ನು ತಪ್ಪಿಯೂ ನೇವರಿಸಿಲ್ಲ
ಅವಳತ್ತ ದೃಷ್ಟಿಹರಿಸಲಾಗಿಲ್ಲ.
ನನ್ನ ಬಹಳಷ್ಟು ಪ್ರೀತಿಸಿದವಳ ನಾನೆಂದೂ ಪ್ರೀತಿಸಲಿಲ್ಲ
ನನ್ನನೆಂದೂ ಪ್ರೀತಿಸದ ಎಲ್ಲರಿಗೂ
ಎಲ್ಲವನೂ ಕೊಟ್ಟೆ ನಾನು
ನನ್ನೊಳಿದ್ದುದು. ಇಲ್ಲದುದನೆಲ್ಲ.
ಲೋಕದ ಕಣ್ಣಿಗೆ ಉದಾತ್ತಳಾದೆ
ಮಾನವತೆಯ ಪ್ರತೀಕವಾದೆ
ನನ್ನ ತಾಯಿ ಮಾತ್ರ ನಾನಿದ್ದೂ ಅನಾಥೆ.



ಆಕಾಶವನೆ ಹೊತ್ತಂತೆ ನಡೆವ ಗಾರ್ಮೆಂಟ್ ಹುಡುಗಿಯರು
ಬಾಂಗ್ಲಾ ದೇಶದ ಬೆದರು ಬಾಲಿನ ಹಕ್ಕಿ ಹಿಂಡಿನ ಹಾಗೆ.
ನಡುರಾತ್ರಿಯಲಿ ತುಳಿಯುತ್ತಾರೆ ತಮ್ಮ ಕೊಳಗೇರಿ ಹಾದಿ
ಬೀಡಾಡಿ ಜನರ ಪುಡಿಗಾಸು ಕಸಿಯುವ ಕಳ್ಳಾಟಕೆ
ಬಳಲಿದ ಮೈತುಂಬ ಭಯದ ಬೆವರು.
ರಸ್ತೆಯುದ್ದಗಲಕೂ ಕುಡುಕರ ತೂರಾಟ ಬೇಕೆಂದೇ
ಹುಡುಗಿಯರ ಮೈಬಿಸಿಯ ಮಿಂಚಿಗಾಗಿ.
ಅವರಿಗೆ ಶೀಲವಿದೆ. ಎಲ್ಲವಿದೆ: ಕಳೆದುಕೊಳ್ಳಲು
ಇರುವುದು. ಇಲ್ಲದ್ದು ಎಲ್ಲದರ ಮೇಲೆ ಜನರ ಕಣ್ಣು.

ಭದ್ರವಿಲ್ಲದ ಬಾಗಿಲ ಹಿಂದೆ ನಿದ್ದೆ ಹತ್ತದ ಹುಡುಗಿಯರು
ಬೆಳಗಾಗುವ ಮುನ್ನವೇ ಒಂದಾಗಿ ಹೊರಡುತ್ತಾರೆ.
ಕಾಮುಕ ಕಣ್ಣಿನ ಪಟ್ಟಣದ ಸಭ್ಯ ಜನ ಜೊಲ್ಲು ಸುರಿಸಿ
ಉಗುಳುತ್ತಾರೆ ಅದೇ ಹುಡುಗಿಯರತ್ತ.

ಹುಡುಗಿಯರು ನಡೆಯುತ್ತಾರೆ, ನಡೆಯುತ್ತಲೇ ಇದ್ದಾರೆ
ಯಾರ ಅನ್ನಕೂ ಅವರು ಬಾಯಿಹಾಕುವುದಿಲ್ಲ
ಯಾರ ಬಟ್ಟೆಗೂ ಕೈ ಹಾಕುವುದಿಲ್ಲ
ಆದರೂ ತಲೆ ತಗ್ಗಿಸಿರಬೇಕು.
ಸಿರಿವಂತರ ದಾಕ್ಷಿಣ್ಯದ ನೇಣು ಹಗ್ಗಕೆ ಕಟ್ಟುಬಿದ್ದು
ಕಣ್ಣು ಮುಚ್ಚಲ್ಪಟ್ಟ ಎತ್ತುಗಳಂತೆ ಅವರ ನಡೆ.
ತಿರುಗಿಸಬೇಕು ಹಣವಂತರ ಲಾಭದ ಗಾಣ
ಹಿಂಡಿದೆಣ್ಣೆಯೆಲ್ಲ ಹಣವಂತರ ಪಾಲು
ಹುಡುಗಿಯರಿಗೆ ಬೈಗುಳದ ಬೋನಸ್
ತೇವಗೊಂಡ ಕಣ್ಣಿಗೆ ಕಾಮನಬಿಲ್ಲಿನ ಬಣ್ಣವೂ ಮಬ್ಬು.

ಕತ್ತಲಿಂದ ಅವರ ಮೈಮುಚ್ಚಿ ಶೀಲ ದೋಚುತ್ತಾರೆ
ಕೊಳಗೇರಿಯ ಮಾಫಿಯಾ ಜನ
ಬೆಳದಿಂಗಳ ರಾತ್ರಿಯಲಿ ಬೆತ್ತಲ ಮೈಗೆ ಕಣ್ಣೀರ ಸ್ನಾನ.

ಹಿಂಡಿನಲಿ ನಡೆವ ಗಾರ್ಮೆಂಟ್ ಹುಡುಗಿಯರೀಗ
ಬಾಂಗ್ಲಾ ದೇಶದ ದುಸ್ಥಿತಿಗೆ ಹಿಡಿದ ಕನ್ನಡಿಯ ಹಾಗೆ.



ಇಪ್ಪತ್ತೊಂದರ ಹರಯದಲಿ ನಲವತ್ತು ದಾಟಿದವಳಂತೆ
ಮನೆಯೊಳಗೆ ಏಳು ಮಕ್ಕಳ ಸಂತೆ.
ದಿನವಿಡೀ ಇಟ್ಟಿಗೆ ಪುಡಿಮಾಡಿದ ಕಾಯಕದ ಕೊನೆಗೆ
ಗುತ್ತಿಗೆದಾರನ ಪುಡಿಗಾಸಿನ ಭಿಕ್ಷೆ
ಸಾಲುವುದಿಲ್ಲ ಕೆರಳಿ ಕಾಡುವ ಎಂಟು ಹೊಟ್ಟೆಗೆ
ಆದರೂ ಇಟ್ಟಿಗೆ ಒಡೆಯಬೇಕು: ನಾಯಿಪಾಡು.

ಪಕ್ಕದಲಿ ಕೊಡೆಯ ಕೆಳಗೆ ಇಟ್ಟಿಗೆ ಒಡೆಯುವ ಗಂಡಸು
ಅವನಿಗೆ ದುಪ್ಪಟ್ಟು ಕೂಲಿ
ಗಂಡಸೆಂಬ ಒಂದೇ ಕಾರಣಕ್ಕೆ.
ಹೆಂಗಸಿಗೆ ಕನಸು – ಸೂರ್ಯನ ಉರಿಗಣ್ಣು ತಡೆವ ಕೊಡೆ
ಕೆಳಗೆ ಕುಳಿತು ಇಟ್ಟಿಗೆ ಒಡೆಯಬೇಕೆಂದು.
ಮತ್ತೊಂದು ಕನಸು, ಒಂದಿಲ್ಲೊಂದು ದಿನ ಗಂಡಸಾಗಿ
ಅಷ್ಟೇ ಕೆಲಸಕೆ ದುಪ್ಪಟ್ಟು ಗಳಿಸುವುದು.

ನನಸಾಗದ ಕನಸು – ಹರುಕು ಕೊಡೆಯೂ ದಕ್ಕುವುದಿಲ್ಲ
ಹೊಸ ರಸ್ತೆ, ಎತ್ತರದ ಗೋಪುರ ಅರಳುತ್ತವೆ
ಅವಳು ಚಚ್ಚಿದ ಇಟ್ಟಿಗೆಯಿಂದ
ಬಿರುಗಾಳಿಗೆ ಬೆದರಿದ ಅವಳ ಮನೆ ಛಾವಣಿ
ಬಿಕ್ಕಳಿಸುತ್ತದೆ. ತೊಟ್ಟಿಕ್ಕುವ ನೀರು ಮನೆ ತುಂಬ.
ಅವಳ ತಗಡು ಛಾವಣಿಯ ಹಸಿ ಹಸಿ ಹಂಬಲಿಕೆ
ಕೇಳಿದ ಜನ ಮುಸಿಮುಸಿ ನಕ್ಕು ನುಡಿಯುತ್ತಾರೆ
'ಹೊಟ್ಟೆಗೆ ಹೂವಿಲ್ಲ ಜುಟ್ಟಿಗೆ ಮಲ್ಲಿಗೆ ಹೂವು.'

ಎಂದೂ ತಣಿಯದ ಹೊಟ್ಟೆಹೊರೆವ ಕಾಯಕದ ಝಳಕೆ
ಚರ್ಮ ಕಪ್ಪಿಟ್ಟು ಬೆರಳು ಇಟ್ಟಿಗೆಯಂತೆ ಒರಟಾಗಿ
ತಾನೂ ಇಟ್ಟಿಗೆ ಆಗಿ ಹೋಗುತ್ತಾಳೆ. ಕೊನೆಗೊಮ್ಮೆ
ಇಟ್ಟಿಗೆಗಿಂತಲೂ ಒರಟು; ಸುತ್ತಿಗೆ ಪುಡಿಮಾಡಲಾಗದಷ್ಟು.
ಉರಿಬಿಸಿಲು, ಅರೆಹೊಟ್ಟೆ, ಬೆಂದ ಎದೆ, ಕೊಡೆ ನೆರಳಾಸೆ
ದಕ್ಕದ ತಗಡಿನ ಛಾವಣಿ
ಯಾವುದೂ ನೋಯಿಸಲಾರದು ಅವಳನೀಗ.



ನೈಷದಂ ಎಸ್ ಅನುವಾದಿಸಿದ
ಆಫ್ರಿಕನ್ ಕಾವ್ಯ

ಒಂದಾನೊಂದು ಕಾಲದಲ್ಲಿ

ಮೂಲ : ಗೇಬ್ರಿಯಲ್ ಒಕಾರ

ಒಂದಾನೊಂದು ಕಾಲದಲ್ಲಿ ಜನ
ಹೃತ್ಪೂರ್ವಕ ನಗುತ್ತಿದ್ದರು ಮಗು
ಕಣ್ತುಂಬ ನಗುತ್ತಿದ್ದರು;
ಈಗ ಕೇವಲ ಹಲ್ಲು ತೋರುತ್ತಾರೆ
ಅವರ ಶೀತಲ ಕಪ್ಪು ಕಣ್ಣು ನನ್ನ
ನೆರಳಿನ ಹಿಂದೆ ಹುಡುಕಾಡುತ್ತದೆ.

ಕಾಲವೊಂದಿತ್ತು ಮಗು, ಜನ
ಹೃತ್ಪೂರ್ವಕ ಕೈಕುಲುಕುತ್ತಿದ್ದ ದಿನ
ಸರಿದು ಹೋಯಿತು ಆ ದಿನ – ಜನ
ಈಗ ಕೈ ಕುಲುಕುವರು ಹೃದಯ ವಿಹೀನ
ನನ್ನ ಖಾಲಿ ಜೇಬಿನೊಳಗೆ ತಮ್ಮ ಎಡಗೈಗಳ
ಬಿಟ್ಟು ಹುಡುಕಾಟ ನಡೆಸುವ ಜನ.

'ಇದು ನಿಮ್ಮ ಮನೆ', 'ಮತ್ತೊಮ್ಮೆ ಬನ್ನಿ'
ಎನ್ನುವರು. ನನ್ನ ಮನೆಗೆಂಬಂತೆ
ಒಮ್ಮೆ ಮತ್ತೊಮ್ಮೆ ಬರಬಹುದು.
ಇನ್ನೂ ಒಮ್ಮೆ ಎಂಬುದು ಬರುವುದೇ ಇಲ್ಲ
ಯಾಕೆಂದರೆ, ಮುಖದ ಮೇಲೇ
ಬಾಗಿಲುಗಳ ಬಡಿಯುವುದರಿಂದ
ಆದ್ದರಿಂದಲೇ ಬಹಳ ಕಲಿತಿರುವೆ ಮಗು

ಅನೇಕ ಮುಖಗಳ ಧರಿಸುವುದ ಕಲಿತಿರುವೆ
ಬಟ್ಟೆಗಳಂತೆ, ಮನೆಯ ಮುಖ
ಆಫೀಸಿನ ಮುಖ ಬೀದಿಯ ಮುಖ ಹೋಸ್ಟಿನ ಮುಖ
ಕಾಕ್ಟೈಲಿನ ಮುಖ ತೋರುತ್ತಾ ಅವರೆಲ್ಲ ನಗೆಗಳ,
ಆ ಚಿತ್ರಪಟ ನಗೆಗಳ ಒಪ್ಪುವುದ ಕಲಿತಿರುವೆ.

ಮತ್ತೆ ಹಲ್ಲು ತೋರುತ್ತಾ
ನಗುವುದ, ಹೃದಯ ಇಲ್ಲದೆ
ಕೈಕುಲುಕುವುದ ಕಲಿತಿರುವೆ.
'ತೊಲಗಿ ಹೋಗಲಿ' ಎನಿಸಿದಾಗ
'ಹೋಗಿ ಬನ್ನಿ' ಎಂದು ಹಲ್ಲು
ಕಿರಿಯುವುದೂ ಕಲಿತಿದ್ದೇನೆ
ಸಂತೋಷಪಡದೆಯೇ

'ತಮ್ಮನ್ನು ಭೇಟಿ ಮಾಡಿದ್ದು ಸಂತೋಷ
ಎನ್ನುವುದು, ಬೋರಾಗಿದ್ದರೂ
'ತಮ್ಮ ಜತೆ ಮತಾಡಿದ್ದು ಬಲು ಚೆನ್ನ'
ಎನ್ನುವುದ ಕಲಿತಿರುವೆ ಮಗು.
ಆದರೆ, ನಾನು ನಿನ್ನಂತಿದ್ದಾಗ
ಹೇಗಿದ್ದೆ ಹಾಗಿರಲು ಬಯಸುವೆನು
ನನ್ನ ನೀ ನಂಬು ಮಗು.

ಆ ನಿಸ್ತೇಜ ಕಲಿಕೆಯ ಕೈ ಬಿಟ್ಟು
ಮುಖ್ಯವಾಗಿ ನಗುವುದು ಹೇಗೆ
ಎಂಬುದ ಕಲಿಯ ಬಯಸುತ್ತೇನೆ.
ಯಾಕೆಂದರೆ ಕನ್ನಡಿಯಲ್ಲಿ ನನ್ನ ನಗು
ಸರ್ಪದ ನಗ್ನ ಕೋರೆಗಳಂತೆ
ಕಾಣುತ್ತಿವೆ ಈಗ.

ನನಗೆ ತೋರಿಸು ಮಗು
ಹೇಗೆ ನಗುವುದೆಂದು; ತೋರು
ಹೇಗೆ ನಗುತ್ತಿದ್ದೆ, ಮುಸಿನಗೆ ಬೀರುತ್ತಿದ್ದೆ
ನಾ ನಿನ್ನಂತಿದ್ದಾಗ ಒಂದು ಕಾಲದಲ್ಲಿ.



ಕಪ್ಪು ಹುಡುಗನ ಪ್ರಾರ್ಥನೆ

ಮೂಲ : ಗೈತಿರೋಲಿನ್

ಪ್ರಭು ನಾನು ಬಹಳ ಬಳಲಿ ಹೋಗಿದ್ದೇನೆ
ಬಸವಳಿದೇ ಈ ಪ್ರಪಂಚಕ್ಕೆ ಕಾಲಿರಿಸಿದ್ದೇನೆ
ಹುಂಜದ ಕೂಗಿನಿಂದ ಈವರೆಗೆ ದೂರ ಅಲೆದಾಡಿದ್ದೇನೆ
ಮತ್ತು, ಶಾಲೆಯ ದಾರಿ ಕಡಿದಾಗಿದೆ.
ಪ್ರಭು, ನಾನವರ ಶಾಲೆಗೆ ಹೋಗಲಾರೆ.

ಮತ್ತೆಂದೂ ಹೋಗಬೇಕಿಲ್ಲ ದಯವಿಟ್ಟು ಕನಿಕರಿಸು.
ತಂಪಿನ ಕಣಿವೆಯ ಗುಂಟ ಅಪ್ಪನನ್ನು ಹಿಂಬಾಲಿಸುತ್ತೇನೆ;
ಯಕ್ಷಿಣಿ ಕಾಡಿನ ಮೇಲೆ ರಾತ್ರಿ ಸುಳಿಯುವ ವೇಳೆಯಲ್ಲಿ
ಅಪ್ಸರೆಯರು ಮುಂಜಾನೆಗೆ ಮುಂಚೆ ಆಡುವಲ್ಲಿ.
ಮಧ್ಯಾನ್ಹದ ಸೂರ್ಯ ಸುಡುವು ಕೆಂದಾರಿಯಲ್ಲಿ
ಚಿತ್ತಲೆಯ ಕಾಲುಗಳಲ್ಲಿ ನಡೆಯ ಬಯಸುತ್ತೇನೆ
ಮಾವಿನ ಮರದಡಿಯಲ್ಲಿ ಮಲಗಬಯಸುತ್ತೇನೆ.
ಮತ್ತೆ ಏಳಬಯಸುವುದು ಮಾತ್ರ ಆ ಅಲ್ಲಿಯ
ಬಿಳಿಯನ ಕಾರ್ಖಾನೆ ಸೈರನ್ನು
ಊಳಿಡುವಾಗಲೆ.

ಕಬ್ಬು ತೋಟಗಳಾಚೆ ಬಂದು ನಿಲ್ಲುವ ನೌಕೆ
ಕಪ್ಪು ಕಾರ್ಮಿಕರ ಹಿಂಡನೊಂದನು ಅದು
ಉಗುಳಿ ನಿಲ್ಲುವ ದೃಶ್ಯ...

ಪ್ರಭು, ಅವರ ಶಾಲಿಗೆ ನಾನಿನ್ನು ಹೋಗಲಾರೆ
ನಾ ಅಲ್ಲಿ ಹೋಗಬೇಕಾದ್ದಿಲ್ಲ ದಯವಿಟ್ಟು ಸಹಕರಿಸು.
ನೀಗ್ರೋಮರಿ ಶಾಲೆಗೆ ಹೋಗಲೇ ಬೇಕು
ಎಂದವರನ್ನುತ್ತಾರೆ ನಿಜ, ನಗರದ
ನಾಗರಿಕನಂತಾಗಬೇಕಾದರೆ
ನಿಜವಾಗಲೂ ಸಭ್ಯನಾಗಬೇಕಾದರೆ.

ಆದರೆ, ಅದೆಲ್ಲಾ ಆಗಲೊಲ್ಲೆ ನಗರ ಸಭ್ಯ,
ಅವರು ಅನ್ನುವಂತೆ ನಿಜದ ಸಭ್ಯ
ನಿಜವಾಗಿ ನನ್ನ ಚರ್ಮದಂತೇ ಇರುವ
ಕಂದು ಮೂಟೆ ರಾಶಿಗಳ ನಡುವೆ
ಸಕ್ಕರೆ ಉಗ್ರಾಣಗಳಲ್ಲಿ ಅಡ್ಡಾಡ ಬಯಸುವೆ.

ಮುದದಿ ಚಂದ್ರಮನೊಲಿದು ತೆಂಗುಗರಿಗಳ
ಕಿವಿಯೊಳಗೆ ಪಿಸುಗುಟ್ಟುವ ವೇಳೆಯಲ್ಲಿ
ನಿರಂತರ ಧೂಮಪಾನದ ಆ ಮುದುಕ
ದನಿಯೊಡೆದು ಹಾಡುತ್ತಲಿರುವಾಗ
ಆ 'ಸಾಂಬ'ನ ಮತ್ತು 'ಮ್ಯಾಂಚೆಸ್ಟರ್ ಹೇರ್'
ಕಥೆಗಳ ಕೇಳುವಾಸೆ, ಇನ್ನೂ

ಪುಸ್ತಕಗಳಿಲ್ಲದ ಅನೇಕವನ್ನು.
ಪ್ರಭು, ನೀಗ್ರೋಗಳು ಸಾಕಷ್ಟು ಅನುಭವಿಸಿ
ಆಗಿದೆ. ನಾವು ವಿದೇಶೀ ಪುಸ್ತಿಕೆಗಳನ್ನು ಏಕೆ
ಕಲಿಯಬೇಕು? ನಾವೆಂದೂ ನೋಡರಿಯದ
ಸಂಗತಿಗಳನ್ನೇಕೆ ತಿಳಿಯಬೇಕು?
ಜೊತೆಗೆ, ಆ ಶಾಲೆಗಳು ಬಹುದುಃಖಕರವಾದವುಗಳು.

ಈ ನಗರ ಸಭ್ಯರಂತೆಯೆ ವಿಷಣ್ಣ
ವಾದವುಗಳು ಈ ನಿಜ ಸಭ್ಯರಂತೆ.
ಅವರು ಚಂದ್ರಿಕೆಯ ಬೆಳಕಲ್ಲಿ ಕುಣಿಯ ತಿಳಿದವರಲ್ಲ
ಬರಿಗಾಲ ಮಾಂಸವನು ನೆಲಕೆ ಸೋಂಕಿಸುವವರೂ ಅಲ್ಲ.
ಯಾಕೆ? ರಾತ್ರಿ ಬೆಂಕಿಗಳ ಬೆಳಕುಗಳಲ್ಲಿ
ಅವರ ಪೂರ್ವಜರ ಕಥೆಗಳ ಹೇಳಲಾರದವರು
ಪ್ರಭು, ನಾನವರ ಶಾಲೆಗಳಿಗೆ ಮತ್ತೆ ಹೋಗಬೇಕಿಲ್ಲ.

ಗೈತಿರೊಲಿನ್ – (1917) : ಫ್ರಾನ್ಸ್‌ನಲ್ಲಿ ವಿದ್ಯಾಭ್ಯಾಸ ಮಾಡಿದವನು ಮತ್ತು ಆಫ್ರಿಕಾದಲ್ಲಿ ಫ್ರಾನ್ಸಿನ ರಾಜತಂತ್ರಜ್ಞನಾಗಿ ಕೆಲವು ಕಾಲ ಕೆಲಸ ಮಾಡಿದವನು. ಮುಖ್ಯ ಫ್ರಾಂಕೋಫೋನ್ ಸಾಹಿತಿಗಳಲ್ಲಿ ಒಬ್ಬ. ಫ್ರಾಂಕೋಫೋನ್ ಸಾಹಿತಿ ಎಂದರೆ ಫ್ರಾನ್ಸ್ ಮೂಲದ ವಿದ್ಯಾಭ್ಯಾಸ ಪಡೆದು ಬರೆಯುವ ನೀಗ್ರೋ ಸಾಹಿತಿ. ಇಂತಹವರ ಸಾಹಿತ್ಯದಲ್ಲಿ ಸಾಕಷ್ಟು ವೈವಿಧ್ಯತೆ ಇದೆ ಎನ್ನುತ್ತಾರೆ. ಇದು ಮುಖ್ಯವಾಗಿ ಎರಡು ಅಂಶಗಳ ಮೇಲೆ ಇರುತ್ತದೆ. ಒಂದು, ತಮ್ಮ ಜನಾಂಗ ಮತ್ತು ಹಿನ್ನೆಲೆ ಕುರಿತಂತೆ ಹೆಮ್ಮೆ ಪಡುವುದು. ಇನ್ನೊಂದು, ತಮ್ಮನ್ನು ಎರಡನೆಯ ದರ್ಜೆ ಜನರಂತೆ ಕಾಣುವ ಪ್ರತಿಷ್ಠಿತ ಸಮುದಾಯ ಹೇರುವ ವಿಧಿ ವಿಧಾನಗಳನ್ನು ಧಿಕ್ಕರಿಸುವುದು.

ಗೈತಿರೋಲಿನ್ ಈ ನೆಲೆಯ ಲೇಖಕ. 1917ರಲ್ಲಿ ಗ್ವಡೆಲೋಪ್ ಎಂಬಲ್ಲಿ ಜನಿಸಿದ ಕೆರೇಬಿಯನ್ ಮೂಲದವನು. ದಕ್ಷಿಣ ಆಫ್ರಿಕದವನಲ್ಲದಿದ್ದರೂ ವಸ್ತು ಸಾಮ್ಯದಿಂದಾಗಿ ಇವನ ಪದ್ಯ ಇಲ್ಲಿ ಸೇರ್ಪಡೆಯಾಗಿದೆ. ಇಂತಹ ಲೇಖಕರು ಸಾಕಷ್ಟು ಮಂದಿ ಇದ್ದಾರೆ.

ಹಿಂದಿನಂತಲ್ಲದೆ ಸಮಕಾಲೀನ ಪ್ರಪಂಚದ ಎಲ್ಲ ದೇಶಗಳ ಹಿಂದುಳಿದ ವರ್ಗಗಳವರೂ ಮತ್ತು ಬುಡಕಟ್ಟಿನ ಜನರೂ ಇಂದು ವಿದ್ಯಾಭ್ಯಾಸಕ್ಕಾಗಿ ಹಾತೊರೆಯುತ್ತಿದ್ದಾರೆ. ಇದಕ್ಕೆ ಭಾರತ, ವೆಸ್ಟ್‌ಇಂಡೀಸ್, ಆಫ್ರಿಕದ ಯಾವುದೇ ಜನಾಂಗ ಅಥವಾ ಯಾವುದೇ ದೇಶದ ಹಿಂದುಳಿದ ಜನಾಂಗ ಹೊರತಾಗಿಲ್ಲ. ಇದು ಅತಿಶಯವಾದ ಮತ್ತು ಅಸಾಧಾರಣವಾದ ಜಾಗತಿಕ ಬೆಳವಣಿಗೆ. ಅಪೇಕ್ಷಣೀಯವೂ ಹೌದು.

ಇಲ್ಲಿ ಕೊಟ್ಟಿರುವ ಕಪ್ಪು ಹುಡುಗನ ಪ್ರಾರ್ಥನೆಗೆ ಈ ಎಲ್ಲರೂ ಸ್ಪಂದಿಸುತ್ತಾರೆ ಅನ್ನಿಸುತ್ತದೆ. ಈ ಹುಡುಗನ ಭಾವನೆಗಳು ಒಂದಲ್ಲ ಒಂದು ರೀತಿ ಅನೇಕರದೂ ಆಗಿರುತ್ತದೆ. ಆದ್ದರಿಂದಲೇ ಗೈತಿರೋಲಿನ್‌ನ ಪದ್ಯ ಸಾರ್ವತ್ರಿಕವಾಗುತ್ತದೆ.

ಸತ್ತವರ ಒಂದು ದಿನ

ಮೂಲ : ಅಸ್ವಾಲ್ ಮಹಾಲಿ

ನಿದ್ದೆಯಲ್ಲಿ ನನ್ನನ್ನು
ಮೆಲುವಾಗಿ ಕರೆಯುತ್ತಿದ್ದ
ಕರೆ ಕೇಳಿದೆ
ಅವಳ ಗೋರಿಯಿಂದ
ಮಾತನಾಡುತ್ತಿದ್ದವಳು
ನನ್ನ ತಾಯಿ!

ಮಗು,
ಮೋಡಗಳಾಚೆ
ಸ್ವರ್ಗ ಎನ್ನುವುದಿಲ್ಲ
ಏನು!?

ಹೌದು, ಸ್ವರ್ಗದ ಇರುವು ಇದೆ
ನಿನ್ನ ಎದೆಯ ಒಳಗೆ, ದೇವರೆನ್ನುವುದು
ಹಿಮ ಬಿಳಿಯ ಗಡ್ಡದ ಚಿತ್ರಪಟವಲ್ಲ!

ಏನು?
ಹ್ಞ, ದೇವರೆಂದರೆ
ಬೀದಿಯ ತಿರುವಿನಲ್ಲಿ ಅಂಗಾತ
ಬಿದ್ದಿರುವ ತಿರುಕ, ಬಲಹೀನ ಹೆಳವ.
ಗಂಧಕಗಳಿಂದ ಉರಿವ
ನರಕ ಯಾವುದೂ ಇಲ್ಲ
ಏನಂದೆ?
ಹೌದು, ನರಕ
ನಿನ್ನ ಕಣ್ಣಲ್ಲಿ ಮಿನುಗು
ತ್ತಿರುವ ದ್ವೇಷವಷ್ಟೆ

ಸ್ವರ್ಗದ ಬಾಗಿಲಲ್ಲಿ



ಮೇಲೆ ಏನೋ ಸರಿ
ಇದ್ದಂತಿಲ್ಲ, ಬಹುಶಃ
ಕೆಳಗೂ ತಪ್ಪಾಗಿದೆ.

ಪ್ರಾರ್ಥಿಸುವುದು ಹೇಗೆಂದು
ನಾನು ಕಲಿತಂದಿನಿಂದ
ಬಾಗಿಲ ತಟ್ಟುತ್ತಲೇ ಇದ್ದೇನೆ.

ಅಲ್ಲಿ
ನೀರವತೆ ಮಾತ್ರ.

ಕಿಂಕರರೆಲ್ಲಿದ್ದಾರೆ?
ಅಂದರೆ, ದೇವತೆಗಳು.

ಕರೆ ಯಾರದೆಂದು
ತಿಳಿಯಲು ಅವರು
ತೆರೆ ಸರಿಸಿ ಇಣುಕಲೇ ಇಲ್ಲ!

ಕೊನೆಗೊಮ್ಮೆ ಭಗವಾನ
'ಒಳಬನ್ನಿ' ಎನ್ನುವಾಗ
ಅವರು ನನ್ನನ್ನು ಒಳಗೆ
ಬಿಡುವರೆ?

ಮುಂಬಾಗಿಲಿಂದಲೊ
ಹಿಂಬಾಗಿಲಿಂದಲೊ?

ಆಸ್ವಾಲ್ಡ್ ಮಷಾಲಿ : ನೇಟಾಲ್ ಪ್ರಾಂತ್ಯದ ವ್ರೈಹೀಡ್‌ನಲ್ಲಿ 1940ರ ಜನವರಿ 17ರಂದು ಜನಿಸಿದ ಆಸ್ವಾಲ್ಡ್ ಜೋಸೆಫ್ ಮಷಾಲಿ ಪ್ರಾರಂಭಿಕ ವಿದ್ಯಾಭ್ಯಾಸವನ್ನು ತನ್ನ ಸ್ವಂತ ನೆಲದಲ್ಲಿಯೇ ಪಡೆದನಾದರೂ ಉನ್ನತ ವಿದ್ಯಾಭ್ಯಾಸವನ್ನು ನ್ಯೂಯಾರ್ಕಿನ ಕೊಲಂಬಿಯಾ ವಿಶ್ವವಿದ್ಯಾನಿಲಯದಲ್ಲಿ ಗಳಿಸಿದ. ಸೃಜನಶೀಲ ಬರವಣಿಗೆಯ ವಿಷಯದಲ್ಲಿ ಎಂ.ಎ ಮತ್ತೆ ಎಂ.ಎಡ್. ಪದವಿಗಳನ್ನೂ ಪಡೆದ. ಅನಂತರ 'ರೋಡೀಸ್' ವಿಶ್ವವಿದ್ಯಾಲಯದಲ್ಲಿ ಪಿಹೆಚ್.ಡಿ. ಪದವಿಗೆ ನೊಂದಾಯಿಸಿಕೊಂಡ.

ಇಷ್ಟಾದರೂ ತನ್ನ ನಿರ್ವಹಣೆಗೆ ಸ್ವಲ್ಪಕಾಲ ಒಂದು ಇಂಜಿನಿಯರಿಂಗ್ ಕಂಪೆನಿಯಲ್ಲಿ ಡ್ರೈವರ್ ಹುದ್ದೆಯಲ್ಲೂ ಕೆಲಸ ಮಾಡಿದ್ದ. ತನ್ನ ಜನಾಂಗೀಯ ಪರ ಚಟುವಟಿಕೆಗಳಿಂದಾಗಿ ಕೆಲಕಾಲ ಈತ ತುರಂಗವಾಸವನ್ನೂ ಅನುಭವಿಸಿದ. ನಂತರದ ದಿವಸಗಳಲ್ಲಿ ಸೋಪೀಟೊದಲ್ಲಿ ಡೆಪ್ಯುಟಿ ಹೆಡ್‌ಮಾಸ್ತರಿಕೆ ಹುದ್ದೆಗೆ ತೊಡಗಿಸಿಕೊಂಡ. ಇದು ಸ್ವಲ್ಪ ಕಾಲ ನಡೆಯಿತು.

1971ರಲ್ಲಿ Sounds of Cowhide Drum ಕವನ ಸಂಕಲನ ಪ್ರಕಟವಾಗಿ ಸಂಚಲನವಾಯಿತು. ಇದರಿಂದ ಇವನ ಗತಿಯೇ ಬದಲಾಯಿತು! ಮೊದಲನೆಯ ವರ್ಷದಲ್ಲಿಯೇ 16000 ಪ್ರತಿಗಳು ಮಾರಾಟವಾದವು! ಹಿಂದೆ ಹಿಂದೆಯೇ ಈ ಪುಸ್ತಕ ಆರು ಮುದ್ರಣಗಳನ್ನು ಕಂಡಿತು! ದಕ್ಷಿಣ ಆಫ್ರಿಕದ ಯಾವ ಆಧುನಿಕ ಪದ್ಯ ಕೃತಿಗೂ ಸಿಗದ ಮನ್ನಣೆ ಈ ಕೃತಿಗೆ ಲಭಿಸಿತು! ಸರಿ, ಮಷಾಲಿ ತನ್ನ ಹುದ್ದೆ ಬಿಟ್ಟ. ಪೂರ್ಣಾವಧಿಯ ಲೇಖಕನಾದ. ಬರೆದ, ಬರೆದ.

ಬಹುಶಃ ದಕ್ಷಿಣ ಆಫ್ರಿಕನ್ನರು ತಮ್ಮದೇ ಭಾಷೆಯಲ್ಲಿ ತಮ್ಮನ್ನೇ ಪ್ರಶ್ನಿಸಿಕೊಳ್ಳುವ ಒಂದು ಹೊಸ ವಿಧಾನವನ್ನು ಇವನು ಮೊದಲ ಬಾರಿಗೆ ತೋರಿದ. ಬಿಳಿಯರ ಮತ್ತು ಕರಿಯರ ಮನಸ್ಸಿನ ಚಿಂತನೆಗಳು ಅವರ ವರ್ತಮಾನದಲ್ಲಿ ಹೇಗಿದ್ದವು, ಏನಾಗಿದ್ದವು ಎಂಬುದನ್ನು ಈತ ನಿರೂಪಿಸಿದ. ತನ್ನ ನಾಡಿನ ಜನಾಂಗಗಳ ಮಧ್ಯೆ ಇದ್ದ ಕಂದಕಗಳನ್ನು ತನ್ನ ಕಾವ್ಯದಲ್ಲಿ ಸ್ಪಷ್ಟವಾಗಿ ತೋರಿದ.

1980ರಲ್ಲಿ Fire Flames ಕವನ ಸಂಕಲನ ಪ್ರಕಟವಾಯಿತು. ದಕ್ಷಿಣ ಆಫ್ರಿಕದ ಅಲ್ಪಸಂಖ್ಯಾತ ಸರ್ಕಾರಕ್ಕೆ ಈ Flames ಕವನ ಸಂಕಲನ ತನ್ನ ಬಿಸಿಯನ್ನು ಚುರುಕಾಗಿಯೇ ಮುಟ್ಟಿಸಿತು. ಪರಿಣಾಮವಾಗಿ ಕೃತಿ ಬಹಿಷ್ಕಾರಕ್ಕೆ ಒಳಗಾಯಿತು! ಆದರೆ, ಬರವಣಿಗೆ ನಿಲ್ಲಲಿಲ್ಲ.

'ನಾನು ರೊಮ್ಯಾಂಟಿಕ್ಕೂ ಅಲ್ಲ, ಸಂಪ್ರದಾಯವಾದಿಯೂ ಅಲ್ಲ. ಬಹುಶಃ ಇಂಗ್ಲೆಂಡಿನ ಚಾರ್ಲ್ಸ್ ಡಿಕನ್ಸ್‌ನಂತೆ ಸಮಾಜದಲ್ಲಿ ಭಾಗವಹಿಸುವ ಲೇಖಕ ನಾನು. ಲೋರ್ಕ ಮತ್ತು ಅಲಿಗಿನ್ಸ್ ಬರ್ಗ್‌ನಂತಹ ಲೇಖಕರು ನನಗೆ ಇಷ್ಟವಾಗುತ್ತಾರೆ. ಫ್ರೀವರ್ಸ್‌ನಲ್ಲಿಯೇ ಬರೆಯುವುದು ನನ್ನ ಆಯ್ಕೆ. ಯಾಕೆಂದರೆ, ಅದು ನನಗೆ ಸಾಕಷ್ಟು ಸ್ವಾತಂತ್ರ್ಯವನ್ನು ನೀಡುತ್ತದೆ. ಅದರಿಂದಾಗಿ ನನಗೆ ನನ್ನ ಹಳ್ಳಿ ನನ್ನ ಜನಾಂಗ ಮತ್ತು ನನ್ನ ನಾಡಿನ ಅಂತರಂಗವನ್ನು ಚಿತ್ರಿಸುವುದು ಸಾಧ್ಯವಾಗುತ್ತದೆ', ಎನ್ನುತ್ತಾನೆ ಅಸ್ವಾಲ್ಡ್ ಮಷಾಲಿ. ಈ ಮೂಲಕ ಆತನ ಬದ್ಧತೆ ಮತ್ತು ಕಾವ್ಯ ನಿಲುವುಗಳ ಸ್ಪಷ್ಟವಾಗುತ್ತವೆ.



ಸರಪಳಿಯಲ್ಲಿ ಕೊಂಡಿಗಳು

ಮೂಲ : ಪಿತಿಕನ್‌ತುಲಿ

ಸಾಗುತ್ತಿರುವ ಸಾವಿನ
ಅಂಗರಕ್ಷಕನೆಡೆಗೆ
ಜಂಗಮ ಲೋಹಕವಚದ
ಕಡೆಗೆ, ನಾ ಬೆರಳ ತೋರಿದ್ದೆ.

ಅವರು ಆ ಬೆರಳ ಕಡಿದು ಹಾಕಿದರು!
ತೊಟ್ಟಿಕ್ಕುವ ರಕ್ತದಿಂದ ನನ್ನ
ಬಯಕೆಯ ಕವನ ಬರೆದೆ
ಅವರ ಸಾವಿನ ಸೂರ್ಯಾಸ್ತ ಚಿತ್ರಿಸಿದೆ.

ಕಾರಾಗೃಹದ ಗೋಡೆಗಳೊಳಗಡೆ
ಸರಪಳಿಯಿಂದ ಬಿಗಿದುಹಾಕಿದರು
ಸರಪಳಿಯ ಕೊಂಡಿಕೊಂಡಿಗೂ
ನನ್ನ ತುಟಿಯನ್ನಿಟ್ಟೆ.

ನನ್ನ ಕನಸುಗಳ ಪಿಸುಗುಡುತ
ಪ್ರತಿ ಕೊಂಡಿಗೂ ಒಂದು ಕವನ ಕಟ್ಟಿಟ್ಟೆ.

ನನ್ನ ನಾಡಿನಲ್ಲಿ

ನನ್ನ ನಾಡಿನಲ್ಲಿ ನಿನ್ನ ಚಿಂತನೆ
ಇಂಥಾದ್ದೇ ಎಂದು ಅವರೇ ತೀರ್ಮಾನಿಸಿ
ನಿನ್ನನ್ನು ಸೆರೆಮನೆಗೆ ಅಟ್ಟುತ್ತಾರೆ

ಜಾನ್ ವೋಸ್ಟರ್ ಚೌಕದಲ್ಲಿ
ನಮ್ಮ ಕಲ್ಪನೆಗಳನ್ನೂ ಕನಸುಗಳನ್ನೂ
ತೆರೆಯ ಮೇಲೆ ಮೂಡಿಸಲು ನಿನ್ನ
ಮೆದುಳಲ್ಲಿ ಅವರು ಒಂದು ಮೈಕ್ರೋ
ಚಿಪ್ಪನ್ನು ನೆಡುತ್ತಾರೆ ಎಂದು ನನ್ನ
ಅಂಕಲ್ ಅಂದಿದ್ದ ನೆನೆದು–
ನಾನು ಭಯಗೊಂಡೆ:
ಹಗಲು ನಾಲಿಗೆ ಕಾಯ್ದು
ರಾತ್ರಿ ಕನಸುಗಳನ್ನು.



ಪ್ರೊ. ಪಿತಿಕನ್‌ತುಲಿ – ಒಬ್ಬ ಕವಿ, ವಿದ್ವಾಂಸ, ಕುಂಚಕಲಾವಿದ ಹಾಗೂ ಒಬ್ಬ ಶ್ರೇಷ್ಠ ಶಿಲ್ಪಿ. ತನ್ನ ಎಲ್ಲಾ ಅಭಿವ್ಯಕ್ತಿ ಮಾಧ್ಯಮಗಳ ಮೂಲಕವೂ ಈತ ಹೊಸತನ್ನು ಅರಸುತ್ತಾ ಹೋಗುತ್ತಾನೆ. ಲೋಹ, ಮರ, ಮೂಳೆ, ಕಲ್ಲು, ಪ್ಲಾಸ್ಟಿಕ್ ಮುಂತಾದವುಗಳಿಂದ ಸೃಷ್ಟಿಸಿದ ಕಲಾಕೃತಿಗಳ ಅನೇಕ ಪ್ರದರ್ಶನಗಳನ್ನು ಮಾಡಿದವನು ಪಿತಿಕ. ಪ್ರಸ್ತುತ ಜೊಹಾನ್ಸ್‌ಬರ್ಗ್‌ನಲ್ಲಿ ನೆಲೆಸಿದ್ದಾನೆ.

ಪಿತಿಕನ್‌ತುಲಿ ಒಂದು ವರ್ಷಕಾಲ ದಕ್ಷಿಣ ಆಫ್ರಿಕದ ಮೃತ್ಯುಕೂಪಗಳಲ್ಲಿ ಒಂಟಿ ನಿರ್ಬಂಧಕ್ಕೆ ಒಳಗಾಗಿದ್ದೂ ಉಂಟು. ಈ ವೇಳೆ ಅಂತರರಾಷ್ಟ್ರೀಯ ಒತ್ತಡದಿಂದಾಗಿ ಸೆರೆಮನೆಯಿಂದ ಬಿಡುಗಡೆಯಾಗಿದ್ದ. ಇದು ಗಮನಾರ್ಹ. ಅನಂತರದಲ್ಲಿ ಇಂಗ್ಲೆಂಡಿಗೆ ಹೋಗಿ ಸ್ವಲ್ಪ ಕಾಲ ನೆಲೆಸಿದ್ದ. ಇಂಗ್ಲೆಂಡಿನಲ್ಲಿ ಈಗ ದಕ್ಷಿಣ ಆಫ್ರಿಕದ ಮೂಲಭೂತ ಪರಿವರ್ತನೆಯ ಹರಿಕಾರರಲ್ಲಿ ಒಬ್ಬ ಎಂದು ಗುರುತಿಸಲ್ಪಟ್ಟ. ಇಷ್ಟೇ ಸಾಕು. ಇದರಿಂದ ಅವನ ವ್ಯಕ್ತಿತ್ವದ ಅರಿವಾಗುತ್ತದೆ. ಪಿತಿಕ ತನ್ನ ಕೃತಿಗಳಲ್ಲಿ ಸಾಕಷ್ಟು ವೈವಿಧ್ಯತೆ ಮತ್ತು ಪರಿವರ್ತನೆಯನ್ನು ತಂದಿದ್ದಾನೆ. ವಿಶೇಷವೆಂದರೆ, ತನ್ನ ಕೃತಿಗಳ ಮೂಲಕ ದಕ್ಷಿಣ ಆಫ್ರಿಕದ ಪರಂಪರೆ ಮತ್ತು ಪಾಶ್ಚಿಮಾತ್ಯ ಮೌಲ್ಯಗಳ ಜೊತೆಗೆ ಸಂವಾದ ಏರ್ಪಡಿಸುತ್ತಾನೆ. ಕಾವ್ಯದಲ್ಲಿಯೂ ಸಹ ಆತನ ಕಲಾಕೃತಿಗಳ ಗಹನತೆಯನ್ನು ವಿಶ್ಲೇಷಿಸುವ ಆತನ ಕ್ರಮವನ್ನು ನಾವು ಗುರ್ತಿಸಬಹುದು. ಸಾಹಿತ್ಯದಲ್ಲಿ ಹೇಗೋ ಹಾಗೆಯೇ ದೃಶ್ಯಮಾಧ್ಯಮದ ಸೃಷ್ಟಿಗಳಲ್ಲಿಯೂ ಸಹ ಆತ ಕಾಣಿಸಿರುವ ಪ್ರತಿಮೆಗಳಿಂದಾಗಿ, ಅವು ಸಂವಹಿಸುವ ಮೆಸೇಜ್‌ಗಳಿಂದಾಗಿ ದಕ್ಷಿಣ ಆಫ್ರಿಕದ ಸಾಂಸ್ಕೃತಿಕ ಇತಿಹಾಸದಲ್ಲಿ ಪಿತಿಕ ಒಂದು ವಿಶಿಷ್ಟ ಸ್ಥಾನವನ್ನು ಗಳಿಸಿಕೊಂಡಿದ್ದಾನೆ.

ದಕ್ಷಿಣ ಆಫ್ರಿಕದ ಬಹುತೇಕ ಸ್ಥಳೀಯ ಜ್ಞಾನ ಶಾಖೆಗಳಲ್ಲಿ ಈತನಿಗೆ ವಿದ್ವತ್ತಿದೆ. ಅಪಾರ ಪ್ರತಿಭೆಯೂ ಇದೆ. ಇದರಿಂದಾಗಿ ಈ ದೇಶದ ನವೋದಯವನ್ನು ರೂಪಿಸಿದವರ ಪಂಕ್ತಿಯಲ್ಲಿ ಈತನಿಗೆ ಮುಖ್ಯ ಸ್ಥಾನವಿದೆ ಎಂಬುದು ಸಾರ್ವತ್ರಿಕ ಅಭಿಪ್ರಾಯವಾಗಿದೆ.



ಮುಗಿಲಾದ ಪರಿಹಾರ

ಮೂಲ : ಅಜ್ಞಾತ ಕವಿ

('ಅಜಾನಿಯ' ಎನ್ನುವುದು ದಕ್ಷಿಣ ಆಫ್ರಿಕದ ಜನಾಂಗೀಯ ಹೆಸರು. 'ರೆಗಿನಮುಂಡಿ'ಯ ಚರ್ಚಿನಲ್ಲಿ 16 ಜೂನ್ 1981ರಲ್ಲಿ ಒಂದು ಸ್ಮರಣೋತ್ಸವದಲ್ಲಿ ಒಬ್ಬ ಅಜ್ಞಾತ ಕವಿ ಓದಿದ ಪದ್ಯವಿದು)

ಅಜಾನಿಯ ಸೆರೆವಾಸಗಳಿಂದ
ಬಳಲಿದ್ದಾಳೆ
ಅಜಾನಿಯ ಶತ್ರುವಿನ ಗುಂಡುಗಳಿಂದ
ನೊಂದಿದ್ದಾಳೆ
ಅಜಾನಿಯ ಸಭೆಗೂಡುವುದರಿಂದ
ಬೇಸತ್ತಿದ್ದಾಳೆ
ಅಜಾನಿಯ ನಿಮಗಾಗಿ ಶ್ರಮವಹಿಸುವುದರಿಂದ
ಸೋತು ಹೋಗಿದ್ದಾಳೆ

ಅಜಾನಿಯ ಚಿನ್ನದ ಗಣಿ
ಅಗೆದಗೆದು ಕಮರಿದ್ದಾಳೆ
ನಗೆಯ ಬಯಸುತ್ತಾಳೆ
ಅಜಾನಿಯ ಬಳಲಿದ್ದಾಳೆ
ಸೋತು ಹೋಗಿದ್ದಾಳೆ
ಅಜಾನಿಯ ಅತ್ತೂ ಅತ್ತೂ
ಬತ್ತಿ ಹೋಗಿದ್ದಾಳೆ

'ಆಫ್ರಿಕಾದ ಮಕ್ಕಳೇ' – ಇಲ್ಲಿಗೆ ಕವನ ಮುಗಿಯುತ್ತದೆ. ನಾನು ಈ ಬೃಹತ್ ಚರ್ಚಿಗೆ ಬಂದು ಬಂದು ಪದ್ಯಗಳನ್ನು ಓದಿ ಓದಿ ಬೇಸತ್ತಿದ್ದೇನೆ ಎಂದು ನೇರವಾಗಿ ಹೇಳಬಯಸುತ್ತೇನೆ. ನಿಂತು ಬರೀ ಮಾತನಾಡುವುದು ಬದಲು ಬೇರೊಂದು ಪರಿಹಾರ. ಇದಕ್ಕೂ ಮಿಗಿಲಾದ ಪರಿಹಾರ ಕಂಡುಕೊಳ್ಳಬೇಕೆಂದು ಬಯಸಿದ್ದೇನೆ. ಆಫ್ರಿಕದ ದಟ್ಟ ಹೊಗೆಗಳ ನಡುವೆ ಏನಾದರೂ ಮಾಡಲೇಬೇಕೆಂದು ಬಯಸಿದ್ದೇನೆ.



ಅಮ್ಮನಿಗೆ ಪತ್ರ

ಮೂಲ : ಇಸ್ಮಾಯಿಲ್ ಚೂನರ

ನಾವು ಇಲ್ಲಿ ಯಾಕೆ
ಇದ್ದೇವೆ ಎಂದು ನನ್ನನ್ನು
ಕೇಳಬೇಡಮ್ಮ
ಅದು ಅಸಂಬದ್ಧ

ಉತ್ತರ ದಕ್ಷಿಣಕ್ಕಿರುವ
ವ್ಯತ್ಯಾಸವನ್ನು ನಾವು
ಹೇಳಲಾರೆವು
ತಾತನೂ ಊರಿನಲ್ಲಿ
ನೂರು ವರ್ಷಗಳ ಹಿಂದೆ
ಮಗುವಾಗಿದ್ದಾಗ ತಾನೂ
ಹೇಳಲಾಗುತ್ತಿರಲಿಲ್ಲ

ಚಲನೆ ಕಂಡರೆ
ಕಣ್ಣನ್ನು ಇರಿಕಿಸಿಕೊಂಡು
ಮಧ್ಯೆ ನೇರವಾಗಿ ನಾವು
ಷೂಟ್ ಮಾಡುತ್ತೇವೆ

ಶತ್ರುವನ್ನು ತಡೆಯುವ
ಆದರ್ಶ ಇರಿಸಿಕೊಂಡಿದ್ದೇವೆ
ಯಾಕೆ ಎಂದು ನನ್ನನ್ನು
ಕೇಳಬೇಡಮ್ಮ

ಫ್ರೆಡ್, ನಿನಗೆ ಗೊತ್ತಲ್ಲ ಮಾಂಮ್
ನೆನೆಸಿಕೊ ಫ್ರೆಡ್ ಅನ್ನು, ಅವನು ಸತ್ತ
ಮತ್ತೆ ಬಿಲ್ ಅನ್ನು ಬೆಟ್ಟದ ಮೇಲೆ
ಕೊಂದು ಹಾಕಿದರು. ಮಾಂಮ್ ನಿನಗೇ
ಗೊತ್ತಿರುವ ಕೆಲವರು ಹೋದರು

ನಾವು ಮಾತ್ರ ಮುಂದುವರಿಯುತ್ತಲೇ ಇದ್ದೇವೆ
ನಮ್ಮ ಆದರ್ಶ ಕಾಯುತ್ತಲೇ ಇದ್ದೇವೆ
ಅದು ಸರಿಯಲ್ಲವೆಂದು ನನಗೂ ಗೊತ್ತಿದೆ.


ಆದರೂ ಹಸಿರು ಕಾಡಿನಲ್ಲಿ
ಹಳದಿ ಸಮವಸ್ತ್ರ ಘಾತಕರನ್ನು
ಕೆಂಪು ಸಮವಸ್ತ್ರ ಘಾತಕರನ್ನು
ಜೊತೆಗೆ ನೊಣಗಳನ್ನು ಸೊಳ್ಳೆಗಳನ್ನು
ಜವುಗು ನೆಲವನ್ನು ನದಿ ದೋಣಿಗಳನ್ನು
ಎಲ್ಲವನ್ನೂ ಇಲ್ಲಿಂದ ಸ್ಪಷ್ಟ ನೋಡುತ್ತೇವೆ

ನಂತರ ಬಾಂಬುಗಳಿವೆ
ಮೋಸದ ಬೋನುಗಳಿವೆ
ಬಜೂಕ ತುಪಾಕಿಗಳಿವೆ
ಸ್ನಿಪ್ಪರ್ ಬುಲೆಟ್ಟುಗಳಿವೆ

ನಿನ್ನನ್ನು ಹಾದಿಯಲ್ಲೇ
ಮುಗಿಸಿಬಿಡಬಹುದು
ಫ್ರೆಡ್ ನಿನಗೇ ನೆನಪಿದ್ದಾನಲ್ಲ ಮಾಂಮ್

ಆದರೂ ನಾವು ಬದ್ಧರಾಗಿಯೇ
ಇದ್ದೇವೆ ಯಾಕೆಂದರೆ ಮಾಂಮ್
ಹಿರಿಯ ಆದರ್ಶವನ್ನು ಕಾಯುತ್ತಿದ್ದೇವೆ

ಆದರೂ ಮನೆಯಿಂದ ಬಹುದೂರ
ಬಂದು ಬಿಟ್ಟಿದ್ದೇವೆ ಮಾಂಮ್
ಆದರ್ಶದಿಂದಲೂ ಕೂಡ



ಆಶ್ರಯ ತಾಣ

ಬಿಟ್ಟು ಬೀತರೆ ಮರೆಯ
ಮೌನದ ಮುಸಿನಗೆಯ
ಆ ಮರವಜ್ರ ಮುಖಗಳ
ಅವರು ಅಲ್ಲೆ ನಿಲ್ಲುತ್ತಾರೆ

ಪ್ರತಿಕ್ರಿಯಿಸಿ ಜಗಕೆ
ನಿಗರು ತೋರುತ್ತಾರೆ

ಮತ್ತು ನಾನು ಮುಸಿನಗುತ್ತಾ
ವಿಷಾದದ ನಗೆ ಬೀರುತ್ತಾ
ನೋಡುತ್ತೇನೆ

ಅಂತಃಸ್ಥ ಒಂದೇ
ಆಶ್ರಯ ತಾಣ
ಗರ್ಭ ಉಳಿದಂತೆ

ಇಸ್ಮಾಯಿಲ್ ಚೂನರ – ಟ್ರಾನ್ಸ್‌ವಾಲಿನ ರೂಡ್ ಪೋರ್ಟನಲ್ಲಿ ಜನಿಸಿದರೂ 1954ರಿಂದ ಬಹುತೇಕ ಇಂಗ್ಲೆಂಡಿನಲ್ಲೇ ಬದುಕಿದವನು. ವೃತ್ತಿಯಿಂದ ಗಣಿತ ಮತ್ತು ರಸಾಯನಶಾಸ್ತ್ರಜ್ಞ. ಆದರೆ, ಪ್ರವೃತ್ತಿಯಿಂದ ಕವಿ ಕಥೆಗಾರ ನಾಟಕಕಾರ ಮತ್ತು ಪೈಂಟರ್. ಸ್ನಾತಕೋತ್ತರ ಪದವಿಯನ್ನು ಲಂಡನ್ ವಿಶ್ವವಿದ್ಯಾಲಯದಲ್ಲಿ ಪಡೆದ.

ತನ್ನ ನಾಡಿನಿಂದ ಅನ್ಯಸಂಸ್ಕೃತಿಯ ಮಧ್ಯೆ ಸಾವಿರ ಮೈಲಿಗಳ ದೂರದಲ್ಲಿದ್ದರೂ ತನ್ನ ನೆಲವನ್ನು ಮರೆಯಲಿಲ್ಲ. ಈ ಅಂಶ ಅವನ ಎಲ್ಲಾ ಕೃತಿಗಳಲ್ಲೂ ವೇದ್ಯವಾಗುತ್ತದೆ.

ಇವನು ಮುಖ್ಯವಾಗಿ ನಾಟಕಕಾರ. ಪೂರ್ಣ ಪ್ರಮಾಣದ ನಾಟಕಗಳನ್ನೂ ಮತ್ತು ಏಕಾಂಕಗಳನ್ನೂ ಬರೆದಿದ್ದಾನೆ. ಇವನ A River across unseen divide ನಾಟಕದಲ್ಲಿ ಔರಂಗಜೇಬನ ಆಜ್ಞೆಯಂತೆ ಷಾಜಹಾನನು ಸೆರೆವಾಸದಲ್ಲಿರುತ್ತಾನೆ. ಅವನು ಕೊರಗುವುದೆಲ್ಲಾ ದಾಸ್ಯದಲ್ಲಿದ್ದ ದಕ್ಷಿಣ ಆಫ್ರಿಕದ ಕೊರಗೇ ಆಗಿದೆ. ಹಾಗೆಯೇ 'They Burn people, they do', 'Question Mark'? ಎಂಬ ನಾಟಕಗಳಲ್ಲಿ ಹಾಗೂ 'Shakuntala' ನಾಟಕದಲ್ಲಿಯೂ ಸಹ ತನ್ನ ನಾಡಿನ ಬವಣೆಯನ್ನು ಮಾರ್ಮಿಕವಾಗಿ ಚಿತ್ರಿಸಿದ್ದಾನೆ.

ಅನೇಕ ಸಣ್ಣ ಕತೆಗಳನ್ನೂ ಮತ್ತು ಪದ್ಯಗಳನ್ನೂ ಇಸ್ಮಾಯಿಲ್ ಬರೆದಿದ್ದಾನೆ. ಇವನ ಕೃತಿಗಳು ಭಾರತ, ಪಾಕಿಸ್ತಾನ ಮತ್ತು ದಕ್ಷಿಣ ಆಫ್ರಿಕಾದಲ್ಲಿ ಪ್ರಕಟಗೊಂಡಿವೆ ಮತ್ತು ರೇಡಿಯೊ ನಾಟಕಗಳು ಬಿ.ಬಿ.ಸಿ. ಮತ್ತು ಜರ್ಮನ್ ರೇಡಿಯೋ ನೆಟ್‌ವರ್ಕ್‌ಗಳಲ್ಲಿ ಬಿತ್ತರಗೊಂಡಿವೆ.

ಈಗಲೇ ಸಮಯ


ಮೂಲ : ಮುಜ್ವಖೇಂಬುಲಿ

ಈಗಲೇ ಸಮಯ
ಬೆಟ್ಟ ಹತ್ತುವುದಕ್ಕೆ
ರೂಢಿ ಮುರಿಯುವುದಕ್ಕೆ
ಈಗಲೇ ಸಮಯ

ಈಗಲೇ ಸಮಯ
ಕ್ರೂರಶಾಸನ ಗಾಳಿ
ಹಾಳುಗೆಡವಿದ ನಿಸರ್ಗದ
ಬರಡು ನೆಲವ ಪರಿಶೀಲಿಸುವುದಕ್ಕೆ
ಈಗಲೇ ಸಮಯ

ಈಗಲೇ ಸಮಯ
ಭರವಸೆಯ ಜಪ
ಪ್ರಾರಂಭಿಸುವುದಕ್ಕೆ
ಈಗಲೇ ಸಮಯ

ಈಗಲೇ ಸಮಯ
ಮಾನವ ಕುಲವನ್ನು ಬೇರ್ಪಡಿಸಿ
ಬಾಧಿಸುವ ನಿಂದನೆಯನ್ನು
ತೊಡೆದು ಹಾಕಲು
ಈಗಲೇ ಸಮಯ



ಈಗಲೇ ಸಮಯ
ಉಳಿಕೆ 'ಫ್ಯಾಸಿಸಂ' ಅನ್ನು
'ಇಂಪೀರಿಯಲಿಸಂ' ಬಕ್ಕೀಟಿಗೇ
ವಮನ ಮಾಡುವುದಕ್ಕೆ
ಈಗಲೇ ಸಮಯ

ಈಗಲೇ ಸಮಯ
ಗುಲಾಬಿಗಳ ಕೊಡಲು;
ಇರಿಸಿಕೊಳ್ಳಲು ಅಲ್ಲ
ನನ್ನ ಸಮಾಧಿಯಾಗಲಿದೆಯಾಗಿ
ಅವುಗಳನ್ನು ನನಗೆ ಕೊಡಿ
ನನ್ನ ಹೃದಯ ಬಡಿಯುತಿರಲಾಗಿ
ಉತ್ಸವಕ್ಕೆ ತವಕಿಸುತಿದೆಯಾಗಿ
ಅವುಗಳನ್ನು ಕೊಡಲು
ಈಗಲೇ ಸಮಯ

ಈಗಲೇ ಸಮಯ
ಗುಲಾಮಗಿರಿಮುಳ್ಳ ನಿಧಿಯನ್ನು
ನನ್ನ ಗೋರಿಗಾಗಿ ಇರಿಸಿಕೊಳ್ಳಲು
ಬರುವ ದಿವಸಕ್ಕೆ ಉಳಿಸಿಕೊಳ್ಳಲು;
ಎಲ್ಲಿ ನನ್ನ ನರಳುವ ದೇಹ
ನರಳಲಾರದಾಗುತ್ತದೆಯೋ
ಗುಲಾಬಿಯಾಗಲೀ ಮುಳ್ಳಾಗಲೀ ನನ್ನ
ದೇಹವನ್ನು ಪ್ರಭಾವಿಸುವುದಿಲ್ಲವೊ ಅದಕ್ಕೆ-
ಈಗಲೇ ಸಮಯ

ಈಗಲೇ ಸಮಯ
ಪೂರ್ವಗ್ರಹ ಪಕ್ಷಪಾತ ಕಲ್ಪನೆಗಳ
ವಿರುದ್ಧ ಅಧಿಕೃತ ಕ್ರಿಯೆಯ ಉತ್ಕರ್ಷಕ್ಕೆ
ಈಗಲೇ ಸಮಯ

ಈಗಲೇ ಸಮಯ
'ನಾಸಿಸಂ' ಸ್ತಂಭಗಳ ಬಿರ್ರನೆ ಬೀಳಿಸಲು
ಈಗಲೇ ಸಮಯ

ಈಗಲೇ ಸಮಯ
ಇಂದಿನ ನೋವೇ ನಾಳೆಗೆ
ದಕ್ಕುವ ಸೌಖ್ಯವಾದುದರಿಂದ
ಹನ್ನೊಂದನೆ ವಿಧಿಯ ಉಲ್ಲಂಘಿಸಲು
ಇದೇ ಸಮಯ,
ಹೌದು, ಈಗಲೇ ಸಮಯ



ಮುಜ್ವಖೇಂಬುಲಿ– ಜನಿಸಿದ್ದು ದಕ್ಷಿಣ ಆಫ್ರಿಕದ ಸೋಫಿಯ ಟೌನಿನಲ್ಲಿ 1958ರಲ್ಲಿ. ಇದೇ ವರ್ಷ ಸರ್ಕಾರ ಸೋಫಿಯಟೌನನ್ನು ನೆಲಸಮ ಮಾಡಿತ್ತು. ಆಗ ಇವನ ಮನೆಯೂ ನೆಲಕಚ್ಚಿತು. ಎಲ್ಲರೂ ಸೊವೆಟೋಗೆ ವಲಸೆ ಹೋದರು. ಹೀಗಾಗಿ ಬಾಲ್ಯದಿಂದಲೇ ಆಂದೋಲನದ ತಾಪ ಇವನಿಗೆ ತಟ್ಟಿತು.

'ನಲೆದಿ ಸೊವೆಟೊ' ಚರ್ಚಿನಲ್ಲಿ ಸ್ವಲ್ಪ ಕಾಲ ಧರ್ಮಾಧಿಕಾರಿಯಾಗಿ ಕೆಲಸ ಮಾಡಿದ್ದುಂಟು. ಇವನ ಈ ಋಜು ಸ್ವಭಾವದಿಂದಲೇ 1999ರಲ್ಲಿ ತಮ್ಮದೇ ಆಗಿದ್ದ ಸರ್ಕಾರದಲ್ಲಿ ಬೇರುಬಿಟ್ಟಿದ್ದ ಭ್ರಷ್ಟಾಚಾರವನ್ನು ಅಣ್ಣಾಹಜಾರೆಯಂತೆ ತೊಲಗಿಸುವ ಸಂಕಲ್ಪ ಮಾಡಿದ. ಆಂದೋಲನಕ್ಕೆ ಇಳಿದ. ಆದರೆ, ಸರ್ಕಾರ ಇವನ ಮೇಲೆ ಶಸ್ತ್ರಾಸ್ತ್ರಗಳನ್ನು ಹೊಂದಿದ್ದ ಎಂಬ ಸುಳ್ಳು ಆರೋಪ ಹೊರಿಸಿ ಜೈಲಿಗೆ ತಳ್ಳಿತು!

ಮುಖ್ಯವಾಗಿ ಈತ ಒಬ್ಬ ಕವಿ ಮತ್ತು ಗಾಯಕ. ಆಂಧ್ರದ ಗದ್ದರ್ ಮಾದರಿಯ ಗಾಯಕ ಕವಿ. ಈತನ ಕಾವ್ಯ ಪುಟದ ಮೇಲೆ ಮೂಡಿಬರುವುದಕ್ಕಿಂತಲೂ ಹೆಚ್ಚು ಪ್ರಖರವಾಗಿಯೂ ಮತ್ತು ಸೊಗಸಾಗಿಯೂ ಪುಟಿದು ಬರುವುದು ಜನರ ಮಧ್ಯೆ ಹಾಡುವಾಗಲೇ. ಈತ ಹಾಡುವಲ್ಲಿ ಜನ ಸಹಸ್ರ ಸಂಖ್ಯೆಯಲ್ಲಿ ಸೇರುತ್ತಾರೆ. ಆದ್ದರಿಂದಲೇ ಇವನನ್ನು 'ಜನಕವಿ' ಎಂದು ಗುರ್ತಿಸುತ್ತಾರೆ.

ಆರು ಅಡಿಗಳಿಗೂ ಮಿಗಿಲಾದ ಎತ್ತರದ ಭವ್ಯ ಆಕೃತಿ ಮುಜ್ವಖೇಂಬುಲಿ. ಹಾಡುತ್ತಾ ಜನಸಾಗರದಲ್ಲಿ ಮುಳುಗಿಹೋಗುತ್ತಾನೆ. ನೂರಾರು ಸಂದರ್ಭಗಳಲ್ಲಿ ಹಾಡಿ ಜನರನ್ನು ಜಾಗ್ರತಗೊಳಿಸಿದ್ದಾನೆ.

ದಕ್ಷಿಣ ಆಫ್ರಿಕ ಕಮ್ಯೂನಿಸ್ಟ್ ಪಾರ್ಟಿಯ ಮುಖ್ಯಸ್ಥನಾಗಿದ್ದ ಖ್ಯಾತಿವೆತ್ತ 'ಕ್ರಿಸ್‌ಹನಿ'ಯ ಕೊಲೆಯಾದಾಗ ಅವನ ಉತ್ತರ ಕ್ರಿಯೆಯ ವೇಳೆ ಹಾಡಿದ. ಹಾಗೆಯೇ ನೆಲ್ಸನ್‌ಮಂಡೇಲ ದೇಶದ ಅಧ್ಯಕ್ಷನಾದಾಗಲೂ ಅಂದಿನ ಸಮಾರಂಭದಲ್ಲಿ ಹಾಡಿ ಜನರನ್ನು ನಲಿಸಿದ್ದಾನೆ. ಯುರೋಪಿನಾದ್ಯಂತ ಹಾಡುತ್ತಲೇ ಇರುತ್ತಾನೆ. ಅನೇಕ ಸನ್ಮಾನಗಳನ್ನೂ ಪಡೆದಿದ್ದಾನೆ. ಕಾವ್ಯದ ಕಾರಣದಿಂದ, ಹಾಡಿದ ಕಾರಣದಿಂದ ಅಲ್ಪಸಂಖ್ಯಾತರ ಸರ್ಕಾರ ಇದ್ದವೇಳೆಯಲ್ಲಿ ತುರಂಗವಾಸವನ್ನೂ ಮಾಡಿದ್ದಾನೆ.

ಮುಜ್ವಖೇಂಬುಲಿ ಇಂಗ್ಲೀಷಿನಲ್ಲಿಯೂ ಹಾಗೂ ತನ್ನ ಸ್ಥಳೀಯ ಪ್ರಮುಖ ಭಾಷೆಯಾದ 'ಜುಲು'ವಿನಲ್ಲಿಯೂ ಕಾವ್ಯ ರಚಿಸಿದ್ದಾನೆ. ಹಲವಾರು ಕೃತಿಗಳು ಈತನ ಲೇಖನಿಯಿಂದ ಮೂಡಿವೆ. Change in pain ಈತನ ಪ್ರಖ್ಯಾತ ಕವನ.



(ಟ್ರಿನಿಟಿ ಕಾಲೇಜ್, ಲಂಡನ್
ವಾರ್ಷಿಕ ನಾಟಕ ಸ್ಪರ್ಧೆ–2013ರ
ಪ್ರಥಮ ಬಹುಮಾನ ಪಡೆದ ಕೃತಿ)

ಇಂಗ್ಲಿಷ್ : ಕ್ರಿಸ್ಟಿನಾ ಮೇಡನ್
ಕನ್ನಡಕ್ಕೆ : ಎಸ್.ಎಸ್. ರಾಮೇಶ್ವರಿ

ನಾಂದಿ

(ಬಿಡಿ ಬಿಡಿ ಅಕ್ಷರಗಳನ್ನು ಹಿಡಿದಿರುವ ಮಕ್ಕಳು ವೇದಿಕೆ ಪ್ರವೇಶಿಸಿ ವೀಕ್ಷಕರಿಗೆ ಬೆನ್ನು ಮಾಡಿ ನಿಲ್ಲುವರು. ಆಯಾ ಅಕ್ಷರಗಳನ್ನು ಕೂಗಿದಾಗ ಒಬ್ಬೊಬ್ಬರಾಗಿ ಮುಂದೆ ತಿರುಗುವರು. ನ, ಮ, ಯ, ಗ, ರ, ಪ, ದ, ಜ, ಣ, ಚ, ಶ, ಆ, ಕ, ಹ, ಸ, ವ, ಡ, ಟ, ಊ.)

ನ — ಎಲ್ಲರಿಗೂ ನಮನ

(ಎಲ್ಲ ಅಕ್ಷರಗಳು ವೇದಿಕೆಗೆ ಬೆನ್ನು ಮಾಡುತ್ತವೆ. ನ ಅಕ್ಷರ ಮ ಅಕ್ಷರದ ಬಲಕ್ಕೆ ನಿಂತು ಅದರ ಸುತ್ತ ಓಡುತ್ತಾ ನಮನ ಎಂದ ಕೂಗುತ್ತದೆ)

ಆ — ಆಗಮನ

(ಅಕ್ಷರಗಳು ಜೋಡಿಸಿಕೊಳ್ಳುವವು, ಹಾಗೂ ಹೇಳುವವರು)

ಸ — ಸಮಯ

ಹ — ಹಣ

ಪ	ಪಯಣ
	(ಪದಗಳಿಗೆ ತಕ್ಕಂತೆ ಅಕ್ಷರಗಳು ಕ್ರಮವಾಗಿ ನಿಂತು ಕೂಗುತ್ತವೆ)
ಜ	ಹೀಗೆ ಮಿಲಿಯನ್‌ಗಟ್ಟಲೆ ಪದಗಳು ಬಳಕೆಯಲ್ಲಿವೆ
ನ	ಕೆಲವು ನಾಮಪದಗಳು
ಸ	ಕೆಲವು ಸರ್ವನಾಮಗಳು
ಕ	ಮತ್ತೆ ಕೆಲವು ಕ್ರಿಯಾಪದಗಳು
ಹ	ಹೀಗೆ ಹತ್ತು ಹಲವಾರು ಬಗೆಗಳು
ಗ	ಹ್ಞಾ! ಒಂದು ದಿನಕ್ಕೆ ಸುಮಾರು 7 ಸಾವಿರ ಪದಗಳನ್ನು ಗಂಡಸರು ಬಳಸಿದರೆ . . .
ಪ	ಹೆಂಗಸರು ಬಳಸುವುದು 20 ಸಾವಿರವಂತೆ!
ಗ	ಕೆಲವು ಪದಗಳನ್ನ ಹಿಂದುಮುಂದಾಗಿಯೂ ಓದಬಹುದು . . . ಚಮಚ . . .
ನ	ನಯನ, ನಮನ . . .
ಪ	ಹೀಗೆ ಎಲ್ಲವೂ ಪದಗಳೇ
ಎಲ್ಲರೂ	ಎಲ್ಲವೂ ಪದಗಳೇ, ಎಲ್ಲಾ ಪದಗಳೇ!
ಪ	ಅಕಸ್ಮಾತ್ ಪದಗಳೇ ಇಲ್ಲದೆ ಹೋದರೆ!?
ಆ	ಒಂದು ಪದಾನೂ ಇಲ್ಲದೇ ಇದ್ರೆ!!
ಯ	ಒಂದೇ ಒಂದೂ ಇಲ್ಲಾ ಅಂದ್ರೆ . . . !?!
ಮ	ಎಲ್ಲಾ ಪದ ಮಾಯಾ ಆಗ್ಬಿಟ್ರೆ . . . !!!
ಹ	ಒಂದೂ ಇಲ್ದೇನೇ?!?
	(ಎಲ್ಲರೂ ವೇದಿಕೆಗೆ ಬೆನ್ನು ಮಾಡುವರು, ಕಥನಕಾರರು ಪ್ರವೇಶಿಸುವರು.)
ಕಥನಕಾರ 1	ಒಂದು ದಿನ ಹಾಗೇ ಆಯ್ತು ನೋಡಿ, ಚಮರ ಅನ್ನೋ ಒಂದೂರಲ್ಲಿ... (ಚ, ಮ, ರ ಅಕ್ಷರಗಳು ನಿಲ್ಲುವವು)
ಕಥನಕಾರ 2	ಚಮರ?! ಊರಾ ಅದು?! ಅದು ಪದಾನೇ ಅಲ್ಲ.
ಚ	ಚಮರ ಒಂದು ಪದ

ಕಥನಕಾರ 2 ಈಗ ತಾನೇ ಅವರು ತಿರುಗಿ ನಿಂತ್ರು, ನೀನು ಆಗ್ಲೇ . . .

(ಒಂದನೇ ಕಥನಕಾರನು ಎರಡನೇ ಕಥನಕಾರ ಮತ್ತು ಜನರತ್ತ ಸನ್ನೆ ಮಾಡುವನು)

ಕಥನಕಾರ 2 (ಎಚ್ಚೆತ್ತು) ಕ್ಷಮಿಸಿ. ಅಂದು ಬುಧವಾರ, ಚಮರದಲ್ಲಿ . . .

ಕಥನಕಾರ 1 ಸೂರ್ಯ ಮಿನುಗುತ್ತಿದ್ದ, ಪಕ್ಷಿಗಳು ಹಾಡ್ತಾ ಇದ್ವು, ಬಾಲಗಳು ಬೆಕ್ಕುಗಳ ಬೆನ್ನತ್ತಿ ಹೋಗುತ್ತಿದ್ದವು, ಮತ್ತೆ ಪ್ರೊಫೆಸರ್ ತಮ್ಮ ಕೆಲಸದಲ್ಲಿ ನಿರತರಾಗಿದ್ದರು.

(ಅಕ್ಷರಗಳು ವೇದಿಕೆಯಿಂದ ನಿರ್ಗಮಿಸುವವು, ಕಥನಕಾರರು ವೇದಿಕೆಯ ಬದಿಯಲ್ಲೇ ನಿಂತು ವೀಕ್ಷಿಸುವರು.)

* * *

ದೃಶ್ಯ – 1

(ಪ್ರೊಫೆಸರ್ ಮನೆ. ಬುಧವಾರ ಮಧ್ಯಾಹ್ನ.)

(ವೇದಿಕೆಯಿಂದ ದೊಡ್ಡ ಶಬ್ದ ಕೇಳುವುದು, ಹೊಗೆ ಆವರಿಸುವುದು. ಸ್ವಲ್ಪ ಗಲಿಬಿಲಿಗೊಂಡಂತೆ ಪ್ರೊಫೆಸರ್ ವೇದಿಕೆ ಪ್ರವೇಶಿಸುವರು. ಪುಸ್ತಕವನ್ನು ಹಿಡಿದು ಪದಸಂಗ್ರಹಕಾರ ಅವಳನ್ನು ಹಿಂಬಾಲಿಸುತ್ತಾನೆ.)

ಪದ ಸಂಗ್ರಹಕಾರ ಪ್ರೊಫೆಸರ್ ಏನಾಯ್ತು?

ಪ್ರೊಫೆಸರ್ ಏನೂ ಆಗಲಿಲ್ಲ. ಏನಾದರೂ ಆಗಬೇಕು ಅಷ್ಟೇ: ಹೊಸ ದಿನ ಹೊಸದೇನಾದರೂ . . . ನನ್ನ ಪುಸ್ತಕ ಎಲ್ಲಿ? (ತನ್ನ ಜೇಬಿನಿಂದ ತೆಗೆಯುತ್ತಾಳೆ.) ಹ್ಞಾ ಸರಿ, ಈಗ ನಾವು ಎಲ್ಲಿದ್ದೀವಿ?

ಪದ ಸಂಗ್ರಹಕಾರ ಅದೇ ಪದಯಂತ್ರದ ಸುರುಳಿ ಚಕ್ರ ತಿರುಗಿಸಬೇಕು.

ಪ್ರೊಫೆಸರ್ ಧನ್ಯವಾದ ನೆನಪಿಸಿದ್ದಕ್ಕೆ. ನನಗನಿಸುತ್ತೆ ಚಕ್ರವನ್ನೇನಾದರು ಜಾಸ್ತಿ ತಿರುಗಿಸಿದರೆ ಅದು ಸ್ಫೋಟವಾಗಬಹುದೇನೋ . . . ಹಾಗೆ ಮಾಡಕೂಡದು. ನಿಧಾನವಾಗಿ ಚಕ್ರ ತಿರುಗಿಸಬೇಕು, ಆಮೇಲೆ ಆ ಶಬ್ದ ಬರಬೇಕು, ಆಗ ಸಿಗುತ್ತೆ ಹೊಸ ಪದ. ಅರೆರೇ...! ಆಹಾ...! 'ಸ್ಫುರಿಸು' ವಾವ್! ಹಿಂದೆಂದೂ ಕೇಳದೇ ಇರೋ ಹೊಸ ಪದ.

ಪದ
ಸಂಗ್ರಹಕಾರ ಯಂತ್ರ ನಿನ್ನೆಯಿಂದ ಕೆಲಸ ಮಾಡಿಲ್ಲ.

ಪ್ರೊಫೆಸರ್ ಹೌದು. ಈ ನನ್ನ ಕೂಸನ್ನು ನಾನು ಸೃಷ್ಟಿ ಮಾಡಿ ಹನ್ನೆರಡು ವರ್ಷ ಆಗಿದೆ. ನಾವೇ ದಣಿದಿದ್ದೀವಿ. ಪಾಪ ಸಾವಿರಾರು ಹೊಸ ಪದಗಳನ್ನು ಸೃಷ್ಟಿ ಮಾಡಿರೋ ಇವಳು ಈಗ ಸ್ವಲ್ಪ ವಿಶ್ರಾಂತಿ ಕೇಳ್ತಾ ಇದ್ದಾಳೆ. ನಾನು ಇವಳನ್ನು ಹೇಗೆ ತಾನೇ ದೂಷಿಸಲಿ ಹೇಳು? ಸರಿ ಬಿಡು, ಮೊದಲಿಂದ ಎಲ್ಲಾ ಜೋಡಿಸಿ ಇನ್ನೊಂದ್ಸಲ ಪ್ರಯತ್ನ ಮಾಡೋಣ.

ಪದ
ಸಂಗ್ರಹಕಾರ ಮೊದಲಿಗೆ ಆನ್-ಆಫ್ ಸ್ವಿಚ್. ಆಮೇಲೆ ತಿರುಗಣಿ. ಆಮೇಲೆ ಚಕ್ರ, ನಂತರ ಮೇಲೇರುವ ರೋಸ್ಟರ್ ಮತ್ತು ಓಗ್ಗಿಸಿ ಹರಡುವ ಎಕ್ಸಾಸ್ಟ್ ಇದಕ್ಕೆ ಜೋಡಣೆಯಾಗಿರುವ ರಾಟೆಗಳು. ಪರದೆ. ಪದಗಳ ಕುಣಿಕೆ. ಇವೆಲ್ಲವೂ ನಿರ್ಣಯ ಮತ್ತು ತಪಾಸಣೆಗಳಿಗೆ ಸೇರಿಕೊಂಡು. ಅಲ್ಲಿಂದ ಇಳಿಜಾರು. ಕೊನೆಯದಾಗಿ ಜಾಲ... ಜಾಲ... ಪದಜಾಲ...

(ಪದಸಂಗ್ರಹಕಾರ ಯಂತ್ರದ ಭಾಗಗಳನ್ನು ಹೇಳಿದಂತೆಲ್ಲಾ ತನ್ನ ದೇಹದಿಂದ ಪದ ಉತ್ಪಾದಿಸುವ ಯಂತ್ರದ ವಿವಿಧ ಭಾಗಗಳಾಗಿ ಪ್ರದರ್ಶಕರು ಒಬ್ಬರನ್ನೊಬ್ಬರು ಹಿಡಿದು ಕೊಂಡಿಯಂತೆ ನಿಲ್ಲುವರು. ಯಂತ್ರದ ಪ್ರತಿ ಭಾಗ ಮಾಡುವ ಶಬ್ದ ಹಾಗೂ ಕೆಲಸ ಅವರಿಗೆ ತಿಳಿದಿರಬೇಕು. ಯಂತ್ರದ ಮುಂದೆ ಒಬ್ಬರು ಚಿಟ್ಟೆ ಹಿಡಿಯುವಂತಹ ಜಾಲವನ್ನು ಹಿಡಿದು ನಿಲ್ಲಬೇಕು.)

ಪ್ರೊಫೆಸರ್ ಅದ್ಭುತ! ಇನ್ನೊಮ್ಮೆ ಪ್ರಯತ್ನಿಸೋಣ? ನೀನು ಹಿಂದೆ ನಿಲ್ಲು, ನಾನು ಆನ್ ಮಾಡ್ತೀನಿ. ಹ್ಞಾ . . . ಪದಯಂತ್ರವೇ, ತೋರಿಸು ನಿನ್ನ ಚಮತ್ಕಾರ . . .

(ಪದಸಂಗ್ರಹಕಾರ ಹಿಂದೆ ಸರಿಯುವನು. ಪ್ರೊಫೆಸರ್ ಸ್ವಿಚ್ಚನ್ನು ಒತ್ತುವರು. ಯಂತ್ರಕ್ಕೆ ಜೀವ ಬಂದು 'ಕೋಮಲ' ಎಂಬ ಹೊಸ ಪದ ಬಂದು ಜಾಲದಲ್ಲಿ ಬೀಳುವುದು. ಪ್ರೊಫೆಸರ್ ಯಂತ್ರವನ್ನು ನಿಲ್ಲಿಸುವರು ಮತ್ತು ಪದಸಂಗ್ರಹಕಾರ ಪದವನ್ನು ನೋಡಲು ಓಡುವನು.)

ಪ್ರೊಫೆಸರ್ ಯಾವ ಪದ ಹೇಳಿದಳು?

ಪದ
ಸಂಗ್ರಹಕಾರ 'ಕೋಮಲ' (ಹಾಳೆಯನ್ನು ತೋರಿಸುವನು.)

ಪ್ರೊಫೆಸರ್	'ಕೋಮಲ'?! ಆದರೆ ಅದು ಹೊಸ ಪದ ಅಲ್ಲ, ಹಳೆಯದು; ತುಂಬಾ ಹಳೆಯದು. ಛೇ! . . . (ಪ್ರೀತಿಯಿಂದ ಯಂತ್ರದ ಮೈದಡವುತ್ತಾಳೆ) ಇವಳು ತುಂಬಾ ದಣಿದಿರಬೇಕು; ಅದಕ್ಕೆ ವಿಶ್ರಾಂತಿ ಬೇಕು ಅನ್ಸುತ್ತೆ. ರಾಜರು ಪ್ರತಿದಿನ ಹೆಚ್ಚು ಹೆಚ್ಚು ಹೊಸ ಪದಾನ ಪಡೀಬೇಕು ಅಂತ ಆಜ್ಞೆ ಮಾಡ್ದೆ ಇದ್ದಿದ್ರೆ ಜೀವನ ಚೆನ್ನಾಗಿ ಇರ್ತಿತ್ತೇನೋ, ನಾವೂ ಒಂದಿಷ್ಟು ವಿಶ್ರಾಂತಿ ಪಡೀಬಹುದಿತ್ತು. ನಾನು ರಜೆಗೆ ಊರಿಗೆ ಹೋಗಿ ವಾದ್ಯ ನುಡಿಸೋ ಅಭ್ಯಾಸಾನಾದ್ರೂ ಒಂದಿಷ್ಟು ಮಾಡಿಕೊಳ್ತಿದ್ದೆ. ಕೊಳಲು ನುಡಿಸೋದು ಅಂದರೆ ಅದೇಕೋ ನನಗೆ ತುಂಬಾ ಇಷ್ಟ.
	(ಜೇಕ್ ಓಡುತ್ತಾ ಪ್ರವೇಶಿಸುವನು.)
ಜೇಕ್	ಪ್ರೊಫೆಸರ್, ಪ್ರೊಫೆಸರ್! ನನಗೆ ಗೊತ್ತಾಯ್ತು; ನಾನು ಕಂಡು ಹಿಡಿದೆ! (ಸಾದಿಯ ಕೂಡ ಓಡುತ್ತಾ ಪ್ರವೇಶಿಸುವಳು.)
ಸಾದಿಯ	ಹೇ, ತಡೀ . . . ಅದು ನನ್ನ ಕಲ್ಪನೆ, ನಾನೇ ಹೇಳ್ತೀನಿ.
ಜೇಕ್	ನಿಂದಲ್ಲಾ, ನಂದು.
ಸಾದಿಯ	ಉಹೂಂ, ನನ್ನದೇ.
ಜೇಕ್	ಹಕ್ಕಿಮೆದುಳು . . .
ಸಾದಿಯ	ಸುಕ್ಕುತಲೆ . . .
ಪ್ರೊಫೆಸರ್	ಮಕ್ಕಳೇ, ಎಂಥಾ ಪದ ಅವು?
ಜೇಕ್	ಆದರೆ ಪ್ರೊಫೆಸರ್ ಇವಳು . . .
ಪ್ರೊಫೆಸರ್	ಜೇಕ್, ಹಾಗೆಲ್ಲಾ ತಂಗಿ ಬಗ್ಗೆ ಮಾತಾಡಬಾರ್ದು. ಎಲ್ಲಿ ಇಬ್ಬರು ಹೇಳಿ ಏನ್ ಕಂಡುಹಿಡಿದ್ರಿ ಅಂತ.
ಜೇಕ್	ನಮಗೆ ಯಂತ್ರಾನ ಸರಿಯಾಗಿ ಜೋಡಿಸೋದು ಗೊತ್ತು.
ಸಾದಿಯ	ನಿಮಗೆ ಗೊತ್ತ?! ಆ ಗಾಲಿ ಸರಿಯಾಗಿ ಉರುಳ್ತಿಲ್ಲ.
ಜೇಕ್	ಅದನ್ನು ಸ್ವಲ್ಪ ತಿರುಗಿಸಿ...
ಸಾದಿಯ	ಸ್ವಲ್ಪ ಸಮಯ ಕೊಡಿ...
ಜೇಕ್	ಒಂದೆರಡು ನಿಮಿಷ...
ಸಾದಿಯ	ಮೂರು ಅಥವಾ ನಾಲ್ಕು...

ಜೇಕ್ ಆಮೇಲೆ ಪದಗಳು ಬರಲೇಬೇಕು.

ಪ್ರೊಫೆಸರ್ ತಡೀರಿ. ಅದೇನು ಮಾಡ್ತೀರೋ ನನಗೂ ತೋರಿಸಿ . . .

(ಜೇಕ್ ಮತ್ತು ಸಾದಿಯ ಯಂತ್ರದಲ್ಲಿ ಕೆಲವು ಮಾರ್ಪಾಡನ್ನು ಮಾಡಿ– ಪ್ರದರ್ಶಕರ ಸ್ಥಳವನ್ನು ಬದಲಾಯಿಸಿ – ನಂತರ ಸ್ವಿಚ್ ಹಾಕ್ತಾರೆ. ಯಂತ್ರಕ್ಕೆ ಜೀವ ಬಂದು ಕೆಲವು ಚಲನೆ ಹಾಗೂ ಶಬ್ದ ಮಾಡುತ್ತದೆ. ನಾಲ್ಕು ಹೊಸ ಪದಗಳು ಜಾಲದಲ್ಲಿ ಬಂದು ಬೀಳುತ್ತವೆ. ಪದಸಂಗ್ರಹಕಾರ ಓಡಿ ಹೋಗಿ ಪದಗಳನ್ನ ತೆಗೆದುಕೊಳ್ಳುತ್ತಾನೆ. ಯಂತ್ರ ಇನ್ನೂ ಚಾಲನೆಯಲ್ಲಿರುತ್ತದೆ.)

ಪ್ರೊಫೆಸರ್ ಏನು ಬಂದಿದೆ?

ಪದ ಸಂಗ್ರಹಕಾರ (ಯಂತ್ರದ ಶಬ್ದಕ್ಕಿಂತ ಜೋರಾಗಿ ಒಂದೊಂದು ಪದವನ್ನು ಓದುತ್ತಾನೆ) ಮುಸುಡಿ, ಜೊಲ್ಲು, ತೇಕು, ಕಕ್ಕು

(ಪ್ರೊಫೆಸರ್ ಯಂತ್ರವನ್ನು ನಿಲ್ಲಿಸುವರು, ಜೇಕ್ ಮತ್ತು ಸಾದಿಯ ನಗಲು ಶುರುಮಾಡುತ್ತಾರೆ.)

ಪ್ರೊಫೆಸರ್ ತುಂಬಾ ಸಂತೋಷವಾಯಿತು.

ಸಾದಿಯ ಕ್ಷಮಿಸಿ ಪ್ರೊಫೆಸರ್, ನಾವು ಅದು ನಿಜವಾಗಲೂ ಸರಿಹೋಗುತ್ತೆ ಅಂದ್ಕೊಂಡಿದ್ವಿ . . .

ಜೇಕ್ ಆದರೆ ಅದು ಕಕ್ಕುತ್ತೆ ಅಂದ್ಕೊಂಡಿರ್ಲಿಲ್ಲ. . .

(ಮತ್ತೆ ಸಾದಿಯ ಮತ್ತು ಜೇಕ್ ನಗುವುದಕ್ಕೆ ಶುರು ಮಾಡುವರು)

ಪ್ರೊಫೆಸರ್ ನಿಜಕ್ಕೂ ನೀವಿಬ್ಬರು ಒಳ್ಳೆ ಪ್ರಯತ್ನ ಮಾಡಿದ್ದೀರಿ, ಅದಕ್ಕೆ ಧನ್ಯವಾದ. ಆದರೆ ಮಹಾರಾಜರು ನಿರೀಕ್ಷಿಸುತ್ತಿರುವ ಪದಗಳು ಇವಲ್ಲ.

ಸಾದಿಯ ನಾವು ಮತ್ತೆ ಪ್ರಯತ್ನ ಮಾಡ್ತೀವಿ.

ಪ್ರೊಫೆಸರ್ ಒಳ್ಳೇದು. ಆದರೆ ನೀವೀಗ ಮನೆಗೆ ಹೊರಡಿ, ನೀವು ಸಂಕಷ್ಟಕ್ಕೆ ಸಿಗುವುದು ನಮಗೆ ಇಷ್ಟ ಇಲ್ಲ.

ಜೇಕ್ ಸರಿ. ಪ್ರೊಫೆಸರ್ ನಾವು ಹೊರಡ್ತೀವಿ, ಧನ್ಯವಾದ.

ಸಾದಿಯ ಧನ್ಯವಾದ ಪ್ರೊಫೆಸರ್. (ಜೇಕ್ ಮತ್ತು ಸಾದಿಯ ನಿರ್ಗಮಿಸುವರು)

ಪ್ರೊಫೆಸರ್ ಮತ್ತೆ ಕಾರ್ಯಾಗಾರ ಶುರು. ಇದನ್ನ ಮತ್ತೆ ಮೊದಲಿನಂತೆ ಬದಲಾಯಿಸೋಣ.

(ಪ್ರೊಫೆಸರ್ ಎರಡು ಬಾರಿ ಚಪ್ಪಾಳೆ ಹೊಡೆಯುತ್ತಾರೆ. ಯಂತ್ರ ನಿರ್ಗಮಿಸುವುದು. ಪ್ರೊಫೆಸರ್ ಮತ್ತು ಪದಸಂಗ್ರಹಕಾರರ ನಿರ್ಗಮನ.)

ಕಥನಗಾರ–1 ಪ್ರೊಫೆಸರ್ ಮತ್ತು ಪದಸಂಗ್ರಹಕಾರ ಮತ್ತೆ ತಮ್ಮ ಕೆಲಸಕ್ಕೆ ಹಿಂತಿರುಗಿದರು.

ಕಥನಗಾರ–2 ಜೇಕ್ ಮತ್ತು ಸಾದಿಯ ಅವರ ಮನೆಗೆ ಹಿಂತಿರುಗಿದರು.

* * *

ದೃಶ್ಯ – 2

(ಬುಧವಾರ ಸಂಜೆ)

(ಜೇಕ್ ಮತ್ತು ಸಾದಿಯರ ಮನೆ. ಅಪ್ಪ, ಅಮ್ಮ ಊಟಕ್ಕೆ ಕೂರಲು ಸಿದ್ಧರಾಗುತ್ತಿದ್ದಾರೆ. ಜೇಕ್ ಮತ್ತು ಸಾದಿಯ ಪ್ರವೇಶ)

ತಂದೆ ಹಾಯ್ ಮಕ್ಕಳೇ...

ತಾಯಿ ಎಲ್ಲಿ ಹೋಗಿದ್ರಿ ಇಷ್ಟು ಹೊತ್ತು?

ಸಾದಿಯ ಪ್ರೊಫೆಸರ್‌ರನ್ನು ನೋಡೋಕೆ ಹೋಗಿದ್ವಿ

ತಂದೆ ಯಂತ್ರದಲ್ಲಿನ ಸಮಸ್ಯೆ ಇನ್ನೂ ಹಾಗೇ ಇದೆಯಾ?

ಜೇಕ್ ಹೌದಪ್ಪ. ಅದು ಕೆಲಸ ಮಾಡ್ತಾನೇ ಇಲ್ಲ.

ತಾಯಿ ಛೇ, ಪ್ರೊಫೆಸರ್‌ಗೆ ಎಂಥಾ ಅಪಮಾನ! . . . ಸಮಸ್ಯೆ ಏನು?

ಸಾದಿಯ ಅವರಿಗೂ ಗೊತ್ತಿಲ್ಲ. ನಾವು ಸಹಾಯ ಮಾಡೋಕೆ ಪ್ರಯತ್ನ ಪಟ್ವಿ ಆದ್ರೆ ಆಗ್ಲಿಲ್ಲ.

ತಂದೆ ನಮಗೆಲ್ಲಾ ಹೇಳೋಕೆ ಅವರ ಹತ್ತಿರ ಇನ್ನೂ ಹೆಚ್ಚು ಪದಗಳು ಇವೆಯಾ?

ತಾಯಿ ಇರಬಹುದು ಅನ್ಸುತ್ತೆ. ಇಲ್ಲ ಅಂದ್ರೆ ಏನು ಮಾಡ್ತಾರೋ ಗೊತ್ತಿಲ್ಲ.

ಜೇಕ್ ಖಂಡಿತ ಯಂತ್ರವನ್ನು ಸರಿ ಮಾಡ್ತಾರೆ. ಪ್ರೊಫೆಸರ್ ಏನು ಬೇಕಾದ್ರೂ ಮಾಡಬಲ್ಲರು.

ತಾಯಿ ಆಗಲೇ ಆರೂವರೆ ಆಗ್ತಾ ಬಂತು

ತಂದೆ ಬೇಗ ನಡೀರಿ, ಅವಕಾಶವನ್ನು ಕಳ್ಕೋಬಾರದು.

(ಅವರೆಲ್ಲರೂ ವೇದಿಕೆಯ ಮಧ್ಯೆ ಹೋಗಿ, ವೀಕ್ಷಕರ ಕಡೆ ತಿರುಗಿ ಪರದೆಯನ್ನು ಹಿಂದಕ್ಕೆ ಸರಿಸುವಂತೆ ಮೂಕಾಭಿನಯ ಮಾಡಿ ಮೇಲೆ ನೋಡುವರು. ಇತರ ಪ್ರದರ್ಶಕರು ಪ್ರವೇಶಿಸಿ ಮೇಲೆ ನೋಡುವರು. ಅವರೆಲ್ಲರೂ ಆಕಾಶದಲ್ಲಿ ಕಾಣಿಸಿಕೊಳ್ಳುವ ಪ್ರಸಾರವಾಣಿಯನ್ನು ನೋಡಲು ಕಾಯುತ್ತಿರುವರು.)

ಕಥನಗಾರ–1 ಪ್ರತಿ ರಾತ್ರಿ ಎಂಟೂವರೆಗೆ

ಕಥನಗಾರ–2 ಈ ಊರಿನ ಎಲ್ಲ ಜನ ಆಕಾಶವನ್ನು ನೋಡುವರು . . .

ಕಥನಗಾರ–1 ಪ್ರಸಾರವಾಣಿ ಕಾಣಿಸಿಕೊಳ್ಳುವವರೆಗೆ ಕಾಯುವರು.

(ವರದಿಗಾರ್ತಿ ಪ್ರವೇಶಿಸಿ ವೇದಿಕೆಯ ಹಿಂದೆ ಇರುವ ಏರು ದಿಬ್ಬದ ಮೇಲೆ ನಿಂತು ಘೋಷಣೆ ಮಾಡಲು ಸಿದ್ಧನಾಗಿ ನಿಲ್ಲುವಳು. ಎಲ್ಲರೂ ಅತ್ತ ಮುಖ ಮಾಡಿ ಆಕಾಶವಾಣಿಗಾಗಿ ಕಾಯುತ್ತಿರುವಂತೆ ಕಾಣುವರು.)

ವರದಿಗಾರ್ತಿ ಮಹಿಳೆಯರೇ ಮತ್ತು ಮಹನೀಯರೇ, ಹುಡುಗರೇ ಮತ್ತು ಹುಡುಗಿಯರೇ, ಎಲ್ಲರಿಗೂ ಈ ರಾತ್ರಿಯ ಹೊಸ ಪದದ ಪ್ರಸಾರವಾಣಿಗೆ, ಸ್ವಾಗತ ಸುಸ್ವಾಗತ. ರಾಜಾಜ್ಞೆಯ ಮೇರೆಗೆ ನಾನು ಪ್ರತಿ ರಾತ್ರಿ ಹೊಸದಾಗಿ ಸೃಷ್ಟಿಸಿದ ಒಂದು ಪದವನ್ನು ನಿಮ್ಮೊಂದಿಗೆ ಹಂಚಿಕೊಳ್ಳುತ್ತೇನೆ. ಈ ರಾತ್ರಿಯ ಪದ 'ಸೀಬಿಕ್ಕಳತೇಗು'. ಪದ ಮತ್ತೊಮ್ಮೆ 'ಸೀಬಿಕ್ಕಳತೇಗು'. ವಿವರಣೆ – ಒಂದೇ ಸಲ ಸೀನುವ, ಬಿಕ್ಕಳಿಸುವ, ತೇಗುವ ಕ್ರಿಯೆಗೆ 'ಸೀಬಿಕ್ಕಳತೇಗು' ಎನ್ನುವರು. ಪ್ರಸಾರ ವೀಕ್ಷಿಸಿದ್ದಕ್ಕೆ ಧನ್ಯವಾದಗಳು. ಶುಭರಾತ್ರಿ

ತಂದೆ ಅದು ತುಂಬಾ ಚೆನ್ನಾಗಿದೆ. ನನಗೆ ಇಷ್ಟ ಆಯ್ತು.

(ಜೇಕ್ ಮತ್ತು ಸಾದಿಯ ಒಟ್ಟಿಗೆ ಸೀನಿ, ಬಿಕ್ಕಳಿಸಿ, ತೇಗಲು ಪ್ರಯತ್ನಿಸುತ್ತಾರೆ.)

ಸಾದಿಯ ಖಂಡಿತ ಸಾಧ್ಯ ಇಲ್ಲ.

ತಾಯಿ ಸಾಕು ಸಾಕು ಸೀಬಿಕ್ಕಳತೇಗಿದ್ದು, ಊಟಕ್ಕೆ ಬನ್ನಿ.

(ತಂದೆ, ತಾಯಿ, ಜೇಕ್ ಮತ್ತು ಸಾದಿಯ ಊಟ ಮಾಡುತ್ತಿರುವಂತೆ ಅಭಿನಯಿಸುವರು.)

ಕಥನಗಾರ–1 ಹೀಗೆ ಅವರು ಊಟವನ್ನು ಮಾಡುತ್ತಿರುವಾಗಲೇ . . .

ಕಥನಗಾರ–2 ಮತ್ತೊಂದು ಕಡೆಯಿಂದ ಧ್ವನಿ; ಸೀನುವುದು . . .

ಕಥನಗಾರ–1 ಬಿಕ್ಕಳಿಸುವುದು . . .

ಕಥನಗಾರ–2 ತೇಗುವುದು . . .

ಕಥನಗಾರ–1 ಆಕಾಶ ಪೂರ್ತಿ ಕತ್ತಲೆಯಿಂದ ಆವರಿಸಿತ್ತು . . .

ಕಥನಗಾರ–2 ಎಲ್ಲರೂ ಮಲಗುವ ಸಮಯ.

(ತಂದೆ, ತಾಯಿ ಮಹಡಿ ಹತ್ತಿ ಹೋಗುವರು, ಜೇಕ್ ಮತ್ತು ಸಾದಿಯ ವೇದಿಕೆಯ ಮುಂಭಾಗಕ್ಕೆ ಬರುವರು.)

ಕಥನಗಾರ–1 ಕೆಲವು ಊರುಗಳಲ್ಲಿ ಮಲಗುವ ಮುನ್ನ ಜನರು ಹಾಲು ಬಿಸ್ಕತ್ ಸೇವಿಸುತ್ತಾರೆ . . .

ಕಥನಗಾರ–2 ಪ್ರಾರ್ಥನೇನೂ ಮಾಡಬಹುದು

ಕಥನಗಾರ–1 ಅಥವಾ ಯಾವುದಾದರೂ ಕಥೆ ಓದಬಹುದು . . .

ಕಥನಗಾರ–2 ಆದರೆ ಈ ಊರಿನ ಜನರ ಅಭ್ಯಾಸವೇ ಭಿನ್ನ.

(ಪ್ರದರ್ಶಕರು, ಜೇಕ್ ಮತ್ತು ಸಾದಿಯ ವೇದಿಕೆಯ ಮೇಲೆ ಅಡ್ಡಸಾಲು ಮಾಡಿ ನಿಂತು, ವಿವರಣೆಗೆ ತಕ್ಕಂತೆ ನಟಿಸುವರು)

ಕಥನಗಾರ–1 ಅವರು ಮಹಡಿ ಹತ್ತಿದ ಮೇಲೆ . . .

(ಎಲ್ಲರೂ ವೇದಿಕೆ ಹತ್ತುವರು.)

ಕಥನಗಾರ–2 ಹಲ್ಲುಜ್ಜುವರು (ಹಲ್ಲುಜ್ಜಿ ಬಾಯಿ ಮುಕ್ಕಳಿಸುವರು)

ಕಥನಗಾರ–1 ಪ್ರತಿನಿತ್ಯ ಬಂದಂತೆ ಆಕಳಿಕೆ ಬಂದಾಗ (ದೊಡ್ಡದಾಗಿ ಆಕಳಿಸುವರು)

ಕಥನಗಾರ–2 ಅವರು ಪದಗಳನ್ನ ಅಭ್ಯಾಸ ಮಾಡುವರು.

ಜೇಕ್ ಅಡ್ಡಾತಿಡ್ಡ

ಸಾದಿಯ ಲಂಗರಿನ ಹಲ್ಲು

(ಕೆಳಗಿನ ಪದಗಳು ಪ್ರದರ್ಶಕರಲ್ಲಿ ಹಂಚಿಕೆಯಾಗಬೇಕು)

(ಬುರುಡೆ ಬಿಡುವುದು, ತೋಕರುಕುಮು, ಸ್ಫಟಿಕದಂತೆ ಸ್ಪಷ್ಟ, ಮೊರಡಿ, ನಿರ್ಮಾಯೆ, ಭೂಖಂಡ, ಕರಡಿ . . .)

ಎಲ್ಲರೂ ಮತ್ತೆ 'ಸೀಬಿಕ್ಕಳತೇಗು'. (ಕೆಳಗಿನಿಂದ ಶಬ್ದ) ಶುಭರಾತ್ರಿ.

ತಾಯಿ ಶುಭರಾತ್ರಿ

ತಂದೆ ಸಿಹಿಗನಸು

(ತಂದೆ ತಾಯಿ ನಿರ್ಗಮನ. ಕಥನಗಾರರನ್ನು ಬಿಟ್ಟು ಉಳಿದವರೆಲ್ಲಾ ಮಲಗುವರು. ವೇದಿಕೆಯ ಮೇಲೆ ಕತ್ತಲು.)

ಕಥನಗಾರ-1 ಮತ್ತೊಂದು ದಿನದ ಮುಕ್ತಾಯ.

ಕಥನಗಾರ-2 ಆದರೆ ಬೆಳಕಾಗುವುದರೊಳಗೆ . . .

* * *

ದೃಶ್ಯ - 3

(ಮರುದಿನ ಬೆಳಗ್ಗೆ ಗಡಿಯಾರದ ಘಂಟೆ ಸದ್ದು)

ಕಥನಗಾರ-1 ಬೆಳಕಾಯ್ತು.

ಕಥನಗಾರ-2 ಬೆಳಗಾಯ್ತು.

ಎಲ್ಲರೂ (ಎಲ್ಲರೂ ನಿದ್ದೆಯಲ್ಲಿ ಮಾತನಾಡುವರು) ಬೆಳಕು ಆಗಿಯೇಹೋಯ್ತು!

(ನಿದ್ದೆಯಿಂದ ಏಳುವಂತೆ ನಟಿಸುವರು.)

ಕಥನಗಾರ-2 ಪ್ರತಿದಿನದಂತೆ ಈ ದಿನವೂ ಪ್ರಾರಂಭ . . .

(ಸ್ತಬ್ಧವಾಗಿ ನಿಂತಿರುವ ಪ್ರತಿಮೆಗಳು ಈ ಕೆಳಗಿನಂತೆ ಇರುತ್ತವೆ.)

ಕಥನಗಾರ-1 ತಲೆ ಬಾಚಿಕೊಳ್ಳೋರು.

ಕಥನಗಾರ_2 ಗಿಡಕ್ಕೆ ನೀರು ಹಾಕೋರು.

ಕಥನಗಾರ-1 ನಾಯಿಗೆ ಊಟ ಹಾಕೋರು.

ಕಥನಗಾರ-2 ದೇವರಿಗೆ ಪೂಜೆ ಮಡೋರು.

ಕಥನಗಾರ-1 ಹೀಗೆ ಆ ದಿನದ ಕೆಲಸ ಶುರುವಾಯಿತು.

(ಕಥನಗಾರರನ್ನು ಬಿಟ್ಟು ವೇದಿಕೆಯಿಂದ ಎಲ್ಲರ ನಿರ್ಗಮನ)

ಕಥನಗಾರ-2 ಆದರೆ ಏನೋ ಎಲ್ಲೋ ವ್ಯತ್ಯಾಸ . . .

ಕಥನಗಾರ-1 ಸ್ವಲ್ಪ ಸ್ವಲ್ಪವಾಗಿ ಏನೋ ಬದಲಾವಣೆ . . .

ಕಥನಗಾರ–2 ಆ ಬದಲಾವಣೆ ಗುರುತಿಸಿದ ಮೊದಲನೇ ವ್ಯಕ್ತಿ ಜೇಕ್.

ಕಥನಗಾರ–1 ಪ್ರತಿನಿತ್ಯದಂತೆ ಈ ದಿನ ಇಲ್ಲ ಅಂತ ಅರಿಯುತ್ತಾನೆ.

ಕಥನಗಾರ–2 ಅದನ್ನು ಕಂಡುಹಿಡೀಬೇಕು ಅಂತ ತೀರ್ಮಾನ ಮಾಡ್ತಾನೆ.

(ಜೇಕ್, ಸಾದಿಯ ಪ್ರವೇಶ. ಜೇಕ್ ಕೈಯಲ್ಲಿ ಸಿಹಿತಿಂಡಿಯ ಚೀಲ)

ಜೇಕ್ ಏನೋ ವಿಚಿತ್ರ ನಡೀತಾ ಇದೆ. ಏನೂ ಅಂತ ಗೊತ್ತಾಗ್ತಿಲ್ಲ.

ಸಾದಿಯ ನಿನಗೆ ವಯಸ್ಸಾಯ್ತು ಬಿಡು, ಜೇಕ್. ಅದನ್ನ ತಿಳ್ಕೊಳ್ಳೋ ಹೊತ್ತಿಗೆ ನಿನ್ನ ತಲೆ ಅಪ್ಪನ ಥರಾ ಬೋಳಾಗಿರುತ್ತೆ.

ಜೇಕ್ ಸ್ವಲ್ಪ ಗಂಭೀರವಾಗಿರ್ತೀಯಾ! ನಾನು ಪದಗಳನ್ನೇ ಮರೆತುಹೋಗ್ತಿದ್ದೀನಿ... ಕ್ಲಿಷ್ಟ ಪದಗಳನ್ನಷ್ಟೇ ಅಲ್ಲ, ತೀರಾ ಸುಲಭವಾದವನ್ನು ಕೂಡ...

ಸಾದಿಯ ಅಂಥ ಯಾವ ಪದ ಮರೆತು ಹೋಗಿದ್ದೀಯಾ?

ಜೇಕ್ ಇವತ್ತು ಬೆಳಗ್ಗೆ ಅಮ್ಮ ಹಾಲು ಕೊಟ್ಟಾಗ ಅದರೊಳಗೆ ಅದ್ದಿ ನಾವು ತಿಂದ್ವಲ್ಲ ಅದೇನು ಅಂತ ಈಗಲೂ ನೆನಪಿಗೆ ಬರ್‍ತಾ ಇಲ್ಲ.

ಸಾದಿಯ ಸುಮ್ಮನೆ ಯೋಚನೆ ಮಾಡಬೇಡ. ಎಲ್ಲಾ ನೆನಪಾಗುತ್ತೆ.

ಜೇಕ್ ಆದರೆ ಹೀಗಾಗ್ತಾ ಇರೋದು ನನಗೊಬ್ಬನಿಗೆ ಮಾತ್ರ ಅಲ್ಲ; ಬಹಳ ಜನಕ್ಕೆ ಆಗ್ತಾ ಇದೆ.

ಸಾದಿಯ ನನಗಾಗ್ತಿಲ್ವಲ್ಲಾ?!

ಜೇಕ್ ಅಮ್ಮ . . . ಅಮ್ಮ ಕೂಡ ಮರೀತಾ ಇದ್ದಾರೆ ಪದಗಳನ್ನ.

ಸಾದಿಯ ಅವರು ಯಾವಾಗಲೂ ಎಲ್ಲಾನೂ ಮರೀತಾರೆ.

ಜೇಕ್ ಆ ಥರಾ ಅಲ್ಲಾ. ನನಗೆ ಅನ್ಸುತ್ತೆ, ಎಲ್ಲರೂ ಕೆಲವು ಪದಗಳನ್ನು ಕಳ್ಕೊಳ್ತಿದಾರೆ ಅಂತ.

ಸಾದಿಯ ನಿನಗೇನಾದರೂ ಹುಚ್ಚಾ?!

ಜೇಕ್ ಸರಿ, ಹಾಗಾದರೇ ಹೇಳು. ಬೆಳಗ್ಗೆ ಹಾಲಲ್ಲಿ ಅದ್ದಿ ತಿಂದಿದ್ದು ಏನು?

ಸಾದಿಯ ಹ್ಞೂಂ . . . ?!?!

ಜೇಕ್ ನೀನು ಸ್ಪರ್ಧೆಯಲ್ಲಿ ಮೊದಲು ಬಂದರೆ ನಿನಗೆ ಏನು ಕೊಡ್ತಾರೆ?

ಸಾದಿಯ ಹ್ಞೂಂ . . . ?!?!

ಜೇಕ್ ಹೋಗಲಿ. ನಾನು ಏನು ಮಾಡ್ತಾ ಇದ್ದೀನಿ ಹೇಳು? (ಜೇಕ್ ಕುಂಟುತ್ತಾನೆ)

ಸಾದಿಯ ತೂಗಡಿಸ್ತಾ ಇದ್ದೀಯಾ . . .

ಜೇಕ್ (ಕಟುವಾಗಿ) ನೋಡಿದ್ಯಾ!?

ಸಾದಿಯ ಅಂಥದ್ದು ಏನೂ ಆಗ್ತಾ ಇಲ್ಲ. ಸುಮ್ಮನೆ ಚಿಂತೆ ಮಾಡಬೇಡ. ಈಗ ನನಗೆ ಅದೊಂದು ಕೊಡು.

ಜೇಕ್ ಅದು . . . ಏನು?

ಸಾದಿಯ ನಿನ್ನ ಕೈಲಿದೆಯಲ್ಲಾ ಅದು?

ಜೇಕ್ ಅದೂ . . .?! (ನಗುತ್ತಾ) ಪದ ನೆನಪು ಬರ್ತಾ ಇಲ್ವಾ?!

(ಸಾದಿಯ ಜೇಕ್‌ನನ್ನು ಹಿಡಿಯಲು ಅವನ ಬೆನ್ನಟ್ಟುತ್ತಾಳೆ. ವೇದಿಕೆಯಿಂದ ನಿರ್ಗಮನ)

ಸಾದಿಯ ಒಂದೇ ಒಂದು ಕೊಡು.

ಜೇಕ್ ಏನೂ ಅಂತ ಹೇಳೋವರ್ಗೂ ಕೊಡೋಲ್ಲ.

(ಪ್ರೊಫೆಸರ್ ಪ್ರವೇಶ. ಜೇಕ್ ನೋಡದೆ ಅವರಿಗೆ ಡಿಕ್ಕಿ ಹೊಡೆಯುತ್ತಾನೆ.)

ಜೇಕ್ ಕ್ಷಮಿಸಿ. (ಜೇಕ್ ಪ್ರೊಫೆಸರ್ ಕಡೆ ತಿರುಗಿ ನೋಡಿ) ಪ್ರೊಫೆಸರ್ ನೀವಿಲ್ಲಿ?! ಏನು ಮಾಡ್ತಾ ಇದ್ದೀರಾ?

ಪ್ರೊಫೆಸರ್ ಏನಾಶ್ಚರ್ಯ ಜೇಕ್. ನಿನ್ನ, ಸಾದಿಯಾನ ನೋಡಿ ತುಂಬಾ ಖುಷಿ ಆಯ್ತು.

ಸಾದಿಯ ಏನೋ ಅವಸರದಲ್ಲಿದ್ದ ಹಾಗೆ ಕಾಣಸ್ತಿದೀರಾ?

ಪ್ರೊಫೆಸರ್ ಹೌದು ಪುಟ್ಟ, ನಾನು ಯಾಕೆ ಬಂದೆ ಅಂದ್ರೆ . . . ಅಯ್ಯೋ! ಅದನ್ನ ಏನಂತಾರೆ? . . . ಅದೇ ಯಂತ್ರಕ್ಕೆ ಬೇಕಾಗಿರೋದು . . . ಹೋಗಲಿಬಿಡಿ. ಏನಾದರೂ ಆಗಿರ್ಲಿ. ಅದನ್ನ ತಗೊಳ್ಳೋಣ ಅಂತ ಅಂಗಡಿಗೆ ಬಂದೆ.

ಜೇಕ್ ಯಂತ್ರ ಕೆಲಸ ಮಾಡ್ತಾ ಇದೆಯಾ?

ಪ್ರೊಫೆಸರ್ ಇನ್ನೂ ಇಲ್ಲ. ಹಾಳಾಗಿದ್ದು ಹಾಗೇ ಇದೆ. ಅವಳು ಯಾವ ಹೊಸ ಪದಾನೂ ಉತ್ಪತ್ತಿ ಮಾಡಿಲ್ಲ. ಹಾಗೇ ಅಕ್ಷರಗಳನ್ನ ಗುರ್ತಿಸೋದನ್ನೂ ಮರೆತುಹೋಗಿದ್ದಾಳೆ.

ಸಾದಿಯ ಹಾಗಾದ್ರೆ ಏನು ಮಾಡ್ತೀರಾ?

ಪ್ರೊಫೆಸರ್ ಇನ್ನೇನು ಮಾಡೋದು. . . ಸರಿ ಮಾಡ್ಬೇಕು. ಅದಕ್ಕಿಂತ ಮೊದಲು ಹೊಟ್ಟೆಗೆ ಹಸಿವಾಗಿದೆ, ಮೊದಲು ಅದನ್ನ ತಗೋಬೇಕು . . . ಏನಂತಾರಪ್ಪ ಅದನ್ನ . . . ಅದೇ ಹಾಲಲ್ಲಿ ಅದ್ದಿ ತಿಂತಾರಲ್ಲ, ಅದು. ಆಯ್ತು ಬಿಡಿ, ನಾನು ಮೊದಲು ಇಲ್ಲಿಂದ ಹೊರಡ್ತೀನಿ.

(ಪ್ರೊಫೆಸರ್ ಅವಸರವಾಗಿ ನಿರ್ಗಮಿಸುವರು)

ಸಾದಿಯ ಮತ್ತೆ ಅದನ್ನೇ ಹೇಳಬೇಡ.

ಜೇಕ್ ನಾನು ನಿನಗೆ ಹೇಳಲಿಲ್ವಾ?!

ಸಾದಿಯ ಸರಿ ಬಿಡು.

ಜೇಕ್ ನಿಜವಾಗಲೂ ಏನೋ ಆಗ್ತಾ ಇದೆ.

(ಜೇಕ್ ಸಾದಿಯ ನಿರ್ಗಮನ)

ಕಥನಗಾರ–2 ಅವನ ಯೋಚನೆ ಸರಿಯಾಗಿತ್ತು.

(ಬೇರೆ ಬೇರೆ ಜನರು ಪದಗಳನ್ನು ಕಳೆದುಕೊಳ್ಳುತ್ತಿರುವ ಭಾವಚಿತ್ರಗಳು ಹಾಗೂ ಮಧ್ಯೆ ವಾರ್ತೆಯ ಘೋಷಣೆ . . . ಹೀಗೆ ಒಂದೊಂದು ಸ್ತಬ್ಧಚಿತ್ರದ ದೃಶ್ಯವು ಹಿಂದು ಮುಂದು ಚಲಿಸುವುದು. ವರದಿಗಾರ್ತಿ ಮತ್ತು ರಾಜ ಪ್ರವೇಶಿಸಿ ತಮ್ಮ ಸ್ಥಾನದಲ್ಲಿ ನಿಲ್ಲುವರು)

ಕಥನಗಾರ–1 ಶೀಘ್ರವೇ, ಪದಗಳು ಮಾಯವಾಗುತ್ತಿರುವುದನ್ನು ಯಾರೂ ಅಲ್ಲಗಳೆಯುವಂತಿಲ್ಲ.

ವರದಿಗಾತಿ ಇದೀಗ ತಾನೇ ಬಂದ ಸುದ್ದಿ, ಪದಗಳು ಮಾಯವಾಗುತ್ತಿರುವುದನ್ನು ಯಾರೂ ಅಲ್ಲಗಳೆಯುವಂತಿಲ್ಲ.

(ವರದಿಗಾರ್ತಿ ತನ್ನ ಮಾತನ್ನು ನಕಲು ಮಾಡಿದ್ದು ಕಥನಗಾರನಿಗೆ ತಿಳಿಯುತ್ತೆ. ವರದಿಗಾತಿ ನಾಜೂಕಾಗಿ ಕಾಣುತ್ತಾಳೆ, ಕಥೆಗಾರ ಜಬ್ಬರಿಸುತ್ತಾನೆ)

ಇವತ್ತು ನಮ್ಮ ಕಾರ್ಯಾಲಯದಲ್ಲಿ ನಮ್ಮೊಂದಿಗೆ ಮಹಾರಾಜರು ಇದ್ದಾರೆ. ಪ್ರಭುಗಳೇ, ನಮ್ಮೊಂದಿಗೆ ಮಾತನಾಡಲು ಇಲ್ಲಿಗೆ ಬಂದದ್ದಕ್ಕೆ ಧನ್ಯವಾದಗಳು.

ರಾಜ ಇಂಥಹ ಸಮಯದಲ್ಲಿ ನಾನು ಜನರನ್ನು ಉದ್ದೇಶಿಸಿ ಮಾತನಾಡಲೇಬೇಕು.

ವರದಿಗಾರ್ತಿ ಪ್ರಭುಗಳೇ, ಪದಗಳು ಏನಾಗುತ್ತಿವೆ ಎಂಬುದರ ಬಗ್ಗೆ ನಮಗೆ ಮಾಹಿತಿ ನೀಡುವಿರಾ?

ರಾಜ ಖಂಡಿತ, ನಮ್ಮ ರಾಜ್ಯದ ಹಲವು ಜನ ಮುಂಚಿನಂತೆ ಮಾತನಾಡಲು ಆಗದೆ ಕಷ್ಟಪಡ್ತಿದಾರೆ. ಕೆಲವು ಪದಗಳು ನೆನಪಿಗೆ ಬರ್ತಿಲ್ಲ; ಉಚ್ಚರಿಸಲಾಗ್ತಿಲ್ಲ. ನಾನು ಎಲ್ರಲ್ಲೂ ವಿನಂತಿಸಿಕೊಳ್ಳೋದು ಏನಂದ್ರೆ- ಶಾಂತವಾಗಿರಿ, ಮುಂಚಿನಂತೆ ಸಾಮಾನ್ಯವಾಗಿರಿ, ಚಿಂತಿಸಬೇಡಿ. ನಾನು ಹಾಗೂ ನನ್ನ ಸೈನಿಕರು ಸೇರಿ ಈ ರಹಸ್ಯಾನ ಆದಷ್ಟು ಬೇಗ ಬೇಧಿಸುತ್ತೇವೆ ಅಂತ ಭರವಸೆ ನೀಡುತ್ತೇನೆ.

ವರದಿಗಾರ್ತಿ ಪ್ರಭುಗಳಿಗೆ ಧನ್ಯವಾದಗಳು.

(ವರದಿಗಾರ ಮತ್ತು ರಾಜ ಸ್ತಬ್ದರಾಗುತ್ತಾರೆ.)

ಕಥನಗಾರ-1 ಆದರೆ ಅದು ಅಷ್ಟು ಸುಲಭವಾಗಿರಲಿಲ್ಲ.

ಕಥನಗಾರ-2 ಪದಗಳು ಮಾಯವಾಗುತ್ತಿರುವುದು ಬೇರೆ ಬೇರೆ ಸಮಸ್ಯೆಗಳಿಗೂ ಕಾರಣವಾಯಿತು.

(ಕಥನಗಾರರು ವೇದಿಕೆಯ ಬದಿಯಲ್ಲಿ ನಿಂತು ಅಭಿನಯವನ್ನು ನೋಡುವರು.)

(ಮೂರು ದೃಶ್ಯಗಳ ಚಿತ್ರಗಳು : 1. ಪೋಷಕರು, 2. ಕಳ್ಳರು ಮತ್ತು 3. ಅಜ್ಜಿಯರು. ತಂದೆ-ತಾಯಿ, ಖಜಾಂಚಿ ಮತ್ತು ಅಜ್ಜಿಯರು ಪ್ರವೇಶಿಸಿ ಅವರವರ ಸ್ಥಾನದಲ್ಲಿ ನಿಲ್ಲುವರು. ನ್ಯಾಯಾಧೀಶರು, ನ್ಯಾಯವಾದಿಗಳು, ಜೇಕ್ ಮತ್ತು ಸಾದಿಯ ಕೂಡ ಪ್ರವೇಶಿಸಿ ನಂತರ ಬರುವ ದೃಶ್ಯದ ಭಾಗದಲ್ಲಿ ಅವರವರ ಸ್ಥಾನದಲ್ಲಿ ನಿಲ್ಲುವರು ಹಾಗೂ ಎಲ್ಲರೂ ಸ್ತಬ್ದರಾಗುವರು.)

(ಗಂಡ ಒಂದು ನಕ್ಷೆ ಹಿಡಿದುಕೊಂಡು ಹೆಂಡತಿಯ ಜೊತೆ ನಡೆಯುತ್ತಿದ್ದಾನೆ.)

ತಾಯಿ ನಾವು ಸುಮ್ಮನೆ ಸುತ್ತಾಡ್ತಾ ಇದ್ದೀವಿ ಅನ್ಸುತ್ತೆ.

ತಂದೆ ನನಗೂ ಹಾಗೆ ಅನ್ನಿಸ್ತಿದೆ.

ತಾಯಿ ಎರಡು ಗಂಟೆ ಕಾಲ ನಡೆದಿದ್ದೀವಿ ನಾವು . . . ಯಾವ ಪದ ಅದು?

ತಂದೆ ಇಲ್ಲ. ನಾವು ಸರಿಯಾದ ಸ್ಥಳಕ್ಕೆ ಬಂದಿಲ್ಲ. ನಾವು ಎಲ್ಲಿದ್ದೀವಿ ಅಂತ ನನಗೆ ಸರಿಯಾಗಿ ಗೊತ್ತಿದೆ. (ನಕ್ಷೆಯಲ್ಲಿ ದೃಷ್ಟಿ ಇಟ್ಟು ನೋಡುತ್ತಾನೆ)

ಇಲ್ಲಿಂದ ನೇರವಾಗಿ ಹೋಗಿ ಆಮೇಲೆ ಅಲ್ಲಿ ... ಹ್ಞಾ! ಮತ್ತೆ . . . ತಿರುಗಬೇಕು.

ತಾಯಿ ಎಲ್ಲಿ ತಿರುವು ತಗೋಬೇಕು?

ತಂದೆ ಹ್ಞೂಂ . . . ಆದಮೇಲೆ . . . ಏನಂಥಾರೇ ಅದನ್ನ . . .?

ತಾಯಿ ಬಲಕ್ಕೋ ಅಥವಾ . . . ಇನ್ನೊಂದು . . . ?!

ತಂದೆ ಹ್ಞಾ, ಇನ್ನೊಂದೇ. ಬಲಕ್ಕಲ್ಲ. ಇನ್ನೊಂದು ಕಡೆ.

ತಾಯಿ ನನಗೆ ಅನಿಸುತ್ತೆ ಅದು . . . ಆಮೇಲೆ ಇದೆ ಅಂತ.

ತಂದೆ ಯಾವುದಾದ ಮೇಲೆ?

ತಾಯಿ ಅದು . . . ನಿಮಗೂ ಗೊತ್ತು . . . ಅದು . . . ಏನದು?

ತಂದೆ ಹಾಂ! ಏನದೂನಾ! ಸುಮ್ಮನೆ . . . ಅದನ್ನ ಹುಡುಕಿದರೆ ನಮಗೆ ಅನುಕೂಲ ಆಗುತ್ತೆ.

ತಾಯಿ ಅದನ್ನ ಅಂದ್ರೆ?

ತಂದೆ ಅದು . . .

ತಾಯಿ ಇದು ನಿಜವಾಗಲೂ ಹಾಸ್ಯಾಸ್ಪದ. ಮೊದಲು ಯಾರನ್ನಾದರೂ ಅದು ಎಲ್ಲಿ ಅಂತ ಕೇಳೋಣ.

ತಂದೆ ಬೇಕಾಗಿಲ್ಲ! ನಾವು ಎಲ್ಲಿಗೆ ಹೋಗ್ತಾ ಇದ್ದೀವಿ ಅಂಥ ನನಗೆ ಸರಿಯಾಗಿ ಗೊತ್ತಿದೆ.

(ಗಂಡ ಏನೋ ತೀರ್ಮಾನ ಮಾಡಿರುವವನಂತೆ ಒಂದು ದಿಕ್ಕಿನಲ್ಲಿ ನಡೆಯುತ್ತಾನೆ. ಕೆಲವು ಹೆಜ್ಜೆಗಳನ್ನ ಹಾಕಿದ ನಂತರ ತನ್ನ ತಪ್ಪಿನ ಅರಿವಾಗಿ ವಿರುದ್ಧ ದಿಕ್ಕಿನಲ್ಲಿ ನಡೆಯುತ್ತಾನೆ. ಹೆಂಡತಿ ಸುಮ್ಮನೇ ಅವನನ್ನು ಹಿಂಬಾಲಿಸುತ್ತಾಳೆ. ಇಬ್ಬರ ನಿರ್ಗಮನ.)

ಕಥನಗಾರ–1 ದುಷ್ಟ ಜನರಿಗೂ ಸಹ ಜೀವನ ಕಷ್ಟ ಆಗಿತ್ತು.

(ಖಜಾಂಚಿ ಮಿಸುಕಿ ತನ್ನೊಳಗೇ ಗುಸುಗಿಕೊಳ್ಳುತ್ತಾ ಹಣವನ್ನು ಎಣಿಸುತ್ತಿರುವಳು. ಕಳ್ಳರ ಪ್ರವೇಶ)

ಕಳ್ಳ–1 ಏಯ್ ನಿಂತ್ಕೋ . . .

(ಖಜಾಂಚಿ ಕಿರುಚುವಳು)

ಕಳ್ಳ-2 ಕೈ ಮೇಲೆತ್ತು . . .

(ಖಜಾಂಚಿ ಕೈ ಮೇಲೆತ್ತುವಳು. ವಿರುದ್ಧ ದಿಕ್ಕಿನಿಂದ ಪೊಲಿಸರ ಆಗಮನ)

ಪೊಲಿಸ್-1 ಏಯ್ ನಿಲ್ಲಿಸು!

(ಖಜಾಂಚಿ ಮತ್ತೆ ಕಿರುಚುವಳು)

ಪೊಲಿಸ್-2 (ಕಳ್ಳರಿಗೆ) ಕೈನ ತಲೆಯ ಹಿಂದೆ ಕಟ್ಟು. (ಖಜಾಂಚಿ ಕೈಯನ್ನು ತಲೆ ಹಿಂದೆ ಕಟ್ಟುವಳು.)

ಕಳ್ಳ-2 (ಪೊಲಿಸರಿಗೆ) ಮೇಲೆ?

(ಖಜಾಂಚಿ ಕೈ ಮೇಲೆ ಎತ್ತುವಳು.)

ಪೊಲಿಸ್-2 (ಕಳ್ಳರಿಗೆ) ತಲೆ ಹಿಂದೆ.

(ಖಜಾಂಚಿ ಕೈ ತಲೆ ಹಿಂದೆ ಹಾಕುವಳು.)

ಕಳ್ಳ-2 (ಪೋಲಿಸರಿಗೆ) ಮೇಲೆ?

(ಖಜಾಂಚಿ ಕೈ ಮೇಲೆ ಎತ್ತಿ ಕೋಪದಿಂದ ಕಿರುಚುವಳು.)

ಪೊಲಿಸ್-1 (ಖಜಾಂಚಿಗೆ) ಅವರ ಮಾತನ್ನು ಕೇಳಬೇಡಿ. ನೀವು . . . ಏನು ಪದ ಅದು?

ಕಳ್ಳ-1 ಗಾಬರಿಯಿಂದ ಇರಿ?

ಕಳ್ಳ-2 ದುರ್ಬಲರಾಗಿರಿ?

ಪೊಲಿಸ್-2 ಭಯಪಡದೇ ಇರಿ?

ಪೊಲಿಸ್-1 ಅದು ಸರಿ. ನೀವು ಭಯಪಡಬೇಡಿ.

ಕಳ್ಳ-1 ಬೇಗ ಕೊಡು. ನಿಮ್ಮ ಹತ್ತಿರ ಇರೋ . . .

ಪೊಲಿಸ್-1 ಆಸಕ್ತಿ?

ಪೊಲಿಸ್-2 ಏಕಾಗ್ರತೆ?

ಕಳ್ಳ-2 ಹಣ?

ಕಳ್ಳ-1 ಹ್ವಾ! ಅದು ನಿಮ್ಮ ಹತ್ತಿರ ಇರೋ ಹಣ. ಒಡವೆ ಎಲ್ಲಾ ಕೊಡು.

ಪೊಲಿಸ್-2 ಬೇಡ ಮೇಡಂ. ನಾವು . . .

ಪೊಲಿಸ್-1 ನಾವು ಹೇಳೋದನ್ನ ಕೇಳಿ.

ಪೊಲಿಸ್-2 ಹೌದು, ನಾವು ಹೇಳೋದನ್ನ ಕೇಳಿ.

ಕಳ್ಳ-1 ಇಲ್ಲ, ನಾವು ಹೇಳೋದನ್ನ ಕೇಳಿ.

ಪೊಲಿಸ್-1 ನಾವು ಹೇಳೋದು.

ಕಳ್ಳ-2 ನಾವು ಹೇಳೋದು.

ಪೊಲಿಸ್-2 ನಮ್ಮ ಮಾತು.

ಕಳ್ಳ-1 ನಾವು ಹೇಳಿದ ಹಾಗೆ ಮಾಡು.

ಖಜಾಂಚಿ ನನಗೆ ಏನೂ ಅರ್ಥ ಆಗ್ತಿಲ್ಲ.

(ಕಳ್ಳರು, ಪೊಲಿಸರು ಮತ್ತು ಖಜಾಂಚಿ ಸ್ತಬ್ಧರಾಗುತ್ತಾರೆ.) (ಅಜ್ಜಿಯರು ಚಲಿಸುವರು)

ಅಜ್ಜಿ-1 ಅದೇನೇನು ಮಾಡ್ತಾ ಇದ್ದಾರೋ ಈ ಜನ, ನನಗೇನು ಅರ್ಥ ಆಗ್ತಾ ಇಲ್ಲ.

ಅಜ್ಜಿ-2 ನನಗೂ ಅಷ್ಟೇ, ನಾನು ಯಾವ ಪದಾನೂ ಕಳ್ಕೊಂಡಿಲ್ಲ.

ಅಜ್ಜಿ-1 (ಮೌನ) ನಾನೂ ಯಾವುದನ್ನೂ ಕಳ್ಕೊಂಡಿಲ್ಲ. ನನಗೆ ಸ್ವಲ್ಪ ನಿನ್ನ ಮೆಣಸಿನ್ನುಜೀರಿಪುಡಿ ಕೊಡು.

ಅಜ್ಜಿ-2 ಓಹೋ ಆಗಬಹುದು. ಅದಕ್ಕಿಂತ ಮುಂಚೆ ಕಾಲಾಡುದ್ಯಾನಕ್ಕೆ ಹೋಗೋಣ್ವಾ?

ಅಜ್ಜಿ-1 ಸರಿ ಸರಿ.

(ಅಜ್ಜಿಯರು ಸ್ತಬ್ಧರಾಗುತ್ತಾರೆ)

ಕಥನಗಾರ-1 ಪರಿಸ್ಥಿತಿ ಇನ್ನೂ ಹದಗೆಡ್ತಾ ಇದೆ. (ವರದಿಗಾರ್ತಿ, ರಾಜ ಚಲಿಸುವರು)

ವರದಿಗಾರ್ತಿ ಬಿಸಿ ಬಿಸಿ ಸುದ್ದಿ; ಪರಿಸ್ಥಿತಿ ಇನ್ನೂ ಹದಗೆಡ್ತಾ ಇದೆ.

(ವರದಿಗಾರ್ತಿ ಮತ್ತೆ ಮಾತುಗಳನ್ನು ನಕಲು ಮಾಡಿದ್ದಕ್ಕೆ ವರದಿಗಾರ್ತಿಯ ಮೇಲೆ ಕಥನಗಾರನಿಗೆ ಕೋಪ ಬರುತ್ತದೆ)

ಕಥನಗಾರ-1 ಅವಳು ಯಾವಾಗಲೂ ಹೀಗೇ ಮಾಡ್ತಾಳೆ.

ವರದಿಗಾರ್ತಿ ಪ್ರಭುಗಳೇ, ಜನರು ಹೆಚ್ಚು ಹೆಚ್ಚು ಪದಗಳನ್ನು ಮರೀತಾ ಇದ್ದಾರೆ. ನಾಡಿನ ಜನತೆಗೆ ನೀವು ಏನು ಹೇಳ್ತೀರಾ?

ರಾಜ ನಾನು ಸತ್ಯ ಹೇಳ್ತಾ ಇದ್ದೀನಿ. ಈ ಸಮಸ್ಯೆ ಬಗೆಹರಿಸೋದಕ್ಕೆ ನನ್ನ ಕೈಯಲ್ಲಿ ಏನೇನು ಸಾಧ್ಯವೋ ಅದನ್ನೆಲ್ಲಾ ಮಾಡ್ತಾ ಇದ್ದೀನಿ. ಇದಕ್ಕೆ ಪರಿಹಾರ ಕಂಡುಹಿಡಿಯುವವರೆಗೂ ನಾನು ಸುಮ್ಮನಿರೋಲ್ಲ, ಪ್ರತಿಯೊಂದಕ್ಕೂ ಅಂತ್ಯ ಇದ್ದೇ ಇರುತ್ತೆ.

(ವರದಿಗಾರ್ತಿ, ರಾಜ ಸ್ತಬ್ಧರಾಗುತ್ತಾರೆ. ಜೇಕ್ ಮತ್ತು ಸಾದಿಯ ಚಲಿಸುವರು. ತಂದೆ, ತಾಯಿ ಸುಸ್ತಾಗಿ ಪ್ರವೇಶಿಸುವರು)

ಜೇಕ್ ಎಲ್ಲಿಗೆ?

ಸಾದಿಯ ತುಂಬಾ ಹೊತ್ತಾಗಿದೆ.

ತಾಯಿ ಷ್ಟೂ . . .

ತಂದೆ ನೀನೇ ತಪ್ಪಾಗಿ ಹೇಳಿದ್ದು. ಅಲ್ಲಿ . . . ಆಮೇಲೆ . . . ಸೇತುವೆ

ತಾಯಿ ನೀವೇ . . . ನಕ್ಷೆ . . .

ತಂದೆ ಇಲ್ಲ . . . ನೀನು . . .

(ಜೇಕ್, ಸಾದಿಯಾಗೆ ಏನೋ ವಾಸನೆ ಬರುತ್ತದೆ)

ಜೇಕ್ ಏನು ವಾಸನೆ?!

ತಾಯಿ ಅಪ್ಪ ಬಿದ್ದರು . . .

ತಂದೆ ಸಗಣಿ ಮೇಲೆ . . .

ಸಾದಿಯ ಥೂ . . .

(ಜೇಕ್ ಮತ್ತು ಸಾದಿಯ ನಗುವರು. ತಂದೆ, ತಾಯಿಗೆ ಅದು ತಮಾಷೆಯಾಗಿ ಕಾಣುವುದಿಲ್ಲ. ಎಲ್ಲರೂ ಸ್ತಬ್ಧರಾಗುವರು. ಖಜಾಂಜಿ, ಕಳ್ಳರು, ಪೊಲಿಸಿನವರೆಲ್ಲ ನ್ಯಾಯಮೂರ್ತಿ ಮತ್ತು ನ್ಯಾಯವಾದಿಗಳ ಬಳಿ ಹೋಗಿ ತಮ್ಮ ತಮ್ಮ ಸ್ಥಳದಲ್ಲಿ ನಿಂತು ನ್ಯಾಯಾಲಯದ ಕೋಣೆ ರಚಿಸುವರು.)

ನ್ಯಾಯಾಧೀಶ ನ್ಯಾಯವಾದಿಗಳೇ, ಪ್ರತಿವಾದಿಗಳು ಯಾರು? ಯಾರಾದ್ರೂ ಇದಾರಾ ಅಥವಾ . . . ಯಾರೂ ಇಲ್ವಾ?

ನ್ಯಾಯವಾದಿ ಹ್ಞಾ ಅದು . . . ಕ್ಷಮಿಸಬೇಕು ಸ್ವಾಮಿ?

ನ್ಯಾಯಾಧೀಶ ಮೊದಲು ಪ್ರತಿವಾದಿಗಳನ್ನ ಹುಡುಕಿ . . . ಅಥವಾ . . . ಇಲ್ಲಾ...?

ನ್ಯಾಯವಾದಿ ಸಿಕ್ಕಿದ್ದಾರೆ . . . ಆ . . .

ನ್ಯಾಯಾಧೀಶ ಆ . . . ?!

ನ್ಯಾಯವಾದಿ ಹೌದು?

ನ್ಯಾಯಾಧೀಶ ಇಲ್ಲ . . . ?

ನ್ಯಾಯವಾದಿ ಆ . . . ?

ಕಳ್ಳರು (ಒಬ್ಬರನ್ನೊಬ್ಬರು ನೋಡುವರು) ಆ . . . ?!

(ಎಲ್ಲಾ ಸ್ತಬ್ದರಾಗುವರು. ನಂತರ ಅಜ್ಜಿಯರು ಮಾತ್ರ ಚಲಿಸುವರು)

ಅಜ್ಜಿ–1 ಇಲ್ಲಿ ಕೇಳು . . .

ಅಜ್ಜಿ–2 ಏನು?!

ಅಜ್ಜಿ–1 ಪದಗಳು . . . ಮರೆತು ಹೋಗ್ತಿವೆ . . .

ಅಜ್ಜಿ–2 ಹ್ಞೂ ಹೌದು.

ಅಜ್ಜಿ–1 (ಡಬ್ಬ ತೋರಿಸಿ) ಕೊಬ್ಬರಿ ಮಿಠಾಯಿ?

ಅಜ್ಜಿ–2 ಕೊಡು. (ಅಜ್ಜಿಯರು ಸ್ತಬ್ದ)

ಕಥನಗಾರ–1 ಶೀಘ್ರದಲ್ಲೇ ಬಹುತೇಕ ಪದಗಳು ಮಾಯವಾಗಿಬಿಡುತ್ತವೆ.

(ವರದಿಗಾರ್ತಿ ರಾಜ ಚಲಿಸುವರು)

ವರದಿಗಾರ್ತಿ ಬಹು . . . ಎಲ್ಲಾ . . . ಪದಗಳು . . . ಮಾಯಾ . . .

(ವರದಿಗಾರ್ತಿ ಮಾತುಗಳನ್ನು ನಕಲು ಮಾಡಲು ಸಾಧ್ಯವಾಗದೇ ಇರುವುದನ್ನು ನೋಡಿ ಕಥನಗಾರ ನಗುವನು)

ಕಥನಗಾರ–1 ಈಗ ಎಲ್ಲಾ ಹೋಯಿತು . . . ಆ ಚುರುಕುತನ?

ವರದಿಗಾರ್ತಿ ಈಗ . . . ಭಾಷಣ . . . ರಾಜ . . .

ರಾಜ ಎಲ್ಲರೂ ಪ್ರತಿನಿತ್ಯದಂತೆ ಮಲಗುವ ಮುನ್ನ ಪದಗಳನ್ನ ಅಭ್ಯಾಸ ಮಾಡಿ. ಹಾಗೆಯೇ ಎಷ್ಟು ಸಾಧ್ಯವೋ ಅಷ್ಟನ್ನು ಕಂಠಪಾಠ ಮಾಡಿ. ಹಾಗಾದರೆ ಮಾತ್ರ ಮನಸ್ಸಿನಲ್ಲಿ ಉಳಿಯುತ್ತೆ. ನೋಡೋಣ. ಹೀಗೆ ಮಾಡುವುದರಿಂದಲಾದರೂ ನಮ್ಮ ಪದಗಳು ಮತ್ತೆ ಬರುತ್ತವೇನೋ?

(ವರದಿಗಾರ್ತಿ, ರಾಜ ಸ್ತಬ್ದರಾಗುತ್ತಾರೆ)

ಕಥನಗಾರ–1	ಹಾಗೇ ಮಾಡ್ತಿರೋದು . . .
ಕಥನಗಾರ–2	ಎಲ್ಲರೂ ಪದಗಳನ್ನ ಪ್ರತಿದಿನ ಅಭ್ಯಾಸ ಮಾಡ್ತಾರೆ . . .
	(ಕಥನಗಾರ, ವರದಿಗಾರ್ತಿ ಹಾಗೂ ರಾಜರನ್ನು ಹೊರತುಪಡಿಸಿ ಉಳಿದ ಎಲ್ಲರೂ ವೇದಿಕೆಯ ಮೇಲೆ ವೀಕ್ಷಕರಿಗೆ ಮುಖಮಾಡಿ ಅಡ್ಡಸಾಲಲ್ಲಿ ನಿಲ್ಲುತ್ತಾರೆ)
ತಾಯಿ	ಸುಸ್ತು
ತಂದೆ	ವಾಸನೆ
ಕಳ್ಳ–1	ಒಡವೆ
ಕಳ್ಳ–2	ಕಳ್ಳ
ಖಜಾಂಚಿ	ಹಣ
ಪೊಲಿಸ್–1	ಪೊಲಿಸ್
ಪೊಲಿಸ್–2	ಠಾಣೆ
ಪೊಲಿಸ್–1	ಬೇಡಿ
ಅಜ್ಜಿ–1	ಊರುಗೋಲು
ಅಜ್ಜಿ–2	ಕೊಬ್ಬರಿಮಿಠಾಯಿ
ಅಜ್ಜಿ–1	ಕನ್ನಡಕ
ಅಜ್ಜಿ–2	ಉದ್ಯಾನ
ಜೇಕ್	ಏನೋ . . .
ಸಾದಿಯ	ಕಾಣೆ . . .
ಜೇಕ್	ಪದಗಳು
ತಾಯಿ	ಹಾಸಿಗೆ
ಕಳ್ಳ–1	ಕಿಂಡಿ
ಪೊಲಿಸ್–2	ತೂಕಡಿಸು
ಖಜಾಂಚಿ	ಅಲ್ಪನಿದ್ರೆ

ಅಜ್ಜಿ–1 ಸುಧಾರಿಸು

ಅಜ್ಜಿ–2 ಆಕಳಿಸು

ಎಲ್ಲರೂ ನಿದ್ದೆ

(ವರದಿಗಾರ್ತಿ ಮತ್ತು ರಾಜರ ನಿರ್ಗಮನ. ಜೇಕ್, ಸಾದಿಯ ಆಕಳಿಸುತ್ತಾ ಅಲ್ಲೇ ಕೆಳಗೆ ಮಲಗುವರು. ಕಥನಗಾರನನ್ನು ಬಿಟ್ಟು ಉಳಿದವರು ಆಕಳಿಸುತ್ತಾ ನಿರ್ಗಮಿಸುವರು. ಜೇಕ್ ತಲೆಯನ್ನು ಎತ್ತಿ)

ಜೇಕ್ ಏ . . . ಏ . . . ಸಾದಿಯಾ!

ಸಾದಿಯ ಏನು?

ಜೇಕ್ ಎದ್ದಿದ್ದೀಯಾ?

ಸಾದಿಯ ಇಲ್ಲ!

ಜೇಕ್ ಸಾದಿಯಾ . . . ಕೇಳಿಸ್ಕೋ . . . ನನಗೆ ಗೊತ್ತು . . . ಎಲ್ಲಾ...

ಸಾದಿಯ ಏನು ಗೊತ್ತು?

ಜೇಕ್ ನಾಳೆ . . . ನಾನು . . . ನೋಡೋಣ. ನಿಲ್ಲಿಸಬೇಡ . . . ಹುಡುಕೋಣ . . . ಪದ . . .

ಸಾದಿಯ ಹುಚ್ಚು ನಿನಗೆ?

ಜೇಕ್ ಹೌದು . . . ನೀನು . . . ಸಹಾಯ?

ಸಾದಿಯ ಸಾ . . . ನಿದ್ದೆ ಮಾಡು . . . (ಇಬ್ಬರೂ ಮಲಗುವರು)

ಕಥನಗಾರ–1 ದೀಪಗಳನ್ನು ಆರಿಸಿ ಮಲಗಲು ಹೋದರು.

ಕಥನಗಾರ–2 ಆದರೆ ಅವರು ಮಲಗಿರುವಾಗ . . .

(ಕಾವಲುಗಾರರು ಬಲೆ ಹಿಡಿದುಕೊಂಡು ಪ್ರವೇಶಿಸುವರು. ಜೇಕ್ ಮತ್ತು ಸಾದಿಯ ಮೇಲೆ ಬಲೆಯನ್ನು ಹಾಯಿಸಿಕೊಂಡು ನಿರ್ಗಮಿಸುವರು)

ದೃಶ್ಯ – 4

(ಮರುದಿನ ಬೆಳಗ್ಗೆ)

ಕಥನಗಾರ–1 ಬೆಳಗ್ಗೆ ಮೊದಲ ಕೆಲಸ . . .

ಕಥನಗಾರ–2 ಇನ್ನೂ ಸೂರ್ಯ ಸರಿಯಾಗಿ ಕಾಣ್ತಾ ಇರಲಿಲ್ಲ . . .

ಕಥನಗಾರ–1 ಆಗಲೇ ಜೇಕ್, ಸಾದಿಯ ಇಬ್ಬರೂ ಎದ್ದುಬಿಟ್ಟರು

ಕಥನಗಾರ–2 ಉಡುಪುಗಳನ್ನು ಧರಿಸಿಕೊಂಡರು

ಕಥನಗಾರ–1 ಮನೆಯಿಂದ ಹೊರಬಂದರು.

ಕಥನಗಾರ–2 ರಸ್ತೆಯುದ್ದಕ್ಕೂ ನಡೆದುಕೊಂಡು ಹೋಗಿ . . .

ಕಥನಗಾರ–1 ಪ್ರೊಫೆಸರ್ ಮನೆ ಬಾಗಿಲ ಮುಂದೆ ನಿಲ್ಲುತ್ತಾರೆ.

(ಜೇಕ್ ಮತ್ತು ಸಾದಿಯ ವೇದಿಕೆಯ ಆ ಬದಿಯಿಂದ ಈ ಬದಿಗೆ ಚಲಿಸುವರು)

ಕಥನಗಾರ–2 ಪ್ರೊಫೆಸರ್ ಸಹಾಯ ಮಾಡಬಹುದು ಅಂತ ಅವರು ತಿಳ್ಕೊಂಡಿದ್ದರು.

(ಪ್ರದರ್ಶಕರು ಬಾಗಿಲ ಚೌಕಟ್ಟಿನ ಆಕೃತಿ ಮಾಡುತ್ತಾರೆ, ಯಂತ್ರದ ಭಾಗಗಳು ನೆಲದ ಮೇಲೆ ಚೆಲ್ಲಾಪಿಲ್ಲಿಯಾಗಿವೆ. ಜೇಕ್ ಮತ್ತು ಸಾದಿಯ ನಿಧಾನವಾಗಿ ಬಾಗಿಲನ್ನು ತಳ್ಳುತ್ತಾರೆ)

ಜೇಕ್ ಪ್ರೊಫೆಸರ್?

ಸಾದಿಯ ಹಲೋ?

ಜೇಕ್ ಒಳಗೆ ಇಲ್ವ?

ಸಾದಿಯ ಪ್ರೊಫೆಸರ್?

(ಜೇಕ್ ಮತ್ತು ಸಾದಿಯ ಬಾಗಿಲು ತಳ್ಳಿ ಒಳಗೆ ಹೋಗುವರು. ಅಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿರುವ ಯಂತ್ರವನ್ನು ನೋಡಿ ನಿಟ್ಟುಸಿರು ಬಿಡುತ್ತಾರೆ)

ಜೇಕ್ ಪ್ರೊಫೆಸರ್?!

ಸಾದಿಯ ಏನಾಯಿತು?

ಜೇಕ್ ಹೊರಗೆ ಹೋಗಿರಬೇಕು?

ಸಾದಿಯ	ಯಾಕೆ?
ಜೇಕ್	ಕಳ್ಳರು ಇರಬೇಕು . . . ಪ್ರೊಫೆಸರ್ . . . ಆಸ್ಪತ್ರೆ . . .
ಸಾದಿಯ	ಪ್ರೊಫೆಸರ್ ಕಳ್ಳರಾ!?
ಜೇಕ್	ಇಲ್ಲಾ!
ಸಾದಿಯ	ಇರಬಹುದು?
ಜೇಕ್	ಇಲ್ಲ!
ಜೇಕ್	ಇ . . .
ಸಾದಿಯ	ಇ . . .
	(ಜೇಕ್ ಮತ್ತು ಸಾದಿಯ ಸಂಪೂರ್ಣವಾಗಿ ಪದಗಳನ್ನು ಕಳೆದುಕೊಂಡರು)
ಕಥನಗಾರ–1	ಆಯ್ತು . . .
ಕನಗಾರ–1/2	ಹಾಗೇ ಆಯ್ತು . . .
ಕಥನಗಾರ–2	ಪದಗಳೇ ಇಲ್ಲ . . .
ಕಥನಗಾರ–1	ಸೂರ್ಯ ಉದಯಿಸಿದ . . . ಎಲ್ಲೆಲ್ಲೂ ನಿಶ್ಯಬ್ದ . . .
	(ಜೇಕ್ ಮತ್ತು ಸಾದಿಯ ವೇದಿಕೆಯಿಂದ ಓಡುವರು)
ಕಥನಗಾರ–2	ಊಟದ ಸಮಯದಲ್ಲಿ ಈಗ ಯಾರೂ ಮಾತನಾಡ್ತಾ ಇಲ್ಲ.
ಕಥನಗಾರ–1	'ಶುಭರಾತ್ರಿ', 'ಶುಭೋದಯ' ಕೂಡ ಇಲ್ಲ.
ಕಥನಗಾರ–2	ಏನೂ ಇಲ್ಲ.
ಕಥನಗಾರ–1	ಬರೀ ನಿಶ್ಯಬ್ದ . . .
ಕಥನಗಾರ–2	ಬೇರೂರಿತ್ತು.
ಕಥನಗಾರ–1	ಮೌನ ಕದಲೋದಕ್ಕೂ ನಿರಾಕರಿಸಿತ್ತು.
ಕಥನಗಾರ–2	ಎಲ್ಲರ ಮುಖದಲ್ಲೂ ಚಿಂತೆ . . .
ಕಥನಗಾರ–1	ಬಾಯಿಗಳು ಧ್ವನಿಗಾಗಿ ಹುಡುಕ್ತಾ ಇವೆ.
ಕಥನಗಾರ–2	ಆದರೆ ಸಹಾಯ ಮಾಡೋರು ಯಾರೂ ಇಲ್ಲ.

ಕಥನಗಾರ–1 ಅದಕ್ಕೆ ನಾಡಿನ ಜನ ಎಲ್ಲ ಪ್ರಯಾಣ ಬೆಳೆಸಿದರು . . .

ಕಥನಗಾರ–2 ಯಾರಾದರೂ ತಮಗೆ ಸಹಾಯ ಮಾಡಬಹುದೇ ಅಂತ ಹುಡುಕೋಕೆ...

ಕಥನಗಾರ–1 ಹಾಗೇ ಅವರು ಮಹಾರಾಜರನ್ನ ನೋಡೋದಕ್ಕೆ ಹೋದರು.

* * *

ದೃಶ್ಯ –5

(ಮುಂಜಾನೆ ಅರಮನೆಯ ಮುಂದೆ ಜನರ ಗುಂಪು ರಾಜರನ್ನು ನೋಡ್ತಾ ನಿಂತಿದೆ. ರಾಜ ಮೇಲಿನ ವೇದಿಕೆಯಲ್ಲಿ ನಿಂತಿರುತ್ತಾನೆ)

ರಾಜ ಇದು ಬಹಳ ದುಃಖದ ಸಂಗತಿ. ನಾವು ಏನು ನಡೀಬಾರದು ಅಂತ ಅಂದುಕೊಂಡಿದ್ವೋ ಅದು ನಡೆದುಹೋಗಿದೆ. ನಮ್ಮ ಎಲ್ಲ ಪದಗಳು ಮಾಯ ಆಗ್ಬಿಟ್ಟವೆ . . . ಇದು ಹೇಗಾಯ್ತೋ ಗೊತ್ತಿಲ್ಲ. ಆದರೆ ಖಂಡಿತ ಕಂಡುಹಿಡೀತೀನಿ. ಈ ದುರಂತದಲ್ಲಿ ನನಗೊಬ್ಬನಿಗೆ ಯಾಕೆ ಏನೂ ಆಗಿಲ್ಲ ಅಂತ ಗೊತ್ತಿಲ್ಲ. ಎಲ್ಲಾ ಕಡೆ ಹುಡುಕಿಸುತ್ತೇನೆ . . . ಪದಗಳನ್ನ ಮತ್ತೆ ತರುತ್ತೇನೆ. ಈ ನಾಡಿನ ರಾಜನಾಗಿ ನಿಮ್ಮ ಧ್ವನಿಯಾಗಿ ನಾನಿರುತ್ತೇನೆ.

ಕಥನಗಾರ–1 ಗುಂಪಿಗೆ ಪದಗಳಿದ್ದಿದ್ದರೆ 'ಮಹಾರಾಜರಿಗೆ ಜಯವಾಗಲಿ' ಅಂತ ಕೂಗುತ್ತಿದ್ದರು . . .

ಕಥನಗಾರ–2 ಆದರೆ ಪದಗಳಿಲ್ಲ . . .

ಕಥನಗಾರ–1 ಹಾಗಾಗಿ ಕೂಗಲಿಲ್ಲ.

ಕಥನಗಾರ–2 ಚಪ್ಪಾಳೆನಾದ್ರೂ ಹೊಡೀಬಹುದು . . . .

(ಗುಂಪಿನ ಜನ ಚಪ್ಪಾಳೆ ಹೊಡೆಯುತ್ತಾರೆ)

ರಾಜ (ಎಲ್ಲರನ್ನು ಸುಮ್ಮನಿರಲು ಕೈಗಳಿಂದ ಸೂಚಿಸುತ್ತಾನೆ) ಇನ್ನು ಕೆಲವೇ ನಿಮಿಷಗಳಲ್ಲಿ ಶೋಧಕಾರ್ಯ ಶುರುವಾಗುತ್ತೆ. ಪರಿಹಾರ ಸಿಗುವವರೆಗೂ ಈ ಶೋಧನೆ ನಡೆಯುತ್ತೆ)

(ಜೇಕ್ ರಾಜನ ಮುಂದೆ ಬಂದು ತಾನು ಸಹಾಯ ಮಾಡಲು ಇಚ್ಛಿಸುತ್ತೇನೆ ಎಂದು ಸನ್ನೆ ಮಾಡುತ್ತಾನೆ)

ರಾಜ ಹೇಳಪ್ಪ? ಸಹಾಯ ಮಾಡ್ತೀಯಾ? ತುಂಬಾ ಸಂತೋಷ. ಆದರೆ ಇದನ್ನ ಅನುಭವಶಾಲಿಗಳಿಗೆ ಕೊಟ್ಟರೆ ಉತ್ತಮ ಅನ್ನಿಸುತ್ತೆ. ಮೊದಲು

ನಮ್ಮ ಹುಡುಕಾಟ ಪ್ರೊಫೆಸರ್‌ರಿಂದ ಶುರುವಾಗುತ್ತೆ. ನಮ್ಮ ಪದಗಳು ಮಾಯವಾದಾಗಿನಿಂದ ಅವರು ಕಾಣೆಯಾಗಿದ್ದಾರೆ. ಅವರ ಮೇಲೆಯೇ ನಮಗೆ ಅನುಮಾನ. ಯಾರಾದರೂ ಅವರನ್ನು ಕಂಡರೆ ಕೂಡಲೇ ಪೋಲೀಸರಿಗೆ ಸುದ್ದಿ ಮುಟ್ಟಿಸಿ, ಹೆದರಿಕೊಳ್ಳಬೇಡಿ. ಪ್ರೊಫೆಸರ್‌ರನ್ನು ಹುಡುಕಿ ಪದಗಳನ್ನ ಖಂಡಿತ ವಾಪಸ್ ತರ್ತೀವಿ. ಧನ್ಯವಾದಗಳು.

(ಗುಂಪಿನ ಜನ ಚಪ್ಪಾಳೆ ಹೊಡೆದು ನಿರ್ಗಮಿಸುವರು)

(ಚಪ್ಪಾಳೆ ಹೊಡೆಯುತ್ತಿರುವಾಗಲೇ ಜೇಕ್ ಮತ್ತು ಸಾದಿಯಾರ ಮೂಕ ಸಂಭಾಷಣೆ)

ಕಥನಗಾರ–2 ಪ್ರೊಫೆಸರ್ ಅಪರಾಧಿ ಅಂತ ಜೇಕ್ ನಂಬೋದಿಲ್ಲ; ಆದರೆ ಸಾದಿಯಾ ಮಾತ್ರ 'ಯಾಕಾಗಿರಬಾರದು?' ಅಂತ ಶಂಕಿಸ್ತಾ ಇದ್ದಾಳೆ. ಪದಗಳನ್ನು ಹುಡುಕಲು ಸಹಾಯ ಮಾಡುವಂತೆ ಜೇಕ್ ಸಾದಿಯಾಳ ಮನವೊಪ್ಪಿಸುತ್ತಾನೆ. ಮೊದಲು ನಿರಾಕರಿಸಿದರೂ ಆಮೇಲೆ ಸಾದಿಯಾ ಒಪ್ಪುತ್ತಾಳೆ.

(ಇಬ್ಬರು ವೇದಿಕೆಯಿಂದ ನಿರ್ಗಮಿಸುವರು, ಗುಂಪು ಸಹ ನಿಶ್ಶಬ್ದವಾಗಿ ವೇದಿಕೆಯಿಂದ ನಿರ್ಗಮಿಸುತ್ತದೆ. ಹಲವರು ಮಾತನಾಡಲು ಪ್ರಯತ್ನಿಸಿ ವಿಫಲರಾಗುತ್ತಾರೆ.)

ಕಥನಗಾರ–1 ಹಾಗೇ ಆಯ್ತು . . . ಕೊನೆಯ ಪದವೂ ಮಾಯವಾಯ್ತು.

ಕಥನಗಾರ–2 ಬಾಯಿಯಿಂದ . . .

ಕಥನಗಾರ–1 ಪುಸ್ತಕದಿಂದ . . .

ಕಥನಗಾರ–2 ದಿನಪತ್ರಿಕೆಯಿಂದ . . .

ಕಥನಗಾರ–1 ಎಲ್ಲ ಕಡೆಯಿಂದ.

ಕಥನಗಾರ–2 ಮೌನ. (ವಿರಾಮ)

ಕಥನಗಾರ–1 ನಿಶ್ಶಬ್ದ. (ವಿರಾಮ)

ಕಥನಗಾರ–2 ಇನ್ನೂ ಮೌನ.

ಕಥನಗಾರ–1 ಒಂದನೇ ದಿನ . . .

ಕಥನಗಾರ–2 ಏನೂ ಕೇಳಲಿಲ್ಲ. ಎರಡನೇ ದಿನ . . .

ಕಥನಗಾರ–1 ಏನೂ ಸುದ್ದಿಯೇ ಇಲ್ಲ.

ಕಥನಗಾರ–2 ಮೂರನೇ ದಿನ . . . ನೀವು ಖಂಡಿತ ನಂಬಲ್ಲ . . .

ಕಥನಗಾರ–1 ಪ್ರತಿಯೊಬ್ಬರೂ ಪದಗಳನ್ನ ಕಳ್ಕೊಂಡಿರೋದಕ್ಕೆ ಬಾಧೆಪಡ್ತಾ ಇದ್ದರು.

ಕಥನಗಾರ–2 ಹೀಗಿರುವಾಗ ನಗರದ ಯಾವುದೋ ಮೂಲೆಯಲ್ಲಿ ಯಾರೋ ಮಾತಾಡ್ತಾ ಇದ್ದರು!!!

* * *

ದೃಶ್ಯ –6

(ಮುಸ್ಸಂಜೆ. ಪದಗಳ ಕೋಣೆ. ನಸುಗತ್ತಲ ಕೋಣೆ. ಒಂದು ಮೇಜು. ಪದಸಂಗ್ರಹಕಾರ ಪ್ರವೇಶಿಸಿ ಕುರ್ಚಿಯ ಮೇಲೆ ಕೂರುತ್ತಾನೆ. ಅವನ ಮುಂದೆ ತೆರೆದ ಪುಸ್ತಕ. ಪಕ್ಕದಲ್ಲಿ 'ಪ' ಹೆಸರಿನ ಪೆಟ್ಟಿಗೆ)

ಪದ ಸಂಗ್ರಹಕಾರ ಈಗ ಮುಂದಿನ ಪೆಟ್ಟಿಗೆ 'ಪ' ಅಕ್ಷರದ ಪದಗಳು; ನನ್ನ ಅಚ್ಚುಮೆಚ್ಚಿನದು. ಪಂಚರಂಗಿ. ಪಕ್ಷಿ. ಪದ . . . ವಾವ್ ಎಷ್ಟು ಚಂದ! ಪದಗಳು ಅಂದರೆ ನನಗೆ ತುಂಬಾ ಪ್ರೀತಿ. ಅವು ನಾಲಿಗೆಯಿಂದ ಹೊರಗೆ ಬರುವಾಗ ಮಾಡುವ ಶಬ್ದ ಕಿವಿಗಳಿಗೆ ಬಲು ಇಂಪು. ಅದು ನಿಜಕ್ಕೂ ಸುಂದರ!

(ಪೆಟ್ಟಿಗೆಯಲ್ಲಿರುವ ಸಣ್ಣ ಸೀಸೆಗಳನ್ನು ಒಂದೊಂದಾಗಿ ಪರೀಕ್ಷಿಸುತ್ತಾನೆ. ಮತ್ತೆ ಇನ್ನೊಂದು ಪೆಟ್ಟಿಗೆಯನ್ನು ಕೈಗೆತ್ತಿಕೊಳ್ಳುತ್ತಾನೆ. ಹೀಗೇ ಪರೀಕ್ಷಿಸಿ, ಪರಿಶೀಲಿಸಿ. ಪೆಟ್ಟಿಗೆಯಲ್ಲಿ ಹಾಕುತ್ತಾ . . . ಪರೀಕ್ಷಿಸಿ. ಪರಿಶೀಲಿಸಿ. ಪೆಟ್ಟಿಗೆಯಲ್ಲಿ ಹಾಕುತ್ತಾ ಹೋಗುವನು.)

ಕೆಲಸವೇನೋ ಚೆನ್ನಾಗಿದೆ. ಆದರೆ ಮಾತನಾಡೋಕೆ ಯಾರಾದರೂ ಇದ್ದಿದ್ರೆ ಚೆನ್ನಾಗಿರ್ತಿತ್ತು. ಎಷ್ಟು ಹೊತ್ತು ಅಂತ ಒಬ್ಬನೇ ಮಾತಾಡಿಕೊಳ್ಳೋದು. ಇಲ್ಲವೇ 'ಪ್ರಭುಗಳೇ', 'ಪ್ರಭುಗಳೇ' ಅನ್ನೋದು?!

(ರಾಜ ಪ್ರವೇಶಿಸುವನು. ಪದಸಂಗ್ರಹಕಾರ ಅವನನ್ನು ಗಮನಿಸುವನು)

ಪದ ಸಂಗ್ರಹಕಾರ ಪ್ರಭುಗಳೇ . . .

ರಾಜ ಸೋಮಾರಿ, ಕೆಲಸ ಮಾಡು. ವಿಶ್ರಾಂತಿ ತಗೊಳ್ಳೋಕೆ ಹೇಳಿದ್ನ ನಾನು ನಿನಗೆ?

ಪದ ಸಂಗ್ರಹಕಾರ ಕ್ಷಮಿಸಿ ಪ್ರಭುಗಳೇ . . .

ರಾಜ ನನ್ನ ಮಾತು ಚೆನ್ನಾಗಿ ನೆನಪಿರಲಿ, ಈ ನಿಧಿಯಿಂದ ಒಂದೇ ಒಂದು ಪದ ಕಳೆದರೂ ನೀನು ತುಂಬಾ ಪಶ್ಚಾತ್ತಾಪ ಪಡಬೇಕಾಗುತ್ತೆ. ಅರ್ಥ ಆಯ್ತಾ?

ಪದ ಸಂಗ್ರಹಕಾರ ಆಯ್ತು.

ರಾಜ ಆಯ್ತು?!

ಪದ ಸಂಗ್ರಹಕಾರ ಆಯ್ತು ಪ್ರಭುಗಳೇ.

ರಾಜ ಹಾಗೆ; ಕೃತಜ್ಞನಾಗಿರಬೇಕು. ನೀನು ತುಂಬಾ ಅದೃಷ್ಟವಂತ. ಈ ಅರಮನೆಯಲ್ಲಿ ಇರುವವರು ಮಾತ್ರ ಪದಗಳನ್ನ ಬಳಸಬಹುದು... ಯಾಕೆ?

ಪದ ಸಂಗ್ರಹಕಾರ ಯಾಕೇಂದ್ರೆ ಪದಗಳನ್ನ ತಮಗೋಸ್ಕರ ಸಂಗ್ರಹ ಮಾಡೋದು ನಮ್ಮ ಕೆಲಸ, ಪ್ರಭುಗಳೇ.

ರಾಜ ಅದೇ ಯಾಕೆ?

ಪದ ಸಂಗ್ರಹಕಾರ ಯಾಕೇಂದ್ರೆ . . . ಎಲ್ಲ ಪದಗಳ ದೊಡ್ಡ ಸಂಗ್ರಹ ಮಾಡಿ. ಈ ತಿಂಗಳ ಕೊನೆಯಲ್ಲಿ ಅಚ್ಚರಿಯ ಉಡುಗೊರೆಯಾಗಿ ಈ ನಾಡಿನ ಜನರಿಗೆ ಕೊಡಬೇಕು ಅಂತ.

ರಾಜ (ನಗುವನು) ಹಹಹಹಾ! ನೀನು ಅದನ್ನ ನಿಜವಾಗಿಯೂ ನಂಬ್ತೀಯಾ?

ಪದ ಸಂಗ್ರಹಕಾರ ಹೌದು ಮಹಾಪ್ರಭುಗಳೇ . . .

ರಾಜ ಓಹೋ! ಹಾಗಿದ್ದರೆ ಪ್ರೊಫೆಸರ್ ರಜೆಯಲ್ಲಿ ಇದ್ದಾರೆ. ಬಂದ ತಕ್ಷಣ ಸಹಾಯಕ್ಕೆ ಬರ್ತಾರೆ ಅಂತ ಅಂದ್ಕೊಂಡಿದ್ದೀಯ ಅಂತಾಯ್ತು. ಅಲ್ವಾ?!

ಪದ ಸಂಗ್ರಹಕಾರ ಹೌದು ಮಹಾಪ್ರಭುಗಳೇ.

ರಾಜ (ನಗುವನು) ನಾನು ನಿನಗೊಂದು ರಹಸ್ಯ ಹೇಳಲಾ? ಯಾವ ಉಡುಗೊರೆಯೂ ಇಲ್ಲ, ಸಂಗ್ರಹವೂ ಇಲ್ಲ. ನಾನು ಎಲ್ಲಾ ಪದಗಳನ್ನೂ ಕದ್ದಿದ್ದೀನಿ. ಯಾಕೇಂದ್ರೆ ಎಲ್ಲ ಪದಗಳು ನನಗೊಬ್ಬನಿಗೇ ಬೇಕು; ಪ್ರತಿಯೊಂದು ಪದಾನೂ!

ಪದ ಸಂಗ್ರಹಕಾರ ಅಂದ್ರೆ!?

ರಾಜ ಅಂದ್ರೆ ಈ ಜನ ಪದಗಳನ್ನ ಸರಿಯಾಗಿ ಉಪಯೋಗಿಸ್ತಿರ್ಲಿಲ್ಲ. ಹರಟೆ ಹೊಡೆಯೋದಕ್ಕೆ, ತಮಾಷೆ ಮಾಡೋಕೆ, ನನ್ನ ವಿರುದ್ಧವೇ ದನಿ ಎತ್ತೋಕೇ... ಹೀಗೇ ಏನೇನಕ್ಕೋ ಬಳಸುತ್ತಾ ಇದ್ರು, ಅಷ್ಟು ಸುಂದರ ಪದಗಳನ್ನ ಹಾಳು ಮಾಡಿ ಬಿಟ್ರು. ಹಾಗೆ ಮಾಡಿಬಿಟ್ರೆ ಮತ್ತೆ ಆ ಪದಗಳ ಮಾಧುರ್ಯ ನಮಗೆ ಸಿಗೋದಿಲ್ಲ. ಸಿಗುತ್ತಾ? ಸಿಗುತ್ತಾ?!

ಪದ ಸಂಗ್ರಹಕಾರ ಇಲ್ಲಾ ಪ್ರಭುಗಳೇ . . .

ರಾಜ ಅವರಿಗೆ ಉತ್ಸಾಹ ಬರಲಿ ಅಂತ ಪ್ರತೀ ದಿನ ಒಂದೊಂದು ಹೊಸ ಪದ ಕೊಟ್ಟೆ, ಅಭ್ಯಾಸ ಮಾಡೋದಕ್ಕೆ ಹೇಳಿದೆ. ಆದರೆ ಯಾವುದೇ ಪ್ರಯೋಜನ ಆಗಲಿಲ್ಲ. ಅವರು ಮೂರ್ಖರು. ಅವರಿಗೆ ನನ್ನ ಪದಗಳ ಮಹತ್ವ ತಿಳಿದಿಲ್ಲ. ಅದೆಲ್ಲಾದ್ರೂ ಹೋಗ್ಲಿ. ನಾನು ಕೊಟ್ಟ ಪದಗಳಿಂದ ನನಗೇ ಎದುರಾಡೋದೇ! ನನ್ನನ್ನೇ ಪ್ರಶ್ನಿಸೋದೇ?! ನನ್ನ ಪದಗಳು... ನನ್ನ ಪದಗಳು . . . ಅಂತಹ ಅಮೂಲ್ಯ ವಸ್ತುವನ್ನು ಕಾಪಾಡಲು ನನ್ನೊಬ್ಬನಿಂದಲೇ ಸಾಧ್ಯ. ಯಾರೂ ಅವನ್ನ ಹಾಳು ಮಾಡೋದಕ್ಕೆ ಬಿಡೋದಿಲ್ಲ. ಅದಕ್ಕೇ ಯಾರಿಗೂ ಮಾತುಗಳಿಲ್ಲದಂತೆ ಮಾಡಿರೋದು. ಯಾರೂ ವಾದಿಸುವಂತಿಲ್ಲ ಪ್ರತಿಭಟಿಸೋ ಹಾಗಿಲ್ಲ!

ಪದ ಸಂಗ್ರಹಕಾರ ಮಹಾಸ್ವಾಮಿ. ನಾನು ಈ ಅರಮನೆಯಿಂದ ಹೊರಡುತ್ತೇನೆ . . .

ರಾಜ ಅದು ಅಸಾಧ್ಯ. ನೀನು ಈಗ ನನ್ನ . . . ಯಾವ ಪದ ಅದು?... ಹ್ಞಾ... ಸೆರೆಯಾಳು. (ನಗುವನು) ಹೊರಹೋಗಲು ಪ್ರಯತ್ನಿಸಿದರೆ ನಮ್ಮ ಸೈನಿಕರು ನಿನ್ನನ್ನು ಹಿಡಿದು, ನಿನ್ನ ಕಿವಿಗಳನ್ನು ಕತ್ತರಿಸಿ ನನ್ನ ಮೀನುಗಳಿಗೆ ಹಾಕ್ತಾರೆ. ಅರ್ಥ ಆಯ್ತಾ?

ಪದ ಸಂಗ್ರಹಕಾರ ಅರ್ಥ ಆಯ್ತು ಪ್ರಭುಗಳೇ.

ರಾಜ ಕೆಲಸ ಶುರುಮಾಡು, ಎಲ್ಲಿವರೆಗೂ ಆಯ್ತು?

ಪದ ಸಂಗ್ರಹಕಾರ	'ಪ' – ಪದ. ಮಾತನಾಡಲು, ಬರೆಯಲು ಬಳಸುವುದು.
ರಾಜ	ಚೆನ್ನಾಗಿದೆ . . . (ನಗುತ್ತಾ) ಚೆನ್ನಾಗಿದೆ.
	(ರಾಜ ನಿರ್ಗಮಿಸುವನು. ಪದಸಂಗ್ರಹಕಾರ 'ಪ' ಪೆಟ್ಟಿಗೆಯನ್ನು ಮುಚ್ಚಿ ತಾನೂ ನಿರ್ಗಮಿಸುವನು)
ಕಥನಗಾರ–1	ಪದಸಂಗ್ರಹಕಾರ ಕಣ್ಣೀರನ್ನು ಒರೆಸಿಕೊಳ್ಳುತ್ತಾ ಪೆಟ್ಟಿಗೆಯನ್ನು ಮುಚ್ಚುತ್ತಾನೆ.
ಕಥನಗಾರ–2	ಹೊರಗಡೆ ಕೊಂಡೊಯ್ಯುತ್ತಾನೆ . . . ಉಗ್ರಾಣಕ್ಕೆ . . .
ಕಥನಗಾರ–1	ಅದೇ ಸಮಯದಲ್ಲಿ . . .

* * *

ದೃಶ್ಯ – 7

(ಅರಮನೆಯ ಹೊರಗೆ. ಮುಸ್ಸಂಜೆ)

ಕಥನಗಾರ–1	ಅನಿರೀಕ್ಷಿತವಾಗಿ ದಾರಿತಪ್ಪಿ ಜೇಕ್ ಮತ್ತು ಸಾದಿಯಾ ಅರಮನೆಯ ಮೈದಾನಕ್ಕೆ ಬಂದಿದ್ದರು. ಜೇಕ್ ಮತ್ತು ಸಾದಿಯಾ ತುಂಬಾ ದಣಿದಿದ್ದರು...
ಕಥನಗಾರ–2	ಅವರು ಕಳೆದುಹೋಗಿರುವ ಪದಗಳಿಗಾಗಿ ಇನ್ನೂ ಹುಡುಕಾಡುತ್ತಲೇ ಇದ್ದರು.
ಕಥನಗಾರ–1	ಆದರೆ ಏನೋ ಸರಿ ಇರ್ಲಿಲ್ಲ . . .
	(ಅವರೂ ಮೂಕ ಸಂಭಾಷಣೆ ಮಾಡುತ್ತಾರೆ. ಕಥೆಗಾರರು ವಿವರಣೆ ನೀಡುತ್ತಾರೆ)
ಕಥನಗಾರ–1	'ಹೊಟ್ಟೆ ಹಸಿವು ಆಗ್ತಿದ್ಯಾ?' ಜೇಕ್ ಕೇಳಲು ಪ್ರಯತ್ನಿಸುತ್ತಾನೆ.
ಕಥನಗಾರ–2	ಆದರೆ ಅವಳು ತನ್ನನ್ನ ಡುಮ್ಮಿ ಅನ್ತಾ ಇದ್ದಾನೆ ಅಂದ್ಕೊಳ್ತಾಳೆ.
ಕಥನಗಾರ–1	ಮತ್ತೆ ಸಾದಿಯಾ ಹೇಳ್ತಾಳೆ 'ನನಗೆ ಸಾಕಾಗಿ ಹೋಗಿದೆ'.
ಕಥನಗಾರ–2	ಆದರೆ ಜೇಕ್ 'ನನ್ನ ತಲೆ ತಿನ್ನಬೇಡ' ಅಂತಾ ಇದಾಳೆ ಅಂದ್ಕೊಳ್ತಾನೆ
ಕಥನಗಾರ–1	ಯಾವುದೂ ಸರಿ ಇರ್ಲಿಲ್ಲ . . .

ಕಥನಗಾರ–2 ಆದರೆ ಅವಾಗ . .

(ಜೇಕ್ ಮತ್ತು ಸಾದಿಯಾರು ಪದಸಂಗ್ರಹಕಾರ ಮಾತಾಡುವುದನ್ನು ಕೇಳಿ ಅಡಗಿ ಕುಳಿತುಕೊಳ್ಳುತ್ತಾರೆ. ಪದಸಂಗ್ರಹಕಾರ ಪ್ರವೇಶಿಸುವನು)

ಪದ ಸಂಗ್ರಹಕಾರ ಇಲ್ಲ ಇಲ್ಲ. ನೀವೇನು ಅಂದ್ಕೊಳ್ತಾ ಇದ್ದೀರೋ ಅದು ನಾನಲ್ಲ. ನಾನೇನೂ ತಪ್ಪು ಮಾಡಿಲ್ಲ.

(ಜೇಕ್ ಮತ್ತು ಸಾದಿಯ ಪದಸಂಗ್ರಹಕಾರನ ಕಡೆಗೆ ಹೋಗುತ್ತಾರೆ. ಪದಸಂಗ್ರಹಕಾರ ಗಾಬರಿಯಿಂದ ಪೆಟ್ಟಿಗೆಯನ್ನು ಬೀಳಿಸುತ್ತಾನೆ. ಜೇಕ್ ಮತ್ತು ಸಾದಿಯಾ ಪೆಟ್ಟಿಗೆಯ ಬಳಿ ಹೋಗುತ್ತಾರೆ. ಪದಸಂಗ್ರಹಕಾರ ಅವರನ್ನ ತಡೆಯಲು ಪ್ರಯತ್ನಿಸುತ್ತಾನೆ.)

ಪದ ಸಂಗ್ರಹಕಾರ ಅದು ನಿಮಗೆ ಬೇಡ. ಖಂಡಿತ ಬೇಡ. ಅದರೊಳಗೆ ಏನೂ ಇಲ್ಲ, ಏನೇನೂ ಇಲ್ಲ. ನಾನು ಅದನ್ನ ಕಸದ ಬುಟ್ಟಿಗೆ ಹಾಕಲು ತಗೊಂಡು ಹೋಗ್ತಾ ಇದ್ದೀನಿ. ಅದೇ ಅದಕ್ಕೆ ಸೂಕ್ತವಾದ ಜಾಗ. ನೀವೇನು ಹೇಳ್ತೀರಾ? ಹೋ . . . ನೀವೇನು ಹೇಳಲ್ಲ; ಯಾಕೇಂದ್ರೆ ನಿಮಗೆ ಹೇಳ್ಳೋಕೆ ಆಗಲ್ಲ. ದಯವಿಟ್ಟು ಅದನ್ನ ಹಿಂತಿರುಗಿಸಿಬಿಡಿ . . . ಇಲ್ಲಾಂದ್ರೆ ನನಗೆ ಕಷ್ಟ . . . ದಯವಿಟ್ಟು ಸಾದಿಯಾ . . .

(ಸಾದಿಯಾ ಅವನನ್ನ ಹಿಂದೆ ಎಳೆದು ನಿಲ್ಲಿಸುತ್ತಾಳೆ. ಜೇಕ್ ಪೆಟ್ಟಿಗೆ ತೆರೆದು ಭಯ, ಕುತೂಹಲದಿಂದ ಅದರೊಳಗೆ ಇಣುಕಿ ನೋಡುತ್ತಾನೆ. ಸಾದಿಯಾ ಕೂಡ ಅದನ್ನು ನೋಡಲು ಹೋಗುತ್ತಾಳೆ. ಪದಸಂಗ್ರಹಕಾರ ಸೋತವನಂತೆ ವೇದಿಕೆಯ ಬದಿಯಲ್ಲಿ ನಿಲ್ಲುತ್ತಾನೆ.)

ಪದ ಸಂಗ್ರಹಕಾರ ಅದರೊಳಗಿನ ಧೂಳನ್ನು ತಗೊಂಡು ಉಸಿರಾಡಬೇಡಿ. ಹಾಗೆ ಮಾಡಿದರೆ ಅವನಿಗೆ . . .

(ಜೇಕ್ ಉಸಿರು ಎಳೆದುಕೊಂಡು ಕೆಮ್ಮಲು ಶುರುಮಾಡುತ್ತಾನೆ)

ಜೇಕ್ ಪುಡಿ!

(ಜೇಕ್‌ಗೆ ಪದ ಬಂದಿದ್ದನ್ನು ನೋಡಿ ಜೇಕ್ ಮತ್ತು ಸಾದಿಯಾಗೆ ಆಶ್ಚರ್ಯ ಆಗುತ್ತದೆ.)

ಪದ
ಸಂಗ್ರಹಗಾರ ಹೌದು! ಅದು ಪದಗಳದೇ ಪುಡಿ. ನೀವು ಅದನ್ನ ಉಸಿರಿನಲ್ಲಿ ಒಳಗೆ ತಗೊಂಡಾಗ ನಿಮಗೆ ಪದಗಳು ಮರಳಿ ಬರುತ್ವೆ ಬೇಡ, ಬೇಡ . . . ಅವರು ತುಂಬಾ ಕೋಪ ಮಾಡ್ಕೋತಾರೆ . . .

(ಸಾದಿಯಾ ಕೂಡ ಪುಡಿ ಹಿಡಿದು ಉಸಿರಾಡುವಳು)

ಸಾದಿಯ ಪಯಣ . . . ಪೃಥ್ವಿ . . . ಫಲಕ . . .

ಜೇಕ್ ಪುಸ್ತಕ . . . ಪುರಾವೆ . . . ಪುನರ್‌ಜೀವ. . .

(ಜೇಕ್ ಮತ್ತು ಸಾದಿಯ ನಗುವರು)

ಪದ
ಸಂಗ್ರಹಕಾರ ಶ್! ದಯವಿಟ್ಟು ಮೌನವಾಗಿರಿ. ಅವರು ಕೇಳಿಸ್ಕೊಂಡುಬಿಡ್ತಾರೆ . .

ಜೇಕ್ ಪುರುಷ? ಮೋಸಗಾರ?

ಪದ
ಸಂಗ್ರಹಕಾರ ಹೌದು, ಪುರುಷನೇ . . . ಆದರೆ ಅದು ನಾನಲ್ಲ . . . ಖಂಡಿತ ನಾನಲ್ಲ.

(ಅವರು ಪದಸಂಗ್ರಹಕಾರನ ವಿವರಣೆಗೆ ಕಾಯುವರು)

ಪದ
ಸಂಗ್ರಹಕಾರ ಅಯ್ಯೋ, ಅವನ್ಯಾರು ಅಂತ ನಾನು ಹೇಳೋಕೆ ಆಗಲ್ಲ. ನನಗೆ ನನ್ನ ಕಿವಿ ಅಂದರೆ ಇಷ್ಟ, ಅದು ಮೀನಿಗೆ ಆಹಾರ ಆಗೋದು ಬೇಡ.

ಸಾದಿಯ ಪಜೀತಿ

ಜೇಕ್ ಪ್ರಧಾನ ಮಂತ್ರೀ...

ಪದ
ಸಂಗ್ರಹಕಾರ ಇಲ್ಲ, ಅವರು ಯಾರು ಅಂತ ಹೇಳೋಕೆ ಆಗಲ್ಲ, ಅಲ್ಲಿಗೆ ಹೋಗೋಕೂ ಆಗಲ್ಲ. ಎಲ್ಲಾ ಕಡೆ ಸೈನಿಕರ ಕಾವಲು . . . ಸಿಕ್ಕಿಬಿದ್ದರೆ ಅರಮನೆಯ ಬಂಧೀಖಾನೆಯಲ್ಲಿ . . . ಜೇಕ್ ಮತ್ತು ಸಾದಿಯ : . . .?!

(ಜೇಕ್‌ಗೆ ರಾಜನೇ ತಮಗೆಲ್ಲಾ ಮೋಸ ಮಾಡಿರುವುದೆಂದು ತಿಳಿಯುತ್ತದೆ.)

ಪದ
ಸಂಗ್ರಹಕಾರ ಅದನ್ನ ಇಲ್ಲಿಗೆ ಬಿಟ್ಟುಬಿಡಿ. ನಾವು ಏನೂ ಮಾಡೋದಕ್ಕೆ ಆಗಲ್ಲ. ಅವನು ಚಾಣಾಕ್ಷ. ನೀವು ಪದಗಳನ್ನ ವಾಪಸು ಪಡೆದುಕೊಳ್ಳೋ ಪ್ರಯತ್ನ ತುಂಬಾ ಅಪಾಯಕಾರಿ. ಪದಗಳು ಬರೇ ಅಕ್ಷರಗಳ ಮಿಶ್ರಣ ಅಷ್ಟೇ. ಅವಿಲ್ಲದಿದ್ದರೂ ಬದುಕಬಹುದು.

ಸಾದಿಯ (ಜೇಕ್‌ಗೆ) ಪ್ರಾರ್ಥಿಸು.

ಪದ
ಸಂಗ್ರಹಕಾರ (ಜೇಕ್, ಸಾದಿಯಾರ ಮನವೊಪ್ಪಿಸಲು ಪ್ರಯತ್ನಿಸುತ್ತಾ, ತನ್ನನ್ನೂ ಸಮಾಧಾನಗೊಳಿಸಿಕೊಳ್ಳುತ್ತಾ) ಸಂಭಾಷಣೆ, ಕಥೆ, ಹಾಡು . . . ಇವೇನೂ ಇಲ್ಲದೆಯೂ ಇರಬಹುದು.

(ಸಾದಿಯ ಕೈ ಮುಗಿದು ಬೇಡುತ್ತಾಳೆ)

ಪದ
ಸಂಗ್ರಹಕಾರ ಅವಾವುವೂ ನಿಜವಾಗಲೂ ಮುಖ್ಯ ಅಲ್ಲ. ಪದಗಳು ಬರೇ ಹುಚ್ಚು ಮಾತು ಅಷ್ಟೇ. ಹುಚ್ಚು ಮಾತು.

ಜೇಕ್ ಪದ ಪವಿತ್ರ . . . ಸಹಾಯಮಾಡು . . .

ಸಾದಿಯ ಪದಗಳೇ ಶಕ್ತಿ ಅವು ಬೇಕೇಬೇಕು.

(ಪದಸಂಗ್ರಹಕಾರ ಅವರತ್ತ ನೋಡುತ್ತಾನೆ)

ಪದ
ಸಂಗ್ರಹಗಾರ (ತನ್ನೊಳಗೆ) ನಾನು ಕಳೆದು ಕೊಳ್ಳೋದು ಏನು ಇಲ್ಲ . . . (ಜೇಕ್ ಮತ್ತು ಸಾದಿಯಾಗೆ) ಮಹಾರಾಜರು ಹನ್ನೊಂದು ಗಂಟೆಗೆ ಮಲಗುವರು, ಅಲ್ಲಿಯವರೆಗೂ ನೀವಿಲ್ಲಿ ಅಡಗಿ ಕುಳಿತುಕೊಳ್ಳಿ. ಅವರು ಮಲಗಿದ ನಂತರ ಪದಗಳನ್ನ ತರೋಣ . . .

(ಜೇಕ್ ಮತ್ತು ಸಾದಿಯ ಅವನನ್ನು ಅಭಿಮಾನದಿಂದ ತಬ್ಬಿಕೊಳ್ಳುತ್ತಾರೆ)

ಪದ
ಸಂಗ್ರಹಕಾರ ಆಯ್ತು, ಆಯ್ತು. ಆದರೆ ಅಲ್ಲಿವರೆಗೂ ಮೌನವಾಗಿರಬೇಕು, ಏನೂ ಮಾತಾಡಕೂಡದು. ಪರಿಹಾಸ್ಯ, ಪರಾಕ್ರಮ, ಪರಾಧೀನ...

ಜೇಕ್ ಮತ್ತು ಸಾದಿಯ ಪ್ರಮಾಣ . . .

ಪದ
ಸಂಗ್ರಹಕಾರ ಸರಿ, ಹಾಗಾದರೆ ಬನ್ನಿ

ಕಥನಗಾರ-2 ಹಾಗಾಗಿ ಅವರು ಹೋದ್ರು

(ಜೇಕ್, ಸಾದಿಯ ಮತ್ತು ಪದಸಂಗ್ರಹಕಾರರ ನಿರ್ಗಮನ)

* * *

ದೃಶ್ಯ - 8

(ಅರಮನೆಯ ಒಳಗೆ ರಾತ್ರಿಯ ಕತ್ತಲು ಆವರಿಸಿ ಬಹಳ ಹೊತ್ತಾಗಿದೆ.)

ಕಥನಗಾರ-1 ಊಹಿಸಿದ್ದಂತೆಯೇ ರಾಜ ಹನ್ನೊಂದು ಗಂಟೆಗೆ ಮಲಗಲು ಹೋದ...

ಕಥನಗಾರ-2 ಅದಕ್ಕೂ ಮುಂಚೆ ಪದಸಂಗ್ರಹಕಾರನನ್ನು ಭೇಟಿಯಾಗಿ ಮಾತನಾಡಿಸೋದನ್ನ ಮರೆಯಲಿಲ್ಲ . . .

ರಾಜ (ವೇದಿಕೆಯ ಹೊರಗೆ) ಇವತ್ತು ರಾತ್ರಿಯೆಲ್ಲಾ ನೀನು ಕೆಲಸ ಮಾಡಿದರೆ ಒಳ್ಳೆಯದು. ಇನ್ನೂ ಸಾವಿರಾರು ಪದಗಳಿವೆ ಪುಡಿಮಾಡಿ ಮುಗಿಸೋದಕ್ಕೆ. ಬೆಳಗ್ಗೆ ಅಷ್ಟೊತ್ತಿಗೆ 'ಪ' ಅಕ್ಷರ ಮುಗಿಸಿ 'ಫ' ಗೆ ಬರಬೇಕು. ಇಲ್ಲಾಂದ್ರೆ ನಿನ್ನ ಊಟ ನಾಯಿ ಪಾಲಾಗುತ್ತೆ. ಹುಷಾರ್!

(ಬೆಕ್ಕು ಮಿಂವ್‌ಗುಡುವ ಶಬ್ದ)

ರಾಜ (ವೇದಿಕೆಯ ಹೊರಗೆ) ಶ್!!! ಸುಮ್ಮನಿರು.

ಕಥನಗಾರ-1 ಅರಮನೆಯೆಲ್ಲ ನಿದ್ರಿಸುತ್ತಿರುವಾಗ ಪದಸಂಗ್ರಹಕಾರ ಜೇಕ್ ಮತ್ತು ಸಾದಿಯಾನ ಹೊರಗೆ ಕರೆಯುತ್ತಾನೆ . . .

ಕಥನಗಾರ-2 ಅವರಿಬ್ಬರೂ ತೆವಳುತ್ತಾ ಹೊರಬರುತ್ತಾರೆ.

ಕಥನಗಾರ-1 ಎಲ್ಲಾ ಪದಗಳು ಅರಮನೆಯಲ್ಲಿನ ಪೆಟ್ಟಿಗೆಯಲ್ಲಿದ್ದವು . . .

ಕಥನಗಾರ-2 ಕೊಠಡಿ ಮೇಲೆ ಕೊಠಡಿ. ಎಲ್ಲದರ ತುಂಬ ಪೆಟ್ಟಿಗೆ . . . ಪೆಟ್ಟಿಗೆಗಳಲ್ಲಿ ಪದಗಳು.

ಕಥನಗಾರ-1 ಅವರು ತಮ್ಮ ಕೆಲಸ ಶುರು ಮಾಡಿದರು

ಕಥನಗಾರ-2 ವಿಚಿತ್ರವಾದ ಚಿತ್ರಗಳು ಹಾಗೂ ಭಾವಚಿತ್ರಗಳಿಂದ ಕೂಡಿದ ದಾರಿಯಲ್ಲಿ

ಹೆಜ್ಜೆಯ ಮೇಲೊಂದು ಹೆಜ್ಜೆ ಇಟ್ಟು ತುದಿಗಾಲಿನಲ್ಲಿ ಸಾಗಿದರು.

(ಪ್ರದರ್ಶಕರು ಚಿತ್ರದ ಚೌಕಟ್ಟನ್ನು, ಚಿತ್ರಗಳನ್ನು ಹಾಗೂ ಭಾವಚಿತ್ರವನ್ನು ಮಾಡುವರು. ಜೇಕ್, ಸಾದಿಯ ಮತ್ತು ಪದಸಂಗ್ರಹಕಾರರು ಅವರುಗಳನ್ನು ದಾಟಿ ನಡೆದುಹೋಗುವರು)

ಕಥನಗಾರ-1 ಒಮ್ಮೊಮ್ಮೆ ಯಾರೋ ಅವರನ್ನ ಗಮನಿಸ್ತಾ ಇದ್ದಾರೇನೋ ಅನ್ನಿಸ್ತಿತ್ತು. (ಜೇಕ್, ಸಾದಿಯ ಮತ್ತು ಪದಸಂಗ್ರಹಕಾರ ಮುಂದೆ ಮುಂದೆ ಹೋದಂತೆಲ್ಲಾ ಚಿತ್ರಗಳು ಹಾಗೂ ಚಿತ್ರಪಟಗಳು ಅವರನ್ನು ನೋಡಲು ತಿರುಗುತ್ತವೆ. ಅವರು ಹಿಂದೆ ತಿರುಗಿದ ತಕ್ಷಣ ಅವು ಸ್ತಬ್ದವಾಗುತ್ತವೆ.)

ಕಥನಗಾರ-2 ಅವರು ಬಾಗಿಲ ಮೂಲಕ ಒಳಹೋಗುತ್ತಾರೆ.

(ಪ್ರದರ್ಶಕರು ಬಾಗಿಲಿನ ಆಕೃತಿ ಮಾಡುತ್ತಾರೆ. ಜೇಕ್, ಸಾದಿಯ ಮತ್ತು ಪದಸಂಗ್ರಹಕಾರರು ಅದರ ಮೂಲಕ ಹೋಗುತ್ತಾರೆ)

ಕಥನಗಾರ-1 ಇನ್ನೊಂದು ಬಾಗಿಲು

(ಪ್ರದರ್ಶಕರು ಮತ್ತೊಂದು ಬಾಗಿಲಿನ ಆಕೃತಿ ಮಾಡುತ್ತಾರೆ. ಜೇಕ್, ಸಾದಿಯ ಮತ್ತು ಪದಸಂಗ್ರಹಕಾರರು ಅದರ ಮೂಲಕ ಹೋಗುತ್ತಾರೆ)

ಕಥನಗಾರ-2 ಮತ್ತೊಂದು ಬಾಗಿಲು

(ಪ್ರದರ್ಶಕರು ಮತ್ತೆ ಬಾಗಿಲಿನ ಆಕೃತಿ ರಚಿಸುತ್ತಾರೆ. ಜೇಕ್, ಸಾದಿಯ ಮತ್ತು ಪದಸಂಗ್ರಹಕಾರರು ಅದರ ಮೂಲಕ ಹೋಗುತ್ತಾರೆ)

ಕಥನಗಾರ-1 ಅವರಿಗೆ ಏನೋ ಸದ್ದು ಕೇಳಿಸುತ್ತೆ . . .

ಪದ ಸಂಗ್ರಹಕಾರ ಅದು ಕಾವಲುಗಾರರ ಧ್ವನಿ.

(ಜೇಕ್. ಸಾದಿಯ ಹಾಗೂ ಪದಸಂಗ್ರಹಕಾರರು ಬಾಗಿಲ ಹಿಂದೆ ಅವಿತು ನಿಲ್ಲುತ್ತಾರೆ. ಕಾವಲುಗಾರರು ಬಾಗಿಲ ಮೂಲಕ ಒಳಗೆ ಬರುತ್ತಾರೆ. ಕಾವಲುಗಾರ-1 ದೊಡ್ಡ ಬಲೆಯುನ್ನು ಹಿಡಿದು ಪ್ರವೇಶಿಸುವನು.)

ಕಾವಲುಗಾರ-2 ಅದನ್ನ ಹಿಂತಿರುಗಿಸು.

ಕಾವಲುಗಾರ-1 ಇಲ್ಲ!

ಕಾವಲುಗಾರ-2 ದಯವಿಟ್ಟು . . .

ಕಾವಲುಗಾರ–1 ಎಷ್ಟು ಸಲ ಹೇಳಿದ್ದೀನಿ, ಅದರ ಜೊತೆ ಆಟ ಆಡಬೇಡ ಅಂತ?

ಕಾವಲುಗಾರ–2 ಆದರೆ . .

ಕಾವಲುಗಾರ–1 ಆದರೆ – ಗೀದರೆ ಏನೂ ಇಲ್ಲ. ನೀನು ಇದನ್ನ ತಗೊಂಡಿದ್ದೆ ಅಂತ ನಮ್ಮ ಮಹಾರಾಜರಿಗೇನಾದರೂ ಗೊತ್ತಾದರೆ ಖಂಡಿತ ನಿನ್ನ ಕಾಲು ಮುರೀತಾರೆ.

ಕಾವಲುಗಾರ–2 ನನ್ನ ಕಾಲು?!

ಕಾವಲುಗಾರ–1 ಅದಕ್ಕೇ ಹೇಳಿದ್ದು

ಕಾವಲುಗಾರ–2 (ಬಲೆಯನ್ನು ಎಳೆದುಕೊಳ್ಳುತ್ತಾ) ಇದು ತುಂಬಾ ಚೆನ್ನಾಗಿದೆ. ಇದರಿಂದ ಏನನ್ನಾದರೂ ಹಿಡೀಬಹುದು, ಯಾರನ್ನಾದರು ತಿಪಿಬಹುದು, ಜೋಲಾಡಬಹುದು . . . ಮತ್ತೆ . . . (ಅನಿರೀಕ್ಷಿತವಾಗಿ ಬಲೆಯಿಂದ ತಲೆಗೆ ಹೊಡೆದುಕೊಳ್ಳುತ್ತಾನೆ.) ಅಯ್ಯೋ . . .

ಕಾವಲುಗಾರ–1 ಮತ್ತೆ ತಲೆಗೆ ಹೊಡೆದುಕೊಂಡ!?

ಕಾವಲುಗಾರ–2 ಸ್ವಲ್ಪ . . .

ಕಾವಲುಗಾರ–1 ರಾಜರು 'ಇದು ಜೋಪಾನ' ಅಂತ ಹೇಳಿರೋದಕ್ಕೆ ಕಾರಣ ಇದೆ. ಮಹಾರಾಜರು ಏನು ಹೇಳಿದರು ಅಂತ ಒಮ್ಮೆ ನೆನಪು ಮಾಡ್ಕೋ...

ಕಾವಲುಗಾರ–2 ಹ್ಞಾ! 'ಎತ್ತರದ ಸ್ಥಳಕ್ಕೆ ಹೋಗಿ ಈ ಬಲೆ ಹಿಡಿದು ಜನ ಮಾತಾಡುವ ಹಾಗೂ ಯೋಚಿಸುವ ಎಲ್ಲ ಪದಗಳನ್ನು ಹಿಡಿಯಲು ಸದಾ ಸಿದ್ಧರಾಗಿರಿ' ಅಂತ ಹೇಳಿದ್ದರು.

ಕಾವಲುಗಾರ–1 ಮತ್ತೆ?

ಕಾವಲುಗಾರ–2 ಮತ್ತೆ . . . 'ಬಲೇನಾ ಹೇಗೆಂದರೆ ಹಾಗೆ ಅಲ್ಲಾಡಿಸಬೇಡಿ. ಹುಚ್ಚರ ಥರಾ . . . ಅದನ್ನ ಹಾಳು ಮಾಡಿ ನನ್ನ ಉಪಾಯಾನೆಲ್ಲ ಕೆಡಸಬೇಡಿ' ಅಂತ ಕೂಡ ಅಂದಿದ್ದರು.

ಕಾವಲುಗಾರ–1 ಸರೀ ತಾನೇ. ಅದಕ್ಕೆ ಬಲೇನ ಅದರ ಜಾಗದಲ್ಲೇ ಇಟ್ಟು ಬಿಡೋಣ. ಇಲ್ಲಿದ್ದ ಮೇಜು ಎಲ್ಲಿ? (ವಿರಾಮ. ಒಬ್ಬ ಪ್ರದರ್ಶಕ ಬಂದು ಮೇಜು ಆಗುವನು.) ಹ್ಞಾ! (ಬಲೆಯನ್ನು ಮೇಜಿನ ಮೇಲೆ ಹಾಕುವರು). ಸದ್ಯ, ನಾವು ಮುಟ್ಟಿರೋದು ಮಹಾರಾಜರಿಗೆ ಈಗ ಗೊತ್ತೇ ಆಗಲ್ಲ!

ಕಾವಲುಗಾರ–2 ಹೌದೌದು! (ವಿರಾಮ) ಮತ್ತೆ ಈಗ ಏನು ಮಾಡೋದು?

ಕಾವಲುಗಾರ–1 (ಕಟುವಾಗಿ) ನನಗೆ ಗೊತ್ತಿಲ್ಲಪ್ಪ. ನಮ್ಮ ಕೆಲಸಾನ ನಾವು ಮಾಡೋದು. ಅರಮನೆಯನ್ನ ಹುಷಾರಾಗಿ ಕಾವಲು ಕಾಯೋದು. ಯಾರೊಬ್ಬರೂ ಒಳಗೆ . . .

ಕಾವಲುಗಾರ–2 ಕಣ್ಣಲ್ಲಿ ಕಣ್ಣಿಟ್ಟು ಕಾಯ್ತೀನಿ.

(ಕಾವಲುಗಾರ–1 ತಲೆಯಾಡಿಸುತ್ತಾ ಹೊರಗೆ ನಡೆಯುತ್ತಾನೆ. ಕಾವಲುಗಾರ–2 ಅವನನ್ನು ಲಗುಬಗೆಯಿಂದ ಹಿಂಬಾಲಿಸುತ್ತಾನೆ)

ಕಾವಲುಗಾರ–2 ಏನೋ 'ನಾ' ಇಂದ ಶುರುವಾಗುತ್ತೆ.

(ಜೇಕ್, ಸಾದಿಯ ಮತ್ತು ಪದಸಂಗ್ರಹಕಾರರು ಅಡಗಿರುವ ಸ್ಥಳದಿಂದ ಹೊರಗೆ ಬರುವರು)

ಪದ ಸಂಗ್ರಹಕಾರ ಆ ಒಲೆ ಪ್ರೊಫೆಸರ್‌ದು. ಯಂತ್ರದಿಂದ ಹೊರಬರುವ ಪದಗಳನ್ನ ಹಿಡಿಯಲು ಇದನ್ನ ಮಾಡಿದ್ದರು.

ಜೇಕ್ ಪ್ರೊಫೆಸರ್?

ಪದ ಸಂಗ್ರಹಕಾರ ಆದರೆ ಎಲ್ಲಿದ್ದಾರೋ ನನಗೆ ಗೊತ್ತಿಲ್ಲ. ಅವರು ರಜೆಯಲ್ಲಿದ್ದಾರೆ, ಬಂದ ಕೂಡಲೇ ಪದ ಸಂಗ್ರಹಣೆಗೆ ಬರ್ತಾರೆ ಅಂತ ಪ್ರಭುಗಳು ಹೇಳಿದ್ರು. ಆದರೆ ಬಹಳ ದಿನಗಳಿಂದ ಅವರನ್ನು ನಾನು ನೋಡೇ ಇಲ್ಲ.

ಕಥನಗಾರ–2 ಅಕಸ್ಮಾತ್ತಾಗಿ ಅವರಿಗೆ ಒಂದು ಸದ್ದು ಕೇಳಿಸುತ್ತೆ . . .

(ರಾಜ ಗೊರಕೆ ಹೊಡೆಯುವ ಸದ್ದು)

ಕಥನಗಾರ–1 ಮಹಾರಾಜರು ಗಾಢನಿದ್ದೆಯಲ್ಲಿ . . . ಪದಗಳ ಕನಸು ಕಾಣ್ತಾ ಇದ್ದಾರೆ.

ಪದ ಸಂಗ್ರಹಕಾರ ಹೊರಡಿ ಬೇಗ. ಎಷ್ಟು ಸಾಧ್ಯ ಆಗುತ್ತೋ ಅಷ್ಟೂ ಪೆಟ್ಟಿಗೆಗಳನ್ನತಗೊಂಡುಬಿಡಿ

ಸಾದಿಯ (ಬಲೆಯ ಕಡೆ ತೋರಿಸುತ್ತಾ) ಬಹುಶಃ?

ಜೇಕ್ (ಬಲೆಯನ್ನು ತೆಗೆದುಕೊಳ್ಳುತ್ತಾ) ಒಳ್ಳೆ ಉಪಾಯ!

(ಪದಸಂಗ್ರಹಕಾರ, ಜೇಕ್ ಮತ್ತು ಸಾದಿಯ ನಿರ್ಗಮಿಸುವರು)

ಕಥನಗಾರ–1 ಅರಮನೆಯ ಕೋಣೆಯಲ್ಲಿದ್ದ ಎಲ್ಲ ಪಟ್ಟಿಗೆಗಳನ್ನ ಸಂಗ್ರಹಿಸಿಕೊಂಡರು

ಕಥನಗಾರ–2 ಎಲ್ಲವನ್ನೂ ತೆಗೆದುಕೊಂಡು ಪದಗಳ ಕೋಣೆಗೆ ಹೋದರು

(ಪದಸಂಗ್ರಹಕಾರ, ಜೇಕ್ ಮತ್ತು ಸಾದಿಯ ಪೆಟ್ಟಿಗೆಯೊಂದಿಗೆ ಪ್ರವೇಶಿಸಿ ಕೆಳಗಿನಂತೆ ಅಭಿನಯಿಸುವರು)

ಕಥನಗಾರ–1 ಪ್ರತೀ ಪೆಟ್ಟಿಗೆಯನ್ನು ಖಾಲಿ ಮಾಡಿದರು

ಕಥನಗಾರ–2 ಎಲ್ಲಾ ಪದಗಳನ್ನು ಪುಡಿ ಮಾಡಿದರು

ಕಥನಗಾರ–1 ಎಲ್ಲವನ್ನು ಒಟ್ಟಿಗೆ ಬೆರೆಸಿದರು

ಕಥನಗಾರ–2 ಎಲ್ಲಾ ಅಕ್ಷರಗಳು ಅ, ಆ, ಇ . . .

ಕಥನಗಾರ–1 ಈ, ಉ, ಊ, ಋ . . .

ಕಥನಗಾರ–2 ಹೀಗೆ ಎಲ್ಲಾ . . . ಒಂದಾದ ಮೇಲೆ ಒಂದು

ಕಥನಗಾರ–1 ಗಂಟೆಗಳು ಕಳೆದುಹೋದವು

ಕಥನಗಾರ–2 ಒಂದು ಗಂಟೆ

ಕಥನಗಾರ–1 ಎರಡು ಗಂಟೆ

ಕಥನಗಾರ–2 ಮೂರು, ನಾಲ್ಕು, ಐದು ಗಂಟೆ

ಕಥನಗಾರ–1 ಆರು, ಏಳು, ಎಂಟು, ಒಂಬತ್ತು . . .

ಕಥನಗಾರ–2 ಕೆಲಸ ಮುಗಿಸಿದರು

(ಪದಸಂಗ್ರಹಕಾರ ಪುಡಿಯನ್ನು ಹಿಡಿದು ನಿಲ್ಲುತ್ತಾನೆ. ಜೇಕ್ ಮತ್ತು ಸಾದಿಯ ಪುಡಿಯನ್ನೇ ದಿಟ್ಟಿಸಿ ನೋಡುತ್ತಾರೆ)

ಪದ ಸಂಗ್ರಹಕಾರ ಇಲ್ಲಿವೆ, ಎಲ್ಲಾ ಪದಗಳೂ ಇಲ್ಲಿವೆ. ಹಿಂದೆಂದೂ ಕೇಳದೆ ಇರುವಂತಹ ಪದಗಳು ಇಲ್ಲಿವೆ . . .

(ಪದಸಂಗ್ರಹಕಾರ ನಿಧಾನವಾಗಿ ಮುಚ್ಚಳವನ್ನು ತೆಗೆದು ಸ್ವಲ್ಪ ಪುಡಿಯನ್ನು ಜೇಕ್ ಮತ್ತು ಸಾದಿಯಾರ ಕೈಮೇಲೆ ಹಾಕುತ್ತಾನೆ)

ಪದ
ಸಂಗ್ರಹಕಾರ	ದೀರ್ಘ ಉಸಿರನ್ನು ತೆಗೆದುಕೊಳ್ಳಿ

(ಜೇಕ್ ಮತ್ತು ಸಾದಿಯ ಪುಡಿಯನ್ನು ಎಳೆದುಕೊಳ್ಳುವಂತೆ ಉಸಿರಾಡುತ್ತಾರೆ)

ಪದ
ಸಂಗ್ರಹಕಾರ	ಬಂತಾ?

ಜೇಕ್	ಪದಗಳು! (ನಗುವನು)

ಸಾದಿಯ	ಬಹಳ ಇದ್ದಾವೆ

ಜೇಕ್	ಮರಳಿ ಬಂದ್ವು! ರಾತ್ರಿ, ಹಗಲು, ಮಠ, ಬೆಟ್ಟ . . . ನಾನು ಏನು ಬೇಕಾದರೂ ಹೇಳಬಲ್ಲೆ!

ಸಾದಿಯ	ಇದು ನಿಜಕ್ಕೂ ಆಶ್ಚರ್ಯ, ವಿಸ್ಮಯ!!

ಜೇಕ್	ಪವಾಡ!!!

(ಜೇಕ್, ಸಾದಿಯ ನಗುವರು)

ಜೇಕ್	ತುಂಬಾ ಧನ್ಯವಾದಗಳು!

ಸಾದಿಯ	ನಿಮ್ಮ ಸಹಾಯಾನ ಹೊಗಳೋದಕ್ಕೆ ಬೇರೆ ಪದಗಳು . . .

ಜೇಕ್	ಪರವಾಗಿಲ್ಲ ಅದು ನನ್ನ . . .

ರಾಜ	(ವೇದಿಕೆಯ ಹಿಂದೆ) ಪದಸಂಗ್ರಹಕಾರ . . .

ಪದ
ಸಂಗ್ರಹಕಾರ	ಬೇಗ, ಬೇಗ ಹೊರಡಿ. ರಾಜ ಬರುವ ಮುಂಚೆ ಹೊರಡಿ. ಆಮೇಲೆ ಇದನ್ನ ಮರೀಬೇಡಿ . . .

(ಬಲೆಯನ್ನು ಅವರಿಗೆ ನೀಡುತ್ತಾನೆ. ಜೇಕ್ ಮತ್ತು ಸಾದಿಯ ನಿರ್ಗಮಿಸುವರು. ರಾಜನ ಪ್ರವೇಶ)

ರಾಜ	ಪದಸಂಗ್ರಹಕಾರ, ಪದಸಂಗ್ರಹಕಾರ . . .

ಪದ
ಸಂಗ್ರಹಕಾರ	ಮಹಾಪ್ರಭುಗಳೇ

ರಾಜ — ಪೆಟ್ಟಿಗೆಗಳೆಲ್ಲ ಇಲ್ಲಿಗೇಕೆ ಬಂದಿದ್ದಾವೆ? ಬೇಗ ಹೇಳು . . .

ಪದ ಸಂಗ್ರಹಕಾರ — ಬೆಳಗ್ಗೆ ಅಷ್ಟೊತ್ತಿಗೆ ಎಲ್ಲವನ್ನು ಸಿದ್ಧಗೊಳಿಸಿ ನಿಮಗೆ ಕೊಡಬೇಕು ಅಂತ ರಾತ್ರಿಯಿಡೀ ಕೆಲಸ ಮಾಡಿದೆ, ಪ್ರಭುಗಳೇ . . .

ರಾಜ — ಒಳ್ಳೇದು, ಬಹಳ ಒಳ್ಳೇದು. ಇವತ್ತು ತುಂಬಾ ಮುಖ್ಯವಾದ ದಿನ, ಇವತ್ತು ಘೋಷಿಸಿಬಿಡ್ತೀನಿ, 'ಪದಗಳು ಸಿಗಲಿಲ್ಲ, ಅವು ಶಾಶ್ವತವಾಗಿ ಕಳೆದುಹೋಗಿವೆ' ಅಂತ. ಆಮೇಲೆ ಬಂದು ನನ್ನ ಪದಗಳ ಜೊತೆಗೆ ಇಡೀ ದಿನ ಇರ್ತೀನಿ. (ನಗುವನು) ಸರಿ ಸರಿ, ಹೋಗು ಕೆಲಸ ಮಾಡು.

ಪದ ಸಂಗ್ರಹಕಾರ — ಆಯ್ತು, ಮಹಾಸ್ವಾಮಿ.

(ರಾಜ ನಿರ್ಗಮಿಸುವನು)

* * *

ದೃಶ್ಯ – 9

(ಬೆಳಗ್ಗೆ. ಅರಮನೆಯ ಹೊರಗೆ ಜನರ ಗುಂಪು. ವರದಿಗಾರ್ತಿ ಗುಂಪಿನ ಪಕ್ಕ ನಿಂತಿರುವಳು)

ಕಥನಗಾರ–1 — ರಾಜನ ಭಾಷಣ ಕೇಳಲು ಜನರ ಗುಂಪು ಕಿಕ್ಕಿರಿದಿತ್ತು

ಕಥನಗಾರ–2 — ಸ್ಥಳೀಯ ವರದಿಗಾರ್ತಿಯೂ ವರದಿ ಮಾಡಲು ಬಂದಿದ್ದಳು.

ಕಥನಗಾರ–1 — ಆದರೆ ಮಾತಿಲ್ಲದ ವರದಿ ತಮಾಷೆಯಾಗಿತ್ತು!

(ಕಥೆಗಾರರು ವರದಿಗಾರ್ತಿ ಮಾಡುವ ಮೂಕಾಭಿನಯವನ್ನು ವೀಕ್ಷಿಸುತ್ತಾರೆ. ವರದಿಗಾರ್ತಿ ಈ ಕೆಳಗಿನ ವಿಷಯವನ್ನು ಜನರಿಗೆ ಹೇಳಲು ಪ್ರಯತ್ನಿಸುತ್ತಾಳೆ. 'ಶುಭೋದಯ ಪ್ರೇಕ್ಷಕರೇ, ಇಲ್ಲಿ ಅರಮನೆಯ ಮುಂದೆ ಜನರ ದೊಡ್ಡ ಗುಂಪೇ ಸೇರಿದೆ. ಜನರು ಕೋಪ ಹಾಗೂ ನೋವಿನಿಂದ ಕುದಿಯುತ್ತಿದ್ದಾರೆ. ಇನ್ನು ಕೆಲವೇ ನಿಮಿಷಗಳಲ್ಲಿ ಪ್ರಾರಂಭವಾಗುವ ಮಹಾರಾಜರ ಭಾಷಣ ಕೇಳಲು ಎಲ್ಲರೂ ಕಾತುರದಿಂದ ಕಾಯುತ್ತಿದ್ದಾರೆ. ವರದಿಗಾರ್ತಿ ಅಭಿನಯಿಸಿದ್ದನ್ನು ಮತ್ತೊಬ್ಬಳು ಹೇಳಲು ಪ್ರಯತ್ನಿಸುತ್ತಾಳೆ. ಅದು ಆಗದಿದ್ದಾಗ

ಗುಂಪಿನಲ್ಲಿದ್ದವನೊಬ್ಬ 'ಇದು ಆಗದ ಕೆಲಸ, ಬಿಟ್ಟುಬಿಡು.' ಎಂದು ಸೂಚಿಸುತ್ತಾನೆ. ಅವಳು ಕೈಕಟ್ಟಿ ಜನರನ್ನು ನೋಡುತ್ತಾ ಸುಮ್ಮನೆ ಕುಳಿತುಬಿಡುತ್ತಾಳೆ.)

ಕಥನಗಾರ–2 ಒಳ್ಳೆಯ ಪ್ರಯತ್ನ

ಕಥನಗಾರ–1 ಹೌದು ಪರವಾಗಿಲ್ಲ

(ಜೇಕ್ ಮತ್ತು ಸಾದಿಯಾರ ಪ್ರವೇಶ)

ಜೇಕ್ ನೀನು ಬಲೆ ತಗೊಂಡು ಹೋಗು, ರಾಜ ಮಾತಾಡೋದಕ್ಕೆ ಶುರು ಮಾಡಿದ ತಕ್ಷಣ ಆ ಪದಗಳನ್ನು ಹಿಡಿಯೋದಕ್ಕೆ ಸಿದ್ಧವಾಗಿರು. ಹುಷಾರು! ನನ್ನ ಪದಗಳನ್ನು ಹಿಡೀಬೇಡ.

ಸಾದಿಯ ಆಯ್ತು, ಹೆದರಬೇಡ. ನಿನ್ನ ಪದಗಳು ಇರುತ್ವೆ. ನೀನೂ ಇಲ್ಲೇ ಇರ್ತೀಯಾ?

ಜೇಕ್ ಹೌದು. ಎಲ್ಲಾ ಸರಿ ಹೋಗಬಹುದು ಅನ್ಸುತ್ತೆ . . .

ಸಾದಿಯ ನನಗೂ ಹಾಗೇ ಅನ್ನಿಸ್ತಾ ಇದೆ.

ಇಬ್ಬರೂ ಒಳ್ಳೇದಾಗಲಿ!

(ಜೇಕ್ ಗುಂಪಿನ ಮಧ್ಯೆ ಹೋಗಿ ನಿಲ್ಲುವನು. ಸಾದಿಯ ನಿರ್ಗಮಿಸುವಳು. ಎತ್ತರದ ವೇದಿಕೆಗೆ ರಾಜನ ಆಗಮನ ಕಂಡ ತಕ್ಷಣ ಎಲ್ಲರೂ ಚಪ್ಪಾಳೆ ಹೊಡೆಯುವರು.)

ರಾಜ ಧನ್ಯವಾದಗಳು, ಧನ್ಯವಾದಗಳು. ನನ್ನ ನಾಡಿನ ಜನರೇ, ಇಂದು ನಿಜಕ್ಕೂ ದುಃಖದ ದಿನ. ಎಷ್ಟೇ ಪ್ರಯತ್ನಪಟ್ಟು ಹುಡುಕಿದರೂ ಪದಗಳು ಸಿಗಲಿಲ್ಲ. ನಿಮ್ಮ ವ್ಯಥೆಯನ್ನು ನೋಡಿ ನನ್ನ ಹೃದಯ ಬಿರಿಯುತ್ತಿದೆ... ಆದರೆ ಮುಂದೊಂದು ದಿನ ಪದಗಳೇ ಇಲ್ಲದ ಜೀವನವನ್ನು ನೀವು ಪ್ರೀತಿಸ್ತೀರ ಅನ್ನೋ ಭರವಸೆ ನನಗಿದೆ. ನಾನು ನಿಮ್ಮ ಪರವಾಗಿ ಮಾತನಾಡುತ್ತೇನೆ, ಎಂದೆಂದಿಗೂ ನಾನು ನಿಮ್ಮ ಸೇವಕ, ಸದಾ ನಿಮ್ಮ ಸೇವೆಗಾಗಿಯೇ . . .

ಜೇಕ್ (ಗುಂಪಿನಿಂದ) ನಿಜಾನಾ?!

(ಗುಂಪು ನಿಟ್ಟುಸಿರು ಬಿಡುತ್ತೆ)

ರಾಜ ಏನದು ಸದ್ದು!?

ಜೇಕ್ ಪದಗಳು ಪ್ರಭುಗಳೇ.

ರಾಜ ಯಾರು ಪದಗಳನ್ನ ಬಳಸುತ್ತಾ ಇರೋದು? ಅಂದ್ರೆ ಇದು ಸಂತೋಷದ ವಿಷಯ! ಯಾರೋ ಒಬ್ಬರಿಗೆ ಪದಗಳು ಸಿಕ್ಕಿವೆ?! ಹ್ಞಾ! . . .

ಜೇಕ್ ಹೌದು. ಜೊತೆಗೆ ನನಗೆ ಇನ್ನೂ ಒಂದು ವಿಷಯ ಗೊತ್ತಾಗಿದೆ. ಈ ನಾಡಿನಲ್ಲಿ ಒಬ್ಬ ಮಹಾ ಮೋಸಗಾರ ಇದ್ದಾನೆ . . . ಅಂತ.

(ಗುಂಪು ಮತ್ತೊಮ್ಮೆ ನಿಟ್ಟುಸಿರು ಬಿಡುತ್ತದೆ)

ರಾಜ (ಹೆದರಿಕೆಯಾದರೂ ನಗುತ್ತಾನೆ) ಇದನ್ನು ನಂಬುವುದಕ್ಕೆ ಕಷ್ಟ ಆಗ್ತಾ ಇದೆ. ಬರೀ ಮಾತು ಬೇಡ, ಆ ಮೋಸಗಾರ ಯಾರು ಅಂತ ತೋರಿಸು, ನೋಡೋಣ.

ಜೇಕ್ ಆಯ್ತು ಪ್ರಭುಗಳೇ. ಆದರೆ ಅದು ಬೇರೆ ಯಾರೂ ಅಲ್ಲ, ನೀವೇ ಪದಗಳ ಕಳ್ಳ ಅಂತ ಜನರಿಗೆ ಖಂಡಿತ ತೋರಿಸ್ತೀನಿ.

ರಾಜ ಸುಳ್ಳು . . .

ಜೇಕ್ ನೀವು ನಮ್ಮ ಪದಗಳನ್ನೆಲ್ಲ ಕದ್ದು ಅರಮನೆಯಲ್ಲಿ ಬಚ್ಚಿಟ್ಟಿದ್ದೀರಿ.

ರಾಜ ಏನು ಹೇಳ್ತಾ ಇದ್ದೀಯ ನೀನು? ನಾನು ಈ ನಾಡಿನ ರಾಜ. ಜವಾಬ್ದಾರಿ... ಜನ... ನಾನು ಹೇಳ್ತಾ ಇರೋದು... ಇದು... ಏನು ಆಗ್ತಾ ಇದೆ ನನ್ನ ಪದಗಳಿಗೆ?!

(ಸಾದಿಯ ಬಲೆ ಹಿಡಿದು ಪ್ರವೇಶಿಸುತ್ತಾಳೆ. ರಾಜ ಬಲೆಯನ್ನು ನೋಡುತ್ತಾನೆ)

ರಾಜ ಓಹ್! ಇಲ್ಲ!!

ಸಾದಿಯ ಹೌದು ಪ್ರಭುಗಳೇ, ನೀವು ನಿಮ್ಮ ಪದಗಳನ್ನ ಕಳ್ಕೊಳ್ತಾ ಇದ್ದೀರಿ ... ನಾವು ಕಳೆದುಕೊಂಡಂತೆ

ರಾಜ ಆದರೆ . . . ಇದರ . . . ಒಂದಿನ . . . ಅನುಭವಿಸ್ತೀರಾ . . .

(ಪೊಲಿಸರು ರಾಜನನ್ನು ಹಿಡಿಯುತ್ತಾರೆ)

ರಾಜ ನನ್ನ ಕೈಗಳು . . . ನಾನು ಯಾರು . . . ಗೊತ್ತಾ?

(ಪೊಲೀಸ್ ಮತ್ತು ರಾಜನ ನಿರ್ಗಮನ)

(ಜೇಕ್ ಮತ್ತು ಸಾದಿಯ ಗುಂಪನ್ನು ಉದ್ದೇಶಿಸಿ ಮಾತಾಡುವರು)

ಜೇಕ್ ಮಹಿಳೆಯರೇ ಮತ್ತು ಮಹನೀಯರೇ, ಏನು ನಡೀತು ಅಂತ ನಾವು ನಿಮಗೆ ಹೇಳ್ತೀವಿ . . .

ಕಥನಗಾರ–1	ನಡೆದದ್ದೆಲ್ಲವನ್ನೂ ಅವರು ಎಲ್ಲರಿಗೂ ತಿಳಿಯುವಂತೆ ವಿವರಿಸಿದರು.
ಕಥನಗಾರ–2	ತಾವು ಹೇಗೆ ಈ ರಹಸ್ಯಾನಾ ಬೇಧಿಸಿದರು ಅಂತಲೂ ಹೇಳಿದ್ರು
ಕಥನಗಾರ–1	ಹೇಗೆ ತಮ್ಮ ಪ್ರಾಣವನ್ನು ಪಣವಾಗಿಟ್ಟು ಪದಗಳನ್ನ ವಾಪಸ್ಸು ತಂದ್ರು...
ಕಥನಗಾರ–2	ಪದಸಂಗ್ರಹಕಾರನ ಸಹಾಯ ಇಲ್ಲದೆ ಇದೆಲ್ಲಾ ಸಾಧ್ಯವಾಗುತ್ತಿರಲಿಲ್ಲ... ಹೀಗೆ ಎಲ್ಲವನ್ನೂ ಹೇಳಿದ್ರು
ಕಥನಗಾರ–1	ಈಗ ಮಾತನಾಡಲು ಬಹಳಷ್ಟು ಪದಗಳಿವೆ ಅಂತ ಒಂದಾದ ಮೇಲೊಂದು ಪದಗಳನ್ನ ಹೇಳಿದ್ರು
ಜೇಕ್	ಸುಂದರ ಕನಸು
ಕಥನಗಾರ–1	ಮತ್ತೆ . . .
ಸಾದಿಯ	ಬೆಳ್ಳಿ ಬೆಳಕು
ಕಥನಗಾರ–2	ಮತ್ತೆ . . .
ಜೇಕ್	ಪ್ರಜಾಪ್ರಭುತ್ವ
ಕಥನಗಾರ–1	ಹಾಗೆಯೇ ಎಲ್ಲರೂ ಕಾತರದಿಂದ ಕಾಯುತ್ತಿದ್ದುದನ್ನೂ ಅವರು ಮಾಡಿದ್ರು . . .
ಕಥನಗಾರ–2	ಜೇಕ್ ಪುಡಿಯನ್ನು ಹೊರತೆಗೆದ . . .
ಕಥನಗಾರ–1	ಸುದೀರ್ಘ ಉಸಿರು ತೆಗೆದುಕೊಂಡು . . .
	(ಪುಡಿಯನ್ನು ಗುಂಪಿನ ಕಡೆಗೆ ಜೋರಾಗಿ ಊದುತ್ತಾನೆ. ಜನರು ಉಸಿರಿನ ಜೊತೆ ಅದನ್ನು ಸೇವಿಸುತ್ತಾರೆ ಮತ್ತು ತಮ್ಮ ಪಕ್ಕದಲ್ಲಿರುವವರೊಡನೆ ಮಾತನಾಡಲು ಪ್ರಾರಂಭಿಸುತ್ತಾರೆ)
ವರದಿಗಾರ್ತಿ	(ಜೋರಾಗಿ ಕೂಗುತ್ತಾನೆ) ಇದು ನಿಜ ವೀಕ್ಷಕರೇ, ರಾಜರೇ ನಮ್ಮ ಪದಗಳ ಕಳ್ಳ ಎಂದು ತಿಳಿದುಬಂದಿದೆ. ಬಿಸಿ ಬಿಸಿ ಸುದ್ದಿ, ನಮ್ಮ ಪದಗಳು ಮರಳಿ ಬಂದಿವೆ!
	(ವರದಿಗಾರ್ತಿ ನಿರ್ಗಮಿಸುವಳು ಕೆಳಗಿನ ಮಾತುಗಳನ್ನು ಆಡುತ್ತಾ ಗುಂಪಿನಲ್ಲಿದ್ದ ಜನ ನಿಧಾನಗತಿಯಲ್ಲಿ ನಿರ್ಗಮಿಸುವರು)
ಕಳ್ಳ–1	ನಡೀ ಇನ್ನೊಂದು ಬ್ಯಾಂಕ್ ಹುಡುಕೋಣ
ಕಳ್ಳ–2	ನನಗ್ಯಾಕೋ ಬೇಡ ಅನ್ಸುತ್ತೆ . . .

ಕಳ್ಳ–1	ಯಾಕೆ?
ಕಳ್ಳ–2	ನಾವು ಅಪರಾಧಿಗಳು ಅಂತ ಹೇಳೋಕೆ ನ್ಯಾಯಮೂರ್ತಿಗಳಿಗೆ ಆಗಲಿಲ್ಲ
ಕಳ್ಳ–1	ಅದಕ್ಕೆ?
ಕಳ್ಳ–2	ನಮಗೆ ಇನ್ನೊಂದು ಅವಕಾಶ ಸಿಕ್ಕಿದೆ. ಬದುಕುವ ದಾರಿಯನ್ನು ಬದಲಾಯಿಸೋಣ, ನ್ಯಾಯವಾಗಿ ಬದುಕೋಣ.
ಕಳ್ಳ–1	ಓಹೋ ಆಗಬಹುದು! ಆದರೆ ಯಾವಾಗಲೂ 'ನಿಂತ್ಕೊ' ಅಂತ ಕಿರಿಚೋದು ಮಾತ್ರ ನಾನೇ.
ಕಳ್ಳ–2	ಆಗಬಹುದು.
	(ಕಳ್ಳ–1 ನಗುವನು, ಕಳ್ಳ–2 ತಲೆ ಅಲ್ಲಾಡಿಸುವನು. ಇಬ್ಬರೂ ನಿರ್ಗಮಿಸುವರು)
ಅಜ್ಜ–1	ಇದು ತುಂಬಾ ನಾಟಕೀಯವಾಗಿತ್ತು, ಅಲ್ವಾ!?
ಅಜ್ಜ–2	ಹೌದು, ನಾನೂ ಅದನ್ನೇ ಹೇಳಬೇಕು ಅಂದ್ಕೊಂಡೆ . . . (ವಿರಾಮ) ನಾವು ಎಲ್ಲಿ ಮಾತಾಡೋದನ್ನ ನಿಲ್ಸಿದ್ವೋ ಅಲ್ಲಿಂದಲೇ ಪ್ರಾರಂಭಿಸೋಣ. ನನಗೆ ಏನೋ ಬೇಕಿತ್ತು, ಅಲ್ವಾ?
ಅಜ್ಜ–1	ಹ್ಞೂ, ಮೊದಲು ನಾನು ಮೆಣ್ಸಿಳ್ಳುಜೀರಿಪುಡಿ ತರ್‍ತೀನಿ.
	(ಅಜ್ಜಿಯರು ನಿರ್ಗಮಿಸುವರು)
ತಾಯಿ	ಇಬ್ಬರೂ ಒಳ್ಳೆಯ ಕೆಲಸ ಮಾಡಿದ್ದೀರಾ.
ತಂದೆ	ನೀವು ಬದುಕಿನ ನಿಜವಾದ ಜೀವಂತಿಕೇನ ಉಳಿಸಿದ್ದೀರಾ. (ತಂದೆ ತಾಯಿ ಮಕ್ಕಳನ್ನು ತಬ್ಬಿಕೊಳ್ಳುವರು)
ತಾಯಿ	ಸರಿ, ಮನೇಲಿ ಸಿಗೋಣ. (ಮಾತನಾಡುತ್ತಾ ನಿರ್ಗಮಿಸುವರು)
ತಂದೆ	ಇವತ್ತು ಮಧ್ಯಾಹ್ನ ಇಬ್ಬರು ಹಾಗೇ ಸುತ್ತಾಡಿಕೊಂಡು ಬರೋಣ. ತುಂಬಾ ದೂರ ಅಲ್ವೇ ಇದ್ರು ಇಲ್ಲೇ ಸ್ವಲ್ಪ ದೂರ . . .
	(ಹೆಂಡತಿ ತಲೆ ಅಲ್ಲಾಡಿಸುವಳು, ಇಬ್ಬರೂ ನಿರ್ಗಮಿಸುವರು. ಸಾದಿಯ ಮತ್ತು ಜೇಕ್ ಮಾತ್ರ ವೇದಿಕೆಯ ಮೇಲೆ ಉಳಿಯುವರು)
ಜೇಕ್	ಎಲ್ಲರಿಗೂ ಅವರವರ ಪದಗಳು ವಾಪಸ್ಸು ಬಂದಿವೆ . . .
ಸಾದಿಯ	ನಮ್ಮ ಕೆಲಸ ಆಯ್ತು.

ಜೇಕ್	ನನಗನ್ನುತ್ತೆ ಇಂತಹ ರಹಸ್ಯಗಳು ಇನ್ನೂ ಇದ್ರೆ ಚೆನ್ನಾಗಿರುತ್ತೆ ಅಂತ! ನಾವಿಬ್ಬರೂ ಸೇರಿ ಕಂಡುಹಿಡೀಬಹುದು. ನಾವು ಯಾಕೆ ಇದೇ ಕೆಲಸ ಮಾಡಬಾರದು?! ಜೇಕ್ ಮತ್ತು ಸಾದಿಯ ತನಿಖಾಕಛೇರಿ...
ಸಾದಿಯ	ನಿನ್ನ ಹೆಸರು ಯಾಕೆ ಮೊದಲು?
ಜೇಕ್	ಯಾಕೇಂದ್ರೆ ಈ ಕೆಲಸದ ಹಿಂದೆ ಇದ್ದದ್ದು ನನ್ನ ತಲೆ
ಸಾದಿಯ	ಜೇಕ್ ನಿನ್ನಂಥವರಿಗೆ ಒಂದು ಪದ ಇದೆ ಗೊತ್ತಾ?
ಜೇಕ್	ಬುದ್ಧಿವಂತ? ಚಾಣಾಕ್ಷ? ನಿಸ್ಸೀಮ? . . .
ಸಾದಿಯ	ಅಲ್ಲ, ತಲೆಹರಟೆ!
	(ಜೇಕ್ ಮತ್ತು ಸಾದಿಯ ನಗುತ್ತಾ ನಡೆಯುವರು)
ಜೇಕ್	ಜಾಣ? ದಕ್ಷ? ನಿಪುಣ? . . .
ಸಾದಿಯ	ಉಹೂಂ ಕೇಳಿಸ್ಲಿಲ್ವಾ?. . . ತಲೆಹರಟೆ!!
	(ಜೇಕ್ ಮತ್ತು ಸಾದಿಯ ನಿರ್ಗಮಿಸುವರು. ಕಥೆಗಾರರು ಮಾತ್ರ ವೇದಿಕೆಯ ಮೇಲೆ ಇರುವರು)

* * *

ಮುಕ್ತಾಯ

ಕಥನಗಾರ–1	ಹೀಗೆ ಎಲ್ಲಾ ಸರೀ ಹೋಯ್ತು. ಮೊದಲಿನ ಹಾಗೆ ಜನ ಮಾತಾಡ್ತಾ ಇದ್ರು, ತಮಾಷೆ ಮಾಡ್ತಾ ಇದ್ರು . . . ಎಲ್ಲಾ ಕಡೆ . . .
ಕಥನಗಾರ–2	ಆದರೆ ಸ್ವಲ್ಪ ಬದಲಾವಣೆ ಇತ್ತು
ಕಥನಗಾರ–1	ಜನ ಇದೇ ಮೊದಲನೇ ಸಲ ಪದಗಳನ್ನ ಬಳಸ್ತಾ ಇರೋ ತರ ಹೊಸತನ ಇತ್ತು . . .
ಕಥನಗಾರ–2	ಯಾವ ಪದ ಅಂದ್ರೆ ಆ ಪದಾನ ಉಪಯೋಗಿಸ್ತಾ ಇರ್ಲಿಲ್ಲ . . .
ಕಥನಗಾರ–1	ಈಗ ಪದಗಳನ್ನ ಬಳಸೋದು ಸಂಭ್ರಮದ ಸಂಗತಿಯಾಗಿತ್ತು.
ಕಥನಗಾರ–2	ಸಾವಿರಾರು ಪದಗಳ ಆಯ್ಕೆ ಇತ್ತು
ಕಥನಗಾರ–1	ಸೂಕ್ತವಾದ ಪದಗಳನ್ನೇ ಬಳಸ್ತಿದ್ದರು.

(ಪದಸಂಗ್ರಹಕಾರ ಪುಸ್ತಕ ಹಿಡಿದು ಪ್ರವೇಶಿಸುವನು)

ಕಥನಗಾರ–1 ಇನ್ನು ಪದಸಂಗ್ರಹಕಾರ ಅರಮನೆಯಿಂದ ಹೊರಬಂದು ತನ್ನ ಕಾರ್ಯಾಗಾರಕ್ಕೆ ತೆರಳುತ್ತಾನೆ.

ಕಥನಗಾರ–2 ಮತ್ತೆ ಪ್ರೊಫೆಸರ್?!

(ಪ್ರೊಫೆಸರ್ ಬಣ್ಣದ ಬಟ್ಟೆ ತೊಟ್ಟುಕೊಂಡು ಕನ್ನಡಕ ಹಾಕಿಕೊಂಡು ಸೂಟ್‌ಕೇಸ್ ಹಿಡಿದುಕೊಂಡು ಪ್ರವೇಶಿಸುತ್ತಾರೆ)

ಪದ ಸಂಗ್ರಹಕಾರ ಎಲ್ಲಿಗೆ ಹೋಗಿದ್ರಿ ಇಷ್ಟು ದಿನ?

ಪ್ರೊಫೆಸರ್ ನಾನು ರಜೆಯ ಮೇಲಿದ್ದೆ

ಪದಸಂಗ್ರಕಾರ ನಿಜಾನಾ!?

ಪ್ರೊಫೆಸರ್ ಮತ್ತಿನ್ನೇನು?! (ಸೂಟ್ಕೇಸ್ ತೋರಿಸಿ) ಕಳೆದ ವಾರ ಮಹಾರಾಜರು ನನಗೆ ಹಣ ಕೊಟ್ಟು ಆದಷ್ಟು ಬೇಗ ರಜೆ ಮೇಲೆ ಹೋಗುವಂತೆ ಸೂಚಿಸಿದರು. ಅವರಿಗೆ ನನ್ನಿಂದ ತಪ್ಪಿಸ್ಕೊಬೇಕಿತ್ತು ಅನ್ನೋ ಹಾಗಿತ್ತು. (ನಗುವಳು) ಹೋದೆ. ನಾನು ಕಳ್ಕೊಂಡಿದ್ದೇನು?

ಪದ ಸಂಗ್ರಹಕಾರ ಜಾಸ್ತಿ ಏನೂ ಇಲ್ಲ ಬಿಡಿ.

(ಪ್ರೊಫೆಸರ್ ಮತ್ತು ಪದಸಂಗ್ರಹಕಾರ ನಿರ್ಗಮಿಸುವರು)

ಕಥನಗಾರ–1 ಆದರೆ ರಾಜ

(ಸಿಡುಕುತ್ತಾ ರಾಜ ಪ್ರವೇಶಿಸುವನು)

ಕಥನಗಾರ–1 ಅವನು ಎಲ್ಲಾ ಪದಗಳನ್ನು ಕಳೆದುಕೊಂಡಿದ್ದಾನೆ.

ಕಥನಗಾರ–2 ಆದರೆ ಒಂದೇ ಒಂದು ಪದ ಇದೆ. ನಿರ್ಣಯ ಅವನಿಗೆ ಬಿಟ್ಟದ್ದು.

ಕಥನಗಾರ–1 ಅವನು ಆ ಕೊನೆಯ ಪದವನ್ನು ಹೇಳಿದರೆ ಮತ್ತೆ ಎಲ್ಲ ಮೊದಲಿನಂತೆಯೇ ಸರಿ ಹೋಗುವುದು.

ಕಥನಗಾರ–2 ಇಲ್ಲಾಂದ್ರೆ ತನ್ನ ಉಳಿದ ದಿನಗಳನ್ನ ಒಂದು ಕತ್ತಲ ಕೋಣೆಯಲ್ಲಿ ಕಳೆಯಬೇಕಾಗಬಹುದು!

ಕಥನಗಾರ–1 ಹಾಗಾದರೆ ಅವನು ಏನು ತೀರ್ಮಾನ ಮಾಡಿದ?

(ರಾಜ ಬಾಯಿ ಮುಚ್ಚಿ, ಕೈಕಟ್ಟಿ ಕುಳಿತಿದ್ದಾನೆ)

ಕಥನಗಾರ–1 ರಾಜ ಯಾಕೆ ಹಾಗೆ ಮಾಡ್ದ?

ಕಥನಗಾರ–2 ಮಾತಾಡೋದಕ್ಕೆ ಅವನಿಗೆ ಇಷ್ಟ ಇಲ್ಲ ಅನ್ಸುತ್ತೆ

ಕಥನಗಾರ–1 ಅಥವಾ ಅವನು ಬಲು ಹಠಮಾರಿ ಇರಬೇಕು . . .

ಕಥನಗಾರ–2 ಇರಬಹುದು. ಅವನು ಆ ಕೊನೆ ಪದಾನ ಹೇಳಲಿಲ್ಲ ಅಂದ್ರೂ 'ತ... ಪ್ಪಾ ...ಯ್ತು' ಅಕ್ಷರಗಳು ರಾಜನತ್ತ ನೋಡಿ ಮುಗುಳ್ನಗುತ್ತವೆ. ರಾಜ ಕಣ್ಣನ್ನು ಮಿಳುಕಿಸುತ್ತಾ ಅಪಮಾನಗೊಂಡವನಂತೆ ನಿಧಾನವಾಗಿ ತಿರುಗಿ ವೇದಿಕೆಗೆ ಬೆನ್ನು ಮಾಡಿ ಕುಳಿತುಕೊಳ್ಳುವನು.

ಕಥನಗಾರ–1 ಕನಿಷ್ಠ ಕ್ಷಮಿಸಿ ಅನ್ನೋ ಪದಾನ್ನಾದ್ರೂ ನೆನಪಲ್ಲಿ ಉಳಿಸ್ಕೋಬಹುದಿತ್ತು!


ಭಾಗ–2





ಜಾಗತೀಕರಣ ಮತ್ತು ಮಹಿಳಾ ಸ್ವಾಯತ್ತತೆ

–ಡಾ.ಕೆ.ಬಿ.ಸರಸ್ವತಿ

ನಾನು ದಕ್ಷಿಣದವಳು. ಪೂರ್ವ ದೇಶದವಳು ಮತ್ತು ಪೌರಾತ್ಯ ಪರಂಪರೆಯವಳು ಹಾಗೂ ಹೆಣ್ಣು. ಆದ್ದರಿಂದ ನಾನು ಸ್ವತಂತ್ರಳು. ನನಗೆ ಅವಕಾಶಗಳು ಮುಕ್ತವಾಗಿವೆ. ಜಾಗತೀಕರಣವನ್ನು ನಾನು ನೋಡುವ ಕ್ರಮವೂ ಭಿನ್ನವಾದುದಾಗಿದೆ.

ಜಾಗತೀಕರಣವೆಂಬುದು ಒಂದು ಮುದ್ದಾದ ಮಾಯೆ. ಮುದ್ದಾಡುವವರ ಸಂಖ್ಯೆ ದೊಡ್ಡದಿದೆ. ಈ ಮಾಯೆಯನ್ನು ಎದುರಾಗುತ್ತಿರುವ ನಾನು 'ಕೇಳುವ' ಪರಂಪರೆಯವಳು. ಕೇಳುವ, ಕೇಳಿಸಿಕೊಳ್ಳುವ ಪ್ರಕ್ರಿಯೆಯೇ ಆಹ್ಲಾದಕರವಾದುದು. ನಾನಿಲ್ಲೇನೂ ಹೇಳುತ್ತಿಲ್ಲ. ಜಾಗತೀಕರಣದ ಅಬ್ಬರವನ್ನಷ್ಟೇ ಕೇಳಿಸಿಕೊಳ್ಳುತ್ತಿದ್ದೇನೆ. ನನ್ನೊಂದಿಗೆ ನೀವು ಕೂಡ. ಜಾಗತೀಕರಣವು ಒಂದು ವ್ಯವಸ್ಥಿತವಾದ ವಿಸ್ಮೃತಿ ಅಥವಾ ಅರಿವಳಿಕೆ. ಅಧಿಕಾರ ಕೇಂದ್ರಗಳ ಸ್ಥಾಪನೆ ಮತ್ತು ಅದರ ಭಾಗವಾದ ಮಾರುಕಟ್ಟೆ ಆರ್ಥಿಕತೆ ಇದರ ಬುನಾದಿ. ಇವೆರಡರ ಬಗೆಗಿನ ನನ್ನ ಪ್ರತಿಕ್ರಿಯೆ ಏನು? ಕೇಳುವ ಪರಂಪರೆಯವಳಾದ ನನಗೆ ಜಾಗತೀಕರಣವೆಂಬ ಅಸಂಗತವನ್ನು ಎತ್ತಿ ಆಡಬೇಕಾದ ಒತ್ತಡವಿಲ್ಲ. ಏಕೆಂದರೆ ಅದರ ದೌರ್ಬಲ್ಯ ಮತ್ತು ನಾಶದ ಬೀಜ ಅದರೊಟ್ಟಿಗೇ ಇದೆ.

ಈ ಅಧ್ಯಯನವಲ್ಲಿ ಎರಡು ಭಾಗಗಳಿವೆ. ಮೊದಲನೆಯ ಭಾಗದಲ್ಲಿ ಜಾಗತೀಕರಣವು ಮಹಿಳೆಯನ್ನೊಳಗೊಂಡಂತೆ ಎಲ್ಲ ಸಾಂಸ್ಕೃತಿಕ, ಆರ್ಥಿಕ ರೂಪಗಳಿಗೆ ನೀಡುವ ವ್ಯಾಖ್ಯಾನ / ಅಪವ್ಯಾಖ್ಯಾನಗಳ ವಿವರಣೆ ಇದೆ. ಎರಡನೆಯ ಭಾಗದಲ್ಲಿ ಸ್ವಾಯತ್ತ ಮಹಿಳಾ ಅಭಿವ್ಯಕ್ತಿ ನೆಲೆಗಳು ಜಾಗತೀಕರಣಕ್ಕೆ ಪ್ರತಿಕ್ರಿಯಿಸಿದ ಅನ್ವಯದ ಭಾಗಗಳಿವೆ. ಜಾಗತೀಕರಣದ ಪ್ರಕ್ರಿಯೆಯನ್ನು ಕುರಿತಾದ ಅನೇಕ

ವ್ಯಾಖ್ಯಾನಗಳಿವೆ. ಪ್ರಸ್ತುತ ಅಧ್ಯಯನವು ಜಾಗತೀಕರಣವನ್ನು ನಿರ್ದಿಷ್ಟ ಸ್ಥಳೀಯ ಸಮೂಹಗಳ ಜೀವಪೋಷಣಾ ವ್ಯವಸ್ಥೆಯನ್ನು ದುರ್ಬಲಗೊಳಿಸುವ ಅನ್ಯ ಪ್ರವೇಶಗಳೆಂದು ವಿವರಿಸಿಕೊಳ್ಳುತ್ತದೆ. ಅನ್ಯ ಪ್ರವೇಶಗಳು ಸಮೂಹಗಳ ಜೀವನಶೈಲಿ, ಭಾಷೆ, ಸಾಮಾಜಿಕ ವ್ಯವಸ್ಥೆ, ಲಿಂಗಾಧಾರಿತ ಬದುಕು, ಜ್ಞಾನ ಶಿಸ್ತುಗಳು, ಆಹಾರೋತ್ಪಾದನೆ ಮುಂತಾದ ಬದುಕಿನ ಎಲ್ಲ ಆಯಾಮಗಳನ್ನೂ ತನ್ನ ಉದ್ದೇಶಿತ ಆರ್ಥಿಕ ಗತಿಗೆ ಅನುಗುಣವಾಗಿ ಹೊಂದಿಕೊಳ್ಳುವಂತೆ ಮಾಡುತ್ತವೆ. ಈ ಶಿಸ್ತಿನಲ್ಲಿ ಔದಾರ್ಯದ ಅಧಿಕಾರವಿದೆ. ಅಂದರೆ ತನ್ನ ಈ ವರ್ತನೆ ತನಗಾಗಿ ಅಲ್ಲ, ಬದಲಿಗೆ ಈ ಸಮೂಹಗಳ ಅಭಿವೃದ್ಧಿಗೆ ಎಂದು ಅವು ಬಿಂಬಿಸುತ್ತವೆ. ಅದನ್ನು ತಾನು ಹೊತ್ತುಕೊಳ್ಳುತ್ತಿರುವ ಜವಾಬ್ದಾರಿ ಎಂದುಕೊಳ್ಳುತ್ತವೆ. ವಿಶ್ವದ ನಾನಾ ಸಮೂಹಗಳು ತಮ್ಮ ಅಸ್ಮಿತೆಗಳನ್ನು ಕಾಪಾಡಿಕೊಳ್ಳಲು ತಮ್ಮ ಜೀವನ ಮೀಮಾಂಸೆಯ ಅನೇಕ ಆಯಾಮಗಳನ್ನು ಎಚ್ಚರದಿಂದ ರೂಪಿಸಿಕೊಂಡಿರುತ್ತವೆ. ಉದಾಹರಣೆಗೆ ಸಮೂಹವೊಂದು ಸ್ವತಂತ್ರವಾಗಿ ಸೃಜನಶೀಲವಾಗಿ ಬಾಳುವ ಅಗತ್ಯವಾದ ಸಾವಯವ ಸಂಬಂಧದ ವ್ಯವಸ್ಥೆಯನ್ನು ರೂಢಿಸಿಕೊಂಡಿರುತ್ತವೆ. ತಮ್ಮ ಆಹಾರ ಪದ್ಧತಿ, ಕೃಷಿ ಪದ್ಧತಿ, ಆರೋಗ್ಯ ಪದ್ಧತಿ, ನೀರು, ನೆಲ, ಜೈವಿಕಾವರಣಗಳನ್ನು ಜತನದಿಂದ ಕಾಪಾಡಿಕೊಳ್ಳುತ್ತದೆ. ತನ್ನ ಸುತ್ತಲಿನ ಸಮಸ್ತ ಜೀವಕೋಟಿಗೆ ಸಮಾನವಾಗಿ ಬದುಕುವ ಅವಕಾಶಕ್ಕೆ ಭಂಗ ಬಾರದಂತೆ ಬದುಕುವ ಜವಾಬ್ದಾರಿಯುತ ಮತ್ತು ಎಚ್ಚರದ ಜೀವನ ಶೈಲಿಯನ್ನು ಕಟ್ಟಿಕೊಳ್ಳುತ್ತದೆ.

ಜಾಗತೀಕರಣವು ಸ್ವಾಯತ್ತ ನೆಲೆಗಳನ್ನು ಅಧಿಕಾರ ಕೇಂದ್ರಗಳ ಅಡಿಯಾಳನ್ನಾಗಿಸುವ ವಾಹಕವಾಗುತ್ತದೆ. ಪ್ರಚಲಿತದಲ್ಲಿರುವ ಸಬಲೀಕರಣ ಉದ್ದೇಶದ ಸ್ತ್ರೀ ಹೋರಾಟಗಳು ಅಧಿಕಾರ ಕೇಂದ್ರಗಳೊಡನೆ ಪಾಲಿಗಾಗಿ ನಡೆಸುವ ಹೋರಾಟಗಳಾಗಿರುವುದರಿಂದ, ಅವು ಅನಿವಾರ್ಯವಾಗಿ ತಮ್ಮ ಸ್ವಾಯತ್ತ ನೆಲೆಗಳನ್ನು ಕಡೆಗಣಿಸಿ ಅಧಿಕಾರ ಕೇಂದ್ರಗಳನ್ನು ಮಾನ್ಯಮಾಡುತ್ತವೆ. ಇದು ವೈರಿ ಒಡ್ಡಿದ ಬಲೆಯನ್ನು ನಾವಾಗಿ ಅಪ್ಪಿಕೊಂಡಂತಾಗುತ್ತದೆ. ಇಂತಹ ಹೋರಾಟಗಳು ಇನ್ನಷ್ಟು ಮತ್ತಷ್ಟು ಸವಲತ್ತುಗಳಿಗಾಗಿ, ಅಧಿಕಾರಕ್ಕಾಗಿ ನಡೆಸುವ ಚೌಕಾಸಿಗೆ ಇಳಿಯಲೇಬೇಕಾಗುತ್ತದೆ. ಇಂತಹ ಹೋರಾಟಗಳನ್ನು ನಿರಾಕರಿಸಬೇಕೆಂದೇನೂ ಇಲ್ಲ. ಆದರೆ ಅವು ಅಂತಿಮವಾಗಿ ತಾತ್ಕಾಲಿಕ ಪರಿಣಾಮಗಳಲ್ಲಿ ತೃಪ್ತಿ ಹೊಂದಿ ಸ್ಥಗಿತವಾಗುತ್ತವೆ. ಆದರೆ ಸ್ವಾಯತ್ತ ನೆಲೆಯ ಚಿಂತನೆಗಳಿಗೆ ಮುಖ್ಯವಾಗುವುದು ಅಧಿಕಾರದ ಮರು ಹಂಚಿಕೆಯೂ ಅಲ್ಲ, ಹೆಚ್ಚಿನ ಪಾಲೂ ಅಲ್ಲ, ಬದಲಿಗೆ ಎಲ್ಲ ರೀತಿಯ ಅಧಿಕಾರ ನಿರಸನವು ಇಲ್ಲಿನ ಪ್ರಮುಖ ನಿಲುವು. ಈ ನಿಲುವು ಹೆಣ್ಣಿನ ಸ್ವಾಯತ್ತ ನೆಲೆಗಳನ್ನು ಭದ್ರಗೊಳಿಸುವ ಬಗೆಯನ್ನು ಈ ಅಧ್ಯಯನ ವಿವರವಾಗಿ ಪರಿಶೀಲಿಸುತ್ತದೆ. ಇದೊಂದು ಭಿನ್ನ ರೀತಿಯ, ಭಿನ್ನ ದಿಕ್ಕಿನ ಪಯಣ. ನಮ್ಮ ಸಾಮಾಜಿಕ, ಸಾಂಸ್ಕೃತಿಕ ಹೋರಾಟಗಳು ಹಿಡಿದ ಅಧಿಕಾರಮುಖೀ ದಿಕ್ಕಿನ ಪಯಣಗಳು ತಲುಪಿರುವ ಗುರಿಗಳು ನಮ್ಮ ಉದ್ದೇಶವನ್ನು ಎಷ್ಟರಮಟ್ಟಿಗೆ ಈಡೇರಿಸಿವೆ ಎಂಬುದು ಸ್ಪಷ್ಟವಾಗಬೇಕಿದೆ.

ಒಂದೆರಡು ಸ್ವಾಯತ್ತ ನೆಲೆಗಳನ್ನು ಉದಾಹರಿಸುವುದಾದರೆ, ಭೂಮಿಯ ಧಾರಣಾಶಕ್ತಿ, ಬಹುಮುಖಿ ಜೀವನಪದ್ಧತಿಗಳು, ಸ್ಥಳೀಯ ಸಂಪನ್ಮೂಲಗಳನ್ನು ಬಳಸಿ ಬದುಕಿನ ಮಾದರಿಗಳನ್ನು ಕಟ್ಟಿಕೊಳ್ಳುವ ಕರ್ತೃತ್ವಶಕ್ತಿ ಮುಂತಾದವು. ಅನ್ಯ ಪ್ರವೇಶದಿಂದ ಇವುಗಳು ನಾಶವಾಗದಂತೆ, ದುರ್ಬಲವಾಗದಂತೆ ನೋಡಿಕೊಂಡರೆ ಸಾಕು. ಇಂತಹ ಸ್ವತಂತ್ರ ಜೀವನ ಅಭಿವ್ಯಕ್ತಿಯನ್ನು ಭ್ರಷ್ಟಗೊಳಿಸುತ್ತಿರುವ ಜಾಗತೀಕರಣದ ಹತಾರುಗಳು ಯಾವುವೆಂದರೆ : 1) ಭಾಷೆ 2) ಸಂಕೇತಗಳು 3) ಮಾರುಕಟ್ಟೆ 4) ಲೋಕಸಮಸ್ತವನ್ನು ಭಿನ್ನ ಭಿನ್ನ ಘಟಕಗಳನ್ನಾಗಿಸಿ ವಿಂಗಡಿಸಿ ಮಾರುಕಟ್ಟೆಯ ಸರಕನ್ನಾಗಿಸುವುದು 5) ಪ್ರಮಾಣೀಕರಣ 6) ಸ್ಥಳೀಯ ಭೂಗೋಳದ ನಿರಾಕರಣೆ. ಈ ಪರಿಕಲ್ಪನೆಗಳು ಈಗಾಗಲೇ ಅನೇಕ ಕಡೆ ಚರ್ಚಿತವಾಗಿರಬಹುದು. ಆದರೆ ಇವುಗಳ ಮರುವ್ಯಾಖ್ಯಾನವು ಹೊಸ ಚಿಂತನೆಗಳಿಗೆ ಚಾಲನೆ ನೀಡಲು ಸಾಧ್ಯವಿದೆ. ಪ್ರಸ್ತುತ ಸಂದರ್ಭದಲ್ಲಿ ಮಹಿಳಾ ಚಿಂತನೆಯ ಸ್ವರೂಪ ಮತ್ತು ಮುಂದಿನ ಹಾದಿಯ ನಿರ್ಧಾರಣೆಗೆ ಇದು ಅಗತ್ಯವಿದೆ.

ಜ್ಞಾನ ಪ್ರಸರಣ ಮತ್ತು ತಿಳುವಳಿಕೆಯ ಸುದ್ದಿ (ವಿಜ್ಞಾನ ಮತ್ತು ತಂತ್ರಜ್ಞಾನವನ್ನೂ ಒಳಗೊಂಡಂತೆ) ಹಾಗೂ ರಾಷ್ಟ್ರ ರಾಷ್ಟ್ರಗಳ ನಡುವಿನ ಕೊಳು ಕೊಡುಗೆಗಳೇನು ಹೊಸತೇನಲ್ಲ. ವ್ಯಾಪಾರ, ಪ್ರವಾಸ, ವಲಸೆಗಳು ನಾಗರಿಕತೆಯ ಆದಿಯಿಂದಲೂ ಜೀವಂತಿಕೆಯ ಲಕ್ಷಣಗಳಾಗಿ ಮುಂದುವರಿದಿವೆ. ಇಪ್ಪತ್ತನೆಯ ಶತಮಾನವು ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಗಮನಾರ್ಹವಾದ ಸಾಧನೆಯನ್ನು ಮಾಡಿದೆ. ಭೂಮಿಯನ್ನು ಸಂಕುಚಿತಗೊಳಿಸಿದ್ದೇವೆ. ಖಂಡಗಳನ್ನು ಕೆಲವೇ ಗಂಟೆಗಳಷ್ಟು ಹತ್ತಿರ ತಂದಿದ್ದೇವೆ. ವಿಚಾರಗಳನ್ನು ಕೆಲವೇ ತೃಣ ಸೆಕೆಂಡುಗಳಿಗೆ ಕುಗ್ಗಿಸಿದ್ದೇವೆ. ಅಗಣಿತ ಸಂಪತ್ತನ್ನು 'ಉತ್ಪಾದಿಸಿದ್ದೇವೆ'. ನಮ್ಮ ಮಾರುಕಟ್ಟೆಗಳನ್ನು ಕಲ್ಪಿಸಲೂ ಆಗದ ಭೋಗವ್ಯೂಹದಿಂದ ಸಿಂಗರಿಸಿದ್ದೇವೆ. ಎಲ್ಲ ರಾಷ್ಟ್ರಗಳೂ ಹೆಚ್ಚುಕಡಿಮೆ 'ಪ್ರಜಾಪ್ರಭುತ್ವ'ವನ್ನು ತಮ್ಮದಾಗಿಸಿಕೊಂಡಿವೆ ಮತ್ತು ಮಾನವ ಹಕ್ಕುಗಳ ಸಂರಕ್ಷಕರೆಂದು ಘೋಷಿಸಿಕೊಂಡಿವೆ.

ಜಾಗತೀಕರಣವೆಂಬ ಹೆಸರಿನ ಈ ಯಾನವನ್ನು ಇಡಿಯಾಗಿ ನಿರ್ಲಕ್ಷಿಸಲಾಗಲೀ, ಈ ಪ್ರಕ್ರಿಯೆಯಿಂದ ಆಚೆ ಉಳಿಯುವುದಾಗಲೀ, ಸಮಂಜಸವಲ್ಲ. ಮಾರುಕಟ್ಟೆ ಆರ್ಥಿಕತೆಯನ್ನು ಉಪಯೋಗಿಸಿಕೊಳ್ಳಬೇಕೋ ಬೇಡವೋ ಎಂಬುದು ನಮ್ಮ ಪ್ರಶ್ನೆಯೇ ಅಲ್ಲ. ವಿಸ್ತಾರವಾದ ಬಳಕೆಯಿಂದ ಮಾತ್ರವೇ ಸಮೃದ್ಧವಾದ ಆರ್ಥಿಕತೆ ಸಾಧ್ಯ. ಚರ್ಚೆ ಇಲ್ಲಿಗೆ ಮುಗಿದಂತೆ ಅಲ್ಲ, ಬದಲಿಗೆ ಶುರುವಾಗುವುದೇ ಇಲ್ಲಿಂದ. ಮಾರುಕಟ್ಟೆ ಆರ್ಥಿಕತೆಯ ಲಾಭಾಂಶಗಳು ಹೇಗೆ ಹಂಚಿಕೆಯಾಗುತ್ತವೆ, ಮಾನವ ಹಾಗೂ ಪ್ರಾಕೃತಿಕ ಸಂಪನ್ಮೂಲಗಳು ಹೇಗೆ ಅಭಿವೃದ್ಧಿಯಾಗುತ್ತವೆ ಮತ್ತು ಅಧಿಕಾರ ಕೇಂದ್ರಗಳು ಹೇಗೆ ವ್ಯವಸ್ಥಿತವಾಗಿ ಅಂಚಿಗೆ ತಳ್ಳಲ್ಪಟ್ಟವರನ್ನು ಮತ್ತೂ ಮೂಕವಾಗಿಸುತ್ತವೆ ಎಂಬಿತ್ಯಾದಿ ಪ್ರಶ್ನೆಗಳು ಮಹಿಳಾ ಚಿಂತನೆಗೆ ಗ್ರಾಸ ಒದಗಿಸುತ್ತವೆ. ಅನೇಕ ಸಂಸ್ಥೆಗಳಂತೆ ಮಾರುಕಟ್ಟೆಯೂ ಕೂಡ ಒಂದು ಸಂಸ್ಥೆ. ಸಾಂಸ್ಥೀಕರಣವು ಎಲ್ಲ ತರಹದ ಶೋಷಣೆಗಳಿಗೂ ಮೂಲ. ಜಾಗತೀಕರಣವು ಎಲ್ಲ

ತರಹದ ಸಾಂಸ್ಥೀಕೃತ ಶೋಷಣೆಗಳನ್ನು ಅವ್ಯಾಹತವಾಗಿ ಮುಂದುವರಿಯುವಂತೆ ನೋಡಿಕೊಳ್ಳುತ್ತದೆ. ಈ ಪ್ರಕ್ರಿಯೆಯನ್ನು ನಿಭಾಯಿಸುವಾಗ ನಮ್ಮ ಸ್ವಾಯತ್ತನೆಲೆಗಳು ದುರ್ಬಲವಾಗದಂತೆ ಎಚ್ಚರವಹಿಸುವುದು ಅಗತ್ಯ. ಈ ಪ್ರಕ್ರಿಯೆಗೆ ಜಾಗತೀಕರಣವು ಬಳಸಿರುವ ಹತಾರುಗಳ ವಿವರವಾದ ವಿಶ್ಲೇಷಣೆಯನ್ನು ಇನ್ನು ಮಾಡಬಹುದಾಗಿದೆ.

ವ್ಯಾಖ್ಯಾನ ಮತ್ತು ಅಪವ್ಯಾಖ್ಯಾನಗಳು:

ನನ್ನ ಕಾರ್ಯಕ್ಷೇತ್ರವು ನನ್ನ ದೇಹವು; ಅದೇ ನನ್ನ ಭಾಷೆ. ಇಲ್ಲಿ ಈಗ ಇರುವ ಭಾಷೆ ನನ್ನದಲ್ಲ. ನನ್ನ ರೀತಿಯಲ್ಲಿಯೇ ನಾಲಿಗೆ ಇಲ್ಲದ ಅನೇಕ ಸಮೂಹಗಳಿವೆ (ಉದಾಹರಣೆಗೆ: ಮಂಗಳಮುಖಿಯರು, ಅನೇಕ ಬುಡಕಟ್ಟು ಸಮೂಹಗಳು, ಕನ್ನಡದಂತಹ ಅನೇಕ ದೇಶಭಾಷೆಗಳು, ತೃಣಧಾನ್ಯದಂತಹ ನಿರ್ಲಕ್ಷಿತ ಧಾನ್ಯ ಸಮೂಹ, ಇತ್ಯಾದಿ). ಜಾಗತೀಕರಣದ ಮುಂದುವರಿಕೆಗೆ ಸಹಾಯ ಮಾಡುವ ಗ್ರಾಹಕ ಸಂಸ್ಕೃತಿಯು ಮಹಿಳೆಯ ದೇಹವನ್ನು ತನ್ನ ಅಧೀನಕ್ಕೆ ಮೊದಲು ತೆಗೆದುಕೊಳ್ಳುತ್ತದೆ. ನಂತರ ಅವಳ ದೇಹವನ್ನು ಛಿದ್ರೀಕರಿಸಿ ಮನಸ್ಸನ್ನು ಹೊರತುಪಡಿಸಿ ಭಿನ್ನ ಭಿನ್ನ ಘಟಕಗಳ ಸರಕಾಗಿಸುತ್ತದೆ. ನಮ್ಮ ದೇಹಗಳು ಅವರ ಕಲ್ಪಿತ ಮಾದರಿಯ ದೇಹಗಳಾಗಿ ಸಾಂಸ್ಥೀಕರಣಗೊಂಡು ನಮ್ಮ ದಿನನಿತ್ಯದ ನಡೆಗಳಲ್ಲಿ, ಬದುಕಿನ ಚಟುವಟಿಕೆಗಳಲ್ಲಿ ಒಪ್ಪಿಕೊಂಡು ಪುನರಾವರ್ತನೆಗೊಳ್ಳುತ್ತಿರುತ್ತವೆ. ನಮ್ಮ ದೇಹಗಳ ಮೇಲಿನ ಈ ಅಧಿಕಾರವು ಸ್ಥಾಪನೆಯಾಗಬೇಕಾದರೆ ವ್ಯವಸ್ಥಿತವಾಗಿ ರೂಪಿಸಲ್ಪಟ್ಟ ಒಂದು ಆವರಣ ಬೇಕು. ಅಂತಹ ಅನೇಕ ಆವರಣಗಳನ್ನು ಸಿದ್ಧಪಡಿಸಿಕೊಳ್ಳಲಾಗಿದೆ. ಉದಾಹರಣೆಗೆ, ಶಾಲೆಗಳು, ಮನರಂಜನೆಯ ಮಾಧ್ಯಮಗಳು, ಕಾನೂನು, ಶಿಕ್ಷಣ ಮತ್ತು ಕುಟುಂಬದಂತಹ ಸಮಾಜವನ್ನು ಇಡಿಯಾಗಿ ಹತೋಟಿಯಲ್ಲಿಡಬಲ್ಲ ಸಂಸ್ಥೆಗಳು ಸ್ತ್ರೀ ಧರ್ಮವನ್ನು ನಿರ್ಧರಿಸುತ್ತವೆ. ರಾಷ್ಟ್ರ, ರಾಜ್ಯದ ಪ್ರಜೆಯಾಗಬಲ್ಲ ವ್ಯಕ್ತಿಯು ತನ್ನನ್ನು ತಾನು ಅಂತಹ ಸಾಮಾಜಿಕ ವಾತಾವರಣದಲ್ಲಿ ಅರ್ಥಪೂರ್ಣ ಚೇತನವಾಗಿಸಿಕೊಳ್ಳಲು ಹಾತೊರೆಯುತ್ತಾನೆ. ಈ ಅರ್ಥೈಸುವಿಕೆಯು ಮುಖ್ಯವಾಗಿ ಭಾಷೆ ಮತ್ತು ಜ್ಞಾನ ನಿರ್ಮಾಣ ಕೇಂದ್ರಗಳ ಮೂಲಕವೇ ಸಾಧ್ಯವಾಗುತ್ತದೆ. ಭಾಷೆಯನ್ನು ಜ್ಞಾನದ ಏಕೈಕ ಮಾರ್ಗವನ್ನಾಗಿ ಶೈಕ್ಷಣಿಕ ಸಂಸ್ಥೆಗಳು ಅಧಿಕೃತಗೊಳಿಸಿವೆ. ಅದಕ್ಕೆ ಅನುಗುಣವಾಗಿ ಜ್ಞಾನ ಕೇಂದ್ರಗಳು ಭಾಷೆಯ ಮೂಲಕ ಮೂರ್ತಗೊಳ್ಳುತ್ತವೆ. ಅಮೂರ್ತವಾದ ಭಾಷೆಯ ಮಿತಿಗೆ, ಯಾವುದೇ ಸಾಂಸ್ಥಿಕ ಯಾಜಮಾನಿಕೆಗೆ ಸಹಕಾರ ನೀಡದ ಸ್ತ್ರೀ ಸ್ವಾಯತ್ತತೆಯು ಮೂಕವಾಗಿಬಿಡುತ್ತದೆ. ದೇಹವನ್ನು ಅದರ ಕರ್ತೃತ್ವ ಶಕ್ತಿಯನ್ನು ಸಂಭ್ರಮದಿಂದ ಭಾವಿಸುವ ಸ್ತ್ರೀ ಸ್ವಾಯತ್ತತೆಯು ಹೆಣ್ಣಿನ ದೇಹವು ಕೇವಲ ಮಾರುಕಟ್ಟೆಯ ಸರಕಾಗುವುದನ್ನು ಯಾವ ಕಾಲದಿಂದಲೂ ಪ್ರತಿಭಟಿಸುತ್ತಲೇ ಬಂದಿದೆ. ಆದರೆ ಅಕ್ಷರಗಳಲ್ಲಲ್ಲ; ಬದಲಿಗೆ ರೂಪಕಗಳಲ್ಲಿ, ಆಚರಣೆಗಳಲ್ಲಿ. ಈ ಮೂಕ ಸಮೂಹಗಳು ಮಾರುಕಟ್ಟೆಯ ವಹಿವಾಟಿಗನುಗುಣವಾಗಿ ಸ್ವೀಕಾರಕ್ಕೋ, ತಿರಸ್ಕಾರಕ್ಕೋ ಈಡಾಗುತ್ತವೆ.

ತನ್ಮೂಲಕ ಸರಕೀಕರಣದ ಪ್ರಕ್ರಿಯೆಗೆ ಒಳಪಡುತ್ತವೆ. ಈ ವಸ್ತುವಾಗುವ ಪ್ರಕ್ರಿಯೆಯೆಂದರೆ ಸ್ವಾಯತ್ತತೆಯ ನಾಶ. ಇದು ಎಚ್ಚರದಿಂದ ದಾಖಲಿಸಬೇಕಾದ ಸಂಗತಿ. ಏಕೆಂದರೆ ಇಂತಹ ನಿರ್ವಚನಗಳು ಮಹಿಳಾ ಸಂಕುಲವನ್ನು ಜಾಗತಿಕರಣದ ಪ್ರಕ್ರಿಯೆಯಿಂದ, ಅಭಿವೃದ್ಧಿಯ ಮುಖ್ಯ ವಾಹಿನಿಯಿಂದ ದೂರ ಸರಿಸುತ್ತಿರುವ ಪ್ರಯತ್ನಗಳೆಂಬಂತೆ ಸರಳೀಕರಣಗೊಂಡುಬಿಡುವ ಅಪಾಯಗಳಿವೆ. ಇದನ್ನು ಮತ್ತೂ ಸ್ಪಷ್ಟವಾಗಿಸಲು 'ಅಭಿವೃದ್ಧಿ' ಹೆಸರಿನ ಆಶಾ ಗೋಪುರವು ಹೇಗೆ ನಮ್ಮ ಹಾದಿ ತಪ್ಪಿಸುತ್ತಿದೆ ಎಂದು ಅರಿತುಕೊಳ್ಳಬೇಕು.



ಜಾಗತೀಕರಣದ ಸಂದರ್ಭದಲ್ಲಿ ಬಡತನವು ಸ್ತ್ರೀ ಮುಖೇನ ಪ್ರತಿನಿಧಿಸಲ್ಪಡುತ್ತದೆ. ಈ ನಿರ್ಲಕ್ಷಿತ ಸಮೂಹಗಳೆಲ್ಲವೂ ಜಾಗತಿಕರಣದ ವ್ಯಾಖ್ಯೆಯಲ್ಲಿ 'ಅನ್ಯರು'. 'ಕೊರತೆಯಿರುವವರು' ಮತ್ತು 'ಅವಕಾಶವಂಚಿತರು'. ಪರಿಧಿಗೆ ತಳ್ಳಲ್ಪಟ್ಟಿರುವ ಇವರೆಲ್ಲರು ಪ್ರಶ್ನಿಸುತ್ತಿರುವುದು / ಪ್ರಶ್ನಿಸಬೇಕಾದ್ದು 'ಅಭಿವೃದ್ಧಿಯನ್ನು'. ಬಂಡವಾಳ ನಿರ್ದೇಶಿತ ಮಾರುಕಟ್ಟೆಯ ಅಭಿವೃದ್ಧಿ ವ್ಯಾಖ್ಯಾನ ಮತ್ತು ಪೋಷಕ ಮಾರುಕಟ್ಟೆಯಾಧಾರಿತ ಜೀವನ ಕ್ರಮಗಳ ನಡುವಿನ ಸಂಘರ್ಷಗಳ ಕಥನ ಈ ಹೊತ್ತಿನ ಅಗತ್ಯ. ಪರಿಸರ ಒಡ್ಡುವ ಎಲ್ಲ ನ್ಯೂನತೆಗಳೊಡನೆ ಬದುಕುವುದೂ ಒಂದು ಕೌಶಲ. ಕೇವಲ ವಸ್ತುವಾಗಲೀ ಹಣವಾಗಲೀ ಒಂದು ಸಮೂಹದ ಅಭಿವೃದ್ಧಿಯನ್ನು ನಿರ್ಧರಿಸುತ್ತಿದ್ದರೆ. ಈ ಪ್ರಶ್ನೆಯನ್ನು ನಾನು ಕೇಳಲೇಬೇಕು. ನನ್ನ ಅಭಿವೃದ್ಧಿಯ ವ್ಯಾಖ್ಯಾನಕಾರರು ಯಾರು? ನಾನು ಹೇಗೆ ಅಥವಾ ಎಂಥವಳಾಗಿ ಬಾಳಬೇಕೆಂದು ಯಾರು ನಿರ್ಧರಿಸಬೇಕು?

ನನ್ನ ಒಟ್ಟಾರೆ ಬದುಕಿನ ಶೈಲಿಯ ಅಂತಿಮ ನಿರ್ಧಾರ ನನ್ನಿಂದಲೇ ಆಗಬೇಕು. ಅದನ್ನು ನನ್ನ ಸುತ್ತಲಿನ ನಿಸರ್ಗದೊಡನೆ ಹೊಂದಿಕೊಳ್ಳುವ ಎಲ್ಲ ಆಯ್ಕೆಗಳೂ

ನನಗಿರಬೇಕು. ಸ್ವಾತಂತ್ರ್ಯವೆಂದರೆ ಹೆಚ್ಚು ಅವಕಾಶಗಳೆಂದೇ ಅರ್ಥ. ನನ್ನ ಸ್ವಾಯತ್ತತೆಯು ನನ್ನ ಸ್ವಾತಂತ್ರ್ಯ. ಜಾಗತೀಕರಣವು ಸ್ಥಳೀಯ ಬದುಕಿನ ಕ್ರಮಕ್ಕೆ ವ್ಯತಿರಿಕ್ತವಾದುದು ಮತ್ತು ಸ್ಥಳೀಯ ಪ್ರಜ್ಞೆಯನ್ನು ಮಸುಕಾಗಿಸಿ ಅಮಾನ್ಯಮಾಡುತ್ತದೆ. ಮಾರುಕಟ್ಟೆಯು ಮುಂದಿಡುವ ಅವಶ್ಯಕತೆಗಳು ಅಥವಾ ಕೊರತೆಗಳು ನನ್ನವಾಗಬೇಕಿಲ್ಲ. ಉಪಭೋಗ ಸಂಸ್ಕೃತಿಯ ಸಂಕೇತಗಳಾದ ಟಿ.ವಿ. ಆಗಲಿ, ಮೊಬೈಲ್ ಆಗಲಿ ನನ್ನ ಮಣ್ಣಿನ ಗುಡಿಸಲಿಗೆ ಬಂದ ಮಾತ್ರಕ್ಕೆ ನಾನು ಸಿರಿವಂತಳಾದೆ ಎಂದಲ್ಲ. ಇಂತಹ ವಸ್ತುಗಳನ್ನು ನಾನು ಬಳಸಲೇಬೇಕೆಂಬ ಪರೋಕ್ಷ ಒತ್ತಡವು ನನ್ನ ಅಗತ್ಯಗಳ ನಿರ್ಧಾರವನ್ನು ನನ್ನಿಂದ ಕಿತ್ತುಕೊಳ್ಳುತ್ತಿದೆ. ಸುಮಾರು ಆರು ಸಾವಿರ ಭತ್ತದ ತಳಿಗಳನ್ನು ಬೆಳೆದು ಉಣ್ಣುವ ನನ್ನ ಆಹಾರವನ್ನು ಕೇವಲ ಸೋನಾಮಸೂರಿಗೋ, ಬಾಸುಮತಿಗೋ ಅನಿವಾರ್ಯವಾದ ಮಿತಿಗೊಳಪಡಿಸುವುದು ನನ್ನ ಸ್ವಾತಂತ್ರ್ಯಹರಣವಲ್ಲದೇ ಮತ್ತೇನು? ಅದು ನನ್ನ ನಾಲಗೆಯ ರುಚಿಸಂಸ್ಕಾರಕ್ಕೆ ಮಾಡುವ ಅವಮಾನ ಕೂಡ. ಹೀಗೆ ಎಲ್ಲವನ್ನೂ ಏಕಕ್ಕೆ ಎರಕಹೊಯ್ಯುವ ಪ್ರಕ್ರಿಯೆಯು ಅಂತಿಮವಾಗಿ ಏಕಾಧಿಕಾರದ ಕಡೆಗೆ ಕರೆದೊಯ್ಯುತ್ತದೆ ಎಂಬುದೀಗ ಅರಿವಾಗಿರುವ ಸಂಗತಿಯಾಗಿದೆ.

ಕೈಗಾರಿಕಾ ಕ್ರಾಂತಿಯವರೆಗೆ ಕೆಲವೇ ವಸ್ತುಗಳನ್ನು ಹೊಂದಿ ಮಿತವಾಗಿ ಬಾಳುವುದು ಸಾಧ್ಯವಿತ್ತು. Thanks to subsistence economy! ಕುಟುಂಬಗಳಿಗಾಗಿ, ಸಮುದಾಯಕ್ಕಾಗಿ ಉತ್ಪಾದಿಸುವ ಸಂಪ್ರದಾಯವು ಚೇತೋಹಾರಿಯಾಗಿತ್ತು. ಆದ್ದರಿಂದಲೇ ಫ್ರೆಂಚ್ ತತ್ವಜ್ಞಾನಿ Joseph Proudhon ಬಡತನವು ಮನುಕುಲ ನಾಗರಿಕತೆಯ ಸಹಜ ಸ್ಥಿತಿ ಎನ್ನುತ್ತಾನೆ. Marshal Shalin ಕೂಡ ಶಿಲಾಯುಗದಲ್ಲಿ ಬಡತನ ಮಾನವನಿಗೆ ಅಪರಿಚಿತವಾಗಿತ್ತು ಹಾಗೂ ಈಗ ಇದೇ ಬಡತನವು ನಾಗರಿಕತೆಯ ಆವಿಷ್ಕಾರ ಎಂದಿದ್ದಾನೆ. ಈ ವ್ಯಾಖ್ಯೆಗಳನ್ನು ಪ್ರಚಲಿತ ವಿಶ್ವಬ್ಯಾಂಕ್ ಹೇಗೆ ಅಪವ್ಯಾಖ್ಯಾನಕ್ಕೀಡು ಮಾಡಿದೆ ಎಂಬುದನ್ನು ಗಮನಿಸುವುದಾದರೆ : 2001ರ ವಿಶ್ವಬ್ಯಾಂಕ್ ವರದಿಯ ಲೇಖಕಿ ದೀಪಾ ನಾರಾಯಣ್ ಪ್ರಕಾರ ಬಡವರೆಂದರೆ ದಿನಕ್ಕೆ ಒಂದು ಅಥವಾ ಎರಡು ಡಾಲರ್‌ಗಳಿಗಿಂತ ಕಡಿಮೆ ಗಳಿಸುವವರು. ಅವರ ತಂಡ ಎದುರಾಗುವ ಸುಮಾರು ಅರವತ್ತು ಸಾವಿರ ಬಡವರನ್ನು ಅವರು ಅಳೆಯುವುದು ಇದೇ ಮಾಪನದಿಂದ. ಈ ಆಧಾರದ ಮೇಲೆ ವಿಶ್ವದ ಜನಸಂಖ್ಯೆಯಲ್ಲಿ ಶೇಕಡಾ 56ರಷ್ಟು ಮಂದಿ ಬಡವರಿದ್ದಾರೆ. ನಾಗರಿಕತೆಯ ಇತಿಹಾಸದಲ್ಲಿ ಇದೇ ಪ್ರಥಮ ಬಾರಿಗೆ ಇಷ್ಟೊಂದು ಪ್ರಮಾಣದ ಜನ ಅವರೆಲ್ಲರ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಿಸರಗಳೊಂದಿಗೆ ವಿಶ್ವ ಆರ್ಥಿಕ ಮಾರುಕಟ್ಟೆಯಲ್ಲಿ ಬಡವರಾಗಿ, ಯಾಚಿಸುವವರಾಗಿ ದಾಖಲಾಗಿದ್ದಾರೆ.

ನಮ್ಮ ಬದುಕು ಒಂದು ಜೀವಜಾಲ. ಇಲ್ಲಿ ಯಾವುದೂ ಮುಖ್ಯವೂ ಅಲ್ಲ ಅಮುಖ್ಯವೂ ಅಲ್ಲ. ಜನಸಮುದಾಯಗಳಿಗೆ, ಬದುಕಿಗೆ ಬೇಕಾದ ಜೀವಪೋಷಕಾಂಶಗಳು ಸಮುದಾಯದಿಂದಲೇ ದೊರಕಬೇಕು. ತಮ್ಮ ಕಷ್ಟಕಾಲದಲ್ಲಿ ಕರ್ತೃತ್ವ ಶಕ್ತಿಯಿಂದ

ಪರಿಸರದ ಸಂಪನ್ಮೂಲಗಳಿಗೆ ಹಾನಿಯಾಗದಂತೆ ಜೀವಪ್ರೇರಕವಾಗಿ ಬದುಕುವ ಭೂಮಿಕೆಯನ್ನು ಸಮುದಾಯಗಳು ಕಟ್ಟಿಕೊಡಬೇಕು. ಹೊಂದಾಣಿಕೆಯ ಮನೋಭಾವವು ಇಂತಹ ಪೋಷಕ ಆರ್ಥಿಕತೆಯ ರೂಢಿಪರಂಪರೆಗಳಲ್ಲಿ ಮೈಗೂಡಿರುತ್ತದೆ. ಬಡತನಕ್ಕೂ ದಾರಿದ್ರ್ಯಕ್ಕೂ ವ್ಯತ್ಯಾಸವಿದೆ. ಬಡತನವೆಂಬುದು ಅಥವಾ ಅಂತಹ ಬದುಕಿನ ರೀತಿಯು ತನ್ನ ಮತ್ತು ತನ್ನ ಸುತ್ತಲ ಜನರೊಂದಿಗೆ ಹಂಚಿಕೊಳ್ಳುತ್ತ, ವಿನಿಮಯ ಮಾಡಿಕೊಳ್ಳುತ್ತ ಸಂಬಂಧವನ್ನು ಕಟ್ಟುವ ರೀತಿ. ತನ್ನನ್ನೂ, ಪರರನ್ನೂ, ಸಾಮಾಜಿಕ ಸ್ವಾಸ್ಥ್ಯವನ್ನೂ, ಪ್ರಕೃತಿಯ ಆರೋಗ್ಯವನ್ನೂ ಹೆಪ್ಪಿಟ್ಟು ಕಾಯ್ದಿಡುವ ಸ್ಥಿತಿ. ಬಡತನವು ಸಾಂಸ್ಕೃತಿಕ ಭ್ರಷ್ಟತೆ ಮತ್ತು ವಿಷಯ ಲಂಪಟತೆಯಿಂದ ಸಮುದಾಯವನ್ನು ಕಾಪಾಡಿದರೆ, ದಾರಿದ್ರ್ಯವು ಸಮುದಾಯಗಳ ಕರ್ತೃತ್ವವನ್ನು ನಾಶಗೊಳಿಸಿ ಭ್ರಷ್ಟತೆಯ ಹೀನಸ್ಥಿತಿಗೆ ಕೊಂಡೊಯ್ಯುತ್ತದೆ. ವ್ಯಕ್ತಿಯು ಹೊಸ ಹೊಸದಾಗಿ ಬಂಡವಾಳಶಾಹಿಯ ಅಗತ್ಯಕ್ಕೆ ಅನುಗುಣವಾಗಿ ಸೃಷ್ಟಿಯಾಗುವ ಅವಶ್ಯಕತೆಗಳನ್ನು ಕೊಂಡುಕೊಳ್ಳುವ ಗ್ರಾಹಕನಾಗಿ ಮಾತ್ರವೇ ಜೀವಿಸಿರುತ್ತಾನೆ. ಇಂತಹ ಗ್ರಾಹಕರು ದರಿದ್ರರು, ಬಡವರಲ್ಲ. ಇವರ ಸೈನ್ಯ ಹೆಚ್ಚಾದಂತೆಲ್ಲ ಮಾರುಕಟ್ಟೆ ಆರ್ಥಿಕತೆಯು ವಿಜೃಂಭಿಸುತ್ತದೆ.

ಬಡತನದ ವ್ಯಾಖ್ಯೆಯನ್ನು ಸಾರ್ವತ್ರಿಕಗೊಳಿಸುವುದು ಸಾಧ್ಯವಿಲ್ಲ. ಅದರ ವಿಸ್ತಾರ ಏಕಗ್ರಹಿಕೆಗೆ ಸಿಗುವಂಥದ್ದಲ್ಲ. ಅದು ಏಕ ಕಾಲದಲ್ಲಿ ಇತ್ಯಾತ್ಮಕವೂ ಆಗಬಲ್ಲದು, ನೇತ್ಯಾತ್ಮಕವೂ ಆಗಬಲ್ಲದು. ಅದು ಸಾಪೇಕ್ಷ, ಸಾಂದರ್ಭಿಕ ಮತ್ತು ಸಂಸ್ಕೃತಿ ನಿರ್ಧರಿತವಾಗಿರುತ್ತದೆ. **ಯಾವುದೇ ವ್ಯಾಖ್ಯೆಗಳು ಸಾರ್ವತ್ರಿಕಗೊಂಡಷ್ಟು ಅಂತಿಮವಾಗಿ ವ್ಯಾಖ್ಯಾನಕಾರರ ಪರವಾಗಿರುತ್ತವೆಯೇ ಹೊರತು ವ್ಯಾಖ್ಯಾನಗೊಂಡವರ ಪರವಾಗಿರುವುದಿಲ್ಲ. ಬಡತನವನ್ನು ವ್ಯಾಖ್ಯಾನಿಸುವವನ ಕುತಂತ್ರ ಮತ್ತು ಉದ್ದೇಶಗಳನ್ನು ಅವನ ವ್ಯಾಖ್ಯೆ ತಿಳಿಸುವುದೇ ಹೊರತು ಬಡವರ ಬದುಕನ್ನಲ್ಲ.** ಬಡತನದ ನಿಜಸಮಸ್ಯೆಯನ್ನು ವಿಶ್ವಬ್ಯಾಂಕು ತನ್ನದೆಂದು ಭಾವಿಸಿಲ್ಲ. ಅವರ ಯಾವುದೇ ಮೂಲಭೂತ ಸಮಸ್ಯೆಯನ್ನು ಅದು ಎದುರಾಗುತ್ತಿಲ್ಲ. ಅದು ಹೇಳುತ್ತಿರುವ ಅಭಿವೃದ್ಧಿ ಮಂತ್ರವು ಜೀವಾವರಣವನ್ನು ಆತಂಕಕ್ಕೆ ತಳ್ಳುತ್ತಿದೆ. ಇದರಿಂದಾಗಿ ಪೋಷಕ ಆರ್ಥಿಕತೆಯು ಆತಂಕಕ್ಕೀಡಾಗಿದೆ. ಇದು ಬಡವರ ಚೇತನವನ್ನು ಅವರ ಬದುಕುವ ಕಲೆಯನ್ನು ನಾಶಮಾಡುತ್ತದೆ. ಹಾಗೆಂದು ಬಡವರಿಗೆ ಹಣ ಬೇಡವೆಂದಲ್ಲ. ತಮ್ಮ ಸ್ವಾಯತ್ತನೆಲೆಗಳನ್ನು ಕಳೆದುಕೊಂಡ ಬಡವರು ಅನಿವಾರ್ಯವಾಗಿ ಮಾರುಕಟ್ಟೆ ನಿರ್ಧರಿತ ಬದುಕಿಗೆ ವರ್ಗಾವಣೆಯಾಗಿ ತಮ್ಮ ಜೀವನ ಕೌಶಲಗಳನ್ನು, ಕರ್ತೃತ್ವ ಶಕ್ತಿಯನ್ನು ಕೇವಲ ಧನಾರ್ಜನೆಗಾಗಿ ಬಳಸಬೇಕಾದ ಅನಿವಾರ್ಯ ಸ್ಥಿತಿಗೆ ದೂಡಲ್ಪಡುತ್ತಾರೆ. ಇಂತಹ ಮಾರುಕಟ್ಟೆಯಲ್ಲಿ, ಅಸಹಜವಾಗಿ, ಆತ್ಮರಹಿತ ಅನಾಮಿಕ ವಸ್ತುಗಳಾಗಿ ಮಾರ್ಪಾಡಾಗುತ್ತಾರೆ.

ಮಹಿಳೆ ಕೂಡ ಬಡತನದಂತೆಯೇ ಏಕಗ್ರಹಿಕೆಗೆ, ಏಕವ್ಯಾಖ್ಯಾನಕ್ಕೆ ಸಿಗುವಂಥವಳಲ್ಲ. ಬಡತನದಂತೆಯೇ ಅಧಿಕಾರ ಕೇಂದ್ರಗಳು ನೀಡುವ ವ್ಯಾಖ್ಯಾನಗಳನ್ನಾಧರಿಸಿ ಹೆಣ್ಣನ್ನು

ಅರ್ಥೈಸಲಾಗುವುದಿಲ್ಲ. ಹೆಣ್ಣು ಏಕಕಾರಿಯೂ ಅಲ್ಲ; ಮಾರುಕಟ್ಟೆಯು ನಿರ್ಧರಿಸುವ ಸರಕೂ ಅಲ್ಲ. ಹೆಣ್ಣಿನ ಸ್ವಾಯತ್ತನೆಲೆಗಳ ಶೋಧನೆ ಬಡತನದ ಶೋಧಕ್ಕಿಂತಲೂ ವೈವಿಧ್ಯಮಯವಾದುದು. ಜಗತ್ತಿನಾದ್ಯಂತ ಇರುವ ನೂರಾರು ಜೀವನ ಶೈಲಿಗಳ, ಕರ್ತೃತ್ವ ಶಕ್ತಿಗಳ ಪ್ರತಿನಿಧಿಯಾಗಿರುವ ಹೆಣ್ಣನ್ನು ನಿರ್ದಿಷ್ಟಗೊಳಿಸಿ ಸೀಮಿತಗೊಳಿಸಲು ಬಾರದು. **ಮಹಿಳೆಯ ಅಸ್ಮಿತೆಯು ಜಾಗತಿಕರಣದ ಆರ್ಥಿಕತೆಯ ಅಧಿಕಾರದ ಎದುರು ತನ್ನೆಲ್ಲ ಸೌಂದರ್ಯವನ್ನು ಕಳೆದುಕೊಂಡ ಕೇವಲ ಬಿಕರಿಗಾಗಿ ಇರುವ ವಸ್ತುಗಳಾಗುವುದು ಸಾಂಸ್ಕೃತಿಕ ದಾರಿದ್ರ್ಯದ ಅತಿರೇಕ. ಅವಳನ್ನು ಕೇವಲ ಲೈಂಗಿಕತೆಯ ಸರಕೆಂದುಕೊಳ್ಳುವುದು ಮತ್ತು ಹಾಗೆ ಇರುವುದೇ ತನ್ನ ನಿಜಸ್ಥಿತಿ ಎಂದು ಅವಳು ತಿಳಿಯುವಂತೆ ಜಾಗತೀಕರಣ ಮಾಡಿರುವ ಮಾಂತ್ರಿಕ ಕೇಡು.** ಜಾಗತೀಕರಣವು ಪ್ರಮಾಣಗಳನ್ನು ಬಯಸುವುದು ಭಾಷೆಯ ಮೂಲಕ, ಸಂಕೇತಗಳ ಮೂಲಕ ಮತ್ತು ದೇಹಗಳನ್ನು ಅಧೀನಗೊಳಿಸುವುದರಿಂದ. ತನ್ನ ಆಧಿಪತ್ಯ ಮಾತ್ರವೇ ಸತ್ಯ. ಈ ಅಧಿಕಾರವನ್ನು ಒಪ್ಪಿಕೊಂಡರೆ ಮಾತ್ರ ನಮ್ಮೆಲ್ಲರಿಗೆ ಬದುಕುವುದು ಸಾಧ್ಯ ಎಂಬ ನಿಲುವಿಗೆ ಸವಾಲಾಗುವುದು ಸ್ವಾಯತ್ತ ಮಹಿಳಾ ಚಿಂತನೆಗಳು.

ಭಾಗ–2

ಪ್ರಚಲಿತದಲ್ಲಿರುವ ಸ್ತ್ರೀವಾದಿ ಚಿಂತನಾ ನೆಲೆಗಳು ತಮ್ಮನ್ನು ಗುರುತಿಸಿಕೊಳ್ಳಲು, ದಾಖಲಿಸಲು, ಪ್ರತಿಷ್ಠಾಪಿಸಲು ಕಂಡುಕೊಂಡಿರುವ ಮಾರ್ಗಗಳಲ್ಲಿ:

1. ಸಮಾನ ಹಕ್ಕು ಹಾಗೂ ಸಬಲೀಕರಣಕ್ಕಾಗಿ ನಡೆಯುವ ಮಹಿಳಾ ಹೋರಾಟಗಳು. ಈ ನೆಲೆಯಲ್ಲಿ ಸುಂದರ ಹೆಣ್ಣಿನ ಮಾದರಿಯಿಂದ ಹಿಡಿದು ಅವಳ ಬದುಕಿನ ಸಾರ್ಥಕ್ಯದವರೆಗೆ 'ಸ್ತ್ರೀಮೀಮಾಂಸೆ'ಯನ್ನು ಪುರುಷ ಮುಂತಾದ ಅಧಿಕಾರ ಕೇಂದ್ರಗಳು ರೂಪಿಸಿ ನೀಡುತ್ತವೆ. ಇವಳೇನಿದ್ದರೂ 'ಪಡೆಯುವವಳಾಗುತ್ತಾಳೆಯೇ' ಹೊರತು ಅಂತಹ ಅಧಿಕಾರ ಕೇಂದ್ರಗಳನ್ನು ಪ್ರಶ್ನಿಸಲಾರಳು. ಇದನ್ನು ಮೀರಿ ಬರುವ ಪ್ರತಿಭಟನೆಗಳನ್ನು ಸಾಂಕೇತಿಕ ಗೌರವಗಳನ್ನು ನೀಡುವುದರ ಮೂಲಕ, ಸಂಪ್ರದಾಯಗಳ ಮೂಲಕ (ಉದಾ: ಮಾತೃದೇವೋಭವ, ಪಾತಿವ್ರತ್ಯಧರ್ಮ ಇತ್ಯಾದಿ) ನಿರ್ವಹಿಸಲಾಗುತ್ತದೆ.

2. ಎರಡನೆಯದು ಸ್ವಾಯತ್ತನೆಲೆಯ ಚಿಂತನೆಗಳು. ಹೆಣ್ಣನ್ನು ಪೂರ್ಣಪ್ರಮಾಣದ ಸ್ವಾಯತ್ತ ಸಂಸ್ಥೆಯನ್ನಾಗಿ ಕಾಣುವ ಈ ಧಾರೆ, ಸ್ತ್ರೀವಾದಿ ಮೀಮಾಂಸೆಯನ್ನು ಆಯಾ ಸಂದರ್ಭಕ್ಕನುಗುಣವಾಗಿ, ಕಾಲ ದೇಶಬದ್ಧವಾಗಿ ಬದುಕಿನ ಶೈಲಿಯನ್ನು ಸ್ವತಂತ್ರವಾಗಿ ಒದಗಿಸಿಕೊಳ್ಳಬಲ್ಲ ಚೈತನ್ಯವೆಂದು ಗುರುತಿಸುತ್ತದೆ. ಇಂತಹ ಸ್ವಾಯತ್ತ ನೆಲೆಯ ಅಭಿವ್ಯಕ್ತಿಗಳು ಮಾತ್ರವೇ, ಜಾಗತೀಕರಣವನ್ನು ಸಮರ್ಥವಾಗಿ ಎದುರಿಸಬಲ್ಲವು. ಏಕೆಂದರೆ, ಸ್ಥಳೀಯ ಸಮುದಾಯದ ಸಹಬಾಳ್ವೆಯ ಸಾಮರ್ಥ್ಯವೃದ್ಧಿಯಿಂದಲೇ ತನ್ನ ಯಶಸ್ಸನ್ನು ರೂಪಿಸಿಕೊಳ್ಳುವ ಪ್ರಕ್ರಿಯೆ ಮಾತ್ರವೇ ಅಧಿಕಾರ ಕೇಂದ್ರಗಳನ್ನು ನಿರಸನಗೊಳಿಸಬಲ್ಲದು; ಇಂತಹ ಸ್ವಾಯತ್ತನೆಲೆಯ ಚಿಂತನೆಗಳು ಕನ್ನಡ ಸಾಹಿತ್ಯದಲ್ಲಿ ವ್ಯಕ್ತವಾಗಿರುವ ಒಂದೆರಡು ಉದಾಹರಣೆಗಳನ್ನು ನೋಡಬಹುದು.

ಹೆಣ್ಣಿನ ಸಂಭ್ರಮಕ್ಕೆ ಮತ್ತು ಅಪಮಾನಕ್ಕೆ ಕಾರಣವಾಗುವ ಪ್ರಮುಖ ಸಂಗತಿ ದೇಹವೇ. ಹಾಗಾಗಿ ಸ್ತ್ರೀವಾದಿಚಿಂತನೆಗಳು ತಮ್ಮ ಯಾನವನ್ನು ಅನಿವಾರ್ಯವಾಗಿ 'ದೇಹ ಮೀಮಾಂಸೆ'ಯ ಮೂಲಕವೇ ಆರಂಭಿಸಬೇಕಾಗಿದೆ.

ಅಲ್ಲಮಪ್ರಭುವಿನ ಒಂದು ವಚನ:

ಬಾಯೇ ಭಗವಾಗಿ

ಕೈಯೇ ಇಂದ್ರಿಯವಾಗಿ

ಹಾಕುವ ತುತ್ತುಗಳೆಲ್ಲ ಬಿಂದು ಕಾಣಿರೋ

ಪ್ರಥಮ ವಿಷಯ ಇಂತಿರಲಾಗಿ

ಅದೆಲ್ಲಿಯದೋ ಅದ್ವೈತ ಗುಹೇಶ್ವರಾ

ನಮ್ಮೆಲ್ಲ ಇರುವಿಕೆಯನ್ನು ನಾವು ಸಾಕಾರಗೊಳಿಸಿಕೊಳ್ಳುವುದು ನಮ್ಮ ದೇಹದ ಮೂಲಕ. ಈ ದೇಹವೆಂಬುದು ಕೇವಲ ವಾಹಕವಲ್ಲ. ವಾಸ್ತವವೂ ಇದರ ಮೂಲಕವೇ ದೊರಕಬೇಕು. ಅತೀತವೂ ಇದರಿಂದಲೇ ನಿಲುಕಬೇಕು. ಇಲ್ಲಿ ಬಿಂದು ಎಷ್ಟು ಮುಖ್ಯವೋ ತುತ್ತೂ ಅಷ್ಟೇ ಮುಖ್ಯ. ನನ್ನ ದೇಹದ ಪ್ರತಿಯೊಂದು ಅವಯವವೂ ಅದರೊಟ್ಟಿಗೆ ಸಂಬಂಧವಿರುವ ಪ್ರತಿಯೊಂದು ಕ್ರಿಯೆಯೂ ಸಾವಯವ ಸಂಬಂಧದೊಂದಿಗೆ ಮಾತ್ರವೇ ಅನಾವರಣಗೊಳ್ಳಲು ಸಾಧ್ಯ. ಪ್ರಸ್ತುತ ಸಂದರ್ಭದಲ್ಲಿ ಹೆಣ್ಣಿನ ದೇಹಕ್ಕೆ ಎರಡು ಭಿನ್ನ ಮಾದರಿಯ ಶೋಷಣೆಗಳಿವೆ. ನನ್ನ ಕೌಶಲ್ಯಯುತ ಬೆರಳುಗಳು ಕೈಗಡಿಯಾರ ಅಥವಾ ಬಟ್ಟೆ ತಯಾರಿಕೆಯಲ್ಲಿ ತೋರುವ ಜಾಣ್ಮೆ, ಚಾತುರ್ಯದ ಸಂದರ್ಭದಲ್ಲಿ ಇರುವ ದೇಹವೇ ಬೇರೆ, ಜಾಹಿರಾತು ಮಾರುಕಟ್ಟೆಯಲ್ಲಿ ಸಂಭ್ರಮವನ್ನೇ ಹೊದ್ದಂತೆ ಕಾಣುವ ಮಾದರಿ ದೇಹವೇ ಬೇರೆ. ಎರಡೂ ಬೇರೆ ಬೇರೆ ರೀತಿಯಲ್ಲಿ ಶೋಷಿತವಾಗುತ್ತಿರುತ್ತವೆ. ದೇಹವೆಂಬುದು ಯಾವತ್ತೂ ವಿಭಾಗಿಸಲ್ಪಟ್ಟು ಗ್ರಹಿಸಬೇಕಾದ ಚೇತನವಲ್ಲ. ಅದು ಕಾರ್ಯವಹಿಸುವುದು ತನ್ನ ಅಖಂಡತೆಯಲ್ಲಿ. ಇಲ್ಲಿ ರೈತನೊಬ್ಬನು ತನ್ನ ಹೊಲದಲ್ಲಿ ಬೆಳೆದಿರುವ ಬೆಳೆಗೆ ಅಳಿಲಿನ ಅಥವಾ ಕೆಂಪು ಇರುವೆಗಳ ತೊಂದರೆ ಇದೆ ಎಂದು ತಾನು ಅಪೇಕ್ಷಿಸಿದ ಫಲ ಮಾತ್ರವೇ ಹೆಚ್ಚಬೇಕೆಂಬ ಕಾರಣಕ್ಕಾಗಿ ಕೀಟ ನಾಶಕಗಳ ಮೂಲಕ ಜೀವಜಂತುಗಳ ಹತ್ಯೆ ಮಾಡುತ್ತಾನೆಂದರೆ ನಮ್ಮ ಆತಂಕ ಇರಬೇಕಾದದ್ದು ದೇಹವನ್ನು ವಿಭಜಿಸಿ ಅನ್ವಯಿಸಿಕೊಂಡಂತೆ ಪ್ರಕೃತಿಯನ್ನೂ ಛಿದ್ರಗೊಳಿಸಿ ಕೇವಲ ಲಾಭ ಅಥವಾ ನಷ್ಟದ ದೃಷ್ಟಿಯಿಂದ ಗ್ರಹಿಸುತ್ತಿರುವುದರ ಬಗ್ಗೆ.

ನಾನು ತೊಡುತ್ತಿರುವ ಬಳೆ, ಸೀರೆ, ಚಪ್ಪಲಿ, ಬ್ಯಾಗು ಇವುಗಳು ನನ್ನ ಅವಶ್ಯಕತೆಗಳನ್ನು ಪೂರೈಸುತ್ತಿರುತ್ತವೆ. ಆದರೆ ಅವು ಉದ್ಯೋಗ ಮಾರುಕಟ್ಟೆಯಲ್ಲಿ ನನ್ನ ಜೊತೆಯವರಿಗೆ ಉದ್ಯೋಗ ನೀಡುವುದಷ್ಟೆ ಮುಖ್ಯವಾಗಿ ನನ್ನ ಪರಿಸರದ ಸಂಪನ್ಮೂಲಗಳನ್ನು ಅವುಗಳಿಗೆ,

ಅವುಗಳ ಅಸ್ತಿತ್ವಕ್ಕೆ ಧಕ್ಕೆಯಾಗದಂತೆ ಅವಶ್ಯಕತೆಗಳನ್ನು ಪೂರೈಸುತ್ತಿದ್ದರೆ ಮಾತ್ರವೇ ಈ ವಸ್ತುಗಳ ಇರುವಿಕೆ ನನಗೆ ಸಂತಸ ತರುತ್ತದೆ. ನನಗೆ ದೊರಕುವ ಎಲ್ಲ ಸಂತೋಷಗಳೂ, ದೇಹ ಮತ್ತು ಅದು ಪೋಷಿಸಲ್ಪಡುತ್ತಿರುವ ಆವರಣದ ಸಂರಕ್ಷಣೆಯೊಂದಿಗೆ ಪಡೆಯಬಲ್ಲುದಾದರೆ ಮಾತ್ರವೇ ಮನೋಲ್ಲಾಸ ನೀಡಬಲ್ಲದು. ಪಾಶ್ಚಾತ್ಯ ಸ್ತ್ರೀವಾದವು ಹೆಣ್ಣು ತಾನೇ ಅನ್ಯಳಲ್ಲ ಬದಲಿಗೆ ಅನ್ಯಳಾಗಿಸಲ್ಪಟ್ಟವಳು ಎಂದು ವಾದಿಸುತ್ತದೆ ಮತ್ತೂ ಮುಂದುವರಿದು ಅವಳು ಅನ್ಯಳಾಗಿ ಉಳಿಯಲು, ಅನ್ಯಳಂತೆ ವರ್ತಿಸಲು ಕಾರಣವಾಗುವುದು ಅವಳನ್ನು ರೂಪಿಸುವ ಸಾಮಾಜಿಕ ಪ್ರಜ್ಞೆ ಎಂದು ತಿಳಿಯುತ್ತದೆ.

1990ರಿಂದ ಇತ್ತೀಚೆಗೆ ಜೂಡಿತ್ ಬಟ್ಲರ್, 'ಜಂಡರ್ ಟ್ರಬಲ್'ನಲ್ಲಿ ಪ್ರಚುರಪಡಿಸಿದ "ಭಾಷೆಯು ಲೈಂಗಿಕತೆಯನ್ನು ಕಟ್ಟಿಕೊಡುತ್ತದೆ" ಎಂಬ ಪ್ರಖರವಾದ ವಾದವು ಸ್ತ್ರೀವಾದಿ ಚಿಂತನೆಯನ್ನು ವಿಸ್ತಾರಗೊಳಿಸಿದೆ. ಜಂಡರ್ ಎಂಬುದು ಸಾಮಾಜಿಕ ನಿರ್ಮಿತಿಯಾದರೂ ಸಹ ಎಲ್ಲ ಹೆಣ್ಣಿನ ದೇಹಗಳು ಒಂದೇ ತರಹವಾಗಿ ಅನ್ಯಗೊಳಿಸಲ್ಪಡುವುದಿಲ್ಲ. ಮಹಿಳೆಯ ದುರ್ಗತಿಗೆ, ಅಧೀನಕ್ಕೆ ಒಂದೇ ಬಗೆಯ ಕಾರಣವಿಲ್ಲ; ಹಾಗೆಯೇ ಏಕಸಮಾಧಾನವೂ ಇಲ್ಲ. ಮೇರಿ ಜೋ ಫ್ರಗ್ ಸಲಹೆ ನೀಡುವುದೇನೆಂದರೆ : ಸಮಸ್ಯೆ ಇರುವುದು ಮಾನವ ಅನುಭವವು ಭಾಷೆಯ ಮೂಲಕವೇ ಗುರುತಿಸಬೇಕಾದುದರ ಅನಿವಾರ್ಯತೆಯಲ್ಲಿ. ಅಧಿಕಾರವು ನೇರವಾಗಿಯಷ್ಟೇ ಚಲಾಯಿಸಲ್ಪಡುವುದಿಲ್ಲ. ಬದಲಾಗಿ ಭಾಷೆಯು ಹೇಗೆ ನಮ್ಮ ವಾಸ್ತವ್ಯಗಳನ್ನೂ ರೂಪಿಸಿ ಅಧಿಕಾರದಿಂದ ನಿರ್ಬಂಧಿಸುತ್ತದೆ ಎಂಬುದೂ ಕೂಡ ಮುಖ್ಯ. ಅವಳ ಮತ್ತೊಂದು ವಾದವೆಂದರೆ ಲೈಂಗಿಕತೆಯೆಂಬುದು ಸಹಜವಾದದ್ದೆಂದು (ಅದರ ಜೈವಿಕತೆಯನ್ನು ಹೊರತುಪಡಿಸಿ) ನಿರ್ದಿಷ್ಟವಾದುದ್ದೆಂದೂ, ಪರಿಪೂರ್ಣ ವ್ಯಾಖ್ಯೆಯನ್ನು ನೀಡಲು ಸಾಧ್ಯವಿಲ್ಲ. ಏಕೆಂದರೆ ಲೈಂಗಿಕತೆಯು ಭಾಷೆಯು ಕಟ್ಟುವ ಅರ್ಥಗಳ ವ್ಯವಸ್ಥೆಯ ಒಂದು ಭಾಗ.

ಸಾಂಸ್ಕೃತಿಕ ರೀತಿ ನೀತಿಗಳು ಮಹಿಳೆಯ ದೇಹದ ಮೇಲೆ ಕೊರೆಯುವ ಅರ್ಥಗಳು ಅವಳ ಸಾಮಾಜಿಕ ಅಸ್ತಿತ್ವವನ್ನು ನಿರ್ಧರಿಸುತ್ತವೆ. ಆಯಾ ಕಾಲದ ಸಾಮಾಜಿಕ ಪ್ರಜ್ಞೆಯು ಅವಳ ಲೈಂಗಿಕತೆಗೆ ಹೊಸ ಹೊಸ ವ್ಯಾಖ್ಯಾನಗಳನ್ನು ಅಧಿಕಾರ ಕೇಂದ್ರಗಳೊಂದಿಗೆ ಸಮೀಕರಿಸಿ ಅವಳ ದೇಹವನ್ನು ಉಪಯೋಗಿಸಿಕೊಳ್ಳುತ್ತಲೇ ಬಂದಿವೆ. ಉಳಿದೆಲ್ಲಾ ಅರ್ಥನಿರ್ಮಾಣ ವ್ಯವಸ್ಥೆಗಳಂತೆಯೇ ಲೈಂಗಿಕತೆಯೆಂಬುದು ಕೂಡ ಒಂದು ಹತಾರ. ಭ್ರಷ್ಟಗೊಂಡ ಲೈಂಗಿಕತೆಯ ಸಂದರ್ಭದಲ್ಲಿ ಮಹಿಳೆಯ ದೇಹವು ದಂಡನೆಗೊಳಗಾಗುತ್ತದೆ; ಬದಲಾಗುವ ಸ್ವಾಯತ್ತ ನೆಲೆಗಳಲ್ಲಿ ಜೀವ ಪೋಷಕವಾಗಿ ಅನಾವರಣಗೊಂಡಿವೆ.

ಜಾಗತೀಕರಣದ ಈ ಸಂದರ್ಭದಲ್ಲಿ ತನ್ನ ಪ್ರತಿಯೊಂದು ಇಂದ್ರಿಯವೂ ಛಿದ್ರವಾಗಿ ಬಿಕರಿಗೆ ಇಟ್ಟಿರುವ ಮಾರುಕಟ್ಟೆಯಲ್ಲಿ ಜಾಹಿರಾತು ಮಾದರಿಗಳನ್ನು ತಪ್ಪು ತಪ್ಪಾಗಿ ಅನುಸರಿಸಲು ಹೋಗಿ ತನ್ನ ದೇಹ ಮತ್ತು ಅದರ ಚಿಂತನೆಯ ನಡುವೆ ಇರುವ

ಜೈವಿಕ ಸಂಬಂಧವನ್ನು ಅಪಮಾನಕ್ಕೀಡುಮಾಡುವುದೂ ಅಲ್ಲದೆ ತನ್ನ ಲೈಂಗಿಕತೆಯೊಂದು ಶಾಪ ಮತ್ತು ಅದರೊಟ್ಟಿಗೆ ಬರುವ ಎಲ್ಲ ಕ್ರಿಯೆಗಳೂ ಹೇರಲ್ಪಟ್ಟದ್ದು ಎಂದು ತಿಳಿಯುವುದು ಸಹಜವಾದದ್ದಲ್ಲ.

ಇದು ತುಂಬಾ ಯಡವಟ್ಟಿನ ಸನ್ನಿವೇಶ. ಹೆಣ್ಣು ಕ್ರಿಯಾಶೀಲಳಾಗುವುದು, ಕರ್ತೃತ್ವಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಸಾಧ್ಯತೆಯಿರುವುದು ಅವಳು ತನ್ನ ದೇಹವನ್ನು ಅದರ ಎಲ್ಲ ಕಟ್ಟುಪಾಡುಗಳೊಂದಿಗೆ ಕ್ರಿಯಾಶೀಲವಾಗಿಸುವುದರ ಮೂಲಕ. ಆದರೆ ಲೈಂಗಿಕ ಕ್ರಿಯೆಯೊಂದರಿಂದಲೇ ಅವಳ ತೆರೆಯುವಿಕೆಯನ್ನು ಸಮೀಕರಿಸುತ್ತಿರುವ ಜಾಗತಿಕ ಪ್ರಜ್ಞೆಯು ಅವಳ ಅದಮ್ಯ ಶಕ್ತಿಯನ್ನು ನಿರಾಕರಿಸಿ ಅಪಮಾನಿಸುತ್ತಿದೆ. ಹೆಣ್ಣೆಂಬುದು ಒಂದು ಸ್ಥಿತಿ. ಅದು ಅವಳ ದೇಹದೊಂದಿಗೆ ಮಾತ್ರವೇ ಗುರುತಿಸಲ್ಪಡಬೇಕಾದದ್ದು. ಆದರೆ ಪುರುಷನ ನರನಾಡಿಗಳಲ್ಲಿ ಮಿಂಚೆಬ್ಬಿಸುವಂತಷ್ಟೆಯೇ ಮಾಧ್ಯಮಗಳಲ್ಲಿ ಆಕಾರಗೊಳ್ಳುತ್ತಿರುವ ಅವಳ ಆಕೃತಿಯು ಅವಳದ್ದಲ್ಲ. ಅವನಿಗೆ ಬೇಕಾದ ಹಾಗೆ ರೂಪಿಸಲ್ಪಟ್ಟದ್ದು. ಅವಳ ತೊಡುಗೆ, ನೋಟ, ಮಾತು, ನಡೆ ಎಲ್ಲವೂ ಅವನನ್ನು ಒಲಿಸಿಕೊಳ್ಳಲೇ ಇರುವ ಒಂದಂಶದ ಕಾರ್ಯಯೋಜನೆಯಾಗಿ ಬದಲಾಗುತ್ತಿರುವುದು ಜಾಗತಿಕರಣ ಅವಳ ಮೇಲೆ, ಅವಳ ಸ್ವಾಯತ್ತ ಶಕ್ತಿಯ ಮೇಲೆ ಹೇರುತ್ತಿರುವ ಹೊರೆ. ಇದೇನು ಹೊರಬೇಕಾದ ಹೊರೆಯಲ್ಲ; ಇಳಿಸುವಂಥದ್ದು. ಸ್ವಾಯತ್ತ ಅಭಿವ್ಯಕ್ತಿ ಮಾದರಿಗಳು ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಅನೇಕ ಧಾರೆಗಳಲ್ಲಿ ಕಾಣಬರುತ್ತವೆ. ಅಂತಹ ಕೆಲವು ಕಥನ ಮಾದರಿಗಳನ್ನು ಪರಿಶೀಲಿಸುವ ಪ್ರಯತ್ನವನ್ನು ಈ ಕೆಳಗೆ ಮಾಡಲಾಗಿದೆ.

ಚಿದಾನಂದಾವಧೂತರ 'ದೇವಿ ಮಹಾತ್ಮೆ'

ಲೈಂಗಿಕತೆಯು ಅಧಿಕಾರ ಕೇಂದ್ರಕ್ಕೆ ತಕ್ಕಂತೆ ರೂಪುಗೊಂಡದ್ದು ಕೇಡಾಗಬಲ್ಲದಾದರೆ ಅದರ ನೈಜ ರೂಪದಲ್ಲಿ ಅದೊಂದು ಸಂಭ್ರಮ. ಫಲವಂತಿಕೆಗೆ ಮುನ್ನುಡಿ. ಲೋಕವನ್ನು ಕಾಯುವಂಥದ್ದು. ಲೋಕವನ್ನು ಕಾಯುವ ಸ್ತ್ರೀ ಶಕ್ತಿಯು ಪೂರ್ಣ ಪ್ರಮಾಣದಲ್ಲಿ ಕನ್ನಡ ಕಾವ್ಯದಲ್ಲಿ ಮೊದಲಿಗೆ ವ್ಯಕ್ತವಾದದ್ದು ಚಿದಾನಂದಾವಧೂತರ 'ದೇವಿ ಮಹಾತ್ಮೆ' ಕೃತಿಯಲ್ಲಿ. ಇದೊಂದು ಪುರಾಣ ಕಥನವೂ ಹೌದು. ಹಾಗೆಯೇ ಪ್ರತಿಮಾತ್ಮಕ ವಿಧಾನದಲ್ಲಿ ಸ್ತ್ರೀಸ್ವಾಯತ್ತತೆಯನ್ನು ಪ್ರತಿಬಿಂಬಿಸುತ್ತಿರುವ ಕಾವ್ಯವೂ ಹೌದು. ಸೃಷ್ಟಿ, ಸ್ಥಿತಿ, ಲಯಗಳನ್ನು ಪ್ರತಿನಿಧಿಸುವ ತ್ರಿಮೂರ್ತಿಗಳ ಐಕ್ಯಗೊಂಡು ಬಂದವಳು. ಹೆಣ್ಣೆಂಬುದರಿಂದ ಹಿಡಿದು ಈ ಮೂರು ಅವಸ್ಥೆಗಳನ್ನು ಬಿಡಿ ಬಿಡಿಯಾಗಿ ಮತ್ತು ಸಮಗ್ರಗೊಂಡ ಸ್ಥಿತಿ ಎರಡರಲ್ಲೂ ವ್ಯವಹರಿಸಬಲ್ಲ ಅವಳು ಮಹಿಷನಂತಹ, ರಕ್ತಬೀಜನಂತಹ ಪುರುಷಾಧಿಕಾರ ಮತ್ತು ಅಧಿಕಾರ ಕೇಂದ್ರಗಳನ್ನು ಸಂಪೂರ್ಣ ನಿರಸನಗೊಳಿಸುವ ಸ್ವಾಯತ್ತನೆಲೆಗಳನ್ನು ವಿಜೃಂಭಣೆಯಿಂದ ಎತ್ತಿಹಿಡಿಯುತ್ತಾಳೆ. ಕನ್ನಡಿಗರಿಂದ ಅತ್ಯಂತ ಹೆಚ್ಚು ಓದಿಸಿಕೊಂಡಿರುವ ಈ ಕೃತಿಯನ್ನು ಪುರುಷಾಧಿಕಾರ ಮತ್ತು ಸಾಂಸ್ಕೃತಿಕ ರಾಜಕಾರಣದ ಫಲವಾಗಿ ಅಕಾಡೆಮಿಕ್ ವಲಯದಿಂದ ದೂರವೇ ಇಡಲಾಗಿದೆ.

ಕನ್ನಡ ನಾಡಿನ ಸಧ್ಯದ ಏಕೈಕ ಜೀವಂತ ಪರಂಪರೆ ಎಂದು ಕರೆಯಬಹುದಾದ 'ತತ್ವಪದ' ಪರಂಪರೆಯಲ್ಲಿ ವ್ಯಕ್ತವಾಗಿರುವ ಸಮಾನ ನಿಲುವುಗಳನ್ನು ಗಮನಿಸುವುದಾದರೆ, ಕೆಳಗಿನ ತತ್ವಪದಗಳನ್ನು ಉಲ್ಲೇಖಿಸಬಹುದಾಗಿದೆ:

ಸ್ತ್ರೀ ಸ್ವಾಯತ್ತತೆಯು ವ್ಯಾವಹಾರಿಕ ಲೈಂಗಿಕತೆಗಷ್ಟೆ ಸೀಮಿತವಾದ್ದಲ್ಲ. ಅಜ್ಞಾತ ತತ್ವಪದಕಾರನ ಈ ಸಾಲುಗಳಲ್ಲಿ ಮುಕ್ತಿಯಷ್ಟೇ ಪ್ರಮುಖವಾದದ್ದು ಭೋಗವು. ಲೈಂಗಿಕತೆಯು ಇಲ್ಲಿ ಲಂಪಟತನವಾಗಿಲ್ಲ, ಬದಲಾಗಿ ಯೋಗದಂತೆಯೇ ಕ್ರಿಯಾಶೀಲವು, ಜೀವದ ಸಾರ್ಥಕತೆಗೆ ದೀಪವಾಗುವಂಥದ್ದು. ಅನ್ನಕ್ಕೆ, ಮುಕ್ತಿಗೆ ಎರಡಕ್ಕೂ ಹಾದಿ ತೋರುವಂಥದ್ದು. ಗೃಹಸ್ಥ ಧರ್ಮದ ಮತ್ತು ಸಂನ್ಯಾಸ ಧರ್ಮದ ಎರಡೂ ಸ್ಥಿತಿಗಳೂ ನಿರೀಕ್ಷಿಸುವುದು ಒಂದೇ ತರಹದ ಏಕಾಗ್ರತೆಯನ್ನೇ. ಇಲ್ಲಿ ಸಲ್ಲುವವನು ಅಲ್ಲಿಯೂ ಸಲ್ಲುವನು.

ಬಲ್ಲರೆ ಯೋಗಿಯನು ಇಸಿತಿಲ್ಲದಿರೆ ಭೋಗಿಯಾಗಿರೈಯ್ಯ
ಎವೆಯಲುಗದೆ ಲಿಂಗವ ನೋಡದಿರೆ
ನವಯವ್ವನೆಯ ಭಾವವಿರಲಿ ತವೆಯದೆ
ಶಿವಮಂತ್ರವ ಕೇಳ ಕೇಳದಿರೆ ನವರಸ ಲಲ್ಲೆದೈಸ್ನವ ಕೇಳಿರಯ್ಯ
ಆಲಸದೆ ಲಿಂಗಪೂಜೆಯ ಮಾಡಿಯಲ್ಲದಿರೆ
ಮೊಲೆಯ ಮೇಲಣ ಕೈಯ ತೆಗೆಯದಿರಿ

ಒಲಿದೊಲಿದು ಲಿಂಗ ಪ್ರಸಾದವ ಕೊಳ್ಳಿ ಕೊಳ್ಳದಿರೆ
ಚಲ್ವೆ ಚಂದುಟಿಯಮೃತವನುಣ್ಣಿರೈಯ್ಯ
ಅಂಗ ಘ್ರಾಣೇಂದ್ರಿಯಗಳನೆಲ್ಲ ನಂಬುಂಡ
ಲಿಂಗನೊಳಿರಿಸಿ ನೀವು ಸುಖಿಯಾಗಿರಿ
ಅಂಗ ಸಂಗ ದೊರಕೊಂಡಿರಲು ಲಲಿ
ತಾಂಗಿಯರ ಹಿಂಗದವ್ವೆ ನೀವು ಸುಖಿಯಾಗಿರಯ್ಯ

–ಅಜ್ಞಾತ ತತ್ವಪದಕಾರ ('ತತ್ವಪದಕಾರರು' ಕ.ಸಾ.ಅ. ಪ್ರಕಟಣೆ)

ಸ್ತ್ರೀ ಸ್ವಾಯತ್ತೆಯು ಯಾವದೇ ಅಧಿಕಾರ ರೂಪಿತ ಪ್ರಮಾಣಗಳಿಗೆ ಬಂಧಿಯಲ್ಲ. ಅಧಿಕಾರದ ಭಾಷೆ ಹೇಳುವುದೆಲ್ಲ ಸತ್ಯವಲ್ಲ. ಅಧಿಕಾರದ ಸಂಸ್ಥೆಗಳನ್ನು ಪೋಷಿಸುವುದೇ ಪ್ರಮಾಣಗಳು. ಪರಂಪರಾನುಗತವಾಗಿ ಮಹಿಳೆಯು ಪುರುಷನ ಅನುಯಾಯಿಯಾಗಿ ಸಾಗಿ ಬಂದವಳು. ಸೀತೆಯಾಗಿ, ಸಾವಿತ್ರಿಯಾಗಿ ಅವನ ಏಳಿಗೆಗಾಗಿ ಶ್ರಮಿಸಿದವಳು. ಅವಳನ್ನು ಆ ದಿಕ್ಕಿನಲ್ಲಿ ಕೈ ಹಿಡಿದು ನಡೆಸಿದ್ದು ಶೀಲ, ಪಾವಿತ್ರ್ಯದಂತಹ ಪ್ರಮಾಣಗಳು. ಇದಕ್ಕೆ ಬದ್ಧವಾಗಿರುವುದೇ ಸ್ತ್ರೀ ಧರ್ಮವು. ಇದಕ್ಕೆ ವ್ಯತಿರಿಕ್ತವಾಗಿ ಸ್ವಾಯತ್ತತೆಯು ಅವಲಂಬಿಸುವುದು ಸ್ತ್ರೀ ಸ್ವಭಾವವನ್ನು. ಸಹಜವಾಗಿಯೇ ಇಂತಹ ಸ್ತ್ರೀ ಸ್ವಾಯತ್ತತೆಯು ಪ್ರಮಾಣಗಳನ್ನು ನಂಬುವುದಿಲ್ಲ. ಪ್ರಮಾಣಗಳೊಡನೆ ಸಂಘರ್ಷಕ್ಕಿಳಿಯುವ ಸ್ತ್ರೀ

ಸ್ವಾಯತ್ತತೆಯನ್ನು "ಮಲೆಮಾದೇಶ್ವರ" ಕಾವ್ಯದ ಸಂಕಮ್ಮನ ಸಾಲು ಸಮರ್ಥವಾಗಿ ಚಿತ್ರಿಸುತ್ತದೆ. ಅಪವ್ಯಾಖ್ಯಾನಕ್ಕೀಡಾದ ಪಾವಿತ್ರ್ಯವನ್ನು ಅದರ ನಿಜ ಅರ್ಥದಲ್ಲಿ ಕಟ್ಟಿಕೊಡುತ್ತದೆ.

ಕೊಕ್ಕರ ಕೊನಬೋಳಿ ಬೆಟ್ಟದ ಬೊಪ್ಪೇಗೌಡನ ಮಗ ನೀಲಯ್ಯನು ಸಂಕಮ್ಮನನ್ನು ಮದುವೆಯಾಗುತ್ತಾನೆ. ಅವರ ಕುಲ ಪದ್ಧತಿಯ ಪ್ರಕಾರ ಊರಹಬ್ಬ ಮಾಡುವ ಸಲುವಾಗಿ ಮನೆಗೊಬ್ಬ ಮನುಷ್ಯನಂತೆ ಒಟ್ಟುಗೂಡಿ ಹೆಜ್ಜೇನು ಮಲೆಗೆ ಹೋಗಿ ಬೇಟೆಯಾಡಬೇಕಿರುತ್ತದೆ. ನೀಲೇಗೌಡನು ಒಂದು ವರ್ಷದಿಂದ ಬೇರೆ ಮನೆ ಮಾಡಿಕೊಂಡು ಊರ ಒಕ್ಕಲಾಗಿದ್ದುದರಿಂದ ಅವನೂ ಬೇಟೆಗೆ ತೆರಳಬೇಕೆಂದಾಗುತ್ತದೆ. ಹೋಗುವುದು ಮೂರು ತಿಂಗಳು, ಬರುವುದು ಮೂರು ತಿಂಗಳು, ಬೇಟೆಯಾಡುವುದು ಮೂರು ತಿಂಗಳು. ಒಟ್ಟು ಸಂಕಮ್ಮನಿಂದ ದೂರವಾಗಿ ಒಂಬತ್ತು ತಿಂಗಳು ಹೊರಗುಳಿಯುವುದು ಅನಿವಾರ್ಯವಾಗುತ್ತದೆ. ಸಂಕಮ್ಮ ಚಂದದ ಚೆಲುವೆ. ಅವಳ ಚೆಲುವು, ಅಂದದ ದೇಹ ನೀಲೇಗೌಡನ ಅಧಿಕಾರ. ಅದರ ರಕ್ಷಣೆ ಅವನ ಜವಾಬ್ದಾರಿ. ಅದರಂತೆಯೇ ಅವನು ಪತ್ನಿಯಿಂದ ಪಾವಿತ್ರ್ಯದ ಪ್ರಮಾಣವನ್ನು ಬಯಸುತ್ತಾನೆ. ಬಲಗೈ ಭಾಷೆ ಕೇಳುತ್ತಾನೆ. ಅದಕ್ಕೆ ಸಂಕಮ್ಮ ಈ ರೀತಿ ಉತ್ತರಿಸುತ್ತಾಳೆ:

ಅಯ್ಯೋ ಯಜಮಾನ ಯಜಮಾನರೇ
ಎಂಥಾ ಪಾಪದ ಮಾತಾಡ್ತಾ ಇದ್ದೀರಿ
ಇಂಥಾ ಪಾಪದ ಮಾತಾಡಿ ನನಗೆ ಪಾಪ ಹೊರಿಸ್ಬೇಡಿ ಯಜಮಾನ
ನನಗೆ ಭಾವನಾಗಿರತಕ್ಕಂಥವರು ತಂದೆ ಸಮಾನವಲ್ಲವೇ ಯಜಮಾನ
ನನಗೆ ಮೈದುನನಾಗಿರತಕ್ಕಂಥವರು ಮಕ್ಕಳು ಸಮಾನವಲ್ಲವೆ ಗುರುವೆ
ಇಂಥ ಪಾಪದ ಮಾತನ್ನಾಡಬೇಡ
ಪಾದ ಹೊತ್ತೆನೊ ಯಜಮಾನ ॥ಕೋರಣ್ಣು॥
ಕೇಳೀ ಯಜಮಾನರೆ
ಭೂಮಿ ತಾಯಿ ಆಕಾಶವೇಣಿ ಸಾಕ್ಷಿಯಾಗಿ
ಪತಿಗೆ ಭಾಷೆ ಕೊಡುವುದಿಲ್ಲ ಯಜಮಾನ
ಭಾಷೆ ಕೊಟ್ಟಮೇಲೆ ನನ್ನ ಧರ್ಮ ಉಳಿಯೋದಿಲ್ಲ
ಶಿವಶಿವಾ ಪತಿವ್ರತೆಯಾದ ಸಂಕಮ್ಮ
ಭೂಮಿತಾಯಿ ಆಕಾಶವೇಣಿ ಸತ್ಯಮಾಡಿದೆ ಯಜಮಾನ
ಇನ್ನ್ಯಾರ ಸತ್ಯ ಮಾಡಬೇಕು
ನನ್ನ ತಾಯಿ ತಂದೆಗಳ ಪಾದಸಾಕ್ಷಿಯಾಗಿ ಭಾಷೆ ಕೊಡುವುದಿಲ್ಲ
ನಿಮ್ಮ ಕೂಡ ನಾನು ಬರುವುದಿಲ್ಲ ಯಜಮಾನ ಅಂದಳು.

ಜೊತೆಗೆ ಕಟ್ಟಿರುವ ತಾಳಿಯನ್ನು ಕಿತ್ತುಕೊಟ್ಟೇನೇ ಹೊರತು ಭಾಷೆ ಕೊಡುವುದಿಲ್ಲವೆನ್ನುತ್ತಾಳೆ. ಹೀಗೆ ಉತ್ತರಿಸಿದ ಸಂಕಮ್ಮನ ಮೇಲೆ ಕ್ರೋಧಗೊಂಡ ನೀಲೇಗೌಡನು ಮಾಯಾಮಂತ್ರದ ಕಾವಲು ನೇಮಿಸಿ ಅವಳು ಎಲ್ಲಿಗೂ ಹೋಗದಂತೆ ಹಾಗು ಮತ್ತಾರು ಒಳಬಾರದಂತೆ ನಿರ್ಬಂಧಿಸಿ ಬೇಟೆಗೆ ಹೊರಡುತ್ತಾನೆ. ಸಂಕವ್ವನಿಗೆ ತಾಯಿ, ತಂದೆ, ಅಣ್ಣ, ತಮ್ಮ, ಬಾವ, ಮೈದುನ, ಅತ್ತೆ, ನಾದಿನಿ, ಸಂಗಡಗಾತಿಯರು ಎಲ್ಲರನ್ನೂ, ಸಮುದಾಯವನ್ನು ಮರೆತು ತನ್ನ ಜೊತೆ ಹೊರಟು ಬಾರೆನ್ನುವ ಗಂಡನ ಮಾತು ಒಪ್ಪಿತವೆನಿಸುವುದಿಲ್ಲ. ಸ್ತ್ರೀಯು ಚಂಚಲೆಯೆಂಬುದು ಒಂದು ನಿರ್ಮಿತ. ಸಮುದಾಯಗಳನ್ನು ಕಾಯವ ಹಾಗು ಸೃಷ್ಟಿ ಕಾರ್ಯವನ್ನು ಅಲಕ್ಷ್ಯ ಮಾಡುವುದು ಅವಳಿಗೆ ಅವಮಾನ. ತನ್ನ ಸಂಕಟ ನಿವಾರಣೆಗಾಗಿ ಅವಳು ಕುಲದೈವ ಮಾದೇಶ್ವರನನ್ನು ಮೊರೆ ಹೋಗುತ್ತಾಳೆ. ಅಖಂಡಮಹಿಮೆ ಜಗಕೆ ಸೂತ್ರಧಾರಿಯಾದ ಮಾದಪ್ಪನು ಅವಳಿಗೆ ಮಕ್ಕಳ ಫಲಸಹಿತವಾಗಿ ಸಕಲ ಭಾಗ್ಯವನ್ನೂ ನೀಡುತ್ತಾನೆ.

ಕಂದ ಸಂಕಮ್ಮ
ಮಕ್ಕಳ ಭಾಗ್ಯಕ್ಕೆ ಪಿಂಡ ಪ್ರಸಾದ ಕೊಡ್ತೀನಿ
ನಿನಗೆ ಮಕ್ಕಳಾಗ್ತಾವೆ ಕಂದ
ನಿನ್ನ ಗಂಡನಾದ ನೀಲೇಗೌಡ
ನಿನ್ನನ್ನು ಮೊಡ್ತಿಯೊಳಗೆ ಬಿಟ್ಟು ಹೋಗಿ ಆರು ತಿಂಗಳಾಗಿವೆ
ಗರ್ಭಿಣಿಯಾಗ್ತೀಯೆ ನನ್ನ ಕಂದ
ನಿನ್ನ ಗಂಡ ಬರೋಹೊತ್ತಿಗೆ
ನಿನ್ನ ಗಂಡಬಂದು ಕೇಳಿದರೆ
ಏನು ಜವಾಬು ಹೇಳುವೇ ॥ಕೋರಣ್ಣ॥
ಅಯ್ಯೋ ಗುರುವೇ ಗುರು ಪಾದವೇ
ನನ್ನ ಗಂಡ ನೀಲೇಗೌಡನಿಗೆ
ನಿಮ್ಮ ಹೆಸರೇಳ್ತೀನಿ ಗುರುವೆ
ನನ್ನಪ್ಪನ ಮನೆದೇವ್ರು
ಮಾದಪ್ಪ ಬಂದು ನನ್ನ ಕಷ್ಟ ಪರಿಹಾರ ಮಾಡಿ
ಬಡಸ್ತಾನ ಬಯಲು ಮಾಡಿ
ಸಿರಿಸ್ತಾನ ಉಂಟುಮಾಡಿ ಬಿಟ್ಟು
ಮಕ್ಕಳ ಭಾಗ್ಯ ಕೊಟ್ಟು ಹೋದ್ರು ಯಜಮಾನ
ಅಂತ್ಹೇಳಿ ನಿಮ್ಮ ಮೇಲೆ ಹೇಳ್ತೀನಿ ಗುರುವೇ ಅಂದಳು
ಸಭಾಷ್ ಕಂದ
ನಿನ್ನ ಗರ್ಭದಲ್ಲಿ ಎರಡು ಮಕ್ಕಳು ಹುಟ್ಟುತಾ ಇದಾವೆ...

ಇಂತಹ ಸಂಕಥನಗಳನ್ನು ಓದುವಾಗ ಗಮನಿಸಬೇಕಾದ ಅಂಶವೇನೆಂದರೆ ಇಂತಹ ಸ್ವಾತಂತ್ರ್ಯದ ನೆಲೆಗಳು ಸ್ವೇಚ್ಛಾಚಾರಗಳಲ್ಲ. ಬದಲಿಗೆ ಸ್ವಂತಿಕೆಯನ್ನು ಗೌರವಿಸುವ, ಸಮುದಾಯಗಳನ್ನು ಕಾಯುವ ಹೊಣೆಗಾರಿಕೆಗಳು.

ಮದುವೆ, ಕುಟುಂಬ ಅದನ್ನು ಒಟ್ಟುಗೂಡಿಸುವ ಸೂತ್ರಗಳಂತಿರುವ ಪಾತಿವ್ರತ್ಯ, ಶೀಲ, ಲಜ್ಜೆ ಹಾಗು ಕುಟುಂಬ ಗೌರವಗಳೆಂಬ ಲಾಂಛನಗಳು / ಸಂಕೇತಗಳು ಲೈಂಗಿಕತೆಯ ಅಪವ್ಯಾಖ್ಯಾನಗಳು. ಇಂತಹ ಪ್ರಯತ್ನಗಳನ್ನು ನಿರ್ವಚನಗೊಳಿಸುವ ಈ ತತ್ವಪದವು ಪುರುಷನ ಅಹಂಕಾರವು ಹೇಗೆ ತನ್ನ ಅಧಿಕಾರವನ್ನು ಸ್ಥಾಪಿಸಿಕೊಳ್ಳಲು ಸ್ತ್ರೀ ದೇಹವನ್ನು, ಅದರ ಸಾಮರ್ಥ್ಯವನ್ನು ಮಿತಗೊಳಿಸಲು ಮುಟ್ಟು, ಮಡಿ, ಮೈಲಿಗೆಗಳ ಬೇಲಿಗಳನ್ನು ನಿರ್ಮಿಸಿ ಆ ಮೂಲಕ ಅವಳ ಆತ್ಮವಿಶ್ವಾಸವನ್ನು ಕುಂದಿಸುವ ಪ್ರಯತ್ನಗಳನ್ನು ಮಾಡುತ್ತವೆ ಎಂಬುದನ್ನು ಲೀಲಾಜಾಲವಾಗಿ ಪ್ರತಿಮೆಗಳ ಮೂಲಕ ಅಣಕ ಮಾಡುತ್ತದೆ. ಬಂಧಿಸುವ ಇಂತಹ ನಿರ್ಮಿತಗಳೆಲ್ಲವೂ ಸಹಜವಾದದ್ದೇನಲ್ಲ. ದೇಹವನ್ನು ಹಗುರ ಮಾಡಿಕೊಳ್ಳಲು ಆತ್ಮವಂಚನೆಯನ್ನು ಮೊದಲು ಬಿಡಬೇಕು ಎಂದು ಆರ್ಥೈಸುತ್ತದೆ. ಹೆಣ್ಣಿನ ದೇಹವೆಂಬುದು ಮೈಲಿಗೆಯ ಗೂಡಲ್ಲ. ದೇಹವನ್ನು ಅವಮಾನಿಸಿ ಅರಿಯುವುದು ಹಾಸ್ಯಾಸ್ಪದವೆಂದು ಕೆಳಗಿನ ತತ್ವಪದಕಾರನ ಅಭಿಮತ.

ಮುಡಚಟ್ಟನೊಳು ಬಂದು, ಮುಟ್ಟೀ ತಟ್ಟೀ ಎನುತೀರಿ
ಮುಡಚಟ್ಟ ಎಲ್ಯಾದ್ದೇಳಣ್ಣ
ಮುಟ್ಟಾದ ಮೂರು ದಿನಕ್ಕೆ ಹುಟ್ಟ ಬಂದಿದಿ ನೀನು
ಮುಡಚಟ್ಟು ಎಲ್ಯಾದ್ದೇಳಣ್ಣ
ತೊಗಲೊಳು ತೊಗಲೊಕ್ಕು ತಗಲಿ ಬಂದವ ನೀನು
ತಗಲ ಮಾತಾಡುವುದೇನಣ್ಣ
ಇದರ ಬಗೆಯ ತಿಳಿಯದೆ ವಗದು ಮಾತಾಡಿದರೆ
ನಗಿಗೇಡಿ ಕಾಣುತಾದಣ್ಣ
ಊರ ನರಕವ ತಿಂದು ಬೋರ್ಯಾಡ್ತಿಂಡುವ ಎಮ್ಮಿ
ಹಾಲಿನ ಸವಿ ನೋಡಣ್ಣ
ಅದರ ಸ್ವಾದ್ವತಿ ನೀ ಉಂಡು ಗಂಡಾಗಿ ಕುಂತೀದಿ
ಶೀಲ ಎಲ್ಲಿ ಉಳಿತ್ತೇಳಣ್ಣ
ಊರ ಬಾವಿಯ ನೀರು ದಾರಾದರು ತರುವರು
ನಿನ್ನ ನೀರ ಬ್ಯಾರ್ಯಾವೇನಣ್ಣ ,
ಲಂಡೇನ್ಹಳ್ಳ ಬಂದು ನದಿಯ ಕೂಡಿದ ಮೇಲೆ
ನೈವೇದ್ಯ ಹೇಗಾದವು ಹೇಳಣ್ಣ
ಸೂಸಲಾಡುವ ದೇಹ ಸೋಸಿ ನೀರವ ಮಾಡಿ

ಮಡಿ ಮಾಡಿಕೊಳ್ಳಬೇಕಣ್ಣ
ನಮ್ಮ ಧೀರ ಮಹಾಂತೇಶನ ಬಿಡದೆ ಕೊಂಡಾಡಿದರೆ
ಕುಡಿತನಕ ಮಡಿಯಾಗುವುದಣ್ಣ

–ಕಡಕೋಳಮಡಿವಾಳಪ್ಪ

ಹೆಣ್ಣಿನ ಫಲವಂತಿಕೆಯು ಇರುವುದು ಪುರುಷಾಧಿಕಾರಕ್ಕಾಗಿ ಅಲ್ಲ. ಬದಲಾಗಿ ಜೀವೋತ್ಪನ್ನಕ್ಕಾಗಿ. ಮಾನವ ನಿರ್ಮಿತ ಯುದ್ಧಗಳಿಂದ ಅವಳ ಸೃಷ್ಟಿಕಾರ್ಯಕ್ಕೆ ಭಂಗ ಬರುವುದಾದರೆ ಅವಳು ಸಮಾಜ ನಿರ್ಮಿತ 'ಗಂಡು' ಎಂಬ ಪುರುಷನಿಗಾಗಿ ಕಾಯದೆ, "ಪಾವಿತ್ರ್ಯ"ವನ್ನು ಧಿಕ್ಕರಿಸಬಲ್ಲಳು. ಸಮಾಜ ನಿರ್ಮಿತ ಸಂಸ್ಥೆಗಳ ಪ್ರತಿನಿಧಿಗಳನ್ನು ಅತ್ತೆ, ಮಾವ, ಗಂಡ, ತನ್ನನ್ನೂ ಒಳಗೊಂಡಂತೆ ಎಲ್ಲರನ್ನೂ ಹಾಸ್ಯಾಸ್ಪದಗೊಳಿಸುವುದಲ್ಲದೆ, ಈ ಸಂಸ್ಥೆಗಳು ಕಾರ್ಯನಿರ್ವಹಿಸುವ ಬಗೆಯನ್ನು ಖಂಡಿಸುತ್ತಾಳೆ. ಸಾಮ್ರಾಜ್ಯಗಳನ್ನು ಕಟ್ಟಿ, ಅಧಿಕಾರದ ನೆರಳನ್ನು ಸ್ಥಾಪಿಸಬೇಕೆನ್ನುವ ಸಾಂಸ್ಥಿಕ ಅಹಂಕಾರಕ್ಕೆ ಅವಳು ಹೇಳಬೇಕಾಗಿರುವುದು, ಗುಡ್ಡಕ್ಕೆ ನೆರಳಿಲ್ಲ ಎಂಬುದನ್ನಷ್ಟೆ.

ಕೋಲು ಕೋಲೆನ್ನಿರೇ....

ಕೋಲು ಕೋಲೆನ್ನಿರೇ । ಸದ್ಗುರುವಿನ
ಕೀಲು ಮೇಲೆನ್ನಿರೇ
ಅತ್ತೆ ಹೆಸರು ಹಳೆಯ ಚಾಪೆ
ಮಾವನ ಹೆಸರು ಮಂಚದ ಕಾಲು
ಎನ್ನ ಹೆಸರು ಕಲ್ಲಿಬಿಲ್ಲಿ
ಗಂಡನ ಹೆಸರು ಟಕ್ಕಟಕ್ಕಿ ॥1॥
ಹತ್ತಿ ಬಿತ್ತಿ ಬತ್ತ ಕಾಣೆ
ಬತ್ತ ಬಿತ್ತಿ ಬಾನ ಕಾಣೆ
ಮನೆಯ ತುಂಬ ಮಕ್ಕಳ ಹಡೆದು
ಗಂಡನ ಸುಖವ ಕಾಣಲಿಲ್ಲ ॥2॥
ಗಂಡ ದಂಡಿಗೋಗುವಾಗ
ಅರಗಿನ ಮುದ್ರೆ ಮಾಡಿ ಹೋದ
ಅರಗಿನ ಮುದ್ರೆ ಹಾರು ಹೊಡೆದು
ಆರು ಮಕ್ಕಳ ಹಡೆದೆನವ್ವ ॥3॥
ದಂಡಿಗೋಗೋ ಅಣ್ಣಗಳಿರಾ
ದಂಡಿಗೋಗೋ ಅಪ್ಪಗಳಿರಾ
ದಂಡಿನಾಗೆ ನನ್ನ ಗಂಡನ ಕಂಡರೆ
ಮಿಂಡನ ಕಟ್ಟಿಕೊಂಡು ಹೋದಳೆನ್ನಿ ॥4॥

ಗುಡ್ಡಕ್ಕೆ ನೆರಳಿಲ್ಲ ಗುರುವಿಗೆ ಸಮನಿಲ್ಲ
ಸ್ವಾಮಿ ಚಿದಾನಂದನ ಮಹಿಮೆ ತಿಳೀಲಿಲ್ಲ ಕೋಲೆನ್ನಿರೇ....

ಶ್ಯಾಮಲಾ ಬೆಳಗಾಂವಕರರ ಸಣ್ಣಕತೆ 'ಕರುಳ ಕತ್ತರಿ

ಹೆಣ್ಣು ಗಂಭೀರವಾಗಿದ್ದೂ ತೆರೆದುಕೊಂಡಂತೆ ಇರಬಲ್ಲಳು. ಮಾತಾಡಬಲ್ಲಳು. ವ್ಯವಹರಿಸಬಲ್ಲಳು. ಅವಳ ಎಲ್ಲ ಆತ್ಮವಿಶ್ವಾಸವು ಕೇವಲ ವ್ಯಾವಹಾರಿಕ ಲೈಂಗಿಕ ಕ್ರಿಯೆಯಾಗಿ ಬದಲಾಗುತ್ತಿರುವುದು ಅಧಿಕಾರ ಕೇಂದ್ರಗಳು ಸ್ವಾಯತ್ತತೆಯ ದಮನಕ್ಕಾಗಿ ಉಪಯೋಗಿಸುತ್ತಿರುವ ಹತಾರುಗಳಿಂದ. ಪ್ರೀತಿ, ಪ್ರೇಮಗಳೆಂಬುದು ಜೀವನ ಸಂಬಂಧಕ್ಕೆ ಪ್ರೇರಕವಾಗಬಲ್ಲುದೆಂದು ಗುರುತಿಸಿರುವ ಅನೇಕ ತರಹದ ಭಾವುಕ ಸ್ಥಿತಿಗಳಲ್ಲಿ ಒಂದು ಮಾತ್ರ. ಪ್ರೀತಿಯೂ ಕೂಡ ಭ್ರಷ್ಟವಾಗುತ್ತಿರುವುದು ಹಣದ ವ್ಯಾಮೋಹ ಸೃಷ್ಟಿಸಿರುವ ಸ್ಥಿತಿ. ಇದನ್ನು ಪ್ರತಿನಿಧಿಸುವ ಸಣ್ಣಕತೆ ಶ್ಯಾಮಲಾ ಬೆಳಗಾಂವಕರ ಅವರ ಕರುಳಕತ್ತರಿ. ಬದುಕಿನ ಎಲ್ಲ ಆಯ್ಕೆಗಳು ಮುಚ್ಚಿ ಹೋದ ಸನ್ನಿವೇಶದಲ್ಲಿ ಅಕಸ್ಮಾತ್ ಒದಗಿಬಂದ ಒಂದೇ ಒಂದು ಅವಕಾಶದಲ್ಲೂ ಹೆಣ್ಣೊಬ್ಬಳನ್ನು ಬಾಳಗೊಡದ ಹಣ-ಮೋಹದ ವ್ಯಾಪಾರಿ ಕ್ರೂರ ಜಗತ್ತನ್ನು ಈ ಕತೆ ಮನಮುಟ್ಟುವಂತೆ ತೆರೆದಿಡುತ್ತದೆ. ಸಣ್ಣವ್ವ ತನ್ನ ಮೂವರು ಹೆಣ್ಣು ಮಕ್ಕಳನ್ನು ಕೈಯಾರ ವೇಶ್ಯಾವೃತ್ತಿಗೆ ದೂಡಿದ್ದು ಅದೇ ಮಾಯೆಗೆ ಬಲಿಬಿದ್ದೇ. ಮೂವರಲ್ಲಿ ಒಬ್ಬಳು ಓಡಿ ಹೋದರೆ ಇನ್ನೊಬ್ಬಳು ಆತ್ಮಹತ್ಯೆ ದಾರಿ ಹಿಡಿಯುತ್ತಾಳೆ. ಕೊನೆಯವಳಾದ ಚಂದ್ರವ್ವ ತನ್ನಲ್ಲಿರಳಿದ ಸಂಗೀತ ಮತ್ತು ಅಂತಃಕರಣದಿಂದಾಗಿ ನೆರೆಯೂರಿನ ವೆಂಕಣ್ಣನಾಯಕರ ಪ್ರೀತಿಗೆ ಒಲಿದು ಅವರ ಕುಟುಂಬ ಸೇರುತ್ತಾಳೆ. ಅಲ್ಲಿಗೂ ಹಿಂಬಾಲಿಸಿ ಹೋದ ಹಣ-ವ್ಯಾಮೋಹದ ಮಾಯೆ ಚಂದ್ರವ್ವವನ್ನು ಅಲ್ಲಿಂದ ಎಳೆತಂದು ಸರ್ವನಾಶ ಮಾಡಿಬಿಡುತ್ತದೆ. ತಂದೆ ಗದಿಗಪ್ಪನೇ ಚಂದ್ರಮ್ಮನನ್ನು ಕರೆತಂದು ಒಡವೆ ಹಣದ ಆಸೆಗಾಗಿ ತಂದೆ ತಾಯಿ ಇಬ್ಬರೂ ಅವಳಿಗೆ ದತ್ತೂರಿ ತಿನ್ನಿಸಿ ಹುಚ್ಚಿಯನ್ನಾಗಿಸುತ್ತಾರೆ. ಪ್ರಶ್ನಿಸಿದ ವೆಂಕಣ್ಣನಾಯಕರನ್ನು ತಟ್ಟತಸ್ಕರನ್ನಾಗಿಸಿ ಜೈಲಿಗೆ ಕಳಿಸುತ್ತಾರೆ. ಚಂದ್ರವ್ವ ಹುಚ್ಚಿಯಾಗಿ ಬೀದಿ ಅಲೆಯುವಂತಾಗುತ್ತದೆ. ಕಾರ್ಪೊರೇಟ್ ಜಗತ್ತಿನ ಕ್ರೌರ್ಯವು ಇದಕ್ಕಿಂತ ಭಿನ್ನವೇನಲ್ಲ. ಇಲ್ಲಿ ಎಲ್ಲವೂ ಮಾರಾಟವೇ. ಮುದ್ದಾದ ಹೆಣ್ಣುಮಕ್ಕಳು. ಅವರ ದೇಹ. ಅವರ ಸಂಗೀತ. ಕಡೆಗೆ ತಂದೆ ತಾಯಿ ತೋರಬಹುದಾದ ವಾತ್ಸಲ್ಯ ಕೂಡ. ಎಂತಹ ಕ್ರೂರ ಮೋಸವೂ ಇಲ್ಲಿ ಸಹ್ಯ. ಮಾರಾಟಕ್ಕಿಡದ ಒಲುಮೆ ಅಂತಃಕರಣಗಳನ್ನು ನಿರ್ದಯವಾಗಿ ಚಿವುಟಿ ಹಾಕುವ ಜಾಗತಿಕರಣದ ಮಾಯಾಜಗತ್ತು. ಶಿಕ್ಷಿಸಲೂ ಹಿಂಜರಿಯುವುದಿಲ್ಲ. ಪ್ರೀತಿ ಒಲುಮೆಗಳನ್ನು ಪೋಷಿಸುವುದರ ಮೂಲಕ ಸಂಬಂಧದ ಸಾಮರಸ್ಯವನ್ನು ಕಾಪಾಡಿಕೊಳ್ಳುವುದರ ಮೂಲಕ ಕಟ್ಟಿಕೊಳ್ಳುವ ಬದುಕು ಒಂದೆಡೆಯಾದರೆ ಸಂಬಂಧಗಳನ್ನು ನಿರ್ದಾಕ್ಷಿಣ್ಯವಾಗಿ ಛಿದ್ರಿಸಿ ಮಾರಾಟ ಮಾಡುವ



ಜಗತ್ತು ಇನ್ನೊಂದೆಡೆ. ಎರಡರ ಮಾಯೆ ಬಲವಾದದ್ದು. ದುರಾಸೆ ಅಥವಾ ಸ್ವಾರ್ಥದ ಕೇಡು ಸ್ವತಂತ್ರ ಅಸ್ತಿತ್ವಗಳನ್ನು ಸಹಿಸುವುದಿಲ್ಲ. ಇಂತಹ ಕೇಡುಗಳಿಗೆ ಜಾಗತೀಕರಣದ ಸಂದರ್ಭದಲ್ಲಿ ಅವಕಾಶಗಳು ವಿಫುಲವಾಗಿರುತ್ತವೆ. ಲೈಂಗಿಕ ಅಪವ್ಯಯಕ್ಕೆ ದೇಹವನ್ನು ಅವಮಾನಿಸಿಕೊಳ್ಳಲು ಸಿದ್ಧಳಾಗಬೇಕಾದ್ದು, ಹಣದ ದುರಾಸೆಯ ಅಧಿಕಾರದ ಎದುರು, ವ್ಯವಸ್ಥಿತವಾಗಿ ರೂಪುಗೊಂಡ ಅದರ ಹುನ್ನಾರದ ಎದುರು ತಲೆಬಾಗಲೇಬೇಕಾದ ಸ್ಥಿತಿ ನಿರ್ಮಾಣವಾಗುವ ಸನ್ನಿವೇಶವನ್ನು ಈ ಕಥೆ ಮನೋಜ್ಞವಾಗಿ ತೆರೆದಿಡುತ್ತದೆ. ಇಲ್ಲಿನ ಅಧಿಕಾರ ಕೇಂದ್ರಗಳು ಸೌಮ್ಯ ಮುಖವನ್ನು ಹೊಂದಿವೆ. ಪುರುಷ ಪ್ರತಿನಿಧಿಯಾದ ವೆಂಕಣ್ಣನಾಯಕ ಅಸಹಾಯಕ ಬಲಿಪಶುವಿನಂತೆ ಕಾಣಿಸುತ್ತಾನೆ. ಲೈಂಗಿಕತೆಯು ಹೆಣ್ಣೊಬ್ಬಳು ಹಣಗಳಿಸುವ ಮಾರ್ಗವಾಗಿ ರೂಪುಗೊಂಡಾಗ ಹೇಗೆ ಭ್ರಷ್ಟವಾಗುತ್ತದೆ ಎಂಬುದು ಸ್ಪಷ್ಟವಾಗುತ್ತದೆ. ಅವಳು ಇಲ್ಲೊಂದು ವ್ಯಾಪಾರಕ್ಕೆ ಸಿದ್ಧವಾಗಿರುವ ಸರಕು ಅಷ್ಟೆ. ವೇಶ್ಯೆಯಾಗುವ ಅವಮಾನಕ್ಕಿಂತ ಕ್ರೂರವಾಗಿ ಈ ಕತೆ ಹೇಳುವುದು ಅವಳ ದೇಹ ತಮಗೆ ಹಣದ ಮೂಲವಾಗಲಿಲ್ಲ ಎಂಬ ಚಂದ್ರಿಯ ತಂದೆ ತಾಯಿಯರ ದುರಾಸೆ ಮತ್ತು ಪರಿಣಾಮವಾಗಿ ಅವಳಿಗೆ ಅವರು ಒಡ್ಡುವ ದುರ್ದೆಸೆ. ಈ ಇಡೀ ಕತೆ ಸೂಚಿಸುವುದಿಷ್ಟೆ. ಹೆಣ್ಣೊಬ್ಬಳು ತಾವು ಹೇಳಿದಂತೆ ವರ್ತಿಸಿದರೆ ಮಾತ್ರವೇ ಅವಳ ಲೈಂಗಿಕತೆಯ ಮಾನ್ಯ. ಇಲ್ಲವಾದರೆ ಅದೊಂದು ಅಪರಾಧ. ಹಣ/ಅಧಿಕಾರ ಅಹಂ ಅನ್ನು ಪೋಷಿಸಲು ಪಾವಿತ್ರ್ಯ, ಕುಲಗೌರವ ಮುಂತಾದ ಸಂಕೇತಗಳು ಸಹಾಯಕಗಳಷ್ಟೆ ಹೊರತು ಸ್ವಾಯತ್ತತೆಯನ್ನು ಎಂದೂ ರಕ್ಷಿಸಲಾರವು. ಈ ಎಲ್ಲ ಸಂಕೇತಗಳು, ಅಧಿಕಾರ ಕೇಂದ್ರಗಳು ಹೆಣ್ಣನ್ನು ತಮಗೆ ಬೇಕಾದಂತೆ ರೂಪಿಸಲು ಇರುವ ನೆಪಗಳಷ್ಟೆ. ಈ

ಕತೆಯನ್ನು ಓದುವಾಗ ಇರಬೇಕಾದ ಎಚ್ಚರ ಏನೆಂದರೆ ಹಣದ ಮಾಯೆ ಎಂಬುದು ಸಂಬಂಧ, ವಾತ್ಸಲ್ಯಗಳೆಲ್ಲವನ್ನೂ ಮೀರಿ ವ್ಯಕ್ತಿಯನ್ನು ಭ್ರಷ್ಟಗೊಳಿಸುತ್ತದೆ / ಲೈಂಗಿಕತೆಯನ್ನೂ ಕೂಡ. ಇಂತಹ ಜಾಗತೀಕರಣದ ಹುನ್ನಾರಗಳು ಸಂಪ್ರದಾಯದ ಮುಖವಾಡ ಧರಿಸಿ ಹೆಣ್ಣಿನತನವನ್ನು ಕಾಪಾಡುತ್ತದೆ ಎಂಬ ಕಪಟ ಸ್ವಾಯತ್ತತೆಯ ಲಕ್ಷಣಗಳನ್ನು ಹೊಂದಿರುತ್ತವೆ.

ಉಪಸಂಹಾರ :


ನನ್ನ ನಗ್ನತೆಯು ಕೋಟಿ ಕೋಟಿ ಗಳಿಸಿಕೊಡಬಲ್ಲದು. ಆದರೆ ಅಂತಹ ಪ್ರತಿನಿಧೀಕರಣ ನನ್ನಂತಹ ಕೋಟಿ ಕೋಟಿ ಅಕ್ಕ ತಂಗಿಯರ ದೇಹವು ಪುರುಷನ ಲೈಂಗಿಕ ದಾಹದ ಕಣ್ಣುಗಳಿಗೆ ಬಲಿಯಾಗಿಸುವಂತಾಗಬಾರದು. ತರಕಾರಿ ಮಾರುವ, ಗಾರ್ಮೆಂಟ್‌ಗಳಲ್ಲಿ ಕೆಲಸ ಮಾಡುವ, ಬೀದಿ ಗುಡಿಸುವ, ಶಾಲೆಗೆ ಹೋಗುವ, ಕ್ರೀಡೆಗಳಲ್ಲಿ ಭಾಗವಹಿಸುವ ಹೆಣ್ಣು ಮಕ್ಕಳ ದೇಹಗಳು ತಮ್ಮೆಲ್ಲ ಚೇತನದೊಂದಿಗೆ ಆತ್ಮವಿಶ್ವಾಸದಿಂದ ಕಾರ್ಯನಿರ್ವಹಿಸುವಲ್ಲಿ, ಮಾಧ್ಯಮ ಸೃಷ್ಟಿಸುವ ಅರೆನಗ್ನ ರೂಪವು ಮಾತ್ರವೇ ಕಣ್ಣ ಮುಂದೆ ಬರಬಹುದಾದರೆ ಜಾಗತೀಕರಣವು ಅತಿರಂಜನೀಯವಾಗಿ ಅವಳನ್ನು ಅವಳ ಭ್ರಷ್ಟಗೊಂಡ ಲೈಂಗಿಕತೆಯ ಮೂಲಕ ಮಾತ್ರವೇ ನೋಡಲು ಬಯಸುತ್ತದೆ ಎಂದು ತಿಳಿಯಬಹುದಲ್ಲವೆ? ಹಣದ ಧಿಮಾಕಿನ ಮುಂದೆ ಸ್ವಾಯತ್ತಶಕ್ತಿಯು ಯಾವತ್ತೂ ಮುರುಟಿಲ್ಲ. ನಾವು ಸಾಕಾರಗೊಳ್ಳುವುದು, ಸಾಧನೆಯೆಡೆಗೆ ಸಾಗಬಹುದಾದದ್ದು ನಮ್ಮ ದೇಹಗಳಿಂದ ಮಾತ್ರವೇ ಸಾಧ್ಯ. ಮಹಿಳೆಯು ಭಾವನೆಗಳನ್ನು ಅಧಿಕಾರದ ಭಾಷೆ ಅನ್ವಯಿಸಿಕೊಳ್ಳದಿದ್ದರೂ ಕ್ರಮದಿಂದಾದರೂ ಸರಿಯೆ ಪ್ರಚಲಿತ ಭಾಷೆಯನ್ನು ಹೊಂದಿಸಿಕೊಂಡು ಮುನ್ನಡೆಯುವುದು ಅಗತ್ಯವಿದೆ. ಆದರೆ ನಗ್ನತೆಯು ವೈಭವೀಕರಣವಾಗಲೀ, ಅಬಲತೆಯ ಶೋಷಣೆಯಾಗಲೀ ಮಹಿಳಾ ಅಭಿವೃದ್ಧಿಯ ಮಾರ್ಗಗಳಾಗಲಾರವು. ಅಭಿವೃದ್ಧಿಯೆಂಬುದು ಪ್ರಶ್ನಿಸಲ್ಪಡುತ್ತಿರುವುದು ಇದೇ ನೆಲೆಯಲ್ಲಿ.

ತಾಯ್ತನದ ಹೃದಯಕ್ಕೆ ಮಾತ್ರವೇ ಅಭಿವೃದ್ಧಿಯ ಸಂಕೇತವಾದ ನರ್ಮದಾ ನದಿಗೆ ಕಟ್ಟಲಾಗುತ್ತಿರುವ ಅಣೆಕಟ್ಟು ಯೋಜನೆಗಳು ಕಿರು ನೀರಾವರಿ ಯೋಜನೆಗಳಿಗೆ ಹೇಗೆ ಮಾರಕವಾಗಬಲ್ಲವು, ತನ್ಮೂಲಕ ಅವುಗಳನ್ನು ಅವಲಂಬಿಸಿರುವ ಕೋಟ್ಯಾಂತರ ಜೀವಿಗಳ/ ವ್ಯವಸ್ಥೆಯ ಅಸ್ತಿತ್ವ ಹರಣ ಮಾಡಬಲ್ಲವು ಎಂಬ ಅರಿವಿರಲು ಸಾಧ್ಯ. ಯಾಕೆಂದರೆ ಅಂತಹ ಜೀವಿಗಳ ಉಳಿವು ಸಾವಯುವ ಸಂಬಂಧಗಳ ಉಳಿವು. ಜಾಣ್ಮೆಯನ್ನು, ಕೌಶಲಗಳನ್ನು, ಅವಕಾಶಗಳನ್ನು ಹಣಕ್ಕೆ ರೂಪಾಂತರಿಸುವುದು ಜಾಗತೀಕರಣಕ್ಕೆ ಅವಶ್ಯಕ ಮತ್ತು ಅನಿವಾರ್ಯ. ಹಣದ ರೂಪಕ್ಕೆ, ಸಂಕೇತಕ್ಕೆ ಒಳಗೊಳ್ಳದಿರುವ ಸಾವಿರಾರು ದೃಷ್ಟಿಕೋನಗಳು, ಬದುಕುವ ವಿಧಾನಗಳನ್ನು ಉಳಿಸಿ ಬೆಳೆಸಿಕೊಂಡ ಪರಂಪರೆಗಳನ್ನು ಅವಸಾನದ ಅಂಚಿಗೆ ತಂದಿರುವುದು ಜಾಗತೀಕರಣಕ್ಕೆ ಸೌಭಾಗ್ಯ ಮತ್ತು ಅದರ ಹೆಗ್ಗಳಿಕೆ. ವಿನ್ಯಾಸಗಳ, ಸಂಸ್ಕೃತಿ-ಆಚಾರ-ವಿಚಾರಗಳ ವಿನಿಮಯ ಸಂಭ್ರಮದ ಸಂಗತಿಗಳೇ.

ಆದರೆ ವೈವಿಧ್ಯತೆಯನ್ನು ಅದು ಇರುವ ಹಾಗೆಯೆ ಉಳಿಸಬೇಕಾದ್ದು ನಮ್ಮ ಜವಾಬ್ದಾರಿ. ಜಾಗತೀಕರಣವೆಂಬ ಬೆಳಕು ತನ್ನ ಗರ್ಭದಲ್ಲಿ ಭೀಕರವಾದ ಕತ್ತಲನ್ನು ಇರಿಸಿಕೊಂಡಿದೆ. ತನ್ನ ಅಧಿಕಾರದ ಪ್ರಾಬಲ್ಯದಿಂದ ಜಾಗತೀಕರಣದ ಪಾಲಿಗೆ ನಮ್ಮ ಆಹಾರ ಪದ್ಧತಿಯಲ್ಲಿ ಗಮನಾರ್ಹ ಬದಲಾವಣೆಯನ್ನು ತಂದಿದೆ. ನಮ್ಮ ಜೀವನ ಶೈಲಿಯನ್ನು ತನಗೆ ಬೇಕಾದ ಹಾಗೆ ನಿರ್ವಹಿಸುತ್ತಿದೆ. ಇಂದು ಪ್ರಮುಖ ಕಾಯಿಲೆಗಳೆಂದು ಗುರುತಿಸಲ್ಪಡುವ ಮಧುಮೇಹ, ರಕ್ತದೊತ್ತಡ, ಕೊಲೆಸ್ಟ್ರಾಲ್ ಮತ್ತು ಹೃದಯಾಘಾತ ಬಂದಿರುವುದು ನಮ್ಮ ಜೀವನ ಶೈಲಿಯ ವ್ಯತ್ಯಾಸದಿಂದ. ಔಷಧ ಕಂಪೆನಿಗಳಿಗೆ ನಮ್ಮ ದೇಹವು ಪ್ರಯೋಗಶಾಲೆಯಾಗಿದೆ ಮತ್ತು ಅಸಾಧ್ಯ ಹಣದ ಹರಿವಿನ ಮೂಲಗಳಾಗಿವೆ. ಜೀರೋ ಸೈಜ್ ನಿರ್ವಹಣೆ ಮತ್ತು ನಲವತ್ತರ ನಂತರ ಹೆಣ್ಣಿನ ದೇಹ ಅಸಹನೀಯ ಎಂಬಂತಹ ಮಿಥ್‌ಗಳನ್ನು ಬಲವಂತವಾಗಿ ಒಪ್ಪಿಸಲಾಗುತ್ತಿದೆ. ದುರಾಸೆ ಹಾಗೂ ಸ್ವಾರ್ಥಗಳು ಸಮುದಾಯಗಳನ್ನು ಛಿಪ್ಪಗೊಳಿಸಿ ಬದುಕನ್ನು ಅಸಹನೀಯವಾಗಿಸುತ್ತಿವೆ.

ಭಾರತದ ಜ್ಞಾನ ಶಾಖೆಗಳು, ವಿಜ್ಞಾನ, ವೈದ್ಯಕೀಯ, ತಂತ್ರಜ್ಞಾನದ ಆವಿಷ್ಕಾರಗಳು, ಕಾನೂನುಗಳು, ಜೀವಿಗಳು ಹಾಗು ಜೀವ ಸಂಪನ್ಮೂಲಗಳನ್ನು, ಇಲ್ಲಿನ ನೆಲದ, ಪರಿಸರದ ಹುದುಗನ್ನು / ಆದರ ಸ್ಥಿತಿಯನ್ನು ಅರಿತು ಅದಕ್ಕೆ ಪೂರಕವಾಗುವಂತಹ, ಜೀವ ನೆಲೆಯನ್ನು ಇಲ್ಲಿ ಜೀವಿಸುವ ಎಲ್ಲರ/ಎಲ್ಲದರ ಎದೆಗೆ ಹತ್ತಿರವಾಗುವಂತೆ ತೊಡಗಿಸಿಕೊಳ್ಳುವುದು ಮಾತ್ರವೇ ಜಾಗತೀಕರಣದ ಸವಾಲನ್ನು ಸಮರ್ಥವಾಗಿ ದಾಟಿಸಬಲ್ಲದು.

ಇದೇ ಸ್ತ್ರೀ ಧರ್ಮವು. ಸಹಜವು. ಅನಿಕೇತನವು.



ಗಾಂಧೀವಾದವನ್ನು ಬದುಕಿದ್ದ ಸತ್ಯವ್ರತ

-ಡಾ.ಮೃತ್ಯುಂಜಯ ರುಮಾಲೆ

1953-54ರಲ್ಲಿ ಉಲ್ಲಾಳದ ಮೂಲಕ ವಿನೋಬಾಭಾವೆ ಗೋದಾನ-ಭೂದಾನ ಸಂಬಂಧವಾಗಿ ಕರ್ನಾಟಕ ಪ್ರವಾಸ ಮಾಡಿದ್ದಾಗ, ಬಳ್ಳಾರಿ ಜಿಲ್ಲೆಯಲ್ಲಿಯೂ ಸಂಚಾರ ಮಾಡಿದ್ದರು. ಗೋದಾನ, ಭೂದಾನ, ಸರ್ವೋದಯ ಮತ್ತಿತರ ವಿಚಾರಗಳನ್ನು ಪ್ರಸಾರ ಮಾಡುವುದರ ಮೂಲಕ ಸ್ವಾತಂತ್ರ್ಯೋತ್ತರ ಭಾರತವನ್ನು ಆಧುನಿಕತೆಯ ಮೋಹಕ್ಕೆ ಬಲಿಬಿದ್ದು ದಾರಿ ತಪ್ಪದಂತೆ ನೋಡಿಕೊಳ್ಳುವ ಮಹತ್ವದ ಉದ್ದೇಶವನ್ನು ಇದು ಒಳಗೊಂಡಿತ್ತು. ಈ 'ಆಂದೋಲನ' ಗಾಂಧೀಜಿಯ ನಂತರದಲ್ಲಿ ರಾಷ್ಟ್ರವ್ಯಾಪ್ತಿಯನ್ನು ಪಡೆದುಕೊಂಡಿತ್ತು. ಇದು ಒಂದು ಅರ್ಥದಲ್ಲಿ 'ಸ್ವಾತಂತ್ರ್ಯ'ವೊಂದೇ ಭಾರತದ ಆತ್ಯಂತಿಕ ಉದ್ದೇಶವಲ್ಲ; ಆ ಕಾಲದ ಸಮಗ್ರ ಬದಲಾವಣೆ, ಸಮಗ್ರ ಸುಧಾರಣೆಯೂ ಅಗತ್ಯ ಎಂಬ ವಿದ್ಯಮಾನವೆನಿಸಿತ್ತು. ಈ ರೀತಿ ಪರಿವರ್ತಿಸುವುದು ಸ್ವಾತಂತ್ರ್ಯ ಹೋರಾಟಗಾರರಿಗೆ, ವಿಶೇಷವಾಗಿ ಗಾಂಧೀವಾದಿಗಳಿಗೆ ಮತ್ತು ರಾಷ್ಟ್ರೀಯವಾದಿ ಚಿಂತಕರಿಗೆ (1948ರಲ್ಲಿ) ಮಹಾತ್ಮಗಾಂಧಿ ತೀರಿದ ನಂತರ ವಿನೋಬಾಭಾವೆಯವರ ಮೂಲಕ ಆತ್ಮವಿಶ್ವಾಸದ ಒಂದು ನೆಲೆ ಕಂಡುಕೊಳ್ಳುವ ಇಂಗಿತವೂ ಆಗಿತ್ತು. ತಮ್ಮ ಸಮಾಜೋ ಆಧ್ಯಾತ್ಮಿಕ ಸೇವೆ, ತಾದಾತ್ಮ್ಯಗಳನ್ನು ಗಾಂಧೀಜಿಯವರ ನಂತರವೂ

ಮುಂದುವರೆಸಿಕೊಂಡು ಹೋಗಲು ವಿನೋಬಾ ಬಹುಶಃ ಕಾರಣರಾಗಿದ್ದರು. ಆದರೆ ಇದು ಕೇವಲ ಒಂದು ನೆಪವೆಂಬಂತೆ ಮುಂದುವರೆದದ್ದೇನೂ ಅಲ್ಲ! ಏಕಕಾಲದಲ್ಲಿ ಗಾಂಧೀಜಿ, ಜಯಪ್ರಕಾಶ, ವಿನೋಬಾ ಅವರನ್ನು ತಮ್ಮೊಳಗೆ ತುಂಬಿಕೊಂಡು ಸ್ವಾತಂತ್ರ್ಯದಂಥ ಬಹುಮುಖ್ಯ ಸಾಫಲ್ಯವನ್ನು ಕಂಡುಕೊಂಡ ನಂತರವೂ ಬದುಕಿನ ಸಾದ್ಯಂತ ಸಂತೃಪ್ತಿಯನ್ನು ಕಂಡುಕೊಳ್ಳುವುದು ಸ್ವತಂತ್ರ ಭಾರತಕ್ಕೆ ಬೇಕಾಗಿತ್ತು. ಅಂಥವರಲ್ಲಿ ಒಬ್ಬರು ಮಾರ್ಚ್ 14, 2009ರಲ್ಲಿ ನಿಧನರಾದ ಸತ್ಯವ್ರತ. ವಿನೋಬಾರೊಂದಿಗೆ ಬಳ್ಳಾರಿ ಜಿಲ್ಲೆಯ ಕೆಲವು ತಾಲ್ಲೂಕುಗಳಲ್ಲಿ ಸಂಚರಿಸಿದ್ದರು ಎಂಬುದು ಅವರ ಬಗ್ಗೆ ಒಂದು ಕುತೂಹಲ ಉಂಟಾಗಲು ಕಾರಣವಾಗಿತ್ತು. ಈ ಹಿನ್ನೆಲೆಯಲ್ಲಿ ಅವರನ್ನು ಐತಿಹಾಸಿಕ ಆಕರವೆಂಬಂತೆ ಪರಿಗಣಿಸಿ ಸಂದರ್ಶಿಸಿದ್ದೆ.

25.5.2007ರಂದು ಬೆಂಗಳೂರಿನ ಗಾಂಧಿಭವನದ ಪಕ್ಕದ ವಿಶ್ವನೀಡಂ ಟ್ರಸ್ಟ್ ಆಶ್ರಮ, ವಿಶ್ವಭನಿಕೇತನದಲ್ಲಿ ಸತ್ಯವ್ರತ ಮತ್ತು ಡಾ.ಲಕ್ಷ್ಮಿಯವರನ್ನು ಭೇಟಿಯಾಗಿದ್ದೆ. 'ಪತ್ರಕರ್ತರೊಬ್ಬರು ಸಂದರ್ಶನಕ್ಕಾಗಿ ಬಂದಿರಬಹುದು; ಇದರಿಂದ ನನ್ನ ನಿತ್ಯ ಕಾರ್ಯಯೋಜನೆಗಳಿಗೆ ಯಥಾರೀತಿ ಪುನಃ ತೊಂದರೆಯಾಗುತ್ತಿದೆ ಎಂಬಂತೆಯೇ ಬಂದು ಮಾತನಾಡಿಸಿದರು. ಹೆಸರು, ಉದ್ದೇಶ, ನನ್ನ ಕುತೂಹಲ ಎಲ್ಲಾ ಹೇಳಿದ ಮೇಲೆಯೂ ಅದನ್ನು ಕೇಳುವ ಮತ್ತು ಗಮನಿಸುವ ಔಪಚಾರಿಕತೆಗೂ ಅವರು ಹೋಗಲಿಲ್ಲ. ಸ್ವಭಾವತಃ ಅವರು ಮುಖಗಂಟು ಹಾಕಿಕೊಂಡು ಮಾತನಾಡಿದರಾದರೂ ಅದು ಇಂದಿನ ರಾಜಕೀಯ ಪ್ರಾಧಾನ್ಯದ ಭಾರತೀಯ ಸಮಾಜ ಕಲುಷಿತಗೊಂಡಿದ್ದರ ಪರಿಣಾಮದಿಂದ ಆದ 'ಮುಖಮುದ್ರೆ'ಯೆನಿಸಿತು. ಅವರ ವಿಶ್ಲೇಷಣೆ-ವಿವರಣೆಗಳಲ್ಲಿ ಸಾತ್ತ್ವಿಕ ಅಸಮಾಧಾನ, ಅತೃಪ್ತಿಗಳೇ ಇದ್ದವು! ಪ್ರತಿ ಸಂದರ್ಭಗಳ ಎಲ್ಲರನ್ನು ಸಂಶಯದಿಂದಲೇ ಪರಿಭಾವಿಸುತ್ತಿದ್ದ ಅವರ ಧೋರಣೆ ಸಹಜವಾಗೇ ಇತ್ತು!

ಸತ್ಯವ್ರತ-ಗಾಂಧೀವಾದವನ್ನು ಬದುಕಿದರು. ವಿನೋಬಾಭಾವೆಯವರ ನೇರ ಸಂಪರ್ಕದಲ್ಲಿದ್ದರು. 'ದಿನಕ್ಕೆ ಇಪ್ಪತ್ತೈದು ಗಜ ಬಟ್ಟೆ ನೇಯ್ದರೆ ಮಾತ್ರ ಎರಡು ಹೊತ್ತಿನ ಊಟ' ಎಂಬ ಶ್ರಮನಿಷ್ಠೆಯ ಅವರ ನಿಯಮ ಸತ್ಯವ್ರತ ಅವರಿಗೆ ಪ್ರಿಯವಾಗಿತ್ತು. ಕಾಲಾಂತರದಲ್ಲಿ ಸಾಮಾಜಿಕ ಅವಶ್ಯಕತೆಯೊಂದನ್ನು ಪೂರೈಸಲು ಈ ಶ್ರಮನಿಯಮವನ್ನು ಸ್ವತಃ ವಿನೋಬಾ ಅವರೇ ಬದಲಿಸಿದರಂತೆ. ಈ ಸಮಾಜವನ್ನು ಸುಧಾರಿಸುವ ಪ್ರಕ್ರಿಯೆಗೆ ವಿನೋಬಾ ಅವರ ಗ್ರಾಮೋಪಾಸನೆ, ಗೋಸೇವೆ- ಇಂಥವುಗಳ ಆದ್ಯ ಕಾರ್ಯಸೂಚಿ ಸ್ವಾತಂತ್ರ್ಯೋತ್ತರ ಕಾಲಾವಧಿಯಲ್ಲಿ ಗಮನಸೆಳೆದಿದ್ದವು. ಸತ್ಯವ್ರತರ ಮೇಲಾದ ಈ ಪ್ರಭಾವ ಎಷ್ಟು ಮುಗ್ಧವಾಗಿ ಮತ್ತು ಗಾಢವಾಗಿ ಇತ್ತು ಎಂದರೆ ಜಾಗತಿಕರಣಕ್ಕೆ ಬಲಿಯಾಗಿರುವ ಒಟ್ಟಾರೆ ಭಾರತೀಯ ಸಮಾಜದಲ್ಲಿ ಕೇಂದ್ರ ಸರ್ಕಾರ ಕಡ್ಡಾಯ ಅನುಷ್ಠಾನವೆಂಬಂತೆ ಈ ಯೋಜನೆಗಳನ್ನು ರೂಪಿಸಿದರೆ, ಗಾಂಧಿ ಮತ್ತು ವಿನೋಬಾ ಅವರ ಸಾಮಾಜಿಕ ಚಿತ್ರ ಸಿಗಬಹುದೆಂದು ಆಸೆ ಹೊಂದಿದ್ದರು.

1948ರಲ್ಲಿ 'ರಾಷ್ಟ್ರಪಿತ'ನನ್ನು ಕಳೆದುಕೊಂಡ ಭಾರತಕ್ಕೂ 'ಮಹಾತ್ಮಗಾಂಧೀಜಿ'ಯನ್ನು ಕಳೆದುಕೊಂಡ ವಿನೋಬಾ ಅವರಿಗೂ ಕೆಲವು ವ್ಯತ್ಯಾಸಗಳಿದ್ದವು. ಅವುಗಳಲ್ಲಿ ಒಂದು, ತಮ್ಮ ಪರಿಕಲ್ಪನೆಯಾಗಿದ್ದ 'ಭೂದಾನ ಯಜ್ಞ ಆಂದೋಲನ'ವನ್ನು ರಾಷ್ಟ್ರವ್ಯಾಪಿಗೊಳಿಸಿ ಮಹಾತ್ಮಗಾಂಧೀಜಿಯನ್ನು ಮತ್ತೆ ಬದುಕಿಸುವುದು. 'ಉಳ್ಳವರಿಂದ ಜಮೀನನ್ನು ಸ್ವಪ್ರೇರಣೆಯಿಂದ ದಾನವಾಗಿ ಪಡೆದು ಭೂಹೀನರಿಗೆ ಹಂಚಿ ಅಂಥವರನ್ನು ಶ್ರಮಸಂಸ್ಕೃತಿಯಲ್ಲಿ ತೊಡಗಿಸಿ ವಿಭಿನ್ನ ರೀತಿಯಲ್ಲಿ ಸಮಾನತೆಯ ಸಿದ್ಧಾಂತವನ್ನು ರೂಪಿಸುವ ವಿನೋಬಾ ಅವರ ಪರಿಕಲ್ಪನೆಗೆ ಸತ್ಯವ್ರತರು, ಇಳಿ ವಯಸ್ಸಿನಲ್ಲಿಯೂ ರೋಮಾಂಚನಗೊಂಡು ಹೆಮ್ಮೆ, ಮೆಚ್ಚುಗೆ ಸೂಚಿಸುತ್ತಿದ್ದರು. 'ದೇವರು ಸೃಷ್ಟಿಸಿದ ಈ ಭೂಮಿ', 'ದೇವರು ಕೊಟ್ಟ ಈ ಭೂಮಿ' ಎಂಬ ಕೃತಕ ಶ್ರೇಷ್ಠತೆಯ ನಂಜಿಕೆಯನ್ನು ಸಾರುವ ಈ ಪೂರ್ವಗ್ರಹ ಪೀಡಿತ ವ್ಯಾಖ್ಯೆಗಳನ್ನು ವಿನೋಬಾ ಅವರು ಸಮಾನತೆಗೆ ರಾಷ್ಟ್ರವ್ಯಾಪಿಗೆ ಅನ್ವಯಿಸಿದ್ದು ಬಹುಶಃ ಜಾಗತಿಕ ಪರಿಕಲ್ಪನೆ ಎಂಬ ಮತ್ತು 'ಅದರಲ್ಲಿ ನಾನು ಕ್ರಿಯಾಶೀಲನಾಗಿದ್ದೆ' ಎಂಬ ಹೆಮ್ಮೆ ಪಡುವ ಅಂಶಗಳು ಸತ್ಯವ್ರತರಲ್ಲಿದ್ದವು.

ವಿನೋಬಾ ಅವರು ಉತ್ತರಭಾರತದಲ್ಲಿ ಸಂಚಾರ ಮಾಡಿ ಸುಮಾರು ಇಪ್ಪತ್ತೊಂದು ಲಕ್ಷ ಎಕರೆ ಭೂಮಿಯನ್ನು ದಾನವಾಗಿ ಪಡೆದು ಭೂಹೀನ ಬೇಸಾಯಗಾರರಿಗೆ ಹಂಚಿದ್ದರು. ಇದರ ಹೆಚ್ಚಿನ ಭಾಗ ಕೆಳವರ್ಗದವರಿಗೆ ಸಂದಿತ್ತು. ಕೆಳವರ್ಗದವರಿಗೆ ಪ್ರತ್ಯೇಕಶಾಲೆ, ಬಾವಿ, ಬಡಾವಣೆ, ಮನೆ, ಛತ್ರಗಳನ್ನು ವ್ಯವಸ್ಥೆ ಮಾಡುವುದು- ವಿನೋಬಾ ಅವರಿಗೆ ಅಸಹನೀಯವಾದ ವಿಚಾರವಾಗಿತ್ತು. 1948ರ ನಂತರ ಗಾಂಧೀ ಪರಿವಾರ ವಿನೋಬಾ ಪ್ರಭಾವದ ಕಕ್ಷೆಗೂ ಬಂದು ಗಾಂಧೀಜಿಯವರ ವಿಚಾರಗಳ ಸಮ್ಮಿಳಿತ ಪ್ರೇರಣೆಯಿಂದ 'ಸರ್ವೋದಯ ಸಮಾಜ ಸ್ಥಾಪನೆ'ಗೆ ಚಾಲನೆ ನೀಡಿದರು. ಗಾಂಧೀಜಿಯವರ ಚಿತಾಭಸ್ಮ ವಿಸರ್ಜನೆ ಮಾಡಿದ್ದ ಕ್ಷೇತ್ರಗಳಲ್ಲಿ ಪ್ರತಿವರ್ಷ ಫೆಬ್ರವರಿ 12ರಂದು ಸರ್ವೋದಯ ಮೇಳ ಕೂಡಿಸಿ ಸೂತ್ರಾಂಜಲಿ ಅರ್ಪಿಸುವ ಯೋಜನೆಯನ್ನು ಸಹ ರೂಪಿಸಿದರು.

1949ರಲ್ಲಿ ಭೂದಾನ ಆರೋಹಣ ಏರ್ಪಡಿಸಿ, 1951ರಲ್ಲಿ ಭೂದಾನ ಯಾಗವನ್ನು ಆರಂಭಿಸಿದರು. ಅದೇ ವರ್ಷ ಆಂಧ್ರಪ್ರದೇಶದಲ್ಲಿ ಸಂಚರಿಸಿ ಶ್ರೀಮಂತರ ಮನವೊಲಿಸಿ ನೂರಾರು ಎಕರೆ ಭೂಮಿಯನ್ನು ದಾನಪಡೆದು ಭೂರಹಿತರಿಗೆ ಒದಗಿಸಿದರು. ಹಳ್ಳಿ ಹಳ್ಳಿ ತಿರುಗಿ ಭೂಮಿ ಬೇಡುವ ಸಂಕಲ್ಪ ತೊಟ್ಟರು. ವಿಶೇಷ ಅನುಭವಗಳ ಪವಾಡ ಸದೃಶವೆನಿಸಿ ವಿನೋಬಾ ಜನಜನಿತರಾದರು; 'ದಂತಕಥೆ' ಎನಿಸಿದರು. ಒಂಬತ್ತನೇ ಫೆಬ್ರವರಿ 1952ರ ಬುದ್ಧ ಪೂರ್ಣಿಮೆಯ ದಿನವನ್ನು 'ಭೂದಾನ ಯಜ್ಞದ ಧರ್ಮಚಕ್ರ ಪರಿವರ್ತನೆಯ ಕೆಲಸ' ಎಂದರು ವಿನೋಬಾಭಾವೆ.

1953–54ರಲ್ಲಿ ವಿನೋಬಾ ಕರ್ನಾಟಕ ಪ್ರವಾಸ ಮಾಡಿದರು. ಕರ್ನಾಟಕದಲ್ಲಿ ಕ್ರಮೇಣ ಭೂದಾನ ಆ್ಯಕ್ಟ್ ಜಾರಿಯಾಯಿತು. ಇದರಲ್ಲಿ ತಗಡೂರು ರಾಮಚಂದ್ರರಾಯರದು ದೊಡ್ಡ ಪಾತ್ರ, ಅವರ ಜೊತೆಯಲ್ಲಿದ್ದ ಪ್ರಮುಖರೆಂದರೆ, ಶಿಲ್ಪಿ ಸಿದ್ಧಲಿಂಗಯ್ಯನವರು. ವಿನೋಬಾ ತಮ್ಮ ಸಂಚಾರವನ್ನು ಉಳ್ಳಾಳದಿಂದ ಆರಂಭಿಸಿ ಬಳ್ಳಾರಿ ಜಿಲ್ಲೆಯನ್ನು ಪ್ರವೇಶಿಸಿದರು. ಮಹಾತ್ಮಗಾಂಧೀಜಿಯವರ ಚಿತಾಭಸ್ಮವನ್ನು ಇಟ್ಟಿದ್ದ ಕೂಡ್ಲಿಗಿ, ಹೂವಿನಹಡಗಲಿ, ಹೊಸಪೇಟೆಗಳಿಗೆ ಆಗಮಿಸಿ ಭೂದಾನ, ಗೋದಾನ, ಗೋರಕ್ಷಣೆಗಳ ಮಹತ್ವ ತಿಳಿಸಿ ನೂರಾರು ಎಕರೆ ಕೃಷಿಭೂಮಿ, ಕೃಷಿಯೇತರ ಭೂಮಿಯನ್ನು ದಾನವಾಗಿ ಪಡೆದರು. ದೇಶದ ಧಾರ್ಮಿಕ ಗ್ರಂಥಗಳಿಂದಲೂ ಗಾಂಧೀಜಿಯವರ ಸಾಮುದಾಯಿಕವಾದ ಪ್ರಯೋಗಾತ್ಮಕವಾದ ತಾದಾತ್ಮ್ಯದಿಂದ ವಿನೋಬಾಭಾವೆ ಇದನ್ನು ಒಂದು ಆಂದೋಲನದ ಸ್ವರೂಪಕ್ಕೆ ತಂದಿದ್ದರು.

ಬಳ್ಳಾರಿ ಜಿಲ್ಲೆಯ ಪ್ರವಾಸ ಮಾಡಿದಾಗ ಭೂದಾನಕ್ಕೆ ಸಂಬಂಧಿಸಿದ ಜಿಲ್ಲಾ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದವರು ವಿನೋಬಾ ತತ್ವಗಳ ಪ್ರಭಾವದಲ್ಲಿದ್ದ ಕೊಟ್ಟೂರಿನ ಎಸ್.ವೆಂಕೋಬರಾವ್ ಮತ್ತು ಬಳ್ಳಾರಿಯ ಮುನ್ಸಿಪಲ್ ಪ್ರೌಢಶಾಲೆಯಲ್ಲಿ ಕನ್ನಡ ಶಿಕ್ಷಕರಾಗಿದ್ದ ಎಂ.ವಾಸುದೇವಾಚಾರ್ಯರು. ಉಡುಪಿಯ ಅಷ್ಟಮಠಗಳಲ್ಲಿ ಉಚಿತ ವಸತಿ–ಊಟ ಪಡೆದು, ಸಂಸ್ಕೃತ ಕಾಲೇಜ್‌ನಲ್ಲಿ ಅಭ್ಯಾಸ ಮಾಡಿದ್ದ ಎಂ.ವಾಸುದೇವಾಚಾರ್ಯರು ಕಾರ್ಕಳದಲ್ಲಿ ಕನ್ನಡ ವಿದ್ವಾನ ಪದವಿ ಪಡೆದು ಬಳ್ಳಾರಿಯಲ್ಲಿ ಕನ್ನಡ ಶಿಕ್ಷಕರಾಗಿದ್ದರು. (ಆಗ ಮಂಗಳೂರು–ಬಳ್ಳಾರಿ ಮದ್ರಾಸ್ ಪ್ರಾಂತದಲ್ಲಿದ್ದವು) ವಿದ್ಯಾರ್ಥಿ ದೆಸೆಯಲ್ಲಿಯೇ ಗಾಂಧೀಜಿ, ವಿನೋಬಾರ ಪ್ರಭಾವಕ್ಕೆ ಒಳಗಾಗಿದ್ದ ಎಂ.ವಾಸುದೇವಾಚಾರ್ಯರು ಸಮಾಜಕ್ಕೆ ಏನಾದರೂ ಮಾಡಬೇಕೆಂದು ಹಂಬಲಿಸುತ್ತಿದ್ದರು. ಉಡುಪಿಯ ಪೇಜಾವರ ಶ್ರೀಗಳ ಸಹಪಾಠಿಗಳಾಗಿದ್ದ ಇವರು ಮಿಂಡವಸ್ತ್ರಗಳನ್ನು ವಿರೋಧಿಸಿ ಸ್ವತಃ ಚರಕದಿಂದ ನೇಯ್ದು ಖಾದಿ ವಸ್ತ್ರಧಾರಿಯಾಗಿದ್ದರು.

ಬಳ್ಳಾರಿಗೆ ಬಂದ ಮೇಲೆ ಇದೇ ಮನೋಭಾವದಿಂದ ಜಿ.ಆರ್.ಉಡುಪ ಅವರು ಒಗ್ಗೂಡಿ ವೃತ್ತಿಯಲ್ಲಿದ್ದಾಗಲೇ ಸರ್ವೋದಯ ತತ್ವವಿಚಾರಗಳ ಪ್ರಚಾರ ಮಾಡುತ್ತಿದ್ದ ಇವರು, ಪ್ರತಿ ಶನಿವಾರ–ಭಾನುವಾರ ಗ್ರಾಮ ಸಂಚಾರ ಮಾಡುತ್ತಿದ್ದರು. ಹಳ್ಳಿಗಳಿಂದ ಬರುತ್ತಿದ್ದ ಹಿಂದುಳಿದ, ಬಡವಿದ್ಯಾರ್ಥಿಗಳ ಬಗ್ಗೆ ವಿಶೇಷ ಕಾಳಜಿ ತೋರಿಸಿ ಊಟ, ಪುಸ್ತಕಗಳಿಗೆ ನೆರವು ನೀಡುತ್ತಿದ್ದರು. ಇಂಥ ಸಾಮಾಜಿಕ ಕಾರ್ಯಕ್ಕೆ ಅಡ್ಡಿಯಾಗುವುದೆಂದು ಮದುವೆಯಾಗದೇ ತಮ್ಮ ಸಾಮಾಜಿಕ ವೃತ್ತಿಗೇ ತಮ್ಮನ್ನು ತೊಡಗಿಸಿಕೊಂಡರು. ಕೊನೆಗೆ ನೌಕರಿಯೂ ತನ್ನ ಕೆಲಸಕ್ಕೆ ಅಡ್ಡಿಯಾಗುತ್ತಿದೆ ಎಂದೆನಿಸಿ ಅದಕ್ಕೂ ರಾಜೀನಾಮೆ ನೀಡಿದರು. ವಿನೋಬಾ ವಿಚಾರಗಳನ್ನು ಜಿಲ್ಲೆಯಾದ್ಯಂತ ಪ್ರಚಾರ ಮಾಡಬೇಕೆಂದು

ಭೂದಾನ ಉಸ್ತುವಾರಿಯನ್ನು, ವಿನೋಬಾ ಸೇವಾ ಸಮಿತಿಯ ಅಧ್ಯಕ್ಷತೆಯನ್ನು ವಹಿಸಿಕೊಂಡರು.

ಅಲ್ಲಂಕರಿಬಸಪ್ಪ ಮತ್ತು ಅಲ್ಲಂಸುಮಂಗಳಮ್ಮ (ಆಗ ಶಾಸಕರು) ಈರ್ವರ ಮನವೊಲಿಸಿ ಸುಮಾರು ಎರಡುನೂರ ಐವತ್ತು ಎಕರೆಗಳಷ್ಟು ಭೂಮಿಯನ್ನು ದಾನವಾಗಿ ಪಡೆದು 'ಸರ್ವೋದಯ ಗ್ರಾಮ' ನಿರ್ಮಿಸಲು ಕಾರಣರಾದ ಎಂ.ವಾಸುದೇವಾಚಾರ್ಯರು ವಿನೋಬಾ ಪ್ರೇರಣೆಯಿಂದ ಸ್ವಸಾಮರ್ಥ್ಯವನ್ನು ಮೆರೆದಿದ್ದರು.

ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಪದವಿ ಶಿಕ್ಷಣ ಪಡೆಯುತ್ತಿದ್ದಾಗಲೇ ವಿನೋಬಾರ ಭಾಷಣದಿಂದ ಪ್ರಭಾವಿತರಾಗಿ ತಮ್ಮನ್ನು ಸಾಮಾಜಿಕವಾಗಿ ಸಮರ್ಪಣೆ ಮಾಡಿಕೊಂಡ ಸತ್ಯವ್ರತ ಹಲವು ಚಾರಿತ್ರಿಕ ಸಂದರ್ಭಗಳಲ್ಲಿ ಸಾಕ್ಷಿಪುರುಷರಂತೇ ಭಾಗಿಯಾಗಿದ್ದರು. ಈ ದೇಶದ ಚರಿತ್ರೆಯಲ್ಲಿ ಸ್ವಾತಂತ್ರ್ಯ ಹೋರಾಟದಂಥ ಪ್ರಮುಖ ವಾಹಿನಿಯ ಅಡಿಯಲ್ಲಿ ಅದರ ಉಪನಿಷ್ಪತ್ತಿಗಳಂತೆ ಉದ್ಭವವಾಗಿ ಚಾರಿತ್ರಿಕ ಸಂದರ್ಭಗಳಿಗೆ ಸತ್ಯವ್ರತ ಸಾಕ್ಷಿಪ್ರಜ್ಞೆ ಮೆರೆದದ್ದು ಕುತೂಹಲದ ಅಂಶವಷ್ಟೆ ಆಗಿರದೆ ಚಾರಿತ್ರಿಕ ಪುನರಾವಲೋಕನಕ್ಕೂ ಪ್ರೇರಣೆ ನೀಡುವಂತೆ ಮಾಡಿತ್ತು.

ಅಂದು (25.5.2007) ಸತ್ಯವ್ರತ ಅವರೊಂದಿಗೆ ಮಾತನಾಡಿದಷ್ಟೂ ಸಮಯ ಒಬ್ಬ ನಿಷ್ಠುರವಾದಿಯೊಬ್ಬ ಕಟುವಾಸ್ತವದೊಂದಿಗೆ ಯಾವ ರೀತಿಯಲ್ಲಿಯೂ ಒಪ್ಪಂದ ಮಾಡಿಕೊಳ್ಳಲಾಗದ ಆಧಾರರಹಿತ ಆಧುನಿಕತೆಯ ವಿರೋಧಿಯೊಂದಿಗಿನ 'ವಾಗ್ವಾದ'ದಂತೆಯೇ ಇತ್ತು. ವಾಗ್ವಾದವನ್ನು ಎಲ್ಲಿಯೂ ಸಡಿಲಗೊಳಿಸದ ಅವರ ನಿಷ್ಠುರ ವರ್ತನೆಯಲ್ಲಿ ಅವರ ಮೇಲೆ ಪ್ರಭಾವ ಬೀರಿದ ಅಂದಿನ ರಾಷ್ಟ್ರನಾಯಕರ ವ್ಯಕ್ತಿತ್ವದ ದರ್ಶನವಾಗುತ್ತಿತ್ತು.

ಸತ್ಯವ್ರತ ಅವರಿಗೆ ಅದೆಷ್ಟರ ಮಟ್ಟಿಗೆ 'ಸಾಮಾನ್ಯಜ್ಞಾನ'ವಿರಲಿಲ್ಲವೆಂದರೆ 'ಗಾಂಧೀವಾದವನ್ನು ಅನ್ವಯಿಸಿಕೊಂಡರೆ ಇಂದಿಗೂ ಭಾರತ ಸಮಾಜ ಸುಧಾರಿಸುತ್ತದೆ' ಎಂಬ ವಿಶ್ವಾಸವನ್ನು ಹೊಂದಿದ್ದರು. ಅವರು ವಾಸಿಸುವ ಮನೆ ದೈಹಿಕವಾಗಿ ಆರೋಗ್ಯವಾಗಿರುವವನಷ್ಟೇ ಅಲ್ಲ; ಬದುಕಿನಲ್ಲಿ ಕ್ರಿಯಾಶೀಲತೆಯನ್ನು ನೆಚ್ಚಿಕೊಂಡವನು ಮಾತ್ರ ವಾಸಿಸಬೇಕು- ಈ ರೀತಿಯಲ್ಲಿತ್ತು. ಈ ದೇಶದ ರಾಜಕೀಯ ಅಧಿಕಾರಕ್ಕಾಗಿ ತುರ್ತುಪರಿಸ್ಥಿತಿಯನ್ನು ಮೈಮೇಲೆ ಹಾಕಿಕೊಂಡಿದ್ದಾಗ ಸತ್ಯವ್ರತರು ತಮ್ಮ ಈ ಮನೆಯಲ್ಲಿಯೇ 'ಭೂಗತ'ರಾಗಿದ್ದರಂತೆ. ಆ ಸಂದರ್ಭಗಳಲ್ಲಿ ಈ ಮನೆ 'ಕೆಂಗಣ್ಣಿನವರ' ದೃಷ್ಟಿಗೂ ಒಳಗಾಗಿತ್ತು.

ತಮ್ಮ ವೈಯಕ್ತಿಕ ಬದುಕು, ಖಾಸಗಿ ಸಂಸಾರ- ಇಂಥವುಗಳ ಬಗ್ಗೆ ಯಾವುದೇ ಪ್ರಶ್ನೆಗಳನ್ನು ಕೇಳಲು ಅವರು ನನಗೆ ಬಿಡಲಿಲ್ಲ. ಅಂಥ ವಾಕ್ಯಗಳನ್ನು ಅರ್ಧದಲ್ಲಿಯೇ ಕತ್ತರಿಸುತ್ತಿದ್ದರು.

ಆಧುನಿಕ, ಅತ್ಯಾಧುನಿಕತೆಯ 'ಪ್ರತಿನಿಧಿ'ಯಂತಿದ್ದ ನನಗೆ ಗಾಂಧಿ, ವಿನೋಬಾರಂಥವರ ವಿಚಾರಗಳನ್ನು ಪ್ರತಿವಿವರಣೆಯ ಮಧ್ಯೆ 'ಸೂಕ್ತಿ'ಗಳಂತೇ ಉಲ್ಲೇಖಿಸುತ್ತಿದ್ದ ಅವರು,

ದಕ್ಷಿಣ ಆಫ್ರಿಕಾದಲ್ಲಿ ನಡೆದ ಗಾಂಧೀಜಿಯವರು ಅನುಭವವನ್ನು ರೋಮಾಂಚಕಾರಿಯಾಗಿ, ಭಾವುಕರಾಗಿ ನೆನಪು ಮಾಡಿಕೊಳ್ಳುತ್ತಿದ್ದರು. 'ಸರ್ವೋದಯ' ಪರಿಕಲ್ಪನೆಗೆ ಈ ಜಾಗತಿಕರಣ ಯಾವ ರೀತಿಯಲ್ಲಿಯೂ ನೆರವು ನೀಡದು ಮತ್ತು ಸುಖಾನುಕೂಲ ನೀಡಿ ಶ್ರಮಸಂಸ್ಕೃತಿಗೆ ಧಕ್ಕೆ ತರುವ ಅಭಿವೃದ್ಧಿಗೂ 'ಸರ್ವೋದಯ'ದ ಪರಿಕಲ್ಪನೆಗೂ ಅಜಗಜಾಂತರ ವ್ಯತ್ಯಾಸವಿದೆ ಎಂಬುದು ಸತ್ಯವ್ರತರ ಗ್ರಹಿಕೆಯಾಗಿತ್ತು. ವಾಸ್ತವವಾಗಿ 'ಸರ್ವೋದಯ ಜೀವನದರ್ಶನ'ದ ಪ್ರತಿಪಾದಕರಾದ ಮಹಾತ್ಮಗಾಂಧೀಜಿಯವರು– ಆಧುನಿಕತೆಯನ್ನು ಎದುರುಗೊಳ್ಳುವ ಭಾರತೀಯ ಮನೋಧರ್ಮಕ್ಕೆ ಒಂದು ಪೂರ್ವಸಿದ್ಧತೆಯನ್ನು ಆ ಮೂಲಕ ಮಾಡಿದ್ದರು. ನೇತ್ಯಾತ್ಮಕ ಅಥವಾ ವಿಪರೀತದಲ್ಲಿ ಸಮಾಜದಲ್ಲಿ ಪರಿವರ್ತಿಸುವುದರ ಪ್ರಕ್ರಿಯೆಯನ್ನು ಸೂಕ್ಷ್ಮವಾಗಿ ವಿರೋಧಿಸಿದ್ದರು. ತಮ್ಮ ಆತ್ಮಚರಿತ್ರೆಯಲ್ಲಿ, 'ಮಕ್ಕಳು ತಮ್ಮ ತಂದೆ ತಾಯಿಯರಿಂದ ದೈಹಿಕ ಲಕ್ಷಣಗಳನ್ನು ಪಡೆಯುತ್ತಾರೆ. ಹಾಗೆಯೇ ಅವರ ಇತರ ಗುಣಗಳನ್ನು ಅನುಷಂಗಿಕವಾಗಿ ಪಡೆಯುತ್ತಾರೆ. ಬೆಳವಣಿಗೆಯಲ್ಲಿ ಪರಿಸರ ಅತಿಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಆದರೆ ಶಿಶುವಿನ ಆರಂಭ ಸಂಪತ್ತು ಪೂರ್ವಜರಿಂದ ಪ್ರಾಪ್ತವಾದ ಸಂಪತ್ತು' ಎಂದ ಮಾತು ಸಮಾಜ ಮತ್ತು ಮನುಷ್ಯನನ್ನು ಮುಖಾಮುಖಿಗೊಳಿಸಿ ಜ್ಞಾನದ ವಿಸ್ತಾರದಲ್ಲಿರುವ ವಿದ್ಯಮಾನಗಳ ಪಾತ್ರವನ್ನು ಕುರಿತ ಚಿಂತನೆಯಾಗಿತ್ತು.

1930ರಲ್ಲಿ ಚಿತ್ರದುರ್ಗದಲ್ಲಿ, ಸಂಪ್ರದಾಯನಿಷ್ಠ ಹಾಗೂ ಸಾಮಾಜಿಕ ಶ್ರದ್ಧೆಯ ಬಡಕುಟುಂಬದಲ್ಲಿ ಸತ್ಯವ್ರತ ಜನಿಸಿದರು. ಸತ್ಯವ್ರತರ ತಂದೆ ಶ್ರೀನಿವಾಸಾಚಾರ್, ತಾತ ಸತ್ಯವ್ರತಾಚಾರ್. ತಂದೆ ತೀರಿದ ಮಾರನೇ ವರ್ಷವೇ ಹುಟ್ಟಿದ ತಮ್ಮ ನಾಲ್ಕನೇ ಮಗನಿಗೆ ಶ್ರೀನಿವಾಸಾಚಾರ್ ತಮ್ಮ ತಂದೆಯ ಹೆಸರನ್ನೇ ಇಟ್ಟರು. ತಂದೆಯ ಹೆಸರನ್ನೇ ಮಗನಿಗೆ ಇಟ್ಟು ಗೌರವಿಸುವುದು ನಮ್ಮಲ್ಲಿ ಒಂದು ಶ್ರದ್ಧೆಯ ಪದ್ಧತಿಯಂತೆಯೇ ಬಂದಿದೆಯಾದರೂ ಈ ಔಪಚಾರಿಕತೆ ಈ ಮನೆಗೆ ಭಿನ್ನವಾಗಿತ್ತು. ಶ್ರೀನಿವಾಸಾಚಾರರ ತುಂಬು ಕುಟುಂಬಕ್ಕೆ ಈ ದೇಶದ ಸಮಗ್ರ ಸಾಂಸ್ಕೃತಿಕ ಹಿನ್ನೆಲೆಯನ್ನು ವಿಶೇಷವಾಗಿ ರಾಷ್ಟ್ರೀಯಪ್ರಜ್ಞೆಯನ್ನು ಎರೆದು ಬೆಳೆಸಿದವರು ಸತ್ಯವ್ರತಾಚಾರ್. ದೇಶದಲ್ಲಿ ಅಸದಳವಾಗಿ ಹಬ್ಬುತ್ತಿದ್ದ ಸ್ವಾತಂತ್ರ್ಯದ ಚಿಂತನೆಯನ್ನು ಹಾಗು ಹೋರಾಟದ ಉತ್ಸಾಹಗಳನ್ನು ಅಕ್ಷರಶಃ ಮನೆಯವರಲ್ಲಿ ಉಂಟುಮಾಡಿದ್ದು ಸತ್ಯವ್ರತಾಚಾರ್ ಅವರ ಸಾಂಸ್ಕೃತಿಕ ತಾದಾತ್ಮ್ಯತೆಯೇ. ದೇವತೋಪಾಸನೆಯ ಜೊತೆಗೆ ಗಾಂಧೀಜಿ, ತಿಲಕ, ಗೋಖಲೆಯವರಂಥ ರಾಷ್ಟ್ರನಾಯಕರ ಚಿಂತನೆಗಳನ್ನು 'ಪಾರಾಯಣ'ದಂತೆ ಮನೆ ಮತ್ತು ಊರಿನ ಪರಿಸರದಲ್ಲಿ ಸತ್ಯವ್ರತಾಚಾರ್ ಮಾಡುತ್ತಿದ್ದರು. (ಸತ್ಯವ್ರತ ಹೇಳಿದ್ದ ಪ್ರಕಾರ) 'ಮೈಸೂರು ಸಂಸ್ಥಾನದ ಪ್ರಾಬಲ್ಯದಲ್ಲಿಯೂ, ಎಲ್ಲಾ ರೀತಿಯ ಸುಖಾನುಕೂಲಗಳ ವ್ಯವಸ್ಥೆಯಿದ್ದೂ, ದೇಶದ ಸ್ವಾತಂತ್ರ್ಯದ ಬಗ್ಗೆ ಚಿಂತನೆ ನಡೆಸಿದ್ದು ಸಂಪ್ರದಾಯ ನಿಷ್ಠವಾದ ನಮ್ಮ ಮನೆಗೆ ಅಚ್ಚರಿಯ ವಿಷಯವೇ'– ಇದು ಮನೆ, ತಾತ ಮತ್ತು ನಮ್ಮ ಪ್ರೇರಣೆಯ ಹಿನ್ನೆಲೆಗೆ ಸಂಬಂಧಿಸಿದಂತೆ ಒಂದು 'ಸಾಧನೆ' ಎನಿಸುತ್ತದೆ.

ಸತ್ಯವ್ರತ ಹುಟ್ಟಿದ್ದು ದೀಪಾವಳಿ ಅಮಾವಾಸ್ಯೆಯಂದು. ಅದಕ್ಕಾಗಿ ಹುಟ್ಟಿನ ಸಂದರ್ಭವೇ ಹಾಗೇ ಇದ್ದುದರಿಂದ ತನ್ನ ಅಜ್ಜಿ, ಅಜ್ಜರ ಕೋಪಕ್ಕೆ ಒಳಗಾಗಿದ್ದ ಅವರು 'ಇವನಿಂದ ನಮ್ಮ ಕುಟುಂಬಕ್ಕೆ ಏನೋ ಕಾದಿದೆ?!' ಎಂದು ಭಾವಿಸಿದ್ದರು. ಈ ಭಾವನೆಗೆ ಪೂರಕವಾಗಿ ಮಗುವಿಗೆ ಹುಟ್ಟಿದ ತಿಂಗಳಿಂದಲೇ ಕಾಯಿಲೆ; ಒಂದಿಲ್ಲೊಂದು ಕಾಯಿಲೆಗಳು. ಅಜ್ಜಿ ಮಗುವನ್ನು ಮನೆಯ ಹೊರಗೇ ಇಟ್ಟುಬಿಟ್ಟಿದ್ದರಂತೆ! ಅತ್ತೆ, ಮಾವಂದಿರು ಹಲವು ಕಟ್ಟುನಿಟ್ಟಾದ ನಿಯಮಗಳ ಪಾಲನೆಯಲ್ಲಿ ತಾಯಿ ಸತ್ಯವ್ರತನನ್ನು ಮನೆಯ ಹೊರಗೇ ಆರೈಕೆ ಮಾಡಿದರು. ಐದಾರು ವರ್ಷ ವಯಸ್ಸಾದರೂ ಕಾಯಿಲೆಗಳನ್ನು ನಿಭಾಯಿಸಿ 'ಗುಂಡುಕಲ್ಲಿ'ನಂತೆ ಸತ್ಯವ್ರತ ಬೆಳೆದಿದ್ದರಿಂದ ರೂಢಿಯಲ್ಲಿ ಮಗುವನ್ನು ಗುಂಡ; ಗುಂಡಾಚಾರ್ ಎಂದೇ ಕರೆಯಲಾರಂಭಿಸಿದರು. ಸತ್ಯವ್ರತಾಚಾರ್ ರೂಢಿಯಲ್ಲಿ ಗುಂಡಾಚಾರ್ ಎಂದೇ ಕರೆಯಲ್ಪಡುತ್ತಿದ್ದರು. ಇದು ಮರೆಮಾಚಿ 'ಸತ್ಯವ್ರತ' ಎಂಬ ನಿಜನಾಮ ಚಾಲನೆ ಪಡೆಯಲು ಮುಂದೊಂದು ದಿನ ವಿನೋಬಾ ಅವರ ಸಂಪರ್ಕದಲ್ಲಿ ಉತ್ತರಭಾರತದ ಸಂಚಾರ ಸಂದರ್ಭ ಬರುವವರೆಗೂ ಕಾಯಬೇಕಾಯಿತು. ರಾಷ್ಟ್ರನಾಯಕರ ಪ್ರೇರಣೆಯ ಆರೈಕೆಯಲ್ಲಿದ್ದ ಕುಟುಂಬದ ಒಂದು ಮಗು ರಾಷ್ಟ್ರನಾಯಕನಿಂದ ಬದುಕಿನ ಒಂದು ಕುತೂಹಲ ಸಂದರ್ಭ ಪಡೆಯಬೇಕಾಗಿ ಬಂದದ್ದು ಕಾಕತಾಳೀಯವೇ!

ಸತ್ಯವ್ರತ ಹುಟ್ಟಿ ಎರಡುವರ್ಷಗಳ ನಂತರ ಅವರ ತಾಯಿಗೆ ಮತ್ತೊಂದು ಮಗುವಾಯಿತು. ಅದಾದ ಎರಡು-ಮೂರು ವರ್ಷಗಳಲ್ಲಿಯೇ ತಾಯಿಯನ್ನು ಕಳೆದುಕೊಂಡರು. ರಾಷ್ಟ್ರೀಯ ಸ್ಫೂರ್ತಿ ತುಂಬಿಕೊಂಡಿದ್ದ ತಂದೆ ಶ್ರೀನಿವಾಸಾಚಾರ್ ಎರಡನೇ ಮದುವೆಯಾಗದೇ ತನ್ನ ಸಹೋದರರರಲ್ಲಿ ಪಾಲನೆ-ಪೋಷಣೆಗೆ ತನ್ನ ಮಕ್ಕಳನ್ನು ಬಿಟ್ಟು ಸಾಮಾಜಿಕ ಚಿಂತನೆಗೆ ತೊಡಗಿದರು. ಕಡಿಮೆ ಉತ್ಪನ್ನದ ಕಷ್ಟದ ಬದುಕಿನ ಈ ಕುಟುಂಬಕ್ಕೆ ಇದ್ದುದು ಆರ್ಥಿಕ ಬಡತನವಷ್ಟೇ! ಕಡಿಮೆ ಸಂಬಳದ ಶ್ರೀನಿವಾಸಾಚಾರ್ ಸಾಮಾಜಿಕ ತೊಡಗಿಸಿಕೊಳ್ಳುವಿಕೆ ಸಹಜವಾಗಿ ವ್ಯಕ್ತಿ ಪರಿಮಿತಿಯಲ್ಲೇ ಇತ್ತು. ಸತ್ಯವ್ರತರನ್ನು ಒಬ್ಬ ನಿಷ್ಠುರ ತತ್ತ್ವನಿಷ್ಠರನ್ನಾಗಿಯೂ, ಕಟುವಾಗಿ ಪ್ರಾಮಾಣಿಕರನ್ನಾಗಿಯೂ ಮಾಡಿದ್ದು ಬಹುಶಃ ಅವರ ತಂದೆ ಮತ್ತು (ಆ ಹೊತ್ತಿಗಾಗಲೇ ನಿಧನರಾಗಿದ್ದ) ತಾತ ಸತ್ಯವ್ರತಾಚಾರ್ ಅವರ ಹಿನ್ನೆಲೆ. ಪ್ರಾಸಂಗಿಕವಾಗಿ ಆರ್ಥಿಕ ಉತ್ಪನ್ನ ಒದಗಿ ಬರುತ್ತಿದ್ದರೂ ತಮಗಿದ್ದ ಹಿನ್ನೆಲೆಯ ನಿಷ್ಠೆಯಲ್ಲಿ 'ಬಡತನ'ವನ್ನೇ ಅಪೇಕ್ಷಿಸಿದರು. (ಈ ಹೊತ್ತಿಗಾಗಲೇ) ಈ ರೀತಿ ಬದುಕಲು ಇವರೊಳಗಿದ್ದ ಗಾಂಧೀಜಿ, ವಿನೋಬಾ, ಜಯಪ್ರಕಾಶ ಮೊದಲಾದವರು ಪ್ರೇರೇಪಿಸಿದ್ದರು. ಸತ್ಯವ್ರತರದು ಪ್ರಯೋಗನಿಷ್ಠ ವೈಚಾರಿಕತೆಯಾಗಿದ್ದರಿಂದ ಬಡತನ ಎಂದೂ ಅಸಹ್ಯವನ್ನುಂಟು ಮಾಡಲಿಲ್ಲ; ಹಾಗೇ ಶ್ರೀಮಂತಿಕೆಯಾದರೂ ಅವರನ್ನು ಕೆಣಕಲಿಲ್ಲ.

ಸತ್ಯವ್ರತರಿಗೆ ಮೊದಲ ಬಾರಿಗೆ ಮಹಾತ್ಮಗಾಂಧೀಜಿಯವರ ಪ್ರಭಾವ ಉಂಟಾಗಿದ್ದು ಒಂದು ವಿಚಿತ್ರ ಹಾಗೂ ವಿಶೇಷ ಸಂದರ್ಭದಲ್ಲಿ. ಆಗಿನ್ನೂ ಪ್ರೌಢಶಾಲೆಯ ವಿದ್ಯಾರ್ಥಿ.

ಎಸ್.ನಿಜಲಿಂಗಪ್ಪ ಚಿತ್ರದುರ್ಗ ಜಿಲ್ಲೆಯಲ್ಲಿ ವಕೀಲರಾಗಿ ಹೆಸರು ಮಾಡಿದ್ದರು. 'ಗಾಂಧೀ ಪರೀಕ್ಷೆ' ಕಟ್ಟಿದ್ದರಿಂದ ಸ್ವಾತಂತ್ರ್ಯ ಹೋರಾಟದಲ್ಲಿಯೂ ಗುರುತಿಸಿಕೊಂಡಿದ್ದರು. ಅದೇ ಜಿಲ್ಲೆಯ ಜಗಳೂರಿನ ಜೆ.ಎಂ.ಇಮಾಂಸಾಹೇಬರು ಮೈಸೂರು ಸಂಸ್ಥಾನದ ಪ್ರಭಾವಿ ರಾಜಕಾರಣಿ. ದೇಶದ ಸ್ವಾತಂತ್ರ್ಯಕ್ಕೆ ಸಂಬಂಧಿಸಿದಂತೆ ಇಬ್ಬರದೂ ಭಿನ್ನ ನಿಲುವು. ಆದರೆ ಇಬ್ಬರೂ ಆತ್ಮೀಯ ಸ್ನೇಹಿತರು, ನೆರೆಹೊರೆಯವರು. ಇಬ್ಬರನ್ನೂ ತತ್ತ್ವನಿಷ್ಠರನ್ನಾಗಿ, ಸಾಮಾಜಿಕ ಹೊಣೆಗಾರರನ್ನಾಗಿ ಮಾಡಲು, ತಮ್ಮ ವ್ಯಕ್ತಿತ್ವಕ್ಕೆ ಸಾಮುದಾಯಿಕ ಗುಣ ತಂದುಕೊಳ್ಳುವುದಕ್ಕೆ ಕಾರಣರಾದವರಲ್ಲಿ ಮಹಾತ್ಮಗಾಂಧೀಜಿಯವರೂ ಒಬ್ಬರಾಗಿದ್ದರು. ಭಿನ್ನಮತ, ಭಿನ್ನಪಕ್ಷ, ಭಿನ್ನನಿಲುವಿನ, ಭಿನ್ನಧರ್ಮದ ಇಬ್ಬರು ಮುತ್ಸದ್ದಿಗಳನ್ನು ನಿಯಂತ್ರಿಸಿರುವ ಈ ಗಾಂಧೀಜಿಯ ವ್ಯಕ್ತಿತ್ವ ಎಂಥದ್ದು?! ಯಾರು ಈ ಮಹಾತ್ಮಗಾಂಧೀಜಿ?! ಇದೇ ರೀತಿಯಾಗಿ ತಮಿಳುನಾಡಿನ ಸಿ.ರಾಜಗೋಪಾಲಾಚಾರಿ; ಕಾಂಗ್ರೆಸ್ಸಿನ ಅಪ್ಪಟ ರಾಷ್ಟ್ರವಾದಿ. ರಾಷ್ಟ್ರೀಯತೆಯಿಂದ ಪೂರ್ಣ ಪ್ರವಹಣದಲ್ಲಿ ವ್ಯಕ್ತಿತ್ವವನ್ನು ನಿರೂಪಿಸಿಕೊಂಡವರು. ಹೈದರಾಬಾದಿನ ಸಿ.ರಾಜೇಶ್ವರರಾವ್ ಕಮ್ಯುನಿಷ್ಟ್; ಅಪ್ಪಟ ದೇಶಪ್ರೇಮಿ. ಭಾರತದೇಶ ಕಮ್ಯುನಿಷ್ಟ ನೀತಿಯಿಂದ ಮಾತ್ರ ಉದ್ಧಾರವಾಗಲು ಸಾಧ್ಯ ಎಂದು ಗಾಢವಾಗಿ ನಂಬಿದ್ದವರು. ರಾಜಕೀಯ ವಲಯದಲ್ಲಿ ಇಬ್ಬರನ್ನೂ 'ಸಿಆರ್' ಎಂದೇ ಕರೆಯಲಾಗುತ್ತಿತ್ತು. ಇಬ್ಬರ ಮೇಲೂ ಮಹಾತ್ಮಗಾಂಧೀಜಿಯವರ ಪ್ರಭಾವವಾಗಿತ್ತು. ಸತ್ಯವ್ರತ (ಅಥವಾ ಸತ್ಯವ್ರತರಂಥವರಿಗೆ) ಈ ವೈಚಿತ್ರ್ಯ ಮತ್ತು ವೈರುಧ್ಯಗಳ ಮಧ್ಯೆ ದೊಡ್ಡದಾಗಿ ಕಂಡದ್ದು ಮಹಾತ್ಮಗಾಂಧೀಜಿಯವರ ವ್ಯಕ್ತಿತ್ವ

ಈ ಕಾಲಾವಧಿಯಲ್ಲಿ ಸತ್ಯವ್ರತರನ್ನು 'ಬದುಕಿನ ಹಂಬಲ'ವೆಂಬಂತೆ ಕಾಡಿದ್ದು ಮಹಾತ್ಮಗಾಂಧೀಜಿಯವರನ್ನು ನೋಡಬೇಕೆಂಬುದು.

ಗಾಂಧೀಜಿ ಕೊನೆಯಬಾರಿಗೆ ಬೆಂಗಳೂರಿಗೆ ಬಂದದ್ದು 1936ರಲ್ಲಿ. ಕನ್ನಡನಾಡಿಗೆ ಕೊನೆಯಬಾರಿಗೆ ಬಂದದ್ದು 1937ರಲ್ಲಿ; ಬೆಳಗಾವಿ ಜಿಲ್ಲೆಯ ಸಣ್ಣಹಳ್ಳಿ ಹುದಲಿಗೆ. ಸತ್ಯವ್ರತರಿಗೆ ಗಾಂಧೀಜಿಯನ್ನು ನೋಡಬೇಕೆಂಬ 'ಭಾವೋದ್ವೇಗ'ವುಂಟಾಗಿದ್ದು (ಬಹುಶಃ) 1942-43ರಲ್ಲಿ. ಈ ಹಂಬಲ ಜೀವನಧ್ಯೇಯದಂಥ ಮಹತ್ವ ಪಡೆದಿತ್ತು. ಆಗ ಬೆಂಗಳೂರಿಗೆ ನಿಯತಕಾಲಿಕವಾಗಿ ಬಂದು ಹೋಗುತ್ತಿದ್ದ ಸತ್ಯವ್ರತರು ಆಕಾಂಕ್ಷೆಗಳ ತೃಪ್ತಿಗಾಗಿ ಪತ್ರಿಕಾ ವರದಿಗಳನ್ನೇ ನಂಬಿಕೊಂಡಿದ್ದರು. ಒಮ್ಮೆ ಮದ್ರಾಸಿಗೆ ಗಾಂಧೀಜಿ ಬಂದಿದ್ದರು. ಬಹುಶಃ ದಕ್ಷಿಣಭಾರತದ ಕೊನೆಯ ಪ್ರವಾಸವಿರಬೇಕೆನಿಸುತ್ತದೆ; (ವರ್ಷ ತಿಳಿದಿಲ್ಲ) ಸತ್ಯವ್ರತರ ಬಯಕೆ ನೋವಿನಂತೆ ಉಲ್ಬಣಿಸಿತ್ತು. ಬೆಂಗಳೂರಿನಿಂದ ಮದ್ರಾಸ್‌ಗೆ ಹೋಗಿ, ಫುಟ್‌ಪಾತ್ ಮೇಲೆ ಮಲಗಿ, ಬೀದಿಬದಿಯ ಅಂಗಡಿಗಳಲ್ಲಿ ತಿಂಡಿತಿಂದು, ರಸ್ತೆಪಕ್ಕದ ನೀರನ್ನೇ ಕುಡಿದು ಗಾಂಧೀಜಿಯನ್ನು ದೂರದಿಂದಲೋ ಸಮೀಪದಿಂದಲೋ ನೋಡಿ, ಬೆಂಗಳೂರಿಗೆ ಹಿಂದಿರುಗಿ ಬರಲು ಅವರಿಗೆ ಆಗ ಬೇಕಾಗಿದ್ದುದು ಹದಿನೆಂಟು ರೂಪಾಯಿಗಳು

ಮಾತ್ರ! ಆದರೆ ಸತ್ಯವ್ರತರಿಗೆ ಅಷ್ಟು ಹಣವೂ ಲಭ್ಯವಾಗಲಿಲ್ಲ. 'ಗಾಂಧಿ ದರ್ಶನ'ವೂ ಲಭ್ಯವಾಗಲಿಲ್ಲ. ಇದು ಜೀವಮಾನದ ಕೊರಗಿನಂತೆ ಕಾಡಿತ್ತು.

ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿಯಾಗಿದ್ದಾಗ, ವಿನೋಬಾ ಅವರ ನೇರ ಭಾಷಣ ಕೇಳುವ ಭಾಗ್ಯ ಸತ್ಯವ್ರತರಿಗೆ ದೊರಕಿತ್ತು. ಇದು ಭಾಗಶಃ ಗಾಂಧೀ ದರ್ಶನದ ಕೊರತೆಯನ್ನು ತುಂಬಿತ್ತು.

ವಿನೋಬಾ ಅವರನ್ನು ತಮ್ಮ ಬದುಕಿನ ಮೇಲೆ ಪೂರ್ಣಪ್ರಮಾಣದಲ್ಲಿ ಸತ್ಯವ್ರತ ಆವಾಹಿಸಿಕೊಂಡರು. ತಮಗಿದ್ದ ಕೊರತೆಯನ್ನು ತುಂಬಿಕೊಳ್ಳಲು ಅವರು ಮಾಡಿದ್ದು ಮುಖ್ಯವಾಗಿ ಎರಡು ಕೆಲಸಗಳನ್ನು. ಒಂದು, ವಿನೋಬಾರೊಂದಿಗೆ ಸಾಧ್ಯವಾದಷ್ಟು ಜೊತೆಜೊತೆಯಾಗಿ ಇರುವುದು; ಎರಡು, ಗಾಂಧೀವಾದವನ್ನು ಸಾಧ್ಯವಾದಷ್ಟು ಬದುಕುವುದು. ಈ ಎರಡೂ ಧನ್ಯತಾ ಕಾರ್ಯಗಳು ಸತ್ಯವ್ರತರನ್ನು 'ಒಬ್ಬ ನಿಷ್ಠುರವಾದಿ', 'ನಿರ್ಭೀತ ಪ್ರಾಮಾಣಿಕ'ನನ್ನಾಗಿಸಿದವು.

ವಿನೋಬಾರ ಜೊತೆ ಓಡಾಡುವಾಗಲೂ ಸತ್ಯವ್ರತ ತಮ್ಮ ರೂಢನಾಮಾಂಕಿತ (ಗುಂಡಾಚಾರ್)ದಲ್ಲಿಯೇ ಕರೆಯಲ್ಪಡುತ್ತಿದ್ದರು. ಒಮ್ಮೆ, ಸರ್ವೋದಯ ಸಂಬಂಧವಾಗಿ ಉತ್ತರ ಭಾರತದ ಪ್ರಚಾರದಲ್ಲಿದ್ದಾಗ, ಇವರ ಜೊತೆಗಿದ್ದವರಿಗೆ 'ಗುಂಡಾಚಾರ್' ಹೆಸರು ವಿಚಿತ್ರವಾಗಿಯೂ, ಕರೆಯಲು 'ಅಸಹ್ಯ'ವಾಗಿಯೂ ಅನ್ನಿಸಿತು. ವಿಚಾರಿಸಿದಾಗ ಗುಂಡಾಚಾರ್ ನಾಮಕರಣದ ಪ್ರಾಸಂಗಿಕತೆಯನ್ನು ಹೇಳಿದರು. ಆಗ ಗುಂಡಾಚಾರ್ ಹೆಸರಿನ ಜಾಗದಲ್ಲಿ ನಿಜನಾಮ ಸತ್ಯವ್ರತಾಚಾರ್ ಹೆಸರಿನಿಂದ ಕರೆಯಲು ಸೂಚಿಸಿ ನಿಜನಾಮದ ಪುನಾರಂಭ ಮಾಡಿದರು (ನಿಜನಾಮ ಪ್ರಯೋಗ ಮಾಡಿದವರಾದರೂ ಗಾಂಧಿ, ವಿನೋಬಾರೊಂದಿಗಿದ್ದ ಹೈದರಾಬಾದಿನ ಒಬ್ಬ ಪ್ರಭಾವಿ ಗಾಂಧಿವಾದಿಗಳೇ. ಅವರ ಹೆಸರನ್ನು ಅಪ್ರಜ್ಞಾಪೂರ್ವಕವಾಗಿ ಸತ್ಯವ್ರತ ಹೇಳಲಿಲ್ಲ. ಆದರೆ ಹೈದರಾಬಾದಿನ ನಿಜಾಮನ ಆಡಳಿತದ ಮಧ್ಯೆಯೂ ಗಾಂಧಿವಾದವನ್ನು ಕಟ್ಟುನಿಟ್ಟಾಗಿ ಪ್ರಚಾರಮಾಡಿ ಏಕಕಾಲದಲ್ಲಿ ಸ್ವಾತಂತ್ರ್ಯ ಸ್ಫೂರ್ತಿಯನ್ನುಂಟುಮಾಡಿ ಬ್ರಿಟಿಷ್ ಮತ್ತು ನಿಜಾಮನ ಆಡಳಿತವನ್ನು ಅವರು ವಿರೋಧಿಸಿದ್ದವರು. ಸತ್ಯವ್ರತ ಅವರಿಗೆ ಈ ಗಾಂಧೀವಾದಿಯಿಂದ ನಾನಾ ರೀತಿಯ ನೆರವು, ಪ್ರೇರಣೆಗಳು ಆಗಿದ್ದವು).

ಸತ್ಯವ್ರತ ಅವರ ಪತ್ನಿ ಡಾ.ಲಕ್ಷ್ಮಿ ಅವರ ಬದುಕಿಗೂ ಮತ್ತೊಂದು ರೀತಿಯ ಭಾವನಾತ್ಮಕ ಹಾಗೂ ಪ್ರಭಾವಪೂರಿತ ಹಿನ್ನೆಲೆಯಿದೆ. ಲಕ್ಷ್ಮಿಯವರದು ಗುಜರಾತಿನ ಕಚ್. ಕಚ್ ಆಗ ಸ್ವತಂತ್ರ ಸಂಸ್ಥಾನದಲ್ಲಿ ಆರ್ಥಿಕವಾಗಿಯೂ ಸಾಮಾಜಿಕವಾಗಿಯೂ ಪ್ರಬಲವಾಗಿದ್ದ ಜೈನ ಬನಿಂಯಾ ಮನೆತನ. ಪ್ರಭಾವಿ ಕುಟುಂಬ. ಪ್ರಗತಿಪರ ಧೋರಣೆಯವರಾಗಿದ್ದರಿಂದಲೂ, ತಮ್ಮ ರಾಜ್ಯದ ಶ್ರೇಷ್ಠಮಟ್ಟದ ರಾಷ್ಟ್ರೀಯ ಸ್ಫೂರ್ತಿಯ

ರಾಷ್ಟ್ರನಾಯಕರಾಗಿದ್ದ ಮಹಾತ್ಮಗಾಂಧೀಜಿಯವರ ನೇರಸಂಪರ್ಕವಿದ್ದುದರಿಂದಲೂ ರಾಷ್ಟ್ರೀಯವಾದದ ಚಿಂತನೆಯಲ್ಲಿ ಈ ಕುಟುಂಬದ ಹಿರಿಯರು ಸಕ್ರಿಯರಾಗಿದ್ದರು. ಚೆಡ್ಡಾ ಕುಟುಂಬಪಿಡೀ ಈ ಹಿನ್ನೆಲೆಯಲಿ ಖಾದಿಧಾರಿಯಾಗಿತ್ತು. 'ಖಾದಿ ಪರಿವಾರ್' ಎಂದೇ ಸ್ಥಳೀಯವಾಗಿ ಗುರುತಿಸಲ್ಪಡುತ್ತಿತ್ತು, ಈ ಕುಟುಂಬ. ಈ ಕುಟುಂಬದ ಬಗ್ಗೆ ಗಾಂಧೀಜಿಗೆ ಗೌರವ ಮತ್ತು ಸಲುಗೆಗಳಿದ್ದವು. ತಮ್ಮ ಪ್ರವಾಸಗಳಲ್ಲಿ ಕೆಲವೊಮ್ಮೆ ಈ ಕುಟುಂಬದ ಹಿರಿಯ ಸದಸ್ಯರನ್ನು ಕರೆದೊಯ್ಯುತ್ತಿದ್ದರು (ಅಥವಾ ಗಾಂಧೀಜಿಯವರೊಂದಿಗೆ ಅವರು ಹೋಗುತ್ತಿದ್ದರು).

ಈ ಕುಟುಂಬ ಈವರೆಪಿಗೂ ಖಾದಿಯನ್ನೇ ಧರಿಸುತ್ತಿರುವುದೊಂದು ವಿಶೇಷ. ಲಕ್ಷ್ಮಿಯವರಿಗೆ ಬಾಲ್ಯದಿಂದಲೂ (ಜನನ–1931) ಮಹಾತ್ಮಗಾಂಧೀಜಿ, ವಲ್ಲಭಭಾಯಿ ಪಟೇಲ ಮೊದಲಾದ ರಾಷ್ಟ್ರ ನಾಯಕರ, ವಿವಿಧ ರಾಜ್ಯಗಳ ಮುಂಚೂಣಿ ನಾಯಕರ 'ದರ್ಶನ' ಅನಾಯಾಸವಾಗಿ ಆಗುತ್ತಿತ್ತು. ಆದರೆ ಆ ಕುರಿತ ತಿಳುವಳಿಕೆ ಸ್ಪಷ್ಟವಾಗಿರಲಿಲ್ಲ. ಸಾಬರಮತಿ ಆಶ್ರಮದಲ್ಲಿ ತಮ್ಮ ಹಿರಿಯರೊಂದಿಗೆ ಹೋಗಿಬಂದು ಮಾಡುತ್ತಿದ್ದುದರಿಂದ ಗಾಂಧೀಜಿ ಮೊದಲಾದವರ 'ತೋಳ ಆಸರೆ'ಯೂ ಲಭ್ಯವಾಗುತ್ತಿತ್ತು.

ತಂದೆ ಮೋಹನ್‌ಜಿ ವರ್ಧಾದಲ್ಲಿ ಗಾಂಧಿ ಪ್ರೇರಣೆಯಿಂದ ಒಂದು ಆಶ್ರಮ ಕಟ್ಟಿಸಿದ್ದರು. ವರ್ಧಾದ ಆಶ್ರಮದಲ್ಲಿದ್ದುಕೊಂಡು ಮುಂದಿನ ಶಿಕ್ಷಣಕ್ಕೆಂದು ಬಂದಾಗ ಗಾಂಧೀಜಿ ಮೊದಲಾದವರ ವ್ಯಕ್ತಿತ್ವದ ತಕ್ಕಮಟ್ಟಿನ ಪರಿಚಯ ಲಕ್ಷ್ಮಿಯವರಿಗಿತ್ತು. ಕರ್ನಾಟಕದಿಂದ ಬಂದು ಹೋಗುತ್ತಿದ್ದ ಎಸ್.ನಿಜಲಿಂಗಪ್ಪ, ಹಳ್ಳಿಕೇರಿಗುದ್ಲೆಪ್ಪ ಮೊದಲಾದರಿಗೆ ಮೋಹನ್‌ಜಿ ಮತ್ತು ಕುಟುಂಬದ ಕೆಲ ಹಿರಿಯರ ಸಂಪರ್ಕವಿದ್ದುದರಿಂದ ಲಕ್ಷ್ಮಿಯವರನ್ನು ಎಸ್.ನಿಜಲಿಂಗಪ್ಪ, ಹಳ್ಳಿಕೇರಿ ಗುದ್ಲೆಪ್ಪ ಮೊದಲದವರು ಮಗಳಂತೇ ಕಾಣುತ್ತಿದ್ದರು.

ಹಿರಿಯರ ಮತ್ತು ಗಾಂಧೀಜಿಯವರ 'ಖಾದಿವ್ರತ', ಸರ್ವೋದಯ.... ಮೊದಲಾದ ರಾಷ್ಟ್ರೀಯ ಚಿಂತನೆಗಳ ಪ್ರಭಾವವಾಗಿದ್ದ ಲಕ್ಷ್ಮಿಯವರಿಗೆ ಒಮ್ಮೆ ಹೀಗಾಯಿತು. ಕಾಲೇಜ್ ಶಿಕ್ಷಣದ ಆರಂಭದಲ್ಲಿದ್ದಾಗ, ರಜಾದಿನಗಳಲ್ಲಿ ಕಚ್‌ಗೆ ಹೋಗುತ್ತಿದ್ದರು. ತಮ್ಮ ಗೆಳತಿಯರೊಡನೆ ಮಾತನಾಡಿಕೊಂಡು ವರ್ಧಾದಲ್ಲಿ ನಡೆಯುತ್ತಿದ್ದ, ಖಾದಿಯಜ್ಞದಲ್ಲಿ ಭಾಗವಹಿಸಬೇಕೆಂಬ ಇಚ್ಛೆಯಿಂದ ನೇರವಾಗಿ ಗಾಂಧೀಜಿಯವರಿಗೆ ಪತ್ರ ಬರೆದಿದ್ದರು. ಗಾಂಧೀಜಿ ಸ್ವತಃ ಪತ್ರ ಬರೆದು 'ಹೆಣ್ಣು ಮಕ್ಕಳಿಗೆ ಇಲ್ಲಿ ವ್ಯವಸ್ಥೆ ಸರಿಯಾಗಿಲ್ಲ; ನೀವ್ಯಾರೂ ಇಲ್ಲಿಗೆ ಬರಕೂಡದು' ಎಂದು ವಿನಯಪೂರ್ವಕವಾಗಿ ಆಜ್ಞಾಪಿಸಿದ್ದರು. ವಾಸ್ತವವಾಗಿ ಉದ್ದೇಶವೇ ಬೇರೆಯಾಗಿತ್ತು. ಹೆಣ್ಣುಮಕ್ಕಳು ಓದುವ ವಯಸ್ಸಿನಲ್ಲಿ ಮಾನಸಿಕಸ್ಥಿತಿಯನ್ನು ಬದಲು ಮಾಡಿಕೊಳ್ಳಬಾರದೆಂಬುದು ಗಾಂಧೀಜಿಯವರ ಪತ್ರದ ಆಶಯವಾಗಿತ್ತು. (ಹಾಗೆಂದು ಮೋಹನ್‌ಜಿಯವರಲ್ಲಿ ಗಾಂಧೀಜಿ ಹೇಳಿದ್ದರಂತೆ) ಲಕ್ಷ್ಮಿಯವರು ಗಾಂಧೀಜಿಯವರಿಗೆ ಪತ್ರ ಬರೆಯುವ ಮತ್ತು ಅದರಿಂದ ಉತ್ತರ ಪಡೆಯುವ ಸಲುಗೆ, ಪ್ರೀತಿ–ವಾತ್ಸಲ್ಯಗಳಿದ್ದವೆಂಬುದು ಇಲ್ಲಿ ಮುಖ್ಯ.

ಲಕ್ಷ್ಮಿ ಅವರ ತಂದೆತಾಯಿಯವರಿಗೆ ಒಬ್ಬಳೇ ಮಗಳು. ಇಡೀ ಪರಿವಾರ ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿದ್ದರಿಂದ ಸೆರೆಮನೆವಾಸ ಬಿಟ್ಟುಬಿಡದಂತೆ ನಿರಂತರವಾಗೇ ಇತ್ತು. ಆದ್ದರಿಂದ ಮೋಹನ್‌ಜಿ ಮಗಳಿಗೆ ಮದುವೆಯ ವಯಸ್ಸಿಗಿಂತ ಕೊಂಚ ಮುಂಚೆಯೇ ಮದುವೆ ಮಾಡಿದ್ದರು. ಆದರೆ ಅವರ ಸಂಸಾರ ಕಾರಣಾಂತರಗಳಿಂದ ಸರಿಯಾಗಿರಲಿಲ್ಲ. ತಾಯಿಯ ಆರೈಕೆಯಲ್ಲಿ ಲಕ್ಷ್ಮಿ ಬೆಳೆದರು. ತಾಯಿಯಾದರೂ ಆ ಕಾಲದ ದೊಡ್ಡ ಸಾಹುಕಾರರ ಮಗಳು. ಮೋಹನ್‌ಜಿಯವರೊಂದಿಗೆ ಮದುವೆಯಾದ ನಂತರ ಅವರ ಹೋರಾಟದ ಬದುಕಿನೊಡನೆ ತಮ್ಮನ್ನು ತೊಡಗಿಸಿಕೊಂಡು ಬೆಂಬಲ ನೀಡಿದ್ದರು. ಗಂಡನ ಮನೆಯಲ್ಲಿ ಲಕ್ಷ್ಮಿಯವರ ತಾಯಿ, 'ತಮ್ಮ ಬಟ್ಟೆಯನ್ನು ತಾವೇ ಒಗೆಯುತ್ತಿದ್ದರು'. ಇದು ಸ್ವಾತಂತ್ರ್ಯ ಹಾಗೂ ಗಾಂಧೀ ಪ್ರಭಾವದ ಹಿನ್ನೆಲೆಯಲ್ಲಿ ಆ ಕಾಲದ 'ಕ್ರಾಂತಿಯ ಘಟನೆ' ಎನ್ನಿಸಿತ್ತು! ಜೊತೆಗೆ ರಾಷ್ಟ್ರೀಯ ಆಂದೋಲನದ ಬಹುದೊಡ್ಡ ಪರಿಣಾಮಕಾರಿ ಫಲಶ್ರುತಿಯೆಂಬಂತೆ ಪರಿಗಣಿತವಾಗಿತ್ತು. ಗಾಂಧಿ ಪ್ರಭಾವವನ್ನು ಅಂದಿನ ಇಂಥ ಘಟನೆಗಳಲ್ಲಿಯೂ ಗುರುತಿಸಿದ್ದು ಆ ಕಾಲದ ಮತ್ತೊಂದು ವಿಶೇಷವಾಗಿತ್ತು. ಹೀಗಾಗಿ ಬದಲಾಗುತ್ತಿದ್ದ ಜೀವನಾನುಭವಗಳ ಹಿನ್ನೆಲೆಯಲ್ಲಿ ಲಕ್ಷ್ಮಿಯವರ ತಾಯಿ 'ಸರಿಯಾಗಿರದ' ಮಗಳ ಸಂಸಾರದಲ್ಲಿ ಧೈರ್ಯವನ್ನು ತುಂಬಿಕೊಡುವುದರ ಜೊತೆಗೆ ಮಗಳನ್ನು ಖಾದಿಪ್ರಚಾರ, ಸರ್ವೋದಯ ತತ್ತ್ವ ಪ್ರಚಾರಗಳಲ್ಲಿ ತೊಡಗಿಕೊಂಡು ಸಾಮಾಜಿಕಗೊಳಿಸಿಕೊಂಡರು.

ಲಕ್ಷ್ಮಿ ಕರ್ನಾಟಕಕ್ಕೆ ಬಂದಿರುವುದರ ಹಿಂದೆಯೂ ಒಂದು ಪ್ರಾಸಂಗಿಕ ಹಾಗೂ ಚಾರಿತ್ರಿಕ ಘಟನೆಯಿದೆ. ಗುಜರಾತಿನ ಸಾಬರಮತಿ ಆಶ್ರಮದಲ್ಲಿ ದೈನಂದಿನ ಚಟುವಟಿಕೆಗಳಲ್ಲಿ ಪ್ರಾರ್ಥನೆಯ ಒಂದು ನಿರ್ದಿಷ್ಟ ಕಾಲಾವಧಿಯನ್ನು ಖಾಸಗಿ ವಿಚಾರಗಳ ವಿನಿಮಯಕ್ಕೆ ಬಳಸಲಾಗುತ್ತಿತ್ತು. ಮಹಾತ್ಮಗಾಂಧೀಜಿಯವರ ಉಪಸ್ಥಿತಿಯಲ್ಲಿಯೇ ಅದು ನಡೆಯುತ್ತಿತ್ತು. ಆಶ್ರಮದಲ್ಲಿ ನಾಮಸೌಮ್ಯದಿಂದ ಪತ್ರಗಳ ವಿಚಾರದಲ್ಲಿ ಒಮ್ಮೆ ಒಂದು ಗೊಂದಲವುಂಟಾಯಿತು. ವಲ್ಲಭಬಾಯಿ ಪಟೇಲ ಎಂಬ ಹೆಸರಿನ ಇಬ್ಬರು ವ್ಯಕ್ತಿಗಳು ಆಶ್ರಮದಲ್ಲಿದ್ದರು. ಒಬ್ಬರು, ಸ್ವಾತಂತ್ರ್ಯ ನಂತರದಲ್ಲಿ ಮೊದಲ ಗೃಹಮಂತ್ರಿಗಳಾದ ಪಟೇಲರು, ಇನ್ನೊಬ್ಬರು ಗಾಂಧೀ ಪ್ರಭಾವಕ್ಕೊಳಗಾಗಿದ್ದ ಶ್ರೀಮಂತ ಪಟೇಲರು. ಇಬ್ಬರದು ಒಂದೇ ಜಾತಿ, ಒಂದೇ ರಾಜ್ಯ, ಒಂದೇ ಹೆಸರು. ವ್ಯತ್ಯಾಸವಿದ್ದುದು ವಯಸ್ಸಿನಲ್ಲಿ ಮಾತ್ರ. ಹೀಗಿದ್ದಾಗ, ಒಬ್ಬರ ಪತ್ರವನ್ನು ಮತ್ತೊಬ್ಬರು ಒಡೆದು ನೋಡುವುದು ಓದುವುದು ಸಹಜವಾಗೇ ನಡೆಯುತ್ತಿತ್ತು. ಪಟೇಲರಿಗೆ (ಭಾವಿ ಗೃಹಮಂತ್ರಿ) ಇದರಿಂದ ಹೆಚ್ಚು ಇರುಸುಮುರುಸು ಆಗುತ್ತಿತ್ತು.

ಪ್ರಾರ್ಥನೆ ಮುಗಿದ ನಂತರದ ಅವಧಿಯಲ್ಲಿ ಈ ವಿಚಾರವೂ ಪ್ರಸ್ತಾಪಕ್ಕೆ ಬಂತು. ಗಾಂಧೀಜಿ ಇದನ್ನು ಬಗೆಹರಿಸಿದ್ದು ಹೀಗೆ: ನಿರ್ಭೀತ, ನಿಷ್ಠುರ, ಉಗ್ರರಾಷ್ಟ್ರವಾದಿಯಾಗಿದ್ದ ವಲ್ಲಭಬಾಯಿ ಪಟೇಲರಿಗೆ 'ಸರದಾರ್' ಎಂಬ ಪೂರ್ವ ವಿಶೇಷಣವನ್ನು ನೀಡಿದರು.

ಸೌಮ್ಯ, ಆಧ್ಯಾತ್ಮಿಕ ವ್ಯಕ್ತಿತ್ವವನ್ನು ರೂಢಿಸಿಕೊಂಡಿದ್ದ ಗಾಂಧೀ ವಿಚಾರಗಳನ್ನು ಪ್ರಚಾರ ಮಾಡುವಂಥ ರಾಜಕೀಯೇತರ ಚಟುವಟಿಕೆಯಲ್ಲಿದ್ದ, ನೋಟದಲ್ಲಿ ಸಂತರೂಪವೂ ಇದ್ದ ಇನ್ನೊಬ್ಬ ಪಟೇಲರಿಗೆ 'ವಲ್ಲಭಸ್ವಾಮಿ' ಎಂದು ನಾಮಕರಣ ಮಾಡಿದರು.

ಕಾಲಕ್ರಮೇಣದಲ್ಲಿ ಗಾಂಧೀಜಿ ವಲ್ಲಭಸ್ವಾಮಿಯವರ ಅಭಿರುಚಿ, ಸಾಮರ್ಥ್ಯವನ್ನು ಗ್ರಹಿಸಿ ದಕ್ಷಿಣಭಾರತರದ ಕಾರ್ಯಭಾರವನ್ನು ವಹಿಸಿಕೊಟ್ಟರು. ಮುಂದೆ ದಕ್ಷಿಣ ಭಾರತಕ್ಕೆ ವಿನೋಬಾ ಬಂದಾಗ ಅವರ ಉಸ್ತುವಾರಿಯ ಜೊತೆಗೆ ಉಳಿದ ಕಾರ್ಯಯೋಜನೆಗಳನ್ನು ರೂಪಿಸುವುದನ್ನು ಮಾಡುತ್ತಿದ್ದರು. ಈ ಸಂದರ್ಭದಲ್ಲಿ ಸಾಂಸಾರಿಕವಾಗಿ ತೊಂದರೆ ಅನುಭವಿಸುತ್ತಿದ್ದ ಲಕ್ಷ್ಮಿ Nature Care Educationಗಾಗಿ ಬೆಂಗಳೂರಿಗೆ ಬಂದರು. (ಈವೊತ್ತಿಗಾಗಲೇ ಗಾಂಧೀ ಹತ್ಯೆಯಾಗಿತ್ತು) ಹೈದರಾಬಾದಿನ ಗಾಂಧೀವಾದಿ, ಕರ್ನಾಟಕದ ಮುಂಚೂಣಿ ರಾಜಕಾರಣಿಗಳು ಇವರ ಸಾಂಸಾರಿಕ ತೊಂದರೆಗೆ ಪರಿಹಾರಾತ್ಮಕ ನೆರವು ನೀಡಿದರು.

ಇತ್ತ ಬೆಂಗಳೂರಿನಲ್ಲಾಗಲೇ ಸತ್ಯವ್ರತ ವಿನೋಬಾರೊಂದಿಗೆ ಸಂಚರಿಸುತ್ತಿದ್ದರು. ತಮ್ಮನ್ನು ಸಂಪೂರ್ಣವಾಗಿ ಸರ್ವಸೇವಾ ಸಂಘ, ಸರ್ವೋದಯ ಮಂಡಲ, ಇತ್ಯಾದಿ ಜನಪರ ಸಂಘಟನೆಗಳಲ್ಲಿ ತೊಡಗಿಸಿಕೊಂಡು ವಿನೋಬಾರ ಕೆಲವು 'ಆಪ್ತಸಹಾಯಕ'ರಲ್ಲಿ ಒಬ್ಬರಾದರು.

ಸಂಚಾರದಲ್ಲಿ ವಿನೋಬಾರ ಭಾಷಣಗಳನ್ನು ಕನ್ನಡಕ್ಕೆ ಅನುವಾದಿಸಿ ಹೇಳುವುದು ಸತ್ಯವ್ರತರ ಕೆಲಸ. ದೆಹಲಿ, ವರ್ಧಾ, ಬನಾರಸ್, ಹೈದರಾಬಾದ್‌ಗಳಲ್ಲಿ ಸಂಚಾರ ಮಾಡಿ Gandhi Peace Foundationಗಾಗಿ ಕೆಲಸ ನಿರ್ವಹಿಸಿದರು.

1948ರಲ್ಲಿ ಮಹಾತ್ಮಗಾಂಧಿ, 1953–54ರಲ್ಲಿ ತಂದೆ ಮೋಹನ್‌ಜಿಯವರನ್ನು ಕಳೆದುಕೊಂಡ ಲಕ್ಷ್ಮಿಯವರು 1957–60ರ ಸುಮಾರಿನಲ್ಲಿ ಬೆಂಗಳೂರಿನ ಗಾಂಧಿನಗರದಲ್ಲಿ ವಲ್ಲಭಸ್ವಾಮಿಯವರ ಮಾರ್ಗದರ್ಶನದಲ್ಲಿ ನೆಲೆನಿಂತರು. ವಲ್ಲಭಸ್ವಾಮಿಯವರು ಕೊನೆಯವರೆಗೂ ದಕ್ಷಿಣಭಾರತದಲ್ಲಿಯೇ ಉಳಿದರು.

ಚಿಕ್ಕವಯಸ್ಸಿನಲ್ಲಿ ತಾಯಿಯನ್ನು ಕಳೆದುಕೊಂಡು ಸತ್ಯವ್ರತ, ಎರಡನೇ ಮದುವೆಯಾಗದೇ ರಾಷ್ಟ್ರೀಯ ಮನೋಭಾವ ತುಂಬಿಕೊಂಡಿದ್ದ ತಂದೆ, ಚಿಕ್ಕಪ್ಪಂದಿರುಗಳ ಆಶ್ರಯ-ಹೀಗೆಲ್ಲ ಆಗಿ ತಮ್ಮ ಮನೆತನದ ಹಿನ್ನೆಲೆಯ 'ಮೂಲಧಾತು'ವಿನಲ್ಲಿಯೇ ಬೆಳೆದರು.

ಸತ್ಯವ್ರತ-ಲಕ್ಷ್ಮಿಯವರು ಸಮಾನ ಚಿಂತನೆ, ಉದ್ದೇಶ, ಹಿನ್ನೆಲೆಯವರಾಗಿದ್ದರಿಂದ ಬೆಂಗಳೂರಿನ ದೇವಸ್ಥಾನವೊಂದರಲ್ಲಿ ಸರಳವಾಗಿ ಮದುವೆಯಾಗಿ ಜೊತೆಯಾದರು. ಈಗಲಾದರೂ ಇವರ ಕೆಲಸ ಗಾಂಧೀವಾದ, ವಿನೋಬಾ ಚಿಂತನೆಗಳಿಗಾಗಿ ಸಂಚಾರ, ಪ್ರಚಾರಗಳೇ! ಸಾಮಾಜಿಕ ಸೇವಾತತ್ಪರತೆಯನ್ನು ರಕ್ತದಲ್ಲಿ ತುಂಬಿಕೊಂಡು ಜನ್ಮತಾಳಿದ್ದ ಈರ್ವರನ್ನು 'ಭಗಂವಂತ'ನೇ ಸೇರಿಸಿದ ಎಂಬುದೇ ಅವರ ನಂಬಿಕೆ.

ಕಾಲ ಬದಲಾದಂತೆ, ಮಾನದಂಡ-ಅಭಿರುಚಿಗಳು ಬದಲಾದಂತೆ ಸಮಾಜದ ಸ್ವರೂಪವನ್ನು ವ್ಯತ್ಯಾಸಗೊಳಿಸಿದಂತೆ ಸತ್ಯವ್ರತ ಹೆಚ್ಚುಹೆಚ್ಚು 'ನಿಷ್ಠುರವಾಗಿ'ಯೇ ಗೋಚರವಾಗತೊಡಗಿದರು. ಅವರ ಈ ವರ್ತನೆ ಸಾತ್ತ್ವಿಕವಾದುದು. ಏಳೂವರೆ ದಶಕ ಕಳೆದುಕೊಂಡ ದೇಹದಲ್ಲಿ ಸಾಮಾಜಿಕವಾಗಿ ತಾದಾತ್ಮ್ಯಗೊಳಿಸಿಕೊಳ್ಳುವ ಹಂಬಲ ಮಾತ್ರ ಕಡಿಮೆಯಾಗದೇ ಇದ್ದುದು ಅವರ ಬದುಕಿನ ಸೂತ್ರವಾಗಿತ್ತು. ಕಚ್‌ನಲ್ಲಿ ಭೂಕಂಪವಾದಾಗ ಲಕ್ಷ್ಮಿಯವರಿಗೆ 'ಇಲ್ಲಿದ್ದು ಏನ್ಮಾಡ್ತೀ?.... ನೀನು ಕಚ್‌ಗೆ ಹೋಗು... ನಾನು ಇಲ್ಲಿಯದನ್ನು ನೋಡಿಕೊಳ್ತೇನೆ' ಎಂದು ಆಜ್ಞಾಪಿಸಿದರಂತೆ. ಇದು ಒಂದು ಉದಾಹರಣೆ ಮಾತ್ರ. ಇಂಥ ಉದಾಹರಣೆಗಳನ್ನು ಲಕ್ಷ್ಮಿ ಲೆಕ್ಕವಿರಿಸಿಕೊಂಡಿಲ್ಲ. ಆಯ್‌ಡೆಂಗಾದ ಅಭಯಾಶ್ರಮದಲ್ಲಿ ಸೇವೆಗಾಗಿ ನಿರಂತರವಾಗಿ ಹೋಗಿ ಬರುವುದನ್ನು ಮಾಡುತ್ತಿದ್ದರು. ಒಮ್ಮೆ, ಅಲ್ಲಿದ್ದ ಇಬ್ಬರು ನಿರಾಶ್ರಿತ ಹುಡುಗಿಯರನ್ನು ಬೆಂಗಳೂರಿಗೆ ಕರೆದುಕೊಂಡು ಬಂದು ಉನ್ನತ ಶಿಕ್ಷಣ ಕೊಡಿಸಿದ್ದರು.

ಸತ್ಯವ್ರತ ತೀರಿಕೊಳ್ಳುವ ಒಂದೂವರೆ ತಿಂಗಳು ಮುಂಚೆ ಸಾವಿನ ಸೂಚನೆ ನೀಡಿದ್ದರಂತೆ! (ಡಾ.ಲಕ್ಷ್ಮಿಯವರನ್ನು 10.04.2009ರಂದು ಭೇಟಿಯಾದಾಗ ಹೇಳಿದ್ದು) ಅವರ ಗುಣ, ಸ್ವಭಾವ, ತಾದಾತ್ಮ್ಯ, ಜೀವನಶ್ರದ್ಧೆ, ನಿಷ್ಠುರವಾದ ಅವರ ಪ್ರಾಮಾಣಿಕತೆಗಳನ್ನು ನೇರವಾಗಿ ಕಂಡಿದ್ದ ಡಾ.ಲಕ್ಷ್ಮಿಯವರು ಇದನ್ನು 'ಇಚ್ಛಾಮರಣ' ಎಂದಿದ್ದರು. ಬಹುಶಃ ಈ ಅಭಿಪ್ರಾಯ ಸಾಪೇಕ್ಷಿತವಾದುದೇ ವಿನಾ ಉತ್ಪ್ರೇಕ್ಷಿತವಾದುದಲ್ಲ!

ಮಹಾತ್ಮಗಾಂಧೀಜಿಯವರ ಆತ್ಮಚರಿತ್ರೆ (ನನ್ನ ಸತ್ಯಾನ್ವೇಷಣೆ)ಯನ್ನು ಒಂದು ಧಾರ್ಮಿಕ ಗ್ರಂಥದಂತೆ 'ಪಾರಾಯಣ' ಮಾಡುತ್ತಿದ್ದ ಸತ್ಯವ್ರತರಿಗೆ ಅದು ಗಾಂಧೀಜಿಯನ್ನು ನೋಡದ 'ದೌರ್ಭಾಗ್ಯ'ವನ್ನೂ ನಿಭಾಯಿಸಲು ಇದ್ದ ಒಂದೇ ಒಂದು ಮಾರ್ಗವಾಗಿತ್ತು. ಸುಖದುಃಖಗಳನ್ನು ಸಮವಾಗಿ ಕಂಡಿದ್ದ ಸತ್ಯವ್ರತ ತಮ್ಮ ದೊಡ್ಡ ಕುಟುಂಬಕ್ಕೂ ಗಾಂಧಿಯಂತೇ ಪ್ರೇರಣೆ ನೀಡಿದ್ದರು. ಬೆಂಗಳೂರಿನಂಥ ಮಹಾನಗರದಲ್ಲಿ, ಜಾಗತಿಕರಣಕ್ಕೆ ಒಳಗಾಗಿರುವ ಭಾರತದಲ್ಲಿ ಅವರು ನಿರ್ಲಿಪ್ತರಾಗಿ ಬದುಕು ಸಾಗಿಸಿದ್ದರು ಎಂಬುದು ಅವರ ಒಂದು ಯೌಗಿಕ ಗುಣವನ್ನು ತೋರಿಸುತ್ತಿರಬಹುದೇ?

ಗಾಂಧಿಯನ್ನು ನೋಡದ ಸತ್ಯವ್ರತ, ಗಾಂಧಿಯ ತೋಳ ಆಸರೆಯ 'ಭಾಗ್ಯ' ಪಡೆದಿದ್ದ ಲಕ್ಷ್ಮಿ-ಇವರ ನಡುವೆ ಇದ್ದ ವ್ಯತ್ಯಾಸ ಬಹುಶಃ ಇದೊಂದೇ ಎನಿಸುತ್ತದೆ.



ಮೂಗಿನ ತುದಿಯಲ್ಲಿ ಏನಿದೆ?–೧

[illegible]ದ ಕುದುರೆಯ ಹಾಗೆ ಉಸಿರ ಬಿಡುವೆ
ಬಿಟ್ಟೆನೆಂಬುದ ಬಿಡದೆ ಮತ್ತೆ ಸೆಳೆವೆ
ತುದಿನಾಲಿಗೆಯಲಿ ಕಿರುನಾಲಿಗೆಯ ಸವರಿ
ಎಂದೂ ಕಾಣದ ಮೂಗಿನ ತುದಿಯ
ಹುಡುಕಿ ಹುಡುಕಿ ತಡಕುವೆಯಲ್ಲಾ
ಮೂಗಿನ ತುದಿಯಲ್ಲಿ ಏನಿದೆ?

ಮನಸ್ಸಿಗೊಂದರಘಳಿಗೆ ಬಿಡುವ ಕೊಡದೆ
ತಂದೂ ತಂದೂ ತುಂಬುವೆ
ಜಗಿದ ತಂಬುಲವ ಸ್ವಾಟೆಯಲಿ ಒತ್ತರಿಸಿ
ಯಂಗಾದರೂ ಆಗಲಿ ಇರಲಿ ಎನ್ನುವೆ
ಬರುವಾಗ ತುಂಬುತ್ತ ತಂದ ಪುಟ್ಟಿಯ ಹೊತ್ತು
ಮೂಗಿನ ತುದಿಯ ನೋಡುತ್ತಿರುವೆಯಲ್ಲ
ಮೂಗಿನ ತುದಿಯಲ್ಲಿ ಏನಿದೆ?


ಗಂಗೆಯಮಸೆಯರಿಗೆ ಚಿತ್ತದಲ್ಲಿ ಒಡ್ಡ ಕಟ್ಟುವೆ
ಸುಮ್ಮನಾಗಿಸಲೊಂದು ಸುಮ್ಮನಿರಲೊಂದು
ಎರಡು ಬೆಟ್ಟಗಳ ಒಂದೇ ತಲೆಯಲಿ ಹೊತ್ತು
ಹಗುರಾಗಲು ಮೂಗಿನ ತುದಿಯ ನೋಡುವೆಯಲ್ಲ
ನೋಡಿ ನೋಡಿ ದಣಿಯುವೆಯಲ್ಲ
ಮೂಗಿನ ತುದಿಯಲ್ಲಿ ಏನಿದೆ? ಮತ್ತೇನಿದೆ,
ಮೂಗಿನ ತುದಿಯಲ್ಲಿ ಮೂಗಿನ ತುದಿಯಿದೆ.

ಮೂಗಿನ ತುದಿಯಲ್ಲಿ ಏನಿದೆ?-೨

ಮೂಗಿನ ತುದಿಯಿದೆ.
ಅಲ್ಲಿ ಏನೇನೋ ಇದೆ ಎಂಬ ಭ್ರಮೆ ಇದೆ
ಅಲ್ಲಿಂದ ಶುರುವಾಗಿ ಸಹಸ್ರಾರವೆಂಬ ಕನಸಿನ ನಗರಿಗೆ ದಾರಿಯಿದೆ
ಅದು ನಿಜದ ದಾರಿ ಎಂಬ ಸುಳ್ಳಿದೆ

ಮೂಗಿನ ತುದಿಯಲ್ಲಿ ಏನಿದೆ?
ಎರಡು ಕಣ್ಣಿನ ಬೆಳಕ ಒಂದಾಗಿಸುವ ಆಯಸ್ಕಾಂತವಿದೆ
ಅದರ ವಿದ್ಯುದಾಲಿಂಗನಕ್ಕೆ ಸಿಕ್ಕಿ ಸುಖಿಸಬಹುದೆಂಬ ಪೊಳ್ಳು
ಭರವಸೆ ಇದೆ.

ಮೂಗಿನ ತುದಿಯಲ್ಲಿ ಏನಿದೆ?
ಹೆಣ್ಣುಮಗಳ ಮೂಗುನತ್ತಿನ ಬೆಳಕಿದೆ
ಇನ್ನೇನು ಬೀಳಲು ಸಿದ್ಧವಾಗಿರುವ ಬೆವರ ಹನಿಯಿದೆ
ಕೊಡವಿ ಎಸೆವ ಸಿಂಬಳದ ಲೋಕವಿದೆ.



ಮೂಗಿನ ತುದಿಯಲ್ಲಿ ಏನಿದೆ?
ಎಳೆಯ ಮಗುವಿನ ಕಮ್ಮೆನ್ನುವ ಘಮಲಿದೆ.
ಮೂಗಿಗೆ ತಿಕ್ಕಲು ಎಳೆಯ ಮೂಗೊಂದು ಕಾದಿದೆ
ಮುತ್ತಿಡಲು ಅಡ್ಡಬರುವ ತಡೆಯಿದೆ.

ಮೂಗಿನ ತುದಿಯಲ್ಲಿ ಏನಿದೆ?
ಬೇಕಿನ ತುದಿಯ ಸಾಕೆನ್ನುವ ಉಸಿರಿದೆ
ಉಸಿರಿಗೆ ಉಸಿರ ಬೆರೆಸುವ ಕರೆ ಇದೆ
ಮಾತ ಮುಚ್ಚುವ ಸೆರಗಿದೆ
ಮೂಗಿಲ್ಲದಲ್ಲಮನ ಬೆರಗಿದೆ
ಮೂಗಿನ ತುದಿಯಲ್ಲಿ ಮೂಗಿದೆ.

ಗಾರ್ಮೆಂಟ್ ಹುಡುಗಿಯರು

ಭದ್ರವಿಲ್ಲದ ಬಾಗಿಲ ಹಿಂದೆ ನಿದ್ದೆ ಹತ್ತದ ಹುಡುಗಿಯರು
ಬೆಳಗಾಗುವ ಮುನ್ನವೇ ಹಿಂಡಾಗಿ ಹೊರಡುತ್ತಾರೆ.
ಕಾಮುಕ ಕಣ್ಣಿನ ಪಟ್ಟಣದ ಸಭ್ಯ ಜನ ಜೊಲ್ಲು ಸುರಿಸಿ
ಉಗುಳುತ್ತಾರೆ ಅದೇ ಹುಡುಗಿಯರತ್ತ.

ಹುಡುಗಿಯರು ನಡೆಯುತ್ತಾರೆ, ನಡೆಯುತ್ತಲೇ ಇದ್ದಾರೆ
ಯಾರ ಅನ್ನಕೂ ಅವರು ಬಾಯಿಹಾಕುವುದಿಲ್ಲ
ಯಾರ ಬಟ್ಟೆಗೂ ಕೈ ಹಾಕುವುದಿಲ್ಲ
ಆದರೂ ತಲೆ ತಗ್ಗಿಸಿರಬೇಕು.
ಸಿರಿವಂತರ ದಾಕ್ಷಿಣ್ಯದ ನೇಣು ಹಗ್ಗಕೆ ಕಟ್ಟುಬಿದ್ದು
ಕಣ್ಣು ಮುಚ್ಚಲ್ಪಟ್ಟ ಎತ್ತುಗಳಂತೆ ಅವರ ನಡೆ.
ತಿರುಗಿಸಬೇಕು ಹಣವಂತರ ಲಾಭದ ಗಾಣ
ಹಿಂಡಿದೆಣ್ಣೆಯೆಲ್ಲ ಹಣವಂತರ ಪಾಲು
ಹುಡುಗಿಯರಿಗೆ ಬೈಗುಳದ ಬೋನಸ್
ತೇವಗೊಂಡ ಕಣ್ಣಿಗೆ ಕಾಮನಬಿಲ್ಲಿನ ಬಣ್ಣವೂ ಮಬ್ಬು.

ತಸ್ಲಿಮಾ ನಸ್ರೀನ್

ಸುವರ್ಣ ಸಂಭ್ರಮ



Registration No. 45656/88 - Price : 30/-